ಶನಿವಾರ, ಏಪ್ರಿಲ್ 10, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒಲಿಪಿಂಕ್ಸ್‌ಗೆ ಆಯ್ಕೆ

ಭಾರತೀಯ ಸೇನೆಯ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್‌ನ (ಎಂಇಜಿ) ಸುಬೇದಾರ್ ವಿಷ್ಣು ಶರವಣನ್ ಅವರು ಲೇಸರ್ ಸ್ಟ್ಯಾಂಡರ್ಡ್ ಕ್ಲಾಸ್‌ನಲ್ಲಿ ಅರ್ಹತೆ ಪಡೆದು ಟೋಕಿಯೊ ಒಲಿಪಿಂಕ್ಸ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆದಿದ್ದಾರೆ. - ಪಿಟಿಐ ಚಿತ್ರ

ಶನಿವಾರ, ಏಪ್ರಿಲ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 100 | ಪುಟ 28
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಸಂಗಾತಿಯ ಮೇಲೆ ಅನುಮಾನಪಡುವುದು ಹೊಸ ವಿಷಯವೇನಲ್ಲ. ಆದರೆ ಆ ಅನುಮಾನದ ಜೊತೆ ಸೈಬರ್ ಗೂಢಚಾರಿಕೆ ನಡೆಸುವುದು ಇತ್ತೀಚಿನ ಬೆಳವಣಿಗೆ.

ಆಳ-ಅಗಲ ರಸಗೊಬ್ಬರ ದರ ಏರಿಕೆ ಗೊಂದಲ

ಇಳಿಕೆಯ ಹಾದಿಗೆ ಹೊರಳಿದ ಸೆನ್ಸೆಕ್ಸ್ 10

ಮಮತಾಗೆ ಎರಡನೇ ನೋಟಿಸ್ 12

ಸೆನ್ಸೆಕ್ಸ್	ನಿಫ್ಟಿ	₹/$
49,591 ▼	14,834 ▼	74.73

ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ

ವಾರಾಂತ್ಯದ ಪುರುಸೊತ್ತಿನ-ಲ್ಲಿ ನಿಮಗಾಗಿ ಕಾದಿವೆ ಭರ್ಜರಿ ಕೊಡುಗೆಗಳು. ಬಾಯಲ್ಲಿ ನೀರೂರಿಸುವ ಭೋಜನ, ತಿಂಗಳ ದಿನಸಿಯಿಂದ ಹಿಡಿದು ಪ್ರಯಾಣ ಮತ್ತು ಮನರಂಜನೆಯವರೆಗೂ, ಬಂಪರ್ ಕೊಡುಗೆಗಳ ಸುರಿಮಳೆ..

ಹೆಚ್ಚಿನ ಮಾಹಿತಿಗಾಗಿ ಪ್ರಜಾ ಪ್ಲಸ್ ಪುಟ 2 ನೋಡಿರಿ

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ 100
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟ
ಸೀಟ್ ಬ್ಲಾಕಿಂಗ್ ಆರೋಪ: ನೋಟಿಸ್ 7B

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸಂಧಾನ ಸಭೆಯೂ ವಿಫಲ • ಮತ್ತಷ್ಟು ನೌಕರರ ವಜಾ

ಮುಷ್ಕರ ನಿಷೇಧ: ಸ್ಥಿತಿ ಜಟಿಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆಗೆ ಆಗ್ರಹಿಸಿ ಸಾರಿಗೆ ನಿಗಮಗಳ ನೌಕರರು ನಡೆಸುತ್ತಿರುವ ಮುಷ್ಕರವನ್ನು ನಿಷೇಧಿಸಿ ಕಾರ್ಮಿಕ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ. ಮುಷ್ಕರ ನಿರತ ನೌಕರರು ಪಟ್ಟನ್ನು ಬಿಗಿಗೊಳಿಸಿದ್ದು, ಇದರಿಂದಾಗಿ ಕಗ್ಗಂಟು ಮುಂದುವರಿದಿದೆ.

ಮುಷ್ಕರದಿಂದಾಗಿ ಮೂರನೇ ದಿನವೂ ರಾಜ್ಯದಾದ್ಯಂತ ಬಸ್ ಸೇವೆಯಲ್ಲಿ ವ್ಯತ್ಯಯ ಉಂಟಾಯಿತು. ನಾಲ್ಕು ಸಾರಿಗೆ ನಿಗಮ ಗಳಿಂದ ಒಟ್ಟು 1,000ಕ್ಕೂ ಹೆಚ್ಚು ಬಸ್‌ಗಳು ಸಂಚಾರ ನಡೆಸಿವೆ. ಖಾಸಗಿ ಬಸ್‌ಗಳೂ ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಿಳಿದಿವೆ. ಆದರೂ, ಬೆಂಗಳೂರು ನಗರ ಸೇರಿದಂತೆ ಹಲವು ಭಾಗಗಳಲ್ಲಿ ಪ್ರಯಾಣಿಕರ ಪರದಾಟ ಹೆಚ್ಚುತ್ತಲೇ ಇದೆ.

ಮುಖಂಡರ ವಿರುದ್ಧ ಕ್ರಮಕ್ಕೆ ಸಿದ್ಧತೆ: ಸಾರಿಗೆ ನೌಕರರ ಕೂಟ ನೀಡಿದ್ದ ನೋಟಿಸ್ ಆಧಾರದಲ್ಲಿ ಕಾರ್ಮಿಕ ಇಲಾಖೆಯ ಆಯುಕ್ತರ ನೇತೃತ್ವದಲ್ಲಿ ಶುಕ್ರವಾರ ನಡೆದ ಸಂಧಾನ ಸಭೆ ವಿಫಲವಾಗಿದೆ.

10ನೇ ಪುಟ ನೋಡಿ

ಸಾರಿಗೆ ನೌಕರರ ಮುಷ್ಕರದ ಪರಿಣಾಮ ಬೆಂಗಳೂರಿನ ಮೆಜೆಸ್ಟಿಕ್‌ನ ಬಿಎಂಟಿಸಿ ಬಸ್ ನಿಲ್ದಾಣ ಶುಕ್ರವಾರ ಬಿಕೋ ಎನ್ನುತ್ತಿತ್ತು –ಪ್ರಜಾವಾಣಿ ಚಿತ್ರ

ಮುಷ್ಕರ ನಿಲ್ಲದು: ಕೋಡಿಹಳ್ಳಿ ಚಂದ್ರಶೇಖರ್

ಬೆಂಗಳೂರು: ಸಾರಿಗೆ ನಿಗಮಗಳ ನೌಕರರ ಮುಷ್ಕರ ಶನಿವಾರವೂ ಮುಂದುವರಿಯಲಿದೆ. ಗುರಿ ಮುಟ್ಟುವವರೆಗೂ ಹೋರಾಟ ನಡೆಯಲಿದೆ ಎಂದು ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಶುಕ್ರವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಹೆಚ್ಚಳ ಮಾಡುವುದಿಲ್ಲ ಎಂದು ಸರ್ಕಾರ ಹೇಳಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದಕ್ಕೆ ವೈಜ್ಞಾನಿಕ ಕಾರಣ ನೀಡಬೇಕು' ಎಂದು ಆಗ್ರಹಿಸಿದರು.

10ನೇ ಪುಟ ನೋಡಿ

ಹಟ ಬಿಟ್ಟು ಕೆಲಸಕ್ಕೆ ಬನ್ನಿ:ಬಿಎಸ್‌ವೈ

'ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ಆರನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಣೆ ಸಾಧ್ಯವೇ ಇಲ್ಲ ಎಂದು ಹೇಳಿದ ಮೇಲೂ ಹಟ ಹಿಡಿಯುವುದು ಸರಿಯಲ್ಲ' ಎಂದು ಹೇಳುವ ಮೂಲಕ ಮುಷ್ಕರನಿರತರ ಜತೆ ಸಂಧಾನದ ಬಾಗಿಲು ಮುಚ್ಚಿದೆ ಎಂಬುದನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಾರಿಗೆ ಇಲಾಖೆ ಇರುವುದು ಜನರ ಸೇವೆಗೋಸ್ಕರ. ಕೋವಿಡ್ ಕಾರಣದಿಂದ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ನೀವೇ ಯೋಚನೆ ಮಾಡಿ. ಹಟ ಬಿಟ್ಟು ಬನ್ನಿ' ಎಂದು ಮನವಿ ಮಾಡಿದರು.

10ನೇ ಪುಟ ನೋಡಿ

ಮರಳಿ ಊರಿಗೆ...
ಲಾಕ್‌ಡೌನ್ ಭೀತಿ ಸೇರಿದಂತೆ ವಿವಿಧ ಕಾರಣಗಳಿಂದ ಜನರು ತಮ್ಮ ಊರುಗಳಿಗೆ ಮರಳಲು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಶುಕ್ರವಾರ ಧಾವಿಸಿದ್ದರು –ಪ್ರಜಾವಾಣಿ ಚಿತ್ರ

ಏಳು ಜಿಲ್ಲಾ ಕೇಂದ್ರ, ಮಣಿಪಾಲದಲ್ಲಿ ಜಾರಿ

ಇಂದಿನಿಂದ ರಾತ್ರಿ ಕರ್ಫ್ಯೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರದಿಂದ (ಏ. 10) ಇದೇ 20ರವರೆಗೆ 'ಕೊರೊನಾ ಕರ್ಫ್ಯೂ' (ರಾತ್ರಿ ಕರ್ಫ್ಯೂ) ಜಾರಿಗೆ ಬರಲಿರುವ ನಗರಗಳಲ್ಲಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ ಎಲ್ಲ ವಾಣಿಜ್ಯ ಚಟುವಟಿಕೆಗಳಿಗೆ ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿದೆ.

ಈ ಸಂಬಂಧ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಬೆಂಗಳೂರು ನಗರ, ಮೈಸೂರು, ಮಂಗಳೂರು, ಉಡುಪಿ-ಮಣಿಪಾಲ, ಬೀದರ್, ಕಲಬುರ್ಗಿ ಮತ್ತು ತುಮಕೂರು ನಗರಗಳಲ್ಲಿ ರಾತ್ರಿ ಕರ್ಫ್ಯೂ ಜಾರಿಗೆ ಬರಲಿದೆ.

'ಕೊರೊನಾ ಕರ್ಫ್ಯೂ' ಅವಧಿಯಲ್ಲಿ ಈ ನಗರಗಳಲ್ಲಿ ವೈದ್ಯಕೀಯ ಸೇವೆ ಮತ್ತು ತುರ್ತು ಚಟುವಟಿಕೆಗೆ ಮಾತ್ರ ಅನುಮತಿ ನೀಡಲಾಗಿದೆ. ಅಲ್ಲದೆ, ಆರೋಗ್ಯ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಮತ್ತು ಅವರ ಸಹಾಯಕರಿಗೆ ವೈದ್ಯಕೀಯ ಸೇವೆಗಾಗಿ ಸಂಚರಿಸಲು ಕೂಡ ಅನುಮತಿ ನೀಡಲಾಗಿದೆ.

8 ಸಾವಿರದತ್ತ ಕೋವಿಡ್, 46 ಮರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತಷ್ಟು ಏರಿಕೆಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ ಸೋಂಕಿತರಾದವರ ಸಂಖ್ಯೆ 8 ಸಾವಿರದತ್ತ (7,955) ತಲುಪಿದೆ. ಕೋವಿಡ್ ಪೀಡಿತರಲ್ಲಿ 46 ಮಂದಿ ಸಾವಿಗೀಡಾಗಿರುವುದು ಶುಕ್ರವಾರ ದೃಢಪಟ್ಟಿದೆ. ಇವು ಕಳೆದ ಆರು ತಿಂಗಳ ಬಳಿಕ ವರದಿಯಾದ ಗರಿಷ್ಠ ಸೋಂಕಿತರ ಸಂಖ್ಯೆ ಹಾಗೂ ಮರಣ ಪ್ರಕರಣಗಳಾಗಿವೆ. 8

ಜೊತೆಗೆ, ಅಗತ್ಯ ಸೇವೆಗಳನ್ನು ಒದಗಿಸುವ ಹಾಗೂ ಸರಕು ಸಾಗಣೆ ವಾಹನಗಳು, ಹೋಮ್ ಡೆಲಿವರಿ, ಇ-ಕಾಮರ್ಸ್ ಮತ್ತು ಖಾಲಿ ವಾಹನಗಳ ಸಂಚಾರಕ್ಕೂ ಅವಕಾಶ ಕಲ್ಪಿಸಲಾಗಿದೆ. ಬಸ್ಸು, ರೈಲು ಹಾಗೂ ವಿಮಾನದ ದೂರ ಪ್ರಯಾಣಕ್ಕೆ ಅನುಮತಿ ನೀಡಲಾಗಿದೆ. ಆದರೆ, ಪ್ರಯಾಣಿಕರು ಮನೆಯಿಂದ ನಿಲ್ದಾಣಗಳಿಗೆ ಮತ್ತು ನಿಲ್ದಾಣಗಳಿಂದ ಮನೆಗೆ ಅಧಿಕೃತ ಟಿಕೆಟ್ ತೋರಿಸಿ ಆಟೊ, ಕ್ಯಾಬ್ ಮತ್ತಿತರ ವಾಹನದ ಮೂಲಕ ಸಂಚರಿಸಬಹುದು ಎಂದೂ ಆದೇಶದಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ.

ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲ ಕಾರ್ಖಾನೆಗಳು, ಕಂಪನಿಗಳು ಹಾಗೂ ಸಂಸ್ಥೆಗಳು ಯಥಾ ರೀತಿಯಲ್ಲಿ ಕಾರ್ಯ-ನಿರ್ವಹಿಸಲು ಅನುಮತಿ ನೀಡಲಾಗಿದೆ. ಆದರೆ, ಸಂಬಂಧಿಸಿದ ಕಾರ್ಮಿಕರು, ನೌಕರರು ಕರ್ಫ್ಯೂ ಅವಧಿಗೆ ಮೊದಲೇ ತಮ್ಮ ಸಂಸ್ಥೆಗಳಲ್ಲಿ ಕರ್ತವ್ಯಕ್ಕೆ ಹಾಜರಿರಬೇಕು ಎಂಬ ಷರತ್ತು ವಿಧಿಸಲಾಗಿದೆ.

ಈ ಆದೇಶವನ್ನು ಬಿಬಿಎಂಪಿ, ಪೊಲೀಸ್ ಆಯುಕ್ತರು ಮತ್ತು ಸಂಬಂಧಿಸಿದ ನಗರಗಳ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಆದೇಶ ಪಾಲಿಸುವ ವಿಷಯದಲ್ಲಿ ಲೋಪವಾದರೆ ಅಂಥವರ ವಿರುದ್ಧ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ಧಾರ್ಮಿಕ ಮತಾಂತರ: ಪಿಐಎಲ್ ಪರಿಗಣಿಸದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಟ ಮಂತ್ರ, ಮೂಢನಂಬಿಕೆ ಹಾಗೂ ಕಾಣಿಕೆ ಮತ್ತು ಹಣದ ಆಮಿಷವೊಡ್ಡುವ ಮೂಲಕ ಧಾರ್ಮಿಕ ಮತಾಂತರ ಮಾಡುವುದನ್ನು ನಿಯಂತ್ರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

'ಇದು ಪ್ರಚಾರದ ಹಿತಾಸಕ್ತಿ ಅರ್ಜಿಯಾಗಿದೆ. 18 ವರ್ಷ ಮೇಲ್ಪಟ್ಟವರು ತಮ್ಮ ಧರ್ಮವನ್ನು ಆಯ್ಕೆ ಮಾಡಿಕೊಳ್ಳಲು ಯಾಕೆ ಅವಕಾಶ ನೀಡಬಾರದು' ಎಂದು ನ್ಯಾಯಾಲಯ ಕೇಳಿದೆ.

ಅರ್ಜಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳಾದ ಆರ್. ಎಫ್.ನರೀಮನ್, ಬಿ. ಆರ್. ಗವಾಯಿ ಮತ್ತು ಹೃಷಿಕೇಶ ರಾಯ್ ಅವರನ್ನೊಳಗೊಂಡ ಪೀಠವು, ಈ ಬಗ್ಗೆ ವಾದ ಮಂಡಿಸಿದರೆ ಭಾರಿ ದಂಡ ವಿಧಿಸಲಾಗುವುದು ಎಂದು ಅರ್ಜಿದಾರರಾದ ಬಿಜೆಪಿ ನಾಯಕ ಮತ್ತು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರಿಗೆ ಎಚ್ಚರಿಕೆ ನೀಡಿತು.

ನ್ಯಾಯಾಲಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಅರ್ಜಿಯನ್ನು ವಾಪಸ್ ಪಡೆಯಲಾಯಿತು.

'ಪ್ರತಿ ವಾರ ದೇಶದಾದ್ಯಂತ ಹಲವಾರು ಮತಾಂತರ ಪ್ರಕರಣಗಳು ವರದಿಯಾಗುತ್ತಿವೆ. ಮತಾಂತರಗೊಳ್ಳುವಂತೆ ಬೆದರಿಕೆ ಹಾಗೂ ಹಣದ ಆಮಿಷವೊಡ್ಡಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ' ಎಂದು ಅರ್ಜಿದಾರರು ದೂರಿದ್ದರು.

'ಸರ್ಕಾರ ಮೌನವಾಗಿರುವುದರಿಂದ ಹಲವು ಸರ್ಕಾರೇತರ ಸಂಸ್ಥೆಗಳು ಬಡಜನರ ಮತಾಂತರದಲ್ಲಿ ತೊಡಗಿವೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರನ್ನು ಇನ್ನೊಂದು ಧರ್ಮಕ್ಕೆ ಮತಾಂತರ ಮಾಡಲಾಗುತ್ತಿದೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು.

ಐಪಿಎಲ್: ಆರ್‌ಸಿಬಿಗೆ ರೋಚಕ ಜಯ

ಚೆನ್ನೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶುಕ್ರವಾರ ಆರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಎರಡು ವಿಕೆಟ್‌ಗಳ ರೋಚಕ ಜಯ ಸಾಧಿಸಿತು.ಆರ್‌ಸಿಬಿಯ ಮಧ್ಯಮವೇಗಿ ಹರ್ಷಲ್ ಪಟೇಲ್ ಐದು ವಿಕೆಟ್ ಗಳಿಸಿದರು. ಬ್ಯಾಟ್ಸ್‌ಮನ್ ಎಬಿ ಡಿವಿಲಿಯರ್ಸ್ 48 ರನ್ ಗಳಿಸಿದರು. 12

ಸುರಂಗ ಕಾಮಗಾರಿ ಕಂಪಿಸಿದ ಕಟ್ಟಡಗಳು

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಕಂಟೋನ್ಮೆಂಟ್ ನಿಲ್ದಾಣದಿಂದ ಶಿವಾಜಿನಗರ-ದವರೆಗೆ ಸುರಂಗ ಮಾರ್ಗ ಕೊರೆಯುವ ಕಾಮಗಾರಿ ನಡೆಯುತ್ತಿದ್ದು, ಶುಕ್ರವಾರ ಮಧ್ಯಾಹ್ನ ಇಲ್ಲಿನ ಕಟ್ಟಡಗಳು ಕಂಪಿಸಿವೆ. ಶಿವಾಜಿ ನಗರ ಪೊಲೀಸ್ ಠಾಣೆಯಿಂದ ಸುಮಾರು 20 ಅಡಿ ದೂರದಲ್ಲಿರುವ ಬಹುಅಂತಸ್ತಿನ ಕಟ್ಟಡವೊಂದರ ಅಡಿಪಾಯದ ಬಳಿಯ ಸ್ವಲ್ಪ ಭಾಗ ಕುಸಿದಿದೆ. 7A

ಶ್ವಾಸಕೋಶ ತಜ್ಞರ ಕೊರತೆ: ಕೋವಿಡ್ ಚಿಕಿತ್ಸೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶ್ವಾಸಕೋಶ ತಜ್ಞರ ಕೊರತೆ ಹಾಗೂ ಆಸ್ಪತ್ರೆಗಳಲ್ಲಿನ ದುಬಾರಿ ಚಿಕಿತ್ಸಾ ವೆಚ್ಚವು ಕೋವಿಡ್ ಚಿಕಿತ್ಸೆಯಲ್ಲಿ ವ್ಯತ್ಯಯವಾಗಲು ಕಾರಣವಾಗಿದೆ ಎಂದು ಸರ್ಕಾರೇತರ ಸಂಸ್ಥೆಯೊಂದು ನಡೆಸಿದ ಅಧ್ಯಯನ ಹೇಳಿದೆ.

ಪ್ರಾಕ್ಸಿಮಾ ಎಂಬ ಸಂಸ್ಥೆಯು 'ಜೀವನ್ ರಕ್ಷಾ' ಯೋಜನೆಯಡಿ ಕೋವಿಡ್ ಚಿಕಿತ್ಸೆ ಬಗ್ಗೆ ತಜ್ಞರ ನೆರವಿನಿಂದ ಅಧ್ಯಯನ ನಡೆಸಿದೆ. ಕೋವಿಡ್ ಪೀಡಿತ ವ್ಯಕ್ತಿಯ ಆರೋಗ್ಯದಲ್ಲಿ ಸಂಕೀರ್ಣ ಸಮಸ್ಯೆಗಳು ಕಾಣಿಸಿಕೊಂಡಾಗ ಮಾನ್ಯತೆ ಹೊಂದಿದ ಶ್ವಾಸಕೋಶ ತಜ್ಞರ ಚಿಕಿತ್ಸೆ ಬೇಕಾಗುತ್ತದೆ. ಆದರೆ, ರಾಜ್ಯದಲ್ಲಿ ಕೇವಲ 137 ಶ್ವಾಸಕೋಶ ತಜ್ಞರು ಮಾತ್ರ ಮಾನ್ಯತೆ ಹೊಂದಿದ್ದಾರೆ. ಅವರಲ್ಲಿ 66 ವೈದ್ಯರು ಬೆಂಗಳೂರಿನಲ್ಲಿಯೇ ಇದ್ದಾರೆ. ವಿಜಯಪುರ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ತುಮಕೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಕೇವಲ ಒಬ್ಬರು ಮಾತ್ರ ಶ್ವಾಸಕೋಶ ತಜ್ಞರಿದ್ದಾರೆ. ಇದರಿಂದಾಗಿ ಚಿಕಿತ್ಸೆಯಲ್ಲಿ ವ್ಯತ್ಯಯವಾಗುತ್ತಿದೆ. ರಾಜ್ಯದಲ್ಲಿರುವ ಬಹುತೇಕ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆಯಿದೆ ಎಂದು ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನಿಗದಿತ ಕ್ಷೇತ್ರದಲ್ಲಿ ಪರಿಣತಿ ಹೊಂದಿರದ ವೈದ್ಯರು ಚಿಕಿತ್ಸೆ ನೀಡಬೇಕಾದ ಪರಿಸ್ಥಿತಿಯಿದೆ. ಇದರಿಂದಾಗಿ ವೈದ್ಯಕೀಯ ವ್ಯವಸ್ಥೆಯಲ್ಲಿ ಏರುಪೇರಾಗಿ, ಕೋವಿಡ್ ಪೀಡಿತರು ಸಮಸ್ಯೆ ಎದುರಿಸುತ್ತಿದ್ದಾರೆ. ಆರ್‌ಟಿ-ಪಿಸಿಆರ್ ಪರೀಕ್ಷೆ ದರವನ್ನು ಕೂಡ ಸರ್ಕಾರ ಇಳಿಕೆ ಮಾಡಬೇಕಿದೆ. ಆಗ ಜನರೇ ಸ್ವಯಂಪ್ರೇರಿತರಾಗಿ ಆರೋಗ್ಯ ಕೇಂದ್ರಗಳಿಗೆ ತೆರಳಿ, ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಇಲ್ಲವಾದಲ್ಲಿ ದುಬಾರಿ ಶುಲ್ಕ ಪಾವತಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಹಿಂದೇಟು ಹಾಕುತ್ತಾರೆ ಎಂದು ಹೇಳಲಾಗಿದೆ.

ಚಿಕಿತ್ಸಾ ವೆಚ್ಚ ದುಬಾರಿ

ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆಗೆ ದುಬಾರಿ ಶುಲ್ಕವನ್ನು ವಿಧಿಸುತ್ತಿವೆ. ಇದರಿಂದಾಗಿ ಜನಸಾಮಾನ್ಯರಿಗೆ ಗುಣಮಟ್ಟದ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ. ಜನರಲ್ ಇನ್ಶೂರೆನ್ಸ್ ಕೌನ್ಸಿಲ್ ಆಫ್ ಇಂಡಿಯಾದ ಮಾಹಿತಿ ಪ್ರಕಾರ ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಪ್ರತಿ ಪ್ರಕರಣಕ್ಕೆ ಆಸ್ಪತ್ರೆಗಳಿಗೆ ಸರಾಸರಿ ₹ 1.50 ಲಕ್ಷವನ್ನು ಮರು ಪಾವತಿಸಲಾಗಿದೆ. ವಿಜಯಪುರದಲ್ಲಿ ಗರಿಷ್ಠ (₹ 1.75 ಲಕ್ಷ) ಹಾಗೂ ಚಿಕ್ಕಮಗಳೂರಿನಲ್ಲಿ ಕನಿಷ್ಠ (₹ 98,000) ಮೊತ್ತವನ್ನು ಮರುಪಾವತಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಆರೋಗ್ಯ ವಿಮೆಗಳಿದ್ದರೂ ಆಸ್ಪತ್ರೆಗಳು ವಿಧಿಸುವ ಎಲ್ಲ ಶುಲ್ಕಗಳು ವಿಮೆ ಅಡಿ ಬರದ ಕಾರಣ ರೋಗಿಯು ಹೆಚ್ಚುವರಿ ಹಣವನ್ನು ಪಾವತಿಸಬೇಕಾದ ಪರಿಸ್ಥಿತಿಯಿದೆ. ಪಿಪಿಇ ಕಿಟ್ ಬಳಕೆ ಸೇರಿದಂತೆ ವಿವಿಧ ಶುಲ್ಕವನ್ನು ವಿಧಿಸಲಾಗುತ್ತಿದೆ. ಸರ್ಕಾರವು ರಾಜ್ಯದಾದ್ಯಂತ ಒಂದೇ ರೀತಿಯ ಶುಲ್ಕ ಅನ್ವಯವಾಗುವಂತೆ ನೋಡಿಕೊಳ್ಳಬೇಕು' ಎಂದು ಜೀವನ್ ರಕ್ಷಾ ಯೋಜನೆಯ ಸಂಚಾಲಕ ಮೈಸೂರು ಸಂಜೀವ್ ತಿಳಿಸಿದರು.

ರಸಗೊಬ್ಬರ ಬೆಲೆ ಹೆಚ್ಚಿಸದಂತೆ ತಾಕೀತು

ನವದೆಹಲಿ (ಪಿಟಿಐ): ಡಿಎಪಿಯಂತಹ ಯೂರಿಯಯೇತರ ರಸಗೊಬ್ಬರದ ಗರಿಷ್ಠ ಮಾರಾಟ ಬೆಲೆಯನ್ನು (ಎಂಆರ್‌ಪಿ) ಹೆಚ್ಚಿಸಬಾರದು ಎಂದು ಕೇಂದ್ರ ಸರ್ಕಾರವು ರಸಗೊಬ್ಬರ ಕಂಪನಿಗಳಿಗೆ ಶುಕ್ರವಾರ ನಿರ್ದೇಶನ ನೀಡಿದೆ. ರಸಗೊಬ್ಬರವನ್ನು ಹಳೆಯ ಬೆಲೆಗೇ ಮಾರಾಟ ಮಾಡಬೇಕು ಎಂದು ಕೇಂದ್ರವು ಸೂಚಿಸಿದೆ.

ಗುರುವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ವಿಚಾರವಾಗಿ ನಿರ್ದೇಶನವೊಂದನ್ನು ರಸಗೊಬ್ಬರ ಕಂಪನಿಗಳಿಗೆ ನೀಡಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ದರ ಹೆಚ್ಚಳವಾದ ಕಾರಣ ದೇಶಿ ಮಾರುಕಟ್ಟೆಯಲ್ಲಿಯೂ ಯೂರಿಯೇತರ ರಸಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಡಿಎಪಿ, ಎಂಒಪಿ ಹಾಗೂ ಎನ್‌ಪಿಕೆ ರಸಗೊಬ್ಬರದ ಚಿಲ್ಲರೆ ಮಾರಾಟ ದರವು ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಿದೆ. ಈ ರಸಗೊಬ್ಬರಗಳ ದರವನ್ನು ಕಂಪನಿಗಳೇ ನಿರ್ಧರಿಸುತ್ತವೆ. ಇವಕ್ಕೆ ಕೇಂದ್ರ ಸರ್ಕಾರವು ನಿಗದಿತ ಮೊತ್ತವನ್ನು ಸಬ್ಸಿಡಿ ರೂಪದಲ್ಲಿ ನೀಡುತ್ತದೆ.

'ಡಿಎಪಿ, ಎಂಒಪಿ ಮತ್ತು ಎನ್‌ಪಿಕೆ ರಸಗೊಬ್ಬರಗಳ ದರ ಹೆಚ್ಚಳ ಮಾಡಬಾರದು ಎಂಬ ಸೂಚನೆಯನ್ನು ಕಂಪನಿಗಳು ಒಪ್ಪಿಕೊಂಡಿವೆ' ಎಂದು ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಮನ್‌ಸುಖ್ ಮಾಂಡವೀಯ ತಿಳಿಸಿದರು. ರೈತರಿಗೆ ಈ ರಸಗೊಬ್ಬರಗಳು ಹಳೆಯ ದರಕ್ಕೆ ಸಿಗಲಿವೆ ಎಂದರು.

9ನೇ ಪುಟ ನೋಡಿ

'ರಸಗೊಬ್ಬರ ಧಾರಣೆ ಸ್ಥಿರತೆಗೆ ಕ್ರಮ'

ಪುತ್ತೂರು (ದಕ್ಷಿಣ ಕನ್ನಡ): 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರದ ದರ ವಿಪರೀತ ಏರಿರುವ ಕಾರಣ ದೇಶೀಯ ಮಾರುಕಟ್ಟೆಯಲ್ಲೂ ಧಾರಣೆ ಏರುತ್ತಿದೆ. ಧಾರಣೆ ಸ್ಥಿರತೆ ಸಾಧಿಸಲು ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದಗೌಡ ಹೇಳಿದರು.

9ನೇ ಪುಟ ನೋಡಿ

ಅಮೆರಿಕದ ನೌಕಾಪಡೆಯ ಕಾರ್ಯಾಚರಣೆಗೆ ಆಕ್ಷೇಪ

ಭಾರತದ ಅನುಮತಿ ಇಲ್ಲದೆ ಲಕ್ಷದ್ವೀಪದಲ್ಲಿ ಅಭ್ಯಾಸ

ವಾಷಿಂಗ್ಟನ್(ಪಿಟಿಐ): ಭಾರತದ ಅನುಮತಿ ಪಡೆಯದೆಯೇ ಲಕ್ಷದ್ವೀಪದ ದ್ವೀಪಗಳ ಬಳಿ ಅಮೆರಿಕ ನೌಕಾಪಡೆಯು 'ಸ್ವತಂತ್ರ ಸಂಚಾರ ಕಾರ್ಯಾಚರಣೆ'ಯನ್ನು (ಎಫ್‌ಒಎನ್‌ಒಪಿ) ಬುಧವಾರ ಕೈಗೊಂಡಿತ್ತು.

ಕ್ಷಿಪಣಿಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿರುವ 'ಯುಎಸ್‌ಎಸ್ ಜಾನ್ ಪಾಲ್ ಜಾನ್ಸ್' ಯುದ್ಧ ಹಡಗಿನ ಮೂಲಕ ಏಪ್ರಿಲ್ 7ರಂದು ಈ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು ಎಂದು ಅಮೆರಿಕ ನೌಕಾಪಡೆಯ 'ಸೆವೆಂತ್ ಫ್ಲೀಟ್' ಕಮಾಂಡರ್ ಪ್ರಕಟಣೆ ತಿಳಿಸಿದೆ.

'ಲಕ್ಷದ್ವೀಪದಿಂದ ಸುಮಾರು 130 ನಾಟಿಕಲ್ ಮೈಲುಗಳಷ್ಟು ದೂರದ ಪಶ್ಚಿಮದ ದ್ವೀಪಗಳಲ್ಲಿ ಭಾರತದ ವಿಶೇಷ ಆರ್ಥಿಕ ವಲಯದಲ್ಲಿ ಭಾರತದ ಪೂರ್ವಾನುಮತಿ ಇಲ್ಲದೆಯೇ ಯುಎಸ್‌ಎಸ್ ಜಾನ್ ಪಾಲ್ ಜಾನ್ಸ್ (ಡಿಡಿಜಿ 53) ಕಾರ್ಯಾಚರಣೆ ಕೈಗೊಂಡಿತ್ತು. ಅಂತರರಾಷ್ಟ್ರೀಯ ಕಾನೂನಿನ ಅನ್ವಯವೇ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ' ಎಂದು ತಿಳಿಸಿದೆ.

ಸಂಗ್ರಹ ಚಿತ್ರ

ಅಮೆರಿಕ ಪಡೆಗಳು ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಪ್ರತಿ ದಿನವೂ ಕಾರ್ಯಾಚರಣೆ ನಡೆಸುತ್ತವೆ. ಅಂತರರಾಷ್ಟ್ರೀಯ ಕಾನೂನಿನ ಅನ್ವಯವೇ ಈ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ. ಅಂತರರಾಷ್ಟ್ರೀಯ ಕಾನೂನು ಅವಕಾಶ ನೀಡುವ ಸ್ಥಳಗಳಲ್ಲಿ ಅಮೆರಿಕ ಕಾರ್ಯಾಚರಣೆ ಕೈಗೊಳ್ಳುತ್ತದೆ ಎಂದು ಅಮೆರಿಕ ತಿಳಿಸಿದೆ.

'ಈ ಹಿಂದೆಯೂ ಇದೇ ರೀತಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಭವಿಷ್ಯದಲ್ಲಿಯೂ ಕೈಗೊಳ್ಳಲಾಗುವುದು. ಎಫ್‌ಒಎನ್‌ಒಪಿ ಒಂದು ದೇಶಕ್ಕೆ ಸೀಮಿತವಾಗಿಲ್ಲ ಅಥವಾ ಯಾವುದೇ ರಾಜಕೀಯ ಸಂದೇಶ ನೀಡಲು ಅಲ್ಲ' ಎಂದು ಹೇಳಿದೆ.

ವಿಶೇಷ ಆರ್ಥಿಕ ವಲಯದಲ್ಲಿ ಸೇನಾ ಅಭ್ಯಾಸ ಅಥವಾ ಯಾವುದೇ ರೀತಿಯ ಕಾರ್ಯಾಚರಣೆ ಕೈಗೊಳ್ಳುವ ಮುನ್ನ ಭಾರತದ ಪೂರ್ವಾನುಮತಿ ಪಡೆದುಕೊಳ್ಳುವುದು ಅಗತ್ಯವಿದೆ.

ಭಾರತದ ವಿಶೇಷ ಆರ್ಥಿಕ ವಲಯದಲ್ಲಿ ಅಮೆರಿಕದ ನೌಕಾಪಡೆಯು ಇಂತಹ ಕಾರ್ಯಾಚರಣೆ ಕೈಗೊಂಡಿರುವುದು ಇದೇ ಮೊದಲ ಬಾರಿ ಅಲ್ಲ. 2019ರಲ್ಲೂ ಇದೇ ರೀತಿಯ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು ಎಂದು ಅಮೆರಿಕದ ರಕ್ಷಣಾ ಇಲಾಖೆ ತಿಳಿಸಿದೆ. ಅಂತರರಾಷ್ಟ್ರೀಯ ಕಾನೂನಿನ ಅನ್ವಯವೇ ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಸಮುದ್ರದ ಬಳಕೆಯನ್ನು ಕಾಪಾಡುವ ಉದ್ದೇಶದಿಂದ ಈ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು ಎಂದು ಅಮೆರಿಕ ಸಂಸತ್‌ಗೆ 2020ರ ಜುಲೈನಲ್ಲಿ ಸಲ್ಲಿಸಿದ ವರದಿಯಲ್ಲಿ ತಿಳಿಸಲಾಗಿತ್ತು.

'ಕಳವಳ ಮನವರಿಕೆ ಮಾಡಿಕೊಟ್ಟಿದ್ದೇವೆ'

ಭಾರತದ ಜಲಗಡಿಯಲ್ಲಿ ಅಮೆರಿಕದ ಯುದ್ಧನೌಕೆಯು ಅನುಮತಿ ಪಡೆಯದೆಯೇ ಕಾರ್ಯಾಚರಣೆ ನಡೆಸಿರುವ ಬಗ್ಗೆ ನಮ್ಮ ಕಳವಳವನ್ನು ಅಮೆರಿಕಕ್ಕೆ ರಾಜತಾಂತ್ರಿಕ ಮಾರ್ಗದ ಮೂಲಕ ಮನವರಿಕೆ ಮಾಡಿಕೊಡಲಾಗಿದೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿದೆ.

'ಭಾರತದ ವಿಶೇಷ ಆರ್ಥಿಕ ವಲಯದಲ್ಲಿನ ಜಲಗಡಿ ಮತ್ತು ಉಪಖಂಡದ ಜಲಗಡಿಯಲ್ಲಿ ನಮ್ಮ ಅನುಮತಿ ಪಡೆಯದೆ ಬೇರೆ ದೇಶಗಳ ಹಡಗುಗಳು ಸಮರಾಭ್ಯಾಸ, ಸಂಚಾರ ನಡೆಸಲು ಅವಕಾಶವಿಲ್ಲ ಎಂದು ವಿಶ್ವಸಂಸ್ಥೆಯ ಸಮುದ್ರ ಕಾನೂನುಗಳು ಹೇಳುತ್ತವೆ. ಶಸ್ತ್ರಾಸ್ತ್ರ ಇರುವ ನೌಕೆಗಳಂತೂ ಇಂತಹ ಕಾರ್ಯಾಚರಣೆ ನಡೆಸುವಂತೆಯೇ ಇಲ್ಲ. ಅಮೆರಿಕದ ಯುಎಸ್‌ಎಸ್ ಜಾಲ್ ಪಾಲ್ ಜಾನ್ಸ್ ಯುದ್ಧನೌಕೆಯು ಪರ್ಷಿಯನ್ ಕೊಲ್ಲಿಯಿಂದ ಮಲಕ್ಕಾ ಕೊಲ್ಲಿಗೆ ಹೋಗುವವರೆಗೆ ಅದರ ಮೇಲೆ ನಾವು ನಿಗಾ ಇರಿಸಿದ್ದೆವು' ಎಂದು ವಿದೇಶಾಂಗ ಸಚಿವಾಲಯವು ಪ್ರಕಟಣೆಯಲ್ಲಿ ವಿವರಿಸಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಸರಸ್ವತಿ ವಿ. ಆರ್. ರಾಮಯ್ಯ
ವಿ. ಆರ್. ರಾಮಯ್ಯನವರ ಧರ್ಮಪತ್ನಿ
08.04.1938 - 08.04.2021

ದುಃಖತಪ್ತರು
ಎಂ ಆರ್ ಸೀತಾರಾಮ್, ಮಾಜಿ ಸಚಿವರು ಕರ್ನಾಟಕ ಸರ್ಕಾರ

ಶ್ರುತಿ ಸೀತಾರಾಮ್, ಎಂ.ಎಸ್ ರಕ್ಷಾ ರಾಮಯ್ಯ, ಆಶಿತಾ ರಕ್ಷಾ ರಾಮಯ್ಯ,
ಎಂ.ಎಸ್ ಸುಂದರ್ ರಾಮ್, ಪುಷ್ಪ ಸುಂದರ್ ರಾಮ್
ಮತ್ತು ಕುಟುಂಬ ವರ್ಗದವರು

ನಗರದಲ್ಲಿ ಇಂದು

ವಿಶ್ವ ಹೋಮಿಯೋಪತಿ ದಿನ ಹಾಗೂ ಅಶ್ವಿನಿ ಹೋಮಿಯೊ ಕ್ಲಿನಿಕ್ ವಾರ್ಷಿಕೋತ್ಸವ: ಶಾಸಕ ಉದಯ್ ಬಿ.ಗರುಡಾಚಾರ್, ಅತಿಥಿಗಳು–ಹಿರಿಯ ವಿಜ್ಞಾನಿ ಟೆಸ್ಸಿ ಥಾಮಸ್, ಹಿರಿಯ ಪತ್ರಕರ್ತ ಬಾಬು ಕೃಷ್ಣಮೂರ್ತಿ, ಅಧ್ಯಕ್ಷತೆ–ಬಿ.ಟಿ.ರುದ್ರೇಶ್, ಸ್ಥಳ–ಜೆ.ಡಬ್ಲ್ಯು ಮ್ಯಾರಿಯಟ್ ಹೋಟೆಲ್, ಬೆಳಿಗ್ಗೆ 10.30

‘ಆ್ಯನ್ ಇನ್‌ಸೈಟ್ ಇಂಟು ಹಂಪನಾ’ ಪುಸ್ತಕ ಬಿಡುಗಡೆ: ಪ್ರೊ.ಎಚ್.ಎಸ್. ಶಿವಪ್ರಕಾಶ್, ಸ್ಥಳ–ಚಾಂದಿನಿ ಹಾಲ್, ವುಡ್‌ಲ್ಯಾಂಡ್ಸ್ ಹೋಟೆಲ್, ಆಯೋಜನೆ–ಇಂಟರ್‌ನ್ಯಾಷನಲ್ ಪಬ್ಲಿಷಿಂಗ್ ಹೌಸ್, ರಾಜಾರಾಂ ಮೋಹನ್‌ರಾಯ್ ರಸ್ತೆ, ಬೆಳಿಗ್ಗೆ 10.30

ಅಂಬೇಡ್ಕರ್ ಹಬ್ಬ–ವಿಶೇಷ ವೆಬಿನಾರ್ ಉಪನ್ಯಾಸ ಸರಣಿ: ವಿಷಯ–ಅಲೆಮಾರಿ, ಬುಡಕಟ್ಟು ಮತ್ತು ಇತರ ದಮನಿತ ಸಮುದಾಯಗಳ ಅಸ್ತಿತ್ವ ಮತ್ತು ಅಭಿವೃದ್ಧಿ, ಮಾತನಾಡುವವರು–ಚಿಂತಕ ವಡ್ಡಗೆರೆ ನಾಗರಾಜಯ್ಯ, ಅಧ್ಯಕ್ಷತೆ–ಅಲೆಮಾರಿ–ಬುಡಕಟ್ಟು ಸಮುದಾಯದ ಮುಖಂಡ ಕುಪ್ಪೆ ನಾಗರಾಜ, ಸಂಜೆ 6.30 (ಆನ್‌ಲೈನ್ ಕಾರ್ಯಕ್ರಮ)

‘ಡೆಸ್ಡೆಮೋನಾ ರೂಪಕಂ’ ನಾಟಕ ಪ್ರದರ್ಶನ: ಕಲಾವಿದರು–ಪಲ್ಲವಿ ಎಂ.ಡಿ, ಬಿಂದು ಮಾಲಿನಿ, ಆಯೋಜನೆ–ನಳಂದ ಆರ್ಟ್ ಸ್ಟುಡಿಯೊ, ಸ್ಥಳ– ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ

ಪಲ್ಲವಿ ಎಂ.ಡಿ, ಬಿಂದು ಮಾಲಿನಿ

2020ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಸುರಾನ ಕಾಲೇಜು ಪದವಿ ವಿದ್ಯಾರ್ಥಿಗಳಿಗೆ ‘ಪ್ರತಿಭಾ ಪುರಸ್ಕಾರ’: ಅತಿಥಿ–ರೈಲ್ವೆ ಎಡಿಜಿಪಿ ಭಾಸ್ಕರ್ ರಾವ್, ಸುರಾನ ಶೈಕ್ಷಣಿಕ ಸಂಸ್ಥೆಗಳ ವ್ಯವಸ್ಥಾಪಕ ಟ್ರಸ್ಟಿ ಅರ್ಚನಾ ಸುರಾನ, ಸ್ಥಳ–ಸುರಾನ ಕಾಲೇಜು, ಸೌತ್ ಎಂಡ್ ರಸ್ತೆ, ಬೆಳಿಗ್ಗೆ 11

ರಂಗ ವಿಜಯಾ ನಾಟಕೋತ್ಸವ: ‘ಹವ್ಯಾಸಿ ರಂಗಭೂಮಿ, ರಂಗ ತಂಡಗಳ ಪ್ರಸ್ತುತ ವಿದ್ಯಮಾನಗಳು’ ಕುರಿತು ರಂಗಸಂವಾದ (ಮಧ್ಯಾಹ್ನ 3.30), ಅಧ್ಯಕ್ಷತೆ–ನಾಗೇಶ್ ವಿ.ಬೆಟ್ಟಕೋಟೆ, ಸಂವಾದ–ಬಿ.ಸುರೇಶ, ಶಶಿಧರ್ ಭಾರಿಘಾಟ್, ಬಿ.ವಿ.ರಾಜಾರಾಂ, ರಾಜೇಂದ್ರ ಕಾರಂತ, ಎಚ್.ವಿ.ವಾಸು, ಸಂಜೆ 6ಕ್ಕೆ ಕಲಾ ನಿರ್ದೇಶಕ ಶಶಿಧರ ಅಡಪ ಅವರಿಗೆ ‘ಯುಗಾದಿ ರಂಗ ಪುರಸ್ಕಾರ’ ಪ್ರದಾನ, ಸಂಜೆ 7ಕ್ಕೆ ಸಾಫಲ್ಯ ತಂಡದಿಂದ ‘ಪ್ರಮೀಳಾರ್ಜುನೀಯಂ’ ನಾಟಕ ಪ್ರದರ್ಶನ, ಆಯೋಜನೆ–ರಂಗಪಂಚಮಿ ಸುವರ್ಣ ವಿಜಯ, ಸ್ಥಳ–ರವೀಂದ್ರ ಕಲಾಕ್ಷೇತ್ರ

ಮೊರಾರ್ಜಿ ದೇಸಾಯಿ ಅವರ ಪುಣ್ಯಸ್ಮರಣೆ: ಅಧ್ಯಕ್ಷತೆ–ರಾಜ್ಯ ಜನತಾ ಪಕ್ಷ ಸದಸ್ಯತ್ವ ಅಭಿಯಾನ ಉಸ್ತುವಾರಿ ಕೆ.ಎಂ.ಪಾಲಾಕ್ಷ, ಕರ್ನಾಟಕ ರಾಜ್ಯ ಉಸ್ತುವಾರಿ ಚಂದ್ರಶೇಖರ ವಿ.ಸ್ಥಾವರಮಠ, ಆಯೋಜನೆ–ಜನತಾ ಪಕ್ಷ ಕರ್ನಾಟಕ, ಸ್ಥಳ–ಪಕ್ಷದ ಕಚೇರಿ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11.30

‘ಪ್ರಯೋಗ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ರೀಸರ್ಚ್’ನ ಬೆಂಗಳೂರು ಕ್ಯಾಂಪಸ್ ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಅತಿಥಿಗಳು–ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ, ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ, ಸಚಿವರಾದ ಎಸ್.ಸುರೇಶ್ ಕುಮಾರ್, ಎಸ್. ಟಿ.ಸೋಮಶೇಖರ್, ಸಂಸದ ತೇಜಸ್ವಿ ಸೂರ್ಯ, ಎಂ.ಆರ್.ದೊರೆಸ್ವಾಮಿ, ತೇಜಸ್ವಿನಿ ಅನಂತಕುಮಾರ್, ಸ್ಥಳ–ಸಂಸ್ಥೆಯ ಆವರಣ, ಕನಕಪುರ ರಸ್ತೆ, ಸಂಜೆ 4

‘ಕರ್ಣ ಭೇದನ’ ತಾಳಮದ್ದಲೆ ಪ್ರದರ್ಶನ: ಅತಿಥಿಗಳು–‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಗೋಪಾಲಕೃಷ್ಣ ಅಡಿಗ ಶತಮಾನ ಪ್ರತಿಷ್ಠಾನದ ಜಯರಾಮ ಅಡಿಗ, ಹಿರಿಯ ಕಲಾವಿದ ಸೂರ್ಯನಾರಾಯಣ, ರಂಗಕರ್ಮಿ ಶಶಿಧರ ಬಾರಿಘಾಟ್, ಆಯೋಜನೆ–ಕಲಾ ಕದಂಬ ಆರ್ಟ್ ಸೆಂಟರ್, ಗುಡಿ ನಡೆ, ಸ್ಥಳ–ಕಲಾಗುಡಿ, ಕಲಾಕದಂಬರ ಕಿರು ಅಂಗಣ, ವಿಶ್ವೇಶ್ವರಯ್ಯ ಬಡಾವಣೆ, ಸಂಜೆ 5.30

‘ನೂಪುರ ನಮನ’ ಭರತನಾಟ್ಯ ರಂಗಪ್ರವೇಶ: ಗುಣಶ್ರೀ ಎಂ.ಸ್ವಾಮಿ, ಅತಿಥಿಗಳು–ಬಿ.ಕೆ. ಶ್ಯಾಮ ಪ್ರಕಾಶ್, ಉಷಾ ದತಾರ್, ಮೋಹನ್ ಶರ್ಮಾ, ಆಯೋಜನೆ–ಕೇಶವ ನೃತ್ಯ ಶಾಲಾ, ಸ್ಥಳ–ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.30

ರಸ್ತೆ ಕಾಮಗಾರಿಗೆ ಮರ ಕಡಿತಲೆ: ತನಿಖೆಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ವತಿಯಿಂದ ಕೈಗೊಂಡಿರುವ ರಸ್ತೆ ಕಾಮಗಾರಿಗಳಿಗಾಗಿ ಮರ ಕಡಿತಲೆ ಮಾಡಿರುವ ವ್ಯಕ್ತಿಗಳು ಅಥವಾ ಪ್ರಾಧಿಕಾರಗಳನ್ನು ಗುರುತಿಸಲು ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

‘ಬೆಂಗಳೂರು ಸುತ್ತಲಿನ ರಸ್ತೆ ಯೋಜನೆ’ ಹೆಸರಿನಲ್ಲಿ ಕೈಗೆತ್ತಿಕೊಂಡಿರುವ 155.2 ಕಿ.ಮೀ. ಉದ್ದದ ರಸ್ತೆ ಕಾಮಗಾರಿಗಳಲ್ಲಿ ಕೆಆರ್‌ಡಿಸಿಎಲ್ ಅಗತ್ಯ ಕಾನೂನುಬದ್ಧ ಅನುಮತಿಗಳನ್ನು ಪಡೆಯದೇ ಮರಗಳನ್ನು ಕಡಿತಲೆ ಮಾಡುತ್ತಿದೆ ಎಂದು ಆರೋಪಿಸಿ ವಾಯ್ಸ್ ಆಫ್ ಸರ್ಜಾಪುರ, Jhatkaa.org ಸಂಸ್ಥೆಗಳು ಮತ್ತು ರಜನಿ ಸಂತೋಷ್ ಎಂಬುವವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠದಲ್ಲಿ ನಡೆಯಿತು.

ಕಾಮಗಾರಿ ಸ್ಥಳದಲ್ಲಿ ಭಾರಿ ಸಂಖ್ಯೆಯ ಮರಗಳನ್ನು ಕತ್ತರಿಸಿರುವುದರ ಫೋಟೊಗಳನ್ನು ಅರ್ಜಿದಾರರು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಈ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಾಲಯ ಹಿಂದಿನ ವಿಚಾರಣೆ ವೇಳೆ ಕೆಆರ್‌ಡಿಸಿಲ್‌ಗೆ ಸೂಚಿಸಿತ್ತು. ‘ಯಾವುದೇ ಮರಗಳ ಕಡಿತಲೆಯಲ್ಲಿ ಸಂಸ್ಥೆಯ ಪಾತ್ರ ಇಲ್ಲ’ ಎಂದು ಕೆಆರ್‌ಡಿಸಿಎಲ್ ವಕೀಲರು ಶುಕ್ರವಾರ ನ್ಯಾಯಾಲಯಕ್ಕೆ ತಿಳಿಸಿದರು. ಬಳಿಕ, ಈ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ವಿಭಾಗೀಯ ಪೀಠ ಸರ್ಕಾರಕ್ಕೆ ನಿರ್ದೇಶನ ನೀಡಿತು.

‘ಮರಗಳ ಕಡಿತಲೆಯಲ್ಲಿ ತನ್ನ ಪಾತ್ರ ಇಲ್ಲ ಎಂದು ಮೊದಲ ಪ್ರತಿವಾದಿಯಾಗಿರುವ ಕೆಆರ್‌ಡಿಸಿಎಲ್ ಹೇಳಿದೆ. ಮರಗಳ ಕಡಿತಲೆಗೆ ಕಾರಣವಾದ ವ್ಯಕ್ತಿ ಅಥವಾ ಪ್ರಾಧಿಕಾರಗಳನ್ನು ಪತ್ತೆಹಚ್ಚಲು ಸರ್ಕಾರ ತನಿಖೆ ನಡೆಸಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು’ ಎಂದು ನಿರ್ದೇಶನ ನೀಡಿದ ವಿಭಾಗೀಯ ಪೀಠ, ಜೂನ್ 7ಕ್ಕೆ ವಿಚಾರಣೆ ಮುಂದೂಡಿತು.

ಪರಿಸರ ಪರಿಣಾಮ ಅಧ್ಯಯನ ಅಧಿಸೂಚನೆ 2006 ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ–1980ರ ಪ್ರಕಾರ ಸೂಕ್ತ ಅನುಮತಿ ಪಡೆಯದೇ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಅಡಿಯಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಶಿಫಾರಸು ಇಲ್ಲದೇ ಮರಗಳನ್ನು ಕಡಿಯಲಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಕೆಆರ್‌ಡಿಸಿಎಲ್ ಜಿಲ್ಲಾ ಮುಖ್ಯ ರಸ್ತೆಗಳು, ರಾಜ್ಯ ಹೆದ್ದಾರಿಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳ ಜೋಡಣೆ ಹೆಸರಿನಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದೆ. ರೈಲ್ವೆ ಮೇಲ್ಸೇತುವೆ, ರೈಲ್ವೆ ಕೆಳ ಸೇತುವೆಗಳು, ಗ್ರೇಡ್ ಸಪರೇಟರ್‌ಗಳನ್ನೂ ನಿರ್ಮಿಸಲಾಗುತ್ತಿದೆ. ಕಾನೂನಿನ ಪರಿಧಿಯಿಂದ ತಪ್ಪಿಸಿಕೊಳ್ಳಲು ಯೋಜನೆಯನ್ನು ಹತ್ತು ವಿಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಕಸಾಪ ಗಡಿನಾಡ ಘಟಕ: ನಾಲ್ವರ ನಾಮಪತ್ರ ತಿರಸ್ಕೃತ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಗಡಿನಾಡ ಘಟಕಕ್ಕೆ ಸ್ಪರ್ಧಿಸಿದವರಲ್ಲಿ ನಾಲ್ವರ ನಾಮಪತ್ರಗಳು ತಿರಸ್ಕೃತಗೊಂಡಿವೆ.

ಮೇ 9ಕ್ಕೆ ಪರಿಷತ್ತಿನ ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಚುನಾವಣಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರ ನೇತೃತ್ವದಲ್ಲಿ ಗುರುವಾರ ನಾಮಪತ್ರಗಳ ಪರಿಶೀಲನೆ ನಡೆಸಲಾಗಿತ್ತು. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ 22 ಮಂದಿಯ ನಾಮಪತ್ರವೂ ಸ್ವೀಕೃತಗೊಂಡಿದ್ದವು. ಅದೇ ರೀತಿ, ಕೇರಳ ಗಡಿನಾಡ ಘಟಕಕ್ಕೆ ಸ್ಪರ್ಧಿಸಿದ್ದ ಇಬ್ಬರ ನಾಮಪತ್ರಗಳು ಕ್ರಮಬದ್ಧವಾಗಿರುವುದಾಗಿ ಚುನಾವಣಾಧಿಕಾರಿ ಘೋಷಿಸಿದ್ದರು. ಆದರೆ, ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ ಗಡಿನಾಡು ಘಟಕಕ್ಕೆ ಸಂಬಂಧಿಸಿದಂತೆ ನಾಮಪತ್ರದಲ್ಲಿ ಗೊಂದಲ ಇದ್ದ ಕಾರಣ ಸಮಜಾಯಿಷಿ ಕೇಳಿ, ಪತ್ರ ಕಳುಹಿಸಲಾಗಿತ್ತು.

ಶುಕ್ರವಾರ ಮತ್ತೊಮ್ಮೆ ಕೇರಳ ಹೊರತುಪಡಿಸಿ ಉಳಿದ ಗಡಿನಾಡು ಘಟಕಗಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ನಾಮಪತ್ರಗಳನ್ನು ಚುನಾವಣಾಧಿಕಾ ಪರಿಶೀಲನೆ ನಡೆಸಿದರು. ತಮಿಳುನಾಡು ಘಟಕಕ್ಕೆ ಸ್ಪರ್ಧಿಸಿದವರಲ್ಲಿ ಮಧು ಸಿ.ಸಿ. ಮತ್ತು ಬಿ.ಎಸ್. ವಿನಯ್ ಅವರ ನಾಮಪತ್ರ ತಿರಸ್ಕೃತಗೊಂಡಿದೆ. ಇದರಿಂದಾಗಿ ತಮಿಳ್ ಸೆಲ್ವಿ ಮಾತ್ರ ಸ್ಪರ್ಧೆಯಲ್ಲಿದ್ದು, ಅವರು ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ ಎನ್ನಲಾಗಿದೆ.

ಆಂಧ್ರಪ್ರದೇಶ ಗಡಿನಾಡ ಘಟಕಕ್ಕೆ ಕುಣೆ ಬಾಲರಾಜ್, ಎಚ್.ಬಿ. ಶಿವಕುಮಾರ್, ಅಂಜನ್ ಕುಮಾರ್, ಶಶಿಧರ್, ತಿಪ್ಪೇಸ್ವಾಮಿ ಜಿ.ಎಸ್., ಹನುಮಂತರಾಯ ಜಿ.ಕೆ. ಹಾಗೂ ಎಸ್.ಕೆ. ಜಯಶಂಕರ್ ಸ್ಪರ್ಧಿಸಿದ್ದರು. ಇವರಲ್ಲಿ ಶಿವಕುಮಾರ್ ಅವರ ನಾಮಪತ್ರ ತಿರಸ್ಕೃತಗೊಂಡಿದೆ. ತಿಪ್ಪೇಸ್ವಾಮಿ ಜಿ.ಎಸ್. ಮತ್ತು ಹನುಮಂತರಾಯ ಜಿ.ಕೆ. ಅವರು ನಾಮಪತ್ರ ಹಿಂತೆಗೆದುಕೊಂಡಿದ್ದಾರೆ.

ಮಹಾರಾಷ್ಟ್ರ ಗಡಿನಾಡ ಘಟಕಕ್ಕೆ ಸ್ಪರ್ಧಿಸಿದವರಲ್ಲಿ ಎಸ್.ಎಸ್. ಸಾಲೀಮಠ ಅವರ ನಾಮಪತ್ರ ತಿರಸ್ಕೃತಗೊಂಡಿದೆ. ಸೋಮಶೇಖರ ಜಮಶೆಟ್ಟಿ ಮತ್ತು ಮಲ್ಲಿಕಾಜೆಪ್ಪ ಸೋಮಶೇಖರ ಮಡ್ಡೆ ಸ್ಪರ್ಧೆಯಲ್ಲಿದ್ದಾರೆ. ಎಂದು ವಿಶೇಷ ಚುನಾವಣಾಧಿಕಾರಿ ತಿಳಿಸಿದ್ದಾರೆ.

ಕೋವಿಡ್ ಬಳಿಕದ ಬದಲಾವಣೆ–ಚರ್ಚೆ ಇಂದು

ಬೆಂಗಳೂರು: ವಿಶ್ವ ಆರೋಗ್ಯ ದಿನದ ಪ್ರಯುಕ್ತ ಮಣಿಪಾಲ ಆಸ್ಪತ್ರೆಗಳ ಸಮೂಹವು ಶನಿವಾರ (ಏ.10) ಬೆಳಿಗ್ಗೆ 11.30ಕ್ಕೆ ‘ಕೋವಿಡ್ ಹಾಗೂ ಕೋವಿಡೋತ್ತರ ಪರಿಸ್ಥಿತಿಯ ಬದಲಾವಣೆಗೆ ಹೊಂದಿಕೊಳ್ಳುವುದು’ ಎಂಬ ವಿಷಯದ ಮೇಲೆ ವೆಬಿನಾರ್ ಆಯೋಜಿಸಿದೆ.

‘ಪ್ರಜಾವಾಣಿ’ ಮತ್ತು ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಈ ವೆಬಿನಾರ್ ನಡೆಯಲಿದೆ. ಕ್ಯಾಪ್ಜೆಮಿನ್ ಟೆಕ್ನಾಲಜಿ ಸರ್ವಿಸ್ ಇಂಡಿಯಾ ಲಿಮಿಟೆಡ್‌ನ ಹಣಕಾಸು ಅಧಿಕಾರಿ ಅಂಕಿತ್ ಮಹೇಶ್ವರಿ, ಡಿಜಿಟಾಪ್ ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ಕನ್ಸಲ್ಟಿಂಗ್ ಸರ್ವಿಸಸ್ ಇಂಡಿಯಾ ಲಿಮಿಟೆಡ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಅತುಲ್ ಮನೋಹರ್ ಸಿಂಕರ್, ಗ್ಲೋಬಲ್ ಡಿಜಿಟಲ್‌ನ ಮುಖ್ಯ ಹಣಕಾಸು ಅಧಿಕಾರಿ ದಿವ್ಯಾ ಕುಮಾರ್, ವೈಟ್‌ಫೀಲ್ಡ್‌ನ ಮಣಿಪಾಲ್ ಆಸ್ಪತ್ರೆಯ ನರಶಾಸ್ತ್ರ ತಜ್ಞ ಡಾ. ಅಭಿನವ್ ರೈನಾ ಹಾಗೂ ಶ್ವಾಸಕೋಶ ಔಷಧ ವಿಭಾಗದ ಸಲಹೆಗಾರ್ತಿ ಡಾ. ಶೀತಲ್ ಚೌರೇಶಿಯಾ ಭಾಗವಹಿಸಲಿದ್ದಾರೆ.

ಕೋವಿಡ್ ಎರಡನೇ ಅಲೆಯಿಂದಾಗಿ ದೈನಂದಿನ ಜೀವನಕ್ರಮವು ಹಳಿ ತಪ್ಪುವ ಸಾಧ್ಯತೆಯಿದೆ. ಉದ್ಯೋಗ ನಷ್ಟವಾಗದಂತೆ ನೋಡಿಕೊಳ್ಳುವುದು, ಆರ್ಥಿಕ ಸ್ಥಿರತೆ ಕಾಯ್ದುಕೊಳ್ಳುವುದು, ಆರೋಗ್ಯ ಸುರಕ್ಷತೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವೆಬಿನಾರ್‌ನಲ್ಲಿ ಪಾಲ್ಗೊಳ್ಳಲು bit.ly/dhmh ಲಿಂಕ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರು ನಗರ ವಿವಿ: ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಸಾರಿಗೆ ನೌಕರರು ಮುಷ್ಕರ ನಡೆಸುತ್ತಿರುವ ಕಾರಣ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಂಚಾರ ವ್ಯವಸ್ಥೆಯಲ್ಲಿ ತೊಂದರೆ ಉಂಟಾಗುವ ಸಾಧ್ಯತೆ ಇರುವುದರಿಂದ ಇದೇ 10 ಮತ್ತು 12ರಂದು ನಡೆಯಬೇಕಿದ್ದ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯ ತಿಳಿಸಿದೆ.

‘ಮುಂದೂಡಲಾಗಿರುವ ಪರೀಕ್ಷೆಗಳ ದಿನಾಂಕವನ್ನು ಶೀಘ್ರ ತಿಳಿಸಲಾಗುವುದು’ ಎಂದು ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಅಂಬೇಡ್ಕರ್ ಜಯಂತಿ ಆಚರಿಸದಿದ್ದರೆ ಹೋರಾಟ’

ಬೆಂಗಳೂರು: ‘ರಾಜ್ಯ ಸರ್ಕಾರವು ಕೋವಿಡ್ ನೆಪವೊಡ್ಡಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆಗೆ ತಡೆಯೊಡ್ಡಿದೆ. ಈ ನಿರ್ಧಾರವನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು.’ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎನ್.ಮೂರ್ತಿ ಎಚ್ಚರಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲು ನಾವು ಬದ್ಧರಾಗಿದ್ದೇವೆ. ಹೀಗಾಗಿ ಜಯಂತಿ ಆಚರಣೆ ಬಗ್ಗೆ ಕೂಡಲೇ ಸುತ್ತೋಲೆ ಹೊರಡಿಸಬೇಕು. ಒಂದೊಮ್ಮೆ ಸರ್ಕಾರ ಆದೇಶ ಹೊರಡಿಸದಿದ್ದರೂ ನಾವೆಲ್ಲಾ ಸೇರಿ ಜಯಂತಿ ಆಚರಿಸಲಿದ್ದೇವೆ’ ಎಂದರು.

ವಾಯುಯಾನ ವ್ಯವಸ್ಥೆಗಳ ಕೇಂದ್ರ (ಸಿಎಬಿಎಸ್)

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)
ಭಾರತ ಸರ್ಕಾರ, ರಕ್ಷಣಾ ಸಚಿವಾಲಯ
ಬೇಲೂರು, ಯಮಲೂರು ಅಂಚೆ, ಬೆಂಗಳೂರು–560037

ಗುತ್ತಿಗೆ ಆಧಾರದಲ್ಲಿ ಸಿವಿಲಿಯನ್ ಮೆಡಿಕಲ್ ಆಫೀಸರ್ ಹುದ್ದೆಗಾಗಿ ಅರ್ಹ ವೈದ್ಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

1. ಹುದ್ದೆಯ ಹೆಸರು : ಸಿವಿಲಿಯನ್ ಮೆಡಿಕಲ್ ಆಫೀಸರ್ (ಗುತ್ತಿಗೆ ಆಧಾರದಲ್ಲಿ)
2. ಹುದ್ದೆಗಳ ಸಂಖ್ಯೆ : ಒಂದು
3. ವೇತನ : ಮಾಸಿಕ ರೂ. 55,000/– (ಕ್ರೋಢೀಕೃತ/ನಿಗದಿತ)
4. ವಯಸ್ಸು : 65 ವರ್ಷಕ್ಕಿಂತ ಕಡಿಮೆ
5. ವಿದ್ಯಾರ್ಹತೆ : ಅವಶ್ಯಕ: ಎಂಬಿಬಿಎಸ್, ಕೆಎಂಸಿ/ಐಎಂಸಿ ನೊಂದಾಯಿತ. ವಾಯುಯಾನ ಔಷಧಿಯಲ್ಲಿ ಪಿಜಿ ಡಿಪ್ಲೋಮ/ಡಿಗ್ರಿ ಅಪೇಕ್ಷಣೀಯ
6. ಕೆಲಸದ ಅನುಭವ : ಎ) ಒಂದು ಕ್ಲಿನಿಕ್/ಆಸ್ಪತ್ರೆಯಲ್ಲಿ ಸ್ವತಂತ್ರವಾಗಿ ಕನಿಷ್ಠ 5 ವರ್ಷಗಳ ಕಾಲ ಆರ್‌ಎಂಪಿ ಕಾರ್ಯಾನುಭವ ಹೊಂದಿರಬೇಕು.
   ಬಿ) ಬೆಂಗಳೂರು ನಿವಾಸಿಗೆ ಆದ್ಯತೆ ಮತ್ತು ಸ್ಥಳೀಯ ಕನ್ನಡ ಭಾಷೆಯಲ್ಲಿ ಪರಿಣಿತರಾಗಿರಬೇಕು.

ಸೇವೆಯ ಷರತ್ತು ಮತ್ತು ನಿಬಂಧನೆಗಳು

ಎ) ಈ ಹುದ್ದೆಯು ಸಂಪೂರ್ಣ ಗುತ್ತಿಗೆ ಆಧಾರದ ಹುದ್ದೆಯಾಗಿರುತ್ತದೆ.
ಬಿ) ಎನ್‌ಪಿಎ ಮತ್ತು ಇನ್ನಿತರ ಭತ್ಯೆಗಳು ಇರುವುದಿಲ್ಲ.
ಸಿ) ನೇಮಕಾತಿ ಅವಧಿ, ಸೇರಿಕೊಂಡ ದಿನಾಂಕದಿಂದ ಒಂದು ವರ್ಷ ಅವಧಿಯದ್ದು ಅಥವಾ ಸಿಎಬಿಎಸ್’ನಲ್ಲಿ ನಿಯಮಿತ ಅಭ್ಯರ್ಥಿ ಭರ್ತಿ ಆಗುವವರೆಗೆ, ಇವುಗಳಲ್ಲಿ ಯಾವುದು ಮೊದಲೊ ಅದು ಆಗಿರುತ್ತದೆ.
ಡಿ) ಈ ಹುದ್ದೆಗೆ ಆಯ್ಕೆಗೊಳ್ಳುವ ಅಧಿಕಾರಿಯು, ಕೊನೆಯ ಹಂತದಲ್ಲಿ ಸರ್ಕಾರಿ ಸೇವೆಗಳಿಗೆ ನಿಯಮಿತ ಅಭ್ಯರ್ಥಿಯಾಗಿ ಆಯ್ಕೆಗೊಂಡಲ್ಲಿ, ಅಂತಹವರು ಯಾವುದೇ ಹಿರಿತನ ಅಥವಾ ಇನ್ನಿತರ ಲಾಭಗಳಿಗೆ ಅರ್ಹತೆ ಹೊಂದಿರುವುದಿಲ್ಲ.
ಇ) ಸದರಿ ನೇಮಕಾತಿಯು ಡಿಆರ್‌ಡಿಒ ಹೆಡ್‌ಕ್ವಾಟರ್ಸ್, ನವದೆಹಲಿ ಇವರ ಅನುಮೋದನೆಯ ನಿಬಂಧನೆಗೆ ಒಳಪಡುತ್ತದೆ.

ಎಫ್) ಕೆಲಸದ ಸಮಯ (ರಜಾದಿನಗಳನ್ನು ಹೊರತುಪಡಿಸಿ) – ಸೋಮವಾರದಿಂದ ಶುಕ್ರವಾರದವರೆಗೆ – 0830 ಗಂಟೆಯಿಂದ 1700 ಗಂಟೆವರೆಗೆ ಶನಿವಾರ/ಭಾನುವಾರ (ಎಮರ್ಜನ್ಸಿ ಅಥವಾ ಅಗತ್ಯತೆಯ ಮೇರೆಗೆ)

ಅರ್ಹ ಅಭ್ಯರ್ಥಿಗಳು ಕಡ್ಡಾಯವಾಗಿ ಒಂದು ಬಿಳಿ ಹಾಳೆಯ ಮೇಲೆ ಅರ್ಜಿಯನ್ನು ಟೈಪ್ ಮಾಡಿ, ಅದರಲ್ಲಿ ತಮ್ಮ ಹೆಸರು, ತಂದೆ/ಗಂಡನ ಹೆಸರು, ಜನ್ಮದಿನಾಂಕ, ಸಂಪರ್ಕ ವಿಳಾಸ, ಶೈಕ್ಷಣಿಕ ವಿದ್ಯಾರ್ಹತೆ, ಅನುಭವದ ವಿವರ, ಕೆಎಂಸಿ/ಐಎಂಸಿ ನೊಂದಣಿ ಸಂಖ್ಯೆ ಜೊತೆಗೆ ದೂರವಾಣಿ ಸಂಖ್ಯೆ, ಇಮೇಲ್ ವಿಳಾಸಗಳನ್ನು ನಮೂದಿಸುವುದು ಮತ್ತು ಸ್ವಯಂ ದೃಢೀಕೃತ ಪೂರಕ ಪ್ರಮಾಣಪತ್ರ/ದಾಖಲಾತಿಗಳನ್ನು ಲಗತ್ತಿಸಿ, ಈ ಜಾಹೀರಾತು ದಿನಾಂಕದಿಂದ 30 ದಿನಗಳೊಳಗೆ ತಲುಪುವಂತೆ “ನಿರ್ದೇಶಕರು, ಸಿಎಬಿಎಸ್, ವಿಂಡ್ ಟನಲ್ ರೋಡ್, ಬೇಲೂರು, ಯಮಲೂರು ಅಂಚೆ, ಬೆಂಗಳೂರು–560037” ವಿಳಾಸಕ್ಕೆ ತಲುಪುವಂತೆ ರವಾನಿಸುವುದು. ಅರ್ಜಿಯ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ “ಸಿವಿಲಿಯನ್ ಮೆಡಿಕಲ್ ಆಫೀಸರ್–ಗುತ್ತಿಗೆ ಹುದ್ದೆಗಾಗಿ ಅರ್ಜಿ” ಎಂದು ನಮೂದಿಸುವುದು.

davp 10301/11/0001/2122

Ministry of Culture
Govt of India

ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ

(ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ಅಡಿಯಲ್ಲಿನ ಸ್ವಾಯುತ್ತ ಸಂಸ್ಥೆ)
ಪ್ರಾದೇಶಿಕ ಕೇಂದ್ರ
ಕೆಂಗುಂಟೆ ವೃತ್ತ, ಮಲ್ಲತ್ತಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು – 560056

ನೇಮಕಾತಿ

ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಪ್ರಾದೇಶಿಕ ಕೇಂದ್ರ ಬೆಂಗಳೂರು ಇವರು ಸಂಪೂರ್ಣ ಗುತ್ತಿಗೆ ಮತ್ತು ಯೋಜನೆ ಆಧಾರದಲ್ಲಿ, “ಕಾರ್ಯಕ್ರಮ ಸಹಾಯಕ” ಮತ್ತು “ಯೋಜನಾ ಸಹಾಯಕ” ಎಂಬ ಪ್ರತಿ ಒಂದು ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ವಿವರಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು http://ignca.gov.in/recruitments/.

davp 09118/ 11/0001/2122 (ಪ್ರಾದೇಶಿಕ ನಿರ್ದೇಶಕರು)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಚನ್ನಪಟ್ಟಣ
ನಂ.4823 ಆ1, ಅಪ್ಪಾಜಿ ಕಾಂಪ್ಲೆಕ್ಸ್, ಚಾನಲ್ ರಸ್ತೆ (3ನೇ ಅಡ್ಡರಸ್ತೆ),
ಮಂಜುನಾಥ ಬಡಾವಣೆ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ–562160
ದೂ: 080–27254891, ಇ–ಮೇಲ್: cdpochannapatna@gmail.com

ಸಂ : ಶಿಅಯೋಚ/ಗ್ರೂಫ್ ಡಿ/ಹೊರಗುತ್ತಿಗೆ/2021–22/8(4) ದಿನಾಂಕ: 07–04–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚನ್ನಪಟ್ಟಣ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ಕಚೇರಿಗೆ 2021–22ನೇ ಸಾಲಿಗೆ ತಾತ್ಕಾಲಿಕವಾಗಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಖಾಲಿ ಇರುವ **"ಡಿ" ಗ್ರೂಫ್ ನೌಕರರ ಹುದ್ದೆಗೆ** ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯ ಪರಿಷ್ಕೃತ ವೇತನದನ್ವಯ ಬಾಹ್ಯಮೂಲದಿಂದ ಇಬ್ಬರು "ಡಿ" ಗ್ರೂಫ್ ನೌಕರರನ್ನು ನೇಮಕ ಮಾಡಿಕೊಳ್ಳಲು ಕರ್ನಾಟಕ ಪಾರದರ್ಶಕತೆ ಅಧಿನಿಯಮ 1961 ಹಾಗೂ ತತ್ಸಂಬಂಧಿತ ನಿಯಾಮಾನುಸಾರ ಆಸಕ್ತಿಯುಳ್ಳ ಸ್ಥಳೀಯ ಅರ್ಹ ಸೇವಾ ಸಂಸ್ಥೆಯವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ದಿನಾಂಕ: **28.04.2021ರ ಸಂಜೆ 4.00 ಗಂಟೆಯೊಳಗೆ** ಕಚೇರಿಗೆ ಟೆಂಡರ್ ವಿವರಗಳೊಂದಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, #4823, ಅಪ್ಪಾಜಿ ಕಾಂಪ್ಲೆಕ್ಸ್, ಚಾನಲ್ ರಸ್ತೆ (3ನೇ ಅಡ್ಡರಸ್ತೆ), ಮಂಜುನಾಥ ಬಡಾವಣೆ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ–562160 ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ
ಚನ್ನಪಟ್ಟಣ

ಹಿಸನಿ/ವಾಸಸಂಇ/ರಾನ/018/ಯಕ್ತಿ/2021–22

PUBLIC NOTICE

ICICI Bank
ICICI Bank Limited
Registered office: Landmark, Race Course Circle, Vadodara 390 007.
Corporate office: ICICI Bank Towers, Bandra-Kurla Complex, Mumbai 400 051.

ಚಿನ್ನ ಹರಾಜು ಕಂ ಆಹ್ವಾನ ಪ್ರಕಟಣೆ

ಈ ಕೆಳಗಿನ ಸಾಲಗಾರರಿಗೆ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್ (“ಐಸಿಐಸಿಐ ಬ್ಯಾಂಕ್”) ಇವರಿಂದ ಪಡೆದಿದ್ದ ಚಿನ್ನಾಭರಣಗಳ ಮೇಲಿನ ಸಾಲ ಸೌಲಭ್ಯಕ್ಕೆ (“ಫೆಸಿಲಿಟಿ”) ಸಂಬಂಧಿತ ಸಂಪೂರ್ಣ ಬಾಕಿಮೊತ್ತವನ್ನು ಮರುಪಾವತಿಸಬೇಕೆಂದು ಸೂಚನೆ ನೀಡಲಾಗಿತ್ತು, ಅದಾಗ್ಯೂ ಸಾಲಗಾರರು ವಿಫಲರಾಗಿದ್ದರಿಂದ, ಸದರಿ ಅಡಮಾನ ಚಿನ್ನಾಭರಣಗಳನ್ನು ಏಪ್ರಿಲ್ 20, 2021ರಂದು ಹರಾಜು ಹಾಕುವುದು ಅನಿವಾರ್ಯವಾಗಿದೆ. ಯಾವುದೇ ಪೂರ್ವ ಸೂಚನೆ ನೀಡದೆಯೆ ಖಾತೆಯನ್ನು ಕೈಬಿಡುವ/ಹರಾಜು ದಿನಾಂಕ ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಸದರಿ ಹರಾಜನ್ನು https://gold.samil.in ಮೂಲಕ ಆನ್‌ಲೈನ್‌ನಲ್ಲಿ 12:30 ರಿಂದ 3:30 ಗಂಟೆಯೊಳಗೆ ಕೈಗೊಳ್ಳಲಾಗುತ್ತದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ. ಒಂದು ವೇಳೆ ಸಾಲಗಾರರು ಮೃತರಾಗಿದ್ದಲ್ಲಿ, ಅವರ ಉತ್ತರಾಧಿಕಾರಿಗಳಿಗೆ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ, ಯಾವುದೇ ಪೂರ್ವ ಸೂಚನೆ ನೀಡದೆಯೆ ಸದರಿ ಹರಾಜು ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು – 8ನೇ ಮೈಲ್, ಟಿ ದಾಸರಹಳ್ಳಿ	
344005000646	ಎಂ ಒ ತಿಪ್ಪೇಸ್ವಾಮಿ
ಶಾಖೆ ಹೆಸರು: ಬೆಂಗಳೂರು – ಎಸಿಎಸ್ ಲೇಔಟ್	
233805000612	ಗಂಗಪ್ಪ ಎ
ಶಾಖೆ ಹೆಸರು: ಬೆಂಗಳೂರು – ಎಸಿಎಸ್ ಲೇಔಟ್ ಸಿಂಗಸಂದ್ರ	
395205000333	ಕೂಡ್ಲೂರು ಗೊಲ್ಲ ನಾಗರಾಜು
395205000400	ಜಯಪ್ರಕಾಶ್ ಎ
ಶಾಖೆ ಹೆಸರು: ಬೆಂಗಳೂರು – ಅನಂತನಗರ	
748705000032	ಎಸ್ ಚಂದ್ರಶೇಖರ ರಾಜ್
748705000089	ಎಂ ಪಿರಮನಯಾಗಮ್
ಶಾಖೆ ಹೆಸರು: ಬೆಂಗಳೂರು – ಬಾಗಲೂರು	
231805000557	ಬೈರೆಡ್ಡಿ ಆರ್ ಸಿ
ಶಾಖೆ ಹೆಸರು: ಬೆಂಗಳೂರು – ಬಸವನಗುಡಿ	
232005000968	ಗೊಲ್ಲ ನಾಗೇಂದ್ರ
232005000073	ವೈಜಯಂತಿ ಆರ್
232005000080	ವೈಜಯಂತಿ ಆರ್
232005000082	ವೈಜಯಂತಿ ಆರ್
232005000307	ವೈಜಯಂತಿ ಆರ್
232005000314	ವೈಜಯಂತಿ ಆರ್
232005000315	ವೈಜಯಂತಿ ಆರ್
232005000156	ಆರ್ ನಿವೇದ ರಾಘವಿ
232005000316	ಆರ್ ನಿವೇದ ರಾಘವಿ
232005000339	ಕವಿತಾ ಟಿ ಎಂ
232005000965	ರೂಪಾ ವಿ ಎಲ್
232005000966	ದೀಪಿಕಾ ವಿ ನಾಯ್ಡು
ಶಾಖೆ ಹೆಸರು: ಬೆಂಗಳೂರು – ಬಟ್ಟರಹಳ್ಳಿ	
369805000975	ಕರೆಲ್ಲ ಜ್ಞಾನೇಶ್ವರ ರಾವ್
369805000820	ಅಂಬಿಕಾ ಬಸವರಾಜ್
ಶಾಖೆ ಹೆಸರು: ಬೆಂಗಳೂರು – ಬೇಗೂರು ಮುಖ್ಯರಸ್ತೆ	
410705000352	ರಮೇಶ್ ಬಾಬು ಅದಿರಾಲ
410705000254	ಮಹಾಲಕ್ಷ್ಮೀ ವಿ ನಾಥ್
ಶಾಖೆ ಹೆಸರು: ಬೆಂಗಳೂರು – ಚಿಕ್ಕಪೇಟೆ	
656005600928	ಶುಭಂ ಹೆಂಡ್ರಿಕ್ಸ್
ಶಾಖೆ ಹೆಸರು: ಬೆಂಗಳೂರು – ದೊಡ್ಡಕಮ್ಮನಹಳ್ಳಿ	
738605000020	ಅಂಥೋನಿ ರಾಜ್ ಬಿ ಎ
ಶಾಖೆ ಹೆಸರು: ಬೆಂಗಳೂರು – ಹೆಚ್‌ಬಿಆರ್ ಲೇಔಟ್	
748305000066	ಸೈಯದ್ ಅಬ್ದುಲ್ ಮತೀನ್
ಶಾಖೆ ಹೆಸರು: ಬೆಂಗಳೂರು – ಹೆಣ್ಣೂರು ರಸ್ತೆ	
233105001531	ಮೊಹಮ್ಮದ ಶಫಿ ಎಸ್
233105001519	ಕರುಣಾ ಕೆ
ಶಾಖೆ ಹೆಸರು: ಬೆಂಗಳೂರು – ಜಕ್ಕೂರು ಲೇಔಟ್	
754905000041	ವೆಂಕಟೇಶ್ ಶಿಂದೆ
ಶಾಖೆ ಹೆಸರು: ಬೆಂಗಳೂರು – ಜಯನಗರ 4ನೇ ಬ್ಲಾಕ್	
723105000068	ರವಿಕುಮಾರ್ ಎಂ ಡಿ
ಶಾಖೆ ಹೆಸರು: ಬೆಂಗಳೂರು – ಕನಕಪುರ ರಸ್ತೆ	
440505000052	ನಸರುದ್ದೀನ್ ಎ ಪಿ
440505000074	ಪೆರುಮಾಳ್ ಎಂ
ಶಾಖೆ ಹೆಸರು: ಬೆಂಗಳೂರು – ಕಸವನಹಳ್ಳಿ	
317105000328	ಆಶಿಷ್ ಕುಮಾರ್
ಶಾಖೆ ಹೆಸರು: ಬೆಂಗಳೂರು – ಮಾರ್ಗೋಸ ರಸ್ತೆ	
343705000685	ಎಸ್ ಎನ್ ಆನಂದ ಮೂರ್ತಿ
343705000732	ಎಸ್ ಎ ಕುಶಾಲ ಕುಮಾರ್
ಶಾಖೆ ಹೆಸರು: ಬೆಂಗಳೂರು – ಪ್ರಶಾಂತನಗರ	
736305000080	ಆನಂದ ಆನಂದ
ಶಾಖೆ ಹೆಸರು: ಬೆಂಗಳೂರು – ರಾಜಾಜಿನಗರ 3ನೇ ಬ್ಲಾಕ್	
232305000884	ಪ್ರದೀಪ ಕೆ
232305000874	ದೊಡ್ಡಪ್ಪ ದಿವಾಕರ
232305000852	ಪ್ರತಿಮಾ ವಿ ಬಿ
ಶಾಖೆ ಹೆಸರು: ಬೆಂಗಳೂರು – ರಾಮಮೂರ್ತಿನಗರ ಮುಖ್ಯರಸ್ತೆ	
431905000562	ಮಂಜುಳಾ ಜಿ
431905000352	ವಿ ಮಧು
431905000563	ಜೈ ಶಂಕರ್
431905000564	ಜೈ ಶಂಕರ್
431905000565	ಜೈ ಶಂಕರ್
ಶಾಖೆ ಹೆಸರು: ಬೆಂಗಳೂರು – ಸದಾಶಿವನಗರ ರಿಟೈಲ್	
272605000783	ನಾಗರಾಜ ಎಂ
ಶಾಖೆ ಹೆಸರು: ಬೆಂಗಳೂರು – ಸಂಪಿಗೆ ರಸ್ತೆ	
413905000248	ನಾಗರತ್ನ ಎನ್
413905000249	ತಿಪ್ಪೇಶ್ ಕೆ
ಶಾಖೆ ಹೆಸರು: ಬೆಂಗಳೂರು – ಸಂಜಯನಗರ	
233605000519	ಅರುಣಕುಮಾರ್ ಕೆ
ಶಾಖೆ ಹೆಸರು: ಬೆಂಗಳೂರು – ಟಿಸಿ ಪಾಳ್ಯ	
233005001168	ಹರೀಶ್ ಎಂ
ಶಾಖೆ ಹೆಸರು: ಬೆಂಗಳೂರು – ಥಣಿಸಂದ್ರ	
232705000587	ಪುಷ್ಪಾವತಿ
232705000588	ಪುಷ್ಪಾವತಿ
232705000604	ಅಚುನಾಲ ಗೌರಿ
ಶಾಖೆ ಹೆಸರು: ಬೆಂಗಳೂರು – ಟಿಂಬರ್ ಲೇಔಟ್	

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
748505000040	ಮಹೇಶ್ ಕೆ ಜೆ
ಶಾಖೆ ಹೆಸರು: ಬೆಂಗಳೂರು – ಉಳ್ಳಾಲ	
722805000073	ಸುಧೀರ ಕುಂದರಗಿ
722805000039	ಆರ್ ಕವಿತಾ
722805000040	ಯೋಗೀಶ್ ಎಸ್
722805000074	ಮಂಜುನಾಥ ಆರ್
ಶಾಖೆ ಹೆಸರು: ಬೆಂಗಳೂರು – ಉತ್ತರಹಳ್ಳಿ	
217805001088	ಪೀಟರ್ ಅಂಟೋನಿ ರಾಜ್ ಸಿ
217805000352	ವಿನಯ್ ಕರಮ್ ಚೇಟಿ
ಶಾಖೆ ಹೆಸರು: ಬೆಂಗಳೂರು – ವಿದ್ಯಾರಣ್ಯಪುರ	
219105001275	ಎಸ್ ಪ್ರಮೋದ್
219105001269	ರಾಹುಲ್ ಮುದರಶಿಲ್ಲ ರಾಜಗೋಪಾಲ್
ಶಾಖೆ ಹೆಸರು: ಬೆಂಗಳೂರು – ಯಲಹಂಕ 2	
754305000139	ನಾಗೇಶ ಜೆ
ಶಾಖೆ ಹೆಸರು: ಬೆಂಗಳೂರು – ಅನ್ನಪೂರ್ಣೇಶ್ವರಿ ನಗರ	
315705000569	ಕುಸುಮಾ ಎಸ್
ಶಾಖೆ ಹೆಸರು: ಬೆಂಗಳೂರು – ಬನಶಂಕರಿ	
100905002374	ಅರುಣ್ ಪಾಂಡುರಂಗ
100905002245	ದಿನೇಶ್ ಆರ್
100905002378	ಸಂದೀಪ್ ಆರ್
ಶಾಖೆ ಹೆಸರು: ಬೆಂಗಳೂರು – ಬನ್ನೇರಘಟ್ಟ ರಸ್ತೆ	
100705001359	ರಾಧಿಕಾ ಮಹಾಭಾಷ್ಯಂ
100705003232	ರಾಹುಲ್ ಸಿಂಗ್
ಶಾಖೆ ಹೆಸರು: ಬೆಂಗಳೂರು – ಬಸವೇಶ್ವರನಗರ	
230105001419	ಶ್ರೀನಿವಾಸ ಬಿ ವಿ
230105001423	ಲಕ್ಷ್ಮಣ ವೈ
230105001427	ಮನ್ಸೂರ್ ಇಲಾಹಿ
230105001438	ಪ್ರಸನ್ನ ಇ
ಶಾಖೆ ಹೆಸರು: ಬೆಂಗಳೂರು – ಬೆಳ್ಳಂದೂರು	
107505003194	ಈ ಅನಿಲ್ ಕುಮಾರ್
107505003239	ಗುಮ್ಮಲಂಪತಿ ವಂಶಿಕೃಷ್ಣ
ಶಾಖೆ ಹೆಸರು: ಬೆಂಗಳೂರು – ಬಿಡದಿ ಪಟ್ಟಣ	
141405003586	ಭಾರತಿ ಮುನಿರಾಜು
141405003587	ಭಾರತಿ ಮುನಿರಾಜು
141405003878	ನರಿಯಪ್ಪ ಎಸ್ ಖಂಡೋಜಿ
141405003565	ವಿನಯಕುಮಾರ್ ಡಿ ಎಸ್
141405004044	ಸುನೀತಾ ಸುನೀತಾ
141405004027	ಕೆ ಆರ್ ವೇಣು
141405004029	ಆನಂದ ಆನಂದ
141405004033	ನಿತಿನ್‌ರಾಜ್ ಕೆ
ಶಾಖೆ ಹೆಸರು: ಬೆಂಗಳೂರು – ಬಿಟಿಎಂ 2ನೇ ಹಂತ	
029705006256	ಪ್ರತಾಪ ಕನಪ್ಪ ಚಂದ್ರಪ್ಪ
029705005875	ಸೈಯದ್ ಅಜರುದ್ದೀನ್ ಪಾಷಾ
ಶಾಖೆ ಹೆಸರು: ಬೆಂಗಳೂರು – ಕಂಟೋನ್ಮೆಂಟ್	
625205021097	ತಾಜ್ ಪಾಷಾ
625405019881	ಪ್ರೇಮಾ ಎಲ್
625405019887	ಅರ್ಚನಾ ಎಸ್
625405019886	ಪ್ರೇಮಾ ಎಲ್
ಶಾಖೆ ಹೆಸರು: ಬೆಂಗಳೂರು – ಕಾಕ್ಸ್‌ಟೌನ್	
025205006357	ಕಾರ್ತಿಕೇಯನ್ ಎಸ್
025205006794	ಉದಯ್ ಮೈಸೂರು
ಶಾಖೆ ಹೆಸರು: ಬೆಂಗಳೂರು – ಡಾ.ಮೋದಿ ಹಾಸ್ಪಿಟಲ್ ರೋಡ್	
171005000535	ಕೃಷ್ಣಮೂರ್ತಿ ಸಿ ಎ
171005000539	ಕೃಷ್ಣಮೂತಿ ಸಿ ಎ
ಶಾಖೆ ಹೆಸರು: ಬೆಂಗಳೂರು – ಹನುಮಂತನಗರ	
232505001151	ದೊಡ್ಡೇಗೌಡ ವಿ ಎನ್
232505001063	ಸಂತೋಷ್ ಸಂತೋಷ್
ಶಾಖೆ ಹೆಸರು: ಬೆಂಗಳೂರು – ಹೆಬ್ಬಾಳ	
318005000337	ಅಶ್ವಿನಿಕುಮಾರ್ ಪಿ ರೆಡ್ಡಿ
318005000210	ಅನುಪಮ ರೇ
318005000377	ಎಂ ಕಲ್ಯಾಣಿ
318005000335	ಮಹೇಶ್ ಎನ್
ಶಾಖೆ ಹೆಸರು: ಬೆಂಗಳೂರು – ಹೊಸೂರ ರಸ್ತೆ	
058305004559	ಉಮಮಹೇಶ್ವರಿ ಮುತ್ತು
ಶಾಖೆ ಹೆಸರು: ಬೆಂಗಳೂರು – ಹೆಚ್‌ಎಸ್‌ಆರ್ ಲೇಔಟ್ ಸೆಕ್ಟರ್ 2	
318205000322	ಯಂಗಾಲ ವೆಂಕಟನಾರಾಯಣ ರೆಡ್ಡಿ
ಶಾಖೆ ಹೆಸರು: ಬೆಂಗಳೂರು – ಇಂದಿರಾನಗರ	
016905015832	ಮೊಹಮ್ಮದ್ ಶಫೀಕ್
ಶಾಖೆ ಹೆಸರು: ಬೆಂಗಳೂರು – ಜಯನಗರ	
005305012191	ಶ್ರೀಮಂತ ಪುಟ್ಟ
ಶಾಖೆ ಹೆಸರು: ಬೆಂಗಳೂರು – ಜಯನಗರ ಟಿ ಬ್ಲಾಕ್	
141805002255	ಪಟುರು ಸುಬ್ಬರಾಮಿ ರೆಡ್ಡಿ
141805002252	ಸೈಯದ್ ಅಕ್ಬರ್
141805002157	ಭರತ್ ಕಪೂರ್
141805002261	ಎನ್ ಸೈಯದ್ ಅಬ್ರಾರ್ ಅಹ್ಮದ್
ಶಾಖೆ ಹೆಸರು: ಬೆಂಗಳೂರು – ಜೆ ಪಿ ನಗರ 4ನೇ ಫೇಸ್	
344105000478	ಶಿವರಾಜ್ ಕರಣಪ್ಪ ಅಳ್ಳೊಳಿ
ಶಾಖೆ ಹೆಸರು: ಬೆಂಗಳೂರು – ಜೆ ಪಿ ನಗರ 1ನೇ ಫೇಸ್	

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
232405000837	ಎ ವೇಣುಗೋಪಾಲ್
232405000838	ಎ ನಮ್ರತಾ
ಶಾಖೆ ಹೆಸರು: ಬೆಂಗಳೂರು – ಜೆ ಪಿ ನಗರ	
040105004371	ಚೇತನ್ ಎಸ್
040105004374	ಮೊಹಮ್ಮದ ಮುಜಮ್ಮಿಲ್
040105004375	ಗಂಗಾಧರ ಎಂ
ಶಾಖೆ ಹೆಸರು: ಬೆಂಗಳೂರು – ಕೆ ಹೆಚ್ ರಸ್ತೆ	
193705002619	ಪ್ರವೀಣ ಎಸ್
ಶಾಖೆ ಹೆಸರು: ಬೆಂಗಳೂರು – ಕಲಾಸಿಪಾಳ್ಯ	
313105000540	ಸಬಿಹಾ ನಸ್ರೀನ್
313105000600	ರಾಜಪ್ಪ ಮುನಿಯಪ್ಪ
313105000601	ರಾಜಪ್ಪ ಮುನಿಯಪ್ಪ
ಶಾಖೆ ಹೆಸರು: ಬೆಂಗಳೂರು – ಕನ್ನಮಂಗಲ	
317005000501	ನೀರಜ್ ಕುಮಾರ್ ಸಿಂಗ್
ಶಾಖೆ ಹೆಸರು: ಬೆಂಗಳೂರು – ಮಹಾಲಕ್ಷ್ಮೀಪುರಂ	
313505000357	ಕಾರ್ತಿಕ್ ಕೆ
313505000359	ಮಮತಾ ಎಚ್ ಎಲ್
ಶಾಖೆ ಹೆಸರು: ಬೆಂಗಳೂರು – ಎಂ ಜಿ ರೋಡ್	
000205031935	ತಸೀಮ್ ಬಾನು
ಶಾಖೆ ಹೆಸರು: ಬೆಂಗಳೂರು – ನೀಲಾದ್ರಿ ಮುಖ್ಯರಸ್ತೆ	
317505000333	ಸಿಲ್ವೆಸ್ಟರ್ ಎ
ಶಾಖೆ ಹೆಸರು: ಬೆಂಗಳೂರು – ನ್ಯೂ ಬಿಇಎಲ್ ರೋಡ್	
093705003119	ಎನ್ ಉಷಾ ರಾಜೇಂದ್ರ ಕುಮಾರ್
ಶಾಖೆ ಹೆಸರು: ಬೆಂಗಳೂರು – ಒಎಂಬಿಆರ್ ಲೇಔಟ್	
185105001236	ವಾಣಿಶ್ರೀ ಚಾಮರ್ತಿ
185105001235	ಪಿ ಪ್ರೀತಿ
ಶಾಖೆ ಹೆಸರು: ಬೆಂಗಳೂರು – ರಾಜಾಜಿನಗರ	
029605007914	ಶರಣ್ ಕುಮಾರ್
ಶಾಖೆ ಹೆಸರು: ಬೆಂಗಳೂರು – ರಾಜರಾಜೇಶ್ವರಿನಗರ	
093805003894	ಮಾನಸ ಎಂ
ಶಾಖೆ ಹೆಸರು: ಬೆಂಗಳೂರು – ಹೆಗ್ಡೆನಗರ	
317305000294	ಪ್ರವೀಣಕುಮಾರ್ ಮನ್ನೆ
ಶಾಖೆ ಹೆಸರು: ಬೆಂಗಳೂರು – ಆರ್‌ಆರ್‌ನಗರ ಬಿಇಎಂಎಲ್	
439805000162	ಮಂಜುನಾಥಸ್ವಾಮಿ ಎಂ
ಶಾಖೆ ಹೆಸರು: ಬೆಂಗಳೂರು – ಆರ್‌ಟಿ ನಗರ	
020405009523	ಕಾಂತರಾಜು ಕಾಂತರಾಜು
020405009524	ಮುಸ್ಕಾನ್ ಮುಸ್ಕಾನ್
020405006613	ಜೊನ್ನವಿತುಲ ಕಿರಣಕುಮಾರ್
ಶಾಖೆ ಹೆಸರು: ಬೆಂಗಳೂರು – ಸರ್ಜಾಪುರ ವೆಸ್ಟ್	
194905000240	ಸುರೇಶಕುಮಾರ್ ಕೆ
ಶಾಖೆ ಹೆಸರು: ಬೆಂಗಳೂರು – ಹಲಸೂರು	
390405000502	ಗೋವಿಂದ ಎ
390405000555	ಶರತ್ ಕೆ ವೈ
390405000580	ಜಬಿವುಲ್ಲಾ
ಶಾಖೆ ಹೆಸರು: ಬೆಂಗಳೂರು – ವಿಜಯಾ ಬ್ಯಾಂಕ್ ಲೇಔಟ್	
317805000458	ಕೆತು ಸ್ವರೂಪ
ಶಾಖೆ ಹೆಸರು: ಬೆಂಗಳೂರು – ಚಂದಾಪುರ	
437805000088	ಮೊಹಮ್ಮದ ಪರ್ವೇಸ ಹುಸೇನ ಬಾಷಾ
ಶಾಖೆ ಹೆಸರು: ಬೆಂಗಳೂರು – ಚನ್ನಪಟ್ಟಣ	
141605010241	ಮುನಿಯಪ್ಪ ಕೆ ಎಂ
141605009926	ಎಸ್ ಸೋಮಶೇಖರ
141605008224	ಜಬೀರ್ ಅಲಿ ಬೇಗ್
141605010213	ಕೃಷ್ಣಾ
141605008628	ಸುರೇಶ್
141605009405	ಜಯಮ್ಮ ಜಯಮ್ಮ
141605009429	ಫಿಜಾ ತಾಜ್
141605010217	ಜೈನಬ್ ಜೈನಬ್
141605010203	ಶಿವಸಿದ್ದ ಶಿವಸಿದ್ದ
141605010231	ಅಶೋಕ ಎಂ ಸಿ
ಶಾಖೆ ಹೆಸರು: ಬೆಂಗಳೂರು – ದೊಡ್ಡಬಳ್ಳಾಪುರ	
317405000256	ಗೋವಿಂದರಾಜು ಗೋವಿಂದರಾಜು
ಶಾಖೆ ಹೆಸರು: ಬೆಂಗಳೂರು – ದೊಮ್ಮಸಂದ್ರ	
743205000046	ನೀಲೇಶ್ ರಾಮದುಲಾರ್ ಶರ್ಮಾ
ಶಾಖೆ ಹೆಸರು: ಬೆಂಗಳೂರು – ಕೆ ಆರ್ ರಸ್ತೆ	
279305000810	ಮಂಜುನಾಥ್ ಎಂ
279305000808	ಇಮ್ರಾನ್ ಶರೀಫ್
279305000818	ಹೆಚ್ ಕೆ ಕೃಷ್ಣಪ್ಪ
ಶಾಖೆ ಹೆಸರು: ಬೆಂಗಳೂರು – ನೆಲಮಂಗಲ	
279405000544	ಈ ಬಿ ಯಶಸ್ವಿನಿ
ಶಾಖೆ ಹೆಸರು: – ಸರ್ಜಾಪುರ	
438705000104	ಶಿಲ್ಪಾ ಸಿ
ಶಾಖೆ ಹೆಸರು: ಬೆಂಗಳೂರು – ತುಮಕೂರು	
109405001578	ಪ್ರದೀಪಕುಮಾರ್ ಜಿ ಪಿ
ಶಾಖೆ ಹೆಸರು: ವಸಂತಪುರ ಮುಖ್ಯರಸ್ತೆ	
317905000536	ಎಂ ಎಸ್ ಜಯಲಕ್ಷ್ಮಿ
317905000571	ರವಿ ಎಂ
ಶಾಖೆ ಹೆಸರು: ಯಶವಂತಪುರ	
028705004113	ವರಲಕ್ಷ್ಮೀ ಎಸ್

ದಿನಾಂಕ: 10.04.2021
ಸ್ಥಳ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು

ಸಹಿ/– ಅಧಿಕೃತ ಅಧಿಕಾರಿ
ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ಪರವಾಗಿ

ಪ್ರತಿ ಕೋವಿಡ್ ಪರೀಕ್ಷೆಗೆ ₹ 30 ನೀಡುವ ಭರವಸೆ ಮರೆತ ಬಿಬಿಎಂಪಿ

ಕಷ್ಟಕ್ಕಾದವರ ಕೈ ಸೇರದ ಬೆವರಿನ ಹಣ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದಲ್ಲಿ 2020ರ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆಯಾಗಿದ್ದವು. ಆಗ ಕೋವಿಡ್ ಪರೀಕ್ಷೆಗಾಗಿ ಜನರ ಗಂಟಲ ದ್ರವ ಸಂಗ್ರಹಕ್ಕೆ ಯಾರೂ ಮುಂದೆ ಬಾರದಿದ್ದಾಗ ಬಿಬಿಎಂಪಿಯ ನೆರವಿಗೆ ಧಾವಿಸಿದ್ದು ಸಂಪರ್ಕ ಕಾರ್ಯಕರ್ತೆಯರು. ಕಷ್ಟ ಕಾಲದಲ್ಲಿ ಕೈ ಹಿಡಿದ ಕಾರ್ಯಕರ್ತೆಯರಿಗೆ ಪ್ರತಿ ಕೋವಿಡ್ ಪರೀಕ್ಷೆಗೆ ₹ 30 ಪ್ರೋತ್ಸಾಹಧನ ನೀಡುವುದಾಗಿ ಬಿಬಿಎಂಪಿ ವಾಗ್ದಾನ ಮಾಡಿತ್ತು. ಆದರೆ, ಈ ಹಣ ಇನ್ನೂ ಅವರ ಕೈಸೇರಿಲ್ಲ.

ಸಂಪರ್ಕ ಕಾರ್ಯಕರ್ತೆಯರಿಗೆ ತರಬೇತಿ ನೀಡಿ, ಕೋವಿಡ್ ಪರೀಕ್ಷೆಗೆ ಗಂಟಲ ದ್ರವ ಸಂಗ್ರಹಿಸುವ ಕಾರ್ಯಕ್ಕೆ ಅವರನ್ನು ಬಳಸಿಕೊಳ್ಳಬಹುದು. ಪ್ರತಿ ಪರೀಕ್ಷೆಗೆ ಅವರಿಗೆ ₹ 30 ನೀಡಬೇಕು. ಇದರ ವೆಚ್ಚವನ್ನು ಬಿಬಿಎಂಪಿ ಬಜೆಟ್‌ನ ನೈಸರ್ಗಿಕ ವಿಕೋಪ ನಿಧಿ ಅಥವಾ ಕೋವಿಡ್ ನಿಧಿಯಿಂದ ಭರಿಸಬೇಕು ಎಂದು ಬಿಬಿಎಂಪಿ ಆಯುಕ್ತರು 2020ರ ಆ.12ರಂದು ಆದೇಶ ಮಾಡಿದ್ದರು.

ಕೆಲವು ವಲಯಗಳಲ್ಲಿ ಸಂಪರ್ಕ ಕಾರ್ಯಕರ್ತೆಯರಿಗೆ ನಾಲ್ಕು ತಿಂಗಳುಗಳಿಂದ ಸಂಬಳವೂ ಆಗಿಲ್ಲ. ಅತ್ತ ಸಂಬಳವೂ ಇಲ್ಲದೇ, ಇತ್ತ ಪ್ರೋತ್ಸಾಹಧನವೂ ಇಲ್ಲದೇ, ಪ್ರತಿ ಕೋವಿಡ್ ಪರೀಕ್ಷೆಯ ಹಣವೂ ಕೈಸೇರದೇ ಅವರ ಬದುಕು ಹೈರಾಣಾಗಿದೆ.

ಪ್ರಜಾವಾಣಿ ವಿಶೇಷ

'ಪುಡಿಗಾಸಿನ ಆಸೆಗೆ ಜೀವ ಪಣಕ್ಕಿಟ್ಟು ಗಂಟಲ ದ್ರವ ಸಂಗ್ರಹಿಸುವ ಕಾರ್ಯದಲ್ಲಿ ಹುಮ್ಮಸ್ಸಿನಿಂದ ತೊಡಗಿಸಿಕೊಂಡೆವು. ನಿತ್ಯ 100 ಮಂದಿಯ ಕೋವಿಡ್ ಪರೀಕ್ಷೆ ನಡೆಸುವ ಗುರಿ ನಿಗದಿಪಡಿಸಲಾಗಿತ್ತು. ಬೆಳಿಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಸತತವಾಗಿ ಕೆಲಸ ಮಾಡಿ ಗುರಿ ಸಾಧಿಸಿದ್ದೆವು. ಪ್ರತಿ ಪರೀಕ್ಷೆಗೆ ನಮಗೆ ಬರಬೇಕಾದ ₹ 30 ಇನ್ನೂ ಕೈಸೇರಿಲ್ಲ. ಈ ಬಗ್ಗೆ ಕೇಳಿದರೆ, ಒಬ್ಬೊಬ್ಬ ಅಧಿಕಾರಿ ಒಂದೊಂದು ಸಬೂಬು ಹೇಳುತ್ತಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಂಪರ್ಕ ಕಾರ್ಯಕರ್ತೆಯೊಬ್ಬರು 'ಪ್ರಜಾವಾಣಿ' ಬಳಿ ಅಳಲು ತೋಡಿಕೊಂಡರು.

'ಆಗ ಕೋವಿಡ್ ಬಗ್ಗೆ ವಿಪರೀತ ಭಯದ ವಾತಾವರಣವಿತ್ತು. ಕೋವಿಡ್ ಕೆಲಸಕ್ಕೆ ಹೋಗದಂತೆ ಮನೆಯವರು ಒತ್ತಡ ಹೇರುತ್ತಿದ್ದರು. ನಮ್ಮ ಮಕ್ಕಳು, ಮನೆಯವರ ಜೀವವನ್ನು ಅಪಾಯಕ್ಕೊಡ್ಡಿ ಕೆಲಸ ಮಾಡಿದ್ದೇವೆ. ನಮ್ಮ ಕೆಲಸ ಎಷ್ಟು ಅಪಾಯಕಾರಿಯಾಗಿತ್ತು ಎಂದರೆ, 15ಕ್ಕೂ ಅಧಿಕ ಕಾರ್ಯಕರ್ತೆಯರಿಗೆ ಕೋವಿಡ್ ದೃಢಪಟ್ಟಿತ್ತು. ಅದೃಷ್ಟವಶಾತ್ ಅವರೆಲ್ಲ ಗುಣಮುಖರಾದರು. ಇಷ್ಟಾದರೂ ಬಿಬಿಎಂಪಿ ನಮಗೆ ನೀಡಿದ ವಾಗ್ದಾನವನ್ನು ಇನ್ನೂ ಈಡೇರಿಸಿಲ್ಲ. ಕೆಲವು ಕಾರ್ಯಕರ್ತೆಯರಿಗೆ ₹ 25 ಸಾವಿರದಿಂದ ₹ 50 ಸಾವಿರದಷ್ಟು ಮೊತ್ತ ಬಾಕಿ ಇದೆ. ನಮ್ಮ ಪಾಲಿಗೆ ಇದು ದೊಡ್ಡ ಮೊತ್ತ. ನಮ್ಮ ಬೆವರಿನ ಹಣವನ್ನು ಬಿಬಿಎಂಪಿ ಇನ್ನಾದರೂ ಬಿಡುಗಡೆ ಮಾಡಬೇಕು' ಎಂದು ಮತ್ತೊಬ್ಬ ಸಂಪರ್ಕ ಕಾರ್ಯಕರ್ತೆ ಒತ್ತಾಯಿಸಿದರು.

ಕೋವಿಡ್ ಕರ್ತವ್ಯ ಯಾರಿಗೆ ಎಷ್ಟು ಪ್ರೋತ್ಸಾಹ ಧನ? (30ಗಳಿಗೆ ₹ ಗಳಲ್ಲಿ)

ಹುದ್ದೆ	ಮೂಲ ವೇತನ	ಕೋವಿಡ್ ಪ್ರೋತ್ಸಾಹ ಧನ
ಎಂಬಿಬಿಎಸ್ ವೈದ್ಯರು (ಎನ್‌ಯುಎಚ್‌ಎಂ/ ಎನ್‌ಜಿಒ/ ಬಿಬಿಎಂಪಿ)	50 ಸಾವಿರ	30 ಸಾವಿರ
ದಂತ ವೈದ್ಯರು	40 ಸಾವಿರ	20 ಸಾವಿರ
ಆಯುಷ್ ವೈದ್ಯರು	30 ಸಾವಿರ	30 ಸಾವಿರ
ಎಂಬಿಬಿಎಸ್ ವೈದ್ಯರು (ಕೋವಿಡ್)	60 ಸಾವಿರ	20 ಸಾವಿರ
ಶುಶ್ರೂಷಕಿ/ಫಾರ್ಮಸಿಸ್ಟ್/ ಲ್ಯಾಬ್‌ಟೆಕ್ನಿಷಿಯನ್	15,750	5 ಸಾವಿರ
ಕಿರಿಯ ಆರೋಗ್ಯ ಸಹಾಯಕರು	10 ಸಾವಿರ	5 ಸಾವಿರ
ಗ್ರೂಪ್ ಡಿ	10 ಸಾವಿರ	2 ಸಾವಿರ
ಎಲ್‌ಡಿಸಿ	–	3 ಸಾವಿರ
ಆರೋಗ್ಯಾಧಿಕಾರಿ/ ನಗರ ಯೋಜನಾ ನಿರ್ವಹಣಾಧಿಕಾರಿ ಕಚೇರಿ ಸಿಬ್ಬಂದಿ	–	8 ಸಾವಿರ

ಪ್ರೋತ್ಸಾಹಧನದಲ್ಲೂ ತಾರತಮ್ಯ



ವೈದ್ಯರಿಂದ ಹಿಡಿದು ಡಿ– ಗುಂಪಿನ ಸಿಬ್ಬಂದಿವರೆಗೆ ಕೋವಿಡ್ ಕರ್ತವ್ಯ ನಿರ್ವಹಿಸಿದ ಎಲ್ಲ ಸಿಬ್ಬಂದಿಗೂ ಪ್ರೋತ್ಸಾಹ ಧನ ನೀಡಿದೆ. ಆರೋಗ್ಯಾಧಿಕಾರಿ ಕಚೇರಿಯ ಸಿಬ್ಬಂದಿಗೂ ₹ 8 ಸಾವಿರ ಪ್ರೋತ್ಸಾಹ ಧನ ನೀಡಲಾಗಿದೆ. ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ (ಎನ್‌ಯುಎಚ್‌ಎಂ) ಅಡಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆಲ್ಲ ಈ ಸೌಕರ್ಯ ಸಿಕ್ಕಿದೆ. ಆದರೆ, ಬಿಬಿಎಂಪಿಯಿಂದ ನೇಮಕಗೊಂಡ ಸಂಪರ್ಕ ಕಾರ್ಯಕರ್ತೆಯರು ಅವರಷ್ಟೇ ಅಪಾಯಕ್ಕೊಡ್ಡಿಕೊಂಡು ಕೋವಿಡ್ ಕೆಲಸ ಮಾಡಿದ್ದರೂ ಅವರಿಗೆ ಮಾತ್ರ ಈ ಸವಲತ್ತು ಇಲ್ಲ!

'ನಾವೂ ಇತರ ಸಿಬ್ಬಂದಿಯಷ್ಟೇ ಅಪಾಯಕ್ಕೆ ಒಡ್ಡಿಕೊಂಡು ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೆವು. ಬಸ್‌ನಿಲ್ದಾಣ, ರೈಲು ನಿಲ್ದಾಣ, ಅಪಾರ್ಟ್‌ಮೆಂಟ್ ಸಮುಚ್ಚಯ, ಕೊಳೆಗೇರಿಗಳ ಓಣಿ ಓಣಿಗಳಲ್ಲಿ ಅಲೆದು ಕೋವಿಡ್ ಪರೀಕ್ಷೆ ಮಾಡಿಸಿದ್ದೆವು. ಜನರಿಂದ ಸಾಕಷ್ಟು ಬೈಗುಳ ತಿಂದಿದ್ದೆವು. ಕೆಲವರ ಮೇಲೆ ಹಲ್ಲೆ ಯತ್ನವೂ ನಡೆದಿತ್ತು. ಜೀವ ಪಣಕ್ಕಿಟ್ಟು ಕೆಲಸ ಮಾಡಿದ ನಮಗೆ ಈ ರೀತಿ ಅನ್ಯಾಯ ಮಾಡುವುದು ಸರಿಯೇ' ಎಂದು ಸಂಪರ್ಕ ಕಾರ್ಯಕರ್ತೆಯೊಬ್ಬರು ಪ್ರಶ್ನಿಸಿದರು.

2ನೇ ಅಲೆ: ಬೆದರಿಕೆ ಒಡ್ಡಿ ಕರ್ತವ್ಯಕ್ಕೆ ಕರೆ

ನಗರದಲ್ಲಿ ಕೋವಿಡ್ ಪ್ರಕರಣಗಳು ಇಳಿಕೆ ಕಂಡಿದ್ದರಿಂದ ಹೆಚ್ಚಿನ ವಲಯಗಳಲ್ಲಿ 2020ರ ಡಿಸೆಂಬರ್ ಬಳಿಕ ಸಂಪರ್ಕ ಕಾರ್ಯಕರ್ತೆಯರನ್ನು ಕೋವಿಡ್ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿತ್ತು. ಅವರಿಗೆ ಹಿಂದಿನಂತೆ ಕಸ ನಿರ್ವಹಣೆ ಜಾಗೃತಿ ಕಾರ್ಯದ ಹೊಣೆ ವಹಿಸಲಾಗಿತ್ತು. ಸೋಂಕಿನ ಎರಡನೇ ಅಲೆ ಕಾಣಿಸಿಕೊಂಡಿದ್ದರಿಂದ ಮತ್ತೆ ಕೋವಿಡ್ ಕರ್ತವ್ಯಕ್ಕೆ ಅವರನ್ನು ಬಳಸಿಕೊಳ್ಳಲು ಬಿಬಿಎಂಪಿ ಮುಂದಾಗಿದೆ.

'ಕೋವಿಡ್ ಕರ್ತವ್ಯಕ್ಕೆ ಹಾಜರಾಗದಿದ್ದರೆ ಸಾಂಕ್ರಾಮಿಕ ಪ್ರಕೃತಿ ವಿಕೋಪ ನಿರ್ವಹಣೆ ಕಾಯ್ದೆ ಅಡಿ ಶಿಸ್ತುಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ಕೊಟ್ಟ ಮಾತಿನಂತೆ ನಡೆದುಕೊಳ್ಳದ ಬಿಬಿಎಂಪಿ ಬಡಪಾಯಿ ಸಂಪರ್ಕ ಕಾರ್ಯಕರ್ತೆಯರಿಗೆ ಈ ರೀತಿ ಬೆದರಿಕೆ ಒಡ್ಡಿ ಕೋವಿಡ್ ಕರ್ತವ್ಯ ಮಾಡಿಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ' ಎಂದು ಸಂಪರ್ಕ ಕಾರ್ಯಕರ್ತೆಯೊಬ್ಬರು ಪ್ರಶ್ನಿಸಿದರು.

'ನಮಗೆ ಭವಿಷ್ಯ ನಿಧಿ ಹಾಗೂ ಕಾರ್ಮಿಕರ ರಾಜ್ಯ ವಿಮೆ (ಇಎಸ್‌ಐ) ಸೌಲಭ್ಯವಾಗಲೀ ಇಲ್ಲ. ನಮ್ಮನ್ನು ಈಗಲೂ ಕೋವಿಡ್ ಯೋಧರೆಂದು ಪರಿಗಣಿಸುತ್ತಾರೋ ಇಲ್ಲವೋ ಗೊತ್ತಿಲ್ಲ' ಎಂದರು.

ಸಂಪರ್ಕ ಕಾರ್ಯಕರ್ತೆಯರು ಗಂಟಲ ದ್ರವ ಸಂಗ್ರಹಿಸಿದ್ದಕ್ಕೆ ಪ್ರತಿ ಕೋವಿಡ್ ಪರೀಕ್ಷೆಗೆ ₹ 30 ಪ್ರೋತ್ಸಾಹ ಧನ ಪಾವತಿ ಆಗದ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ ರಾಜೇಂದ್ರ ಚೋಳನ್

ವಿಶೇಷ ಆಯುಕ್ತ (ಆರೋಗ್ಯ), ಬಿಬಿಎಂಪಿ

115 ಮಂದಿಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್‌ನಲ್ಲಿ ಒಟ್ಟು 115 ಮಂದಿ ಕೋವಿಡ್ ಸೋಂಕು ಹೊಂದಿರುವುದು ದೃಢಪಟ್ಟಿದೆ.

ಈ ವಾರ್ಡ್‌ನಲ್ಲಿ 39 ಮಂದಿ ಕೊರೊನಾ ಸೋಂಕು ಹೊಂದಿರುವುದು ಖಚಿತಪಟ್ಟಿದ್ದರಿಂದ ಇದನ್ನು ಕೋವಿಡ್ ಕ್ಲಸ್ಟರ್ ಎಂದು ಬಿಬಿಎಂಪಿ ಸೋಮವಾರ ಗುರುತಿಸಿತ್ತು. ಸೋಂಕಿತರ ಜೊತೆಗೆ ಸಂಪರ್ಕಕ್ಕೆ ಬಂದಿದ್ದ 2,086 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಇಲ್ಲಿ ಮತ್ತೆ 76 ಮಂದಿ ಕೋವಿಡ್ ಹೊಂದಿರುವುದು ಶುಕ್ರವಾರ ದೃಢಪಟ್ಟಿದೆ. ಕೆಲವು ಮಂದಿಯ ಕೋವಿಡ್ ಪರೀಕ್ಷೆಯ ಫಲಿತಾಂಶ ಇನ್ನಷ್ಟೇ ಬರಬೇಕಿದೆ.

ಐತಿಹಾಸಿಕ ಕರಗ ಉತ್ಸವ ನಡೆಯುವ ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನವು ಇದೇ ವಾರ್ಡ್‌ನಲ್ಲಿದೆ. ಕರಗ ಮಹೋತ್ಸವ ವಿಧಿವಿಧಾನಗಳನ್ನು ಇದೇ 19ರಿಂದ 27ರವರೆಗೆ ನಿರ್ಬಂಧಿತ ವಾತಾವರಣದಲ್ಲಿ ನಡೆಸಲು ಬಿಬಿಎಂಪಿ ಹಾಗೂ ಜಿಲ್ಲಾಡಳಿತ ನಿರ್ಧರಿಸಿತ್ತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶುಕ್ರವಾರ 5,576 ಮಂದಿಯಲ್ಲಿ ಕೋವಿಡ್ ಪತ್ತೆಯಾಗಿದೆ. ಸಾವಿನ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗಿದ್ದು ಒಟ್ಟು 29 ಮಂದಿ ಈ ರೋಗದಿಂದ ಕೊನೆಯುಸಿರೆಳೆದಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಎರಡನೇ ಅಲೆ ಕಾಣಿಸಿಕೊಂಡ ಬಳಿಕ 56 ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 20 ಕಂಟೈನ್‌ಮೆಂಟ್ ವಲಯಗಳು ಸಹಜ ಸ್ಥಿತಿಗೆ ಮರಳಿವೆ. 10 ದಿನಗಳಲ್ಲಿ ಬೆಳ್ಳಂದೂರು, ಶಾಂತಲಾನಗರ, ಆರ್.ಆರ್.ನಗರ, ಎಚ್.ಎಸ್.ಆರ್ ಬಡಾವಣೆ, ಹೊರಮಾವು, ವಿದ್ಯಾರಣ್ಯಪುರ, ವಸಂತಪುರ, ಬೇಗೂರು, ಅರಕೆರೆ, ವಿಶ್ವೇಶ್ವರಪುರ ವಾರ್ಡ್‌ಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿವೆ.

'ಅನವಶ್ಯಕವಾಗಿ ಓಡಾಡಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಏಪ್ರಿಲ್ 10ರಿಂದ 20ರವರೆಗೆ ಪ್ರತಿದಿನದ ರಾತ್ರಿ 10 ಗಂಟೆಯಿಂದ ಮರುದಿನ ನಸುಕಿನ 5 ಗಂಟೆಯವರೆಗೂ ಕರ್ಫ್ಯೂ ಜಾರಿ ಮಾಡಲಾಗಿದ್ದು, ಆ ಸಮಯದಲ್ಲಿ ಯಾರಾದರೂ ಅನವಶ್ಯಕವಾಗಿ ಓಡಾಡಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಕಮಿಷನರ್ ಕಮಲ್ ಪಂತ್ ಎಚ್ಚರಿಸಿದ್ದಾರೆ.

ಕರ್ಫ್ಯೂ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾತ್ರಿ ಇಡೀ ಪೊಲೀಸರು ನಗರದಲ್ಲಿ ಗಸ್ತು ತಿರುಗಲಿದ್ದಾರೆ. ಪ್ರತಿಯೊಂದು ಸ್ಥಳಗಳ ಮೇಲೂ ಕಣ್ಣಿಡಲಿದ್ದಾರೆ. ತಪ್ಪಿತಸ್ಥರು ಯಾರೇ ಇದ್ದರೂ ಕ್ರಮ ಕೈಗೊಳ್ಳಲಿದ್ದಾರೆ' ಎಂದರು.

'ರಾತ್ರಿ ಪಾಳಿ ಕೆಲಸಕ್ಕೆ ಹೋಗುವವರು 10 ಗಂಟೆಯೊಳಗೆ ಹೋಗಬೇಕು. ಉಳಿದವರು ರಾತ್ರಿ 10 ಗಂಟೆಯೊಳಗೆ ಮನೆ ಸೇರಬೇಕು. ಅದಾದ ನಂತರ, ಸಾರ್ವಜನಿಕ ಸ್ಥಳಗಳಲ್ಲಿ ಗುಂಪು ಸೇರಿ ಓಡಾಡಬಾರದು. ಅನಗತ್ಯವಾಗಿ ಮನೆಯಿಂದ ಹೊರಬರಬಾರದು' ಎಂದರು.

'ಪಬ್, ಬಾರ್, ರೆಸ್ಟೋರೆಂಟ್, ಹೋಟೆಲ್ ಹಾಗೂ ಇತರೆ ವಾಣಿಜ್ಯ ಮಳಿಗೆಗಳನ್ನೂ ಬಂದ್ ಮಾಡಬೇಕು. ಬೇರೆ ಊರಿನಿಂದ ನಗರಕ್ಕೆ ರಾತ್ರಿ ಬರುವ ಹಾಗೂ ಹೋಗುವವರ ಸಂಚಾರಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ. ಆದರೆ, ಸಿಬ್ಬಂದಿಗೆ ಟಿಕೆಟ್ ತೋರಿಸಬೇಕು' ಎಂದೂ ಹೇಳಿದರು.

'ಆಹಾರ ಡೆಲಿವರಿಗೆ ಯಾವುದೇ ಅಡ್ಡಿ ಇಲ್ಲ. ಆಸ್ಪತ್ರೆ, ಔಷಧಿ ಅಂಗಡಿ ಸೇರಿದಂತೆ ತುರ್ತು ಸೇವೆಗೆ ಹೋಗುವವರು ತಮ್ಮ ಗುರುತಿನ ಚೀಟಿಗಳನ್ನು ಪೊಲೀಸರಿಗೆ ತೋರಿಸಿ ಹೋಗಬಹುದು' ಎಂದರು.

ಪ್ರಧಾನ ಕಾರ್ಯದರ್ಶಿ ಜೊತೆ ಬಿಬಿಎಂಪಿ ಮುಖ್ಯ ಆಯುಕ್ತ ವಿಶೇಷ ಸಭೆ

ಚಿಕಿತ್ಸೆಗೆ 6 ಸಾವಿರ ಹಾಸಿಗೆ ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿದ್ದು, ಆಸ್ಪತ್ರೆಗಳಲ್ಲಿ ಈ ರೋಗಿಗಳ ಚಿಕಿತ್ಸೆಗೆ ಹಾಸಿಗೆಗಳ ಕೊರತೆ ಎದುರಾಗಿದೆ. ಈ ಕೊರತೆ ನೀಗಿಸಲು ಇನ್ನು ಹತ್ತು ದಿನಗಳಲ್ಲಿ ಕನಿಷ್ಠ 6,000 ಹಾಸಿಗೆಗಳನ್ನು ಕೋವಿಡ್ ಸೋಂಕಿತರ ಚಿಕಿತ್ಸೆಗೆ ಮೀಸಲಿಡಲು ಬಿಬಿಎಂಪಿ ಮುಂದಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಿದ್ದೇವೆ. ಹಾಸಿಗೆಗಳ ನಿರ್ವಹಣೆಯ ಕೇಂದ್ರೀಕೃತ ವ್ಯವಸ್ಥೆಯನ್ನು ನೋಡಿಕೊಳ್ಳುವ ತಂಡದ ಜೊತೆಗೆ ಸಮಾಲೋಚನೆ ನಡೆಸಿದ್ದೇವೆ. ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಯಾವ ರೀತಿ ಹಾಸಿಗೆಗಳನ್ನು ವ್ಯವಸ್ಥೆ ಮಾಡಿಕೊಳ್ಳಬೇಕು, ಯಾರಿಗೆ ಯಾವ ಜವಾಬ್ದಾರಿ ನೀಡಬೇಕು ಎಂದು ಚರ್ಚಿಸಿದ್ದೇವೆ' ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರಿಗೆ ಹಾಸಿಗೆ ವ್ಯವಸ್ಥೆ ಕಲ್ಪಿಸುವಿಕೆ ಹಾಗೂ ಸೋಂಕು ನಿಯಂತ್ರಣದ ಕುರಿತು ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಜೊತೆ ಶುಕ್ರವಾರ ನಡೆದ ವರ್ಚುವಲ್ ಸಭೆ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ನಗರದ ಕೋವಿಡ್ ಪ್ರಕರಣಗಳು

4,70,014 ಒಟ್ಟು ಸೋಂಕಿತರು

4,22,719 ಗುಣಮುಖರಾದವರು

42,525 ಸಕ್ರಿಯ ಪ್ರಕರಣ

4,769 ಸಾವು



ಶುಕ್ರವಾರದ ಏರಿಕೆ

5,576 ದೃಢಪಟ್ಟ ಪ್ರಕರಣ

1,968 ಗುಣಮುಖ | **29** ಸಾವು

'ಬಿಬಿಎಂಪಿಗೆ ಒಂದೇ ಸಹಾಯವಾಣಿ'

'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿಗೆ ಸಂಬಂಧಿಸಿದಂತೆ ಒಂದೇ ಸಹಾಯವಾಣಿಯನ್ನು ಹೊಂದುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಈ ಹಿಂದೆ ಆರೋಗ್ಯ ವಾಣಿ (104), ತೀವ್ರ ಉಸಿರಾಟ ತೊಂದರೆ (ಸಾರಿ) ಇರುವವರ ನೆರವಿಗೆ 108, ಹಾಗೂ ಆಪ್ತಮಿತ್ರ (14410) ಸಹಾಯವಾಣಿಗಳನ್ನು ಬಳಸಲಾಗುತ್ತಿತ್ತು. ಅದಲ್ಲದೇ ಪಾಲಿಕೆಯಲ್ಲಿ ಪ್ರತ್ಯೇಕ ಸಹಾಯವಾಣಿಯನ್ನೂ (1912) ಉಪಯೋಗಿಸಲಾಗುತ್ತಿತ್ತು. ಇನ್ನು 1912 ಸಂಖ್ಯೆಯನ್ನೇ ಜನಪ್ರಿಯಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು' ಎಂದು ಗೌರವ್ ಗುಪ್ತ ತಿಳಿಸಿದರು.

'ನಗರದ ಆಸ್ಪತ್ರೆಗಳಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆಗೆ ಹಾಸಿಗೆ ಸಂಖ್ಯೆ ಹೆಚ್ಚಳ ಮಾಡಲು ಈಗಾಗಲೇ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ತಂಡಗಳನ್ನು ರಚಿಸಲಾಗಿದೆ. ಆ ತಂಡಗಳ ಜೊತೆಗೂ ಸಭೆ ನಡೆಸಿದ್ದೇವೆ. ಮುಂದಿನ ಹಂತದಲ್ಲಿ ಮುಖ್ಯ ಕಾರ್ಯದರ್ಶಿ ಮಟ್ಟದಲ್ಲಿ ಮತ್ತೊಂದು ಸುತ್ತಿನ ಚರ್ಚೆ ನಡೆಯಲಿದೆ' ಎಂದರು.

ಕೋವಿಡ್ ಲಸಿಕೆ ಹೆಚ್ಚಳಕ್ಕೆ ಕ್ರಮ: 'ನಗರದಲ್ಲಿ ಕೋವಿಡ್ ಲಸಿಕೆ ನೀಡುವ ಸಂಖ್ಯೆಯನ್ನು ದ್ವಿಗುಣಗೊಳಿಸಲು ಕ್ರಮವಹಿಸಲಾಗುತ್ತಿದೆ. ಇದುವರೆಗೆ ನಿತ್ಯ 36 ಸಾವಿರ ಮಂದಿಗೆ ಲಸಿಕೆ ನೀಡಲಾಗುತ್ತಿತ್ತು. ಈ ಸಂಖ್ಯೆಯನ್ನು 70 ಸಾವಿರಕ್ಕೆ ಏರಿಸಲು ಕ್ರಮ ಕೈಗೊಂಡಿದ್ದೆವು. ನಿತ್ಯ 1 ಲಕ್ಷ ಮಂದಿಗೆ ಲಸಿಕೆ ನೀಡುವಂತೆ ವೈದ್ಯಕೀಯ ಶಿಕ್ಷಣ ಸಚಿವರು ಸೂಚನೆ ನೀಡಿದ್ದಾರೆ. ಹಾಗಾಗಿ ಅಪಾರ್ಟ್‌ಮೆಂಟ್ಸ್ ಸಮುಚ್ಚಯಗಳು, ಕಾರ್ಖಾನೆಗಳು, 100ಕ್ಕಿಂತ ಹೆಚ್ಚು ಮಂದಿ ಕಾರ್ಯನಿರ್ವಹಿಸುವ ಕಚೇರಿಗಳಿಗೆ ತೆರಳಿ ಅಲ್ಲೇ ಲಸಿಕೆ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ' ಎಂದರು.

ಕೋವಿಡ್ ಪರೀಕ್ಷೆ: 'ನಗರದಲ್ಲಿ ನಿತ್ಯ ಸುಮಾರು 60 ಸಾವಿರ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಸೋಂಕು ಅಧಿಕ ಪ್ರಮಾಣದಲ್ಲಿ ಕಂಡುಬರುವ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಪರೀಕ್ಷೆ ಮಾಡಲಾಗುತ್ತಿದೆ. ಸೋಂಕಿತರ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕ ಹೊಂದಿದವರನ್ನು ಪತ್ತೆ ಮಾಡಿ ಪರೀಕ್ಷೆಗೆ ಒಳಪಡಿಸುವ ಅಗತ್ಯವಿದೆ. ಈ ಸಲುವಾಗಿ, ಮೂಗಿನ ದ್ರವವನ್ನು ಸಂಗ್ರಹಿಸುವ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲಿದ್ದೇವೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಮೂರು ತಂಡಗಳನ್ನು ನಿಯೋಜಿಸಲಾಗಿತ್ತು. ಇನ್ನು ಎಂಟು ತಂಡಗಳನ್ನು ನಿಯೋಜನೆ ಮಾಡಲಿದ್ದೇವೆ' ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ವಿಶೇಷ ಆಯುಕ್ತ (ಅರೋಗ್ಯ) ರಾಜೇಂದ್ರ ಚೋಳನ್, ವಿಶೇಷ ಆಯುಕ್ತ (ಕಸ ನಿರ್ವಹಣೆ) ಡಿ.ರಂದೀಪ್, ಆರೋಗ್ಯ ಇಲಾಖೆಯ ಆಯುಕ್ತ ಕೆ.ವಿ. ತ್ರಿಲೋಕ್ ಚಂದ್ರ, ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ. ವಿಜಯೇಂದ್ರ ಸಲಹೆ ನೀಡಿದರು.

'ಗುರುತಿನ ಚೀಟಿಯೊಂದಿಗೆ ಕೆಲಸಕ್ಕೆ ಅನುವು ನೀಡಿ'

ಬೆಂಗಳೂರು: 'ಕೊರೊನಾ ನಿಯಂತ್ರಣಕ್ಕಾಗಿ ಏ.10ರಿಂದ 20ರವರೆಗೆ ರಾತ್ರಿ ವೇಳೆ ಕರ್ಫ್ಯೂ ಜಾರಿ ಸ್ವಾಗತಾರ್ಹ. ಆದರೆ, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಎಲ್ಲ ಸಿಬ್ಬಂದಿ ಹಾಗೂ ನೌಕರರಿಗೆ ಗುರುತಿನ ಚೀಟಿಯೊಂದಿಗೆ ಕೆಲಸಕ್ಕೆ ಹಾಜರಾಗಲು ಅನುವು ಮಾಡಿಕೊಡಬೇಕು' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ.ಸುಂದರ್ ಮನವಿ ಮಾಡಿದ್ದಾರೆ.

'ಕೈಗಾರಿಕೆಗಳಿಗೆ ಅಡ್ಡಿ ಬೇಡ'

ಬೆಂಗಳೂರು: 'ಕೋವಿಡ್ ನಿಯಂತ್ರಣಕ್ಕಾಗಿ ಮತ್ತೆ ಜಾರಿ ಮಾಡಿರುವ ರಾತ್ರಿ ವೇಳೆಯ ಕರ್ಫ್ಯೂನಿಂದ ಕೈಗಾರಿಕೆಗಳು ಹಾಗೂ ಅಲ್ಲಿನ ಕೆಲಸಗಾರರಿಗೆ ತೊಂದರೆಯಾಗಬಾರದು' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಕೆ.ಬಿ.ಅರಸಪ್ಪ ಮನವಿ ಮಾಡಿದ್ದಾರೆ.

ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲನೆ ಕಡ್ಡಾಯ

ಬೆಂಗಳೂರು: 'ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಸೋಂಕು ಹರಡುವಿಕೆ ನಿಯಂತ್ರಿಸಲು ಎಲ್ಲ ಹೋಟೆಲ್‌ಗಳಲ್ಲೂ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಅವರು ಹೋಟೆಲ್ ಮಾಲೀಕರಲ್ಲಿ ಮನವಿ ಮಾಡಿದರು.

ಹೋಟೆಲ್ ಉದ್ಯಮಿಗಳ ಸಂಘದ ಪದಾಧಿಕಾರಿಗಳ ಜೊತೆ ಮುಖ್ಯ ಆಯುಕ್ತರು ಶುಕ್ರವಾರ ವರ್ಚುವಲ್ ಸಭೆ ನಡೆಸಿದರು.

'ಕೋವಿಡ್ ಸೋಂಕು ವ್ಯಾಪಿಸುತ್ತಿರುವುದರಿಂದ ವ್ಯಾಪಾರ-ವಹಿವಾಟುಗಳ ಮೇಲೆ ತುಂಬಾ ದುಷ್ಪರಿಣಾಮ ಉಂಟಾಗಿರುವುದು ನಿಜ. ಕೋವಿಡ್ ಹರಡುವಿಕೆ ನಿಯಂತ್ರಣಕ್ಕೆ ಸರ್ಕಾರದ ರೂಪಿಸಿರುವ ಮಾರ್ಗಸೂಚಿ ಪಾಲಿಸದ ಹೋಟೆಲ್‌ಗಳಿಗೆ ಪಾಲಿಕೆ ಆರೋಗ್ಯಾಧಿಕಾರಿಗಳು, ಮಾರ್ಷಲ್‌ಗಳು ಭೇಟಿ ನೀಡಿ ದಂಡ ವಿಧಿಸುತ್ತಿದ್ದಾರೆ. ನಿಯಮ ಪಾಲಿಸದ ಉದ್ದಿಮೆಗಳನ್ನು ಮುಚ್ಚಿಸುತ್ತಿದ್ದಾರೆ. ಇಂತಹ ಕಠಿಣ ಕ್ರಮಗಳನ್ನು ಕೈಗೊಳ್ಳುವ ಪರಿಸ್ಥಿತಿ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬಾರದು' ಎಂದು ಮುಖ್ಯ ಆಯುಕ್ತರು ಹೇಳಿದರು.

'ನಗರದಲ್ಲಿ ಪ್ರತಿನಿತ್ಯ ಸುಮಾರ 6,000 ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಪಾಲಿಕೆಯು ನಗರದ ಜನರ ಜೊತೆ ಸೇರಿಕೊಂಡು ಲಸಿಕೆ ಅಭಿಯಾನ, ಕೋವಿಡ್ ಪರೀಕ್ಷೆ, ಸೊಂಕಿತರ ಪ್ರತ್ಯೇಕ ವಾಸ, ಮೊದಲಾದ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತಿದೆ. ಎಲ್ಲರೂ ಸಹಕರಿಸಿದಾಗ ಮಾತ್ರ ಕೋವಿಡ್ ನಿಯಂತ್ರಣ ಸಾಧ್ಯ. ಸೋಂಕು ಹತೋಟಿಗೆ ಬಂದರೆ ಮಾತ್ರ ಮೊದಲಿನಂತೆ ವ್ಯಾಪಾರ-ವಹಿವಾಟು ನಡೆಸಲು ಸಾಧ್ಯ' ಎಂದರು.

ವಿವಿಧ ಮಳಿಗೆಗಳಿಗೆ ದಂಡ ವಿಧಿಸಿದ ಅಧಿಕಾರಿಗಳು

ಮಾರ್ಗಸೂಚಿ ಕಡೆಗಣನೆ: 28 ಉದ್ದಿಮೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣದ ಮಾರ್ಗಸೂಚಿ ಕಡೆಗಣಿಸಿರುವ ಹೋಟೆಲ್, ಮಳಿಗೆಗಳು ಸೇರಿ 28 ಉದ್ದಿಮೆಗಳಿಗೆ ಬಿಬಿಎಂಪಿ ಅಧಿಕಾರಿಗಳು ಶುಕ್ರವಾರ ಬಾಗಿಲು ಹಾಕಿಸಿದರು.

ಪಶ್ಚಿಮ ವಲಯದಲ್ಲಿ ಗಾಂಧಿನಗರದ ಲಾಸ್ಸೊ ಬಾರ್ ಮತ್ತು ರೆಸ್ಟೋರೆಂಟ್, ಟೀ ಅಂಗಡಿ, ರಶ್ಮಿ ಫ್ಯಾನ್ಸಿ ಅಂಗಡಿ, ಪೂನಂ ಕಾಂಡಿಮೆಂಟ್ಸ್ ಮಳಿಗೆ, ಶ್ರೀಕೃಷ್ಣ ಬೇಕರಿಗಳಿಗೆ ಅಧಿಕಾರಿಗಳು ಬೀಗ ಹಾಕಿಸಿದ್ದಾರೆ. ಈ ವಲಯದಲ್ಲಿ 17 ಮಳಿಗೆಗಳಿಗೆ ಒಟ್ಟು ₹15,100 ದಂಡ ವಿಧಿಸಿದ್ದಾರೆ.

ಪೂರ್ವ ವಲಯದಲ್ಲಿ ಶಿವಾಜಿನಗರದ ರವಿ ಟೀ ಅಂಗಡಿ, ವಿನಾಯಕ ಚಿಪ್ಸ್, ಡಿಸೋಜ ಜ್ಯೂಸ್ ಸೆಂಟರ್, ಹೆಬ್ಬಾಳದ ಬಸವೇಶ್ವರ ಪ್ರಾವಿಷನಲ್ ಸ್ಟೋರ್, ಶಾಂತಿನಗರದ ಉಡುಪಿ ಹೋಟೆಲ್, ಮೇಘನಾ ಫುಡ್ ಅ್ಯಂಡ್ ರೆಸ್ಟೋರೆಂಟ್, ಸಿ.ವಿ.ರಾಮನ್‌ನಗರದ ಕಬ್ಬಾಳಮ್ಮ ಕಾಂಡಿಮೆಂಟ್ಸ್, ಗೋಲ್ಡನ್ ಸಿಜರ್ ಸಲೂನ್, ಟೈಮ್ ಪಾಸ್ ಮಳಿಗೆ, ಫ್ರುಟ್ ಫೇಸ್ ಜ್ಯೂಸ್ ಮಳಿಗೆ, ಶರೀಫ್ ಅವರ ಟೀ ಅಂಗಡಿಗಳನ್ನು ಮುಚ್ಚಿಸಲಾಗಿದೆ. ಶಿವಾಜಿನಗರದ ನೋಬಲ್ ಸೂಪರ್ ಮಾರ್ಕೆಟ್‌ಗೆ ₹ 25 ಸಾವಿರ ಹಾಗೂ ಶಾಂತಿನಗರದ ನಾಗಾರ್ಜುನ ರೆಸ್ಟೋರೆಂಟ್‌ಗೆ ₹ 10 ಸಾವಿರ ದಂಡ ವಿಧಿಸಲಾಗಿದೆ. ಪೂರ್ವ ವಲಯದಲ್ಲಿ ವಿವಿಧ ಮಳಿಗೆಗಳಿಗೆ ಒಟ್ಟು ₹ 58 ಸಾವಿರ ದಂಡ ವಿಧಿಸಲಾಗಿದೆ.

ದಾಸರಹಳ್ಳಿ ವಲಯದ ಉಡುಪಿ ರುಚಿ ಹೋಟೆಲ್‌ಗೆ ₹ 5 ಸಾವಿರ ದಂಡ ಸೇರಿ ಒಟ್ಟು ₹ 7ಸಾವಿರ ದಂಡ ವಿಧಿಸಲಾಗಿದೆ. ಬೊಮ್ಮನಹಳ್ಳಿ ವಲಯದಲ್ಲಿ ಸಾರಕ್ಕಿಯ ಮುನೇಶ್ವರ ಮೋಟಾರ್ಸ್, ಬೇಗೂರು ಮುಖ್ಯ ರಸ್ತೆಯ ದಾವಣಗೆರೆ ಮಿರ್ಚಿ ಸೆಂಟರ್ ಹಾಗೂ ಪ್ರಿಯಾ ಹೋಮ್ ನೀಡ್ಸ್ ಮಳಿಗೆಗಳನ್ನು ಮುಚ್ಚಿಸಲಾಗಿದೆ. ಈ ವಲಯದಲ್ಲಿ ವಿವಿಧ ಮಳಿಗೆಗಳಿಗೆ ಒಟ್ಟು ₹ 71 ಸಾವಿರ ದಂಡ ವಿಧಿಸಲಾಗಿದೆ.

ಮಹದೇವಪುರ ವಲಯದಲ್ಲಿ ದೊಡ್ಡನೆಕ್ಕುಂದಿಯ ಮೋರ್ ರಿಟೇಲ್ ಮಳಿಗೆ, ಓಯಸಿಸ್ ಕೇರಳ ರೆಸ್ಟೋರಂಟ್ ಹಾಗೂ ಕಾಡುಗೋಡಿ ಮುಖ್ಯ ರಸ್ತೆಯ ಸ್ಟಾರ್ ಬೇಕರಿಗಳಿಗೆ ಬೀಗ ಹಾಕಿಸಲಾಗಿದೆ. ಇವುಗಳಿಗೆ ಒಟ್ಟು ₹ 20 ಸಾವಿರ ದಂಡವನ್ನೂ ವಿಧಿಸಲಾಗಿದೆ.

ಯಲಹಂಕ ವಲಯದಲ್ಲಿ ಬ್ಯಾಟರಾಯನಪುರದ ನ್ಯೂ ತಾಜ್ ರೆಸ್ಟೋರಂಟ್ ಮುಚ್ಚಿಸಲಾಗಿದೆ. ಈ ವಲಯದಲ್ಲಿ ವಿವಿಧ ಮಳಿಗೆಗಳಿಗೆ ಒಟ್ಟು ₹ 2500 ದಂಡ ವಿಧಿಸಲಾಗಿದೆ. ದಕ್ಷಿಣ ವಲಯದಲ್ಲಿ ವಿಜಯನಗರದ ಕಾಫಿ ಶಾಪ್ ಮುಚ್ಚಿಸಲಾಗಿದೆ. ಆರ್.ಆರ್. ನಗರದ ಎ ಟು ಜೆಡ್ ಮಾರ್ಕೆಟ್ ಅನ್ನು ಮುಚ್ಚಿಸಲಾಗಿದೆ.

1058 ಪ್ರಕರಣ, 26 ಮಳಿಗೆ ಬಂದ್

ಬೆಂಗಳೂರು: ಕೊರೊನಾ ಸೋಂಕು ತಡೆಗೆ ರಾಜ್ಯ ಸರ್ಕಾರ ರೂಪಿಸಿರುವ ನಿಯಮ ಉಲ್ಲಂಘಿಸಿದ್ದವರ ವಿರುದ್ಧ ಕಾರ್ಯಾಚರಣೆ ನಡೆಸಿರುವ ಪೂರ್ವ ವಿಭಾಗದ ಪೊಲೀಸರು 1,058 ಪ್ರಕರಣ ದಾಖಲಿಸಿಕೊಂಡಿದ್ದಾರೆ. 26 ವಾಣಿಜ್ಯ ಮಳಿಗೆಗಳನ್ನೂ ಬಂದ್ ಮಾಡಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಕೈಗೊಳ್ಳಬೇಕಾದ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಮಾಸ್ಕ್ ಧರಿಸುವುದು ಹಾಗೂ ಅಂತರ ಕಾಯ್ದುಕೊಳ್ಳುವುದು ಕಡ್ಡಾಯವಾಗಿದೆ. ಅಷ್ಟಾದರೂ ಹಲವರು, ನಿಯಮ ಉಲ್ಲಂಘಿಸುತ್ತಿರುವುದು ಹೆಚ್ಚಾಗಿತ್ತು. ಇದರ ವಿರುದ್ಧ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆ.

'48 ಗಂಟೆಗಳ ಕಾರ್ಯಾಚರಣೆಯಲ್ಲಿ 1,058 ಪ್ರಕರಣ ದಾಖಲಿಸಿಕೊಂಡು, ತಪ್ಪಿತಸ್ಥರಿಂದ ₹ 2.64 ಲಕ್ಷ ದಂಡ ಸಂಗ್ರಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವಾಣಿಜ್ಯ ಮಳಿಗೆಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಮಾರ್ಗಸೂಚಿಗಳನ್ನು ಪಾಲಿಸದ 26 ವಾಣಿಜ್ಯ ಮಳಿಗೆಗಳನ್ನು ಮುಚ್ಚಿಸಿ, ನೋಟಿಸ್ ನೀಡಲಾಗಿದೆ' ಎಂದೂ ತಿಳಿಸಿದರು.

ಪ್ರಜಾವಾಣಿ

ಜಸ್ಟ್ ಮ್ಯೂಸಿಕ್- ಹಿತಾನುಭವ

ಕೂಲಿಂಗ್ ಗ್ಲಾಸ್ ನಲ್ಲಿ ಎಸ್ ಪಿ ಬಿ ಕಾಣಿಸ್ತಾರೆ!

ಅರುಣ್‌ಕುಮಾರ್ ಎಡೂರ ಕೈಯಲ್ಲಿ ವಾದ್ಯಗಳಿವೆ. ಎಸ್‌ಪಿಬಿ ಅವರನ್ನು ನೋಡಿದ ಕೂಡಲೇ ಕೂಲಿಂಗ್ ಗ್ಲಾಸ್ ತೆಗೆಯಲಾಗದೆ ಪರದಾಡುತ್ತಾರೆ. ಆಗ ಎಸ್‌ಪಿಬಿ ಏನು ಮಾಡಿದರು ಗೊತ್ತಾ?

https://bit.ly/3wKlpR9

ಏರಿಕೆ ನಡುವೆಯೂ 149 ಜಿಲ್ಲೆಗಳಲ್ಲಿ ಪ್ರಕರಣಗಳಿಲ್ಲ

ನವದೆಹಲಿ (ಪಿಟಿಐ): ದೇಶದ ಹಲವು ಭಾಗಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಲೇ ಇದ್ದರೂ 149 ಜಿಲ್ಲೆಗಳಲ್ಲಿ ಕಳೆದ ಒಂದು ವಾರದಲ್ಲಿ ಒಂದು ಪ್ರಕರಣವೂ ವರದಿಯಾಗಿಲ್ಲ. ಎಂಟು ಜಿಲ್ಲೆಗಳಲ್ಲಿ ಕಳೆದ 15 ದಿನಗಳಲ್ಲಿ ಒಂದೂ ಪ್ರಕರಣ ಪತ್ತೆಯಾಗಿಲ್ಲ. 28 ದಿನಗಳಿಂದ ಒಂದೂ ಪ್ರಕರಣ ಇಲ್ಲದ 63 ಜಿಲ್ಲೆಗಳಿವೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಶುಕ್ರವಾರ ಹೇಳಿದ್ದಾರೆ.

ಉನ್ನತ ಮಟ್ಟದ ಸಚಿವರ ಗುಂಪಿನ 24ನೇ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಶುಕ್ರವಾರ ಬೆಳಿಗ್ಗಿನ ವರೆಗೆ 9.43 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಅದರಲ್ಲಿ ಸುಮಾರು ಮೂರು ಕೋಟಿ ಡೋಸ್‌ಗಳಷ್ಟನ್ನು ಹಿರಿಯ ನಾಗರಿಕರು ಹಾಕಿಸಿಕೊಂಡಿದ್ದಾರೆ ಎಂದೂ ಅವರು ತಿಳಿಸಿದರು.

'ಲಸಿಕೆ ಮೈತ್ರಿ' ಯೋಜನೆಯ ಭಾಗವಾಗಿ ಜಾಗತಿಕ ಸಮುದಾಯಕ್ಕೂ ಭಾರತವು ಲಸಿಕೆ ಪೂರೈಸಿದೆ. ಈ ಯೋಜನೆ ಅಡಿಯಲ್ಲಿ 85 ದೇಶಗಳಿಗೆ 6.45 ಕೋಟಿ ಡೋಸ್ ಲಸಿಕೆ ರಫ್ತು ಮಾಡಲಾಗಿದೆ.

11 ರಾಜ್ಯಗಳಲ್ಲಿ ಅತಿ ಹೆಚ್ಚು: 11 ರಾಜ್ಯಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಏಪ್ರಿಲ್ 8ಕ್ಕೆ ಕೊನೆಗೊಂಡ ಒಂದು ವಾರದ ಪ್ರಕರಣ ಏರಿಕೆ ದರವು ಶೇ 12.93ರಷ್ಟಿದೆ. ಅಮೆರಿಕ ಮತ್ತು ಬ್ರೆಜಿಲ್ ಬಿಟ್ಟರೆ ಭಾರತದಲ್ಲಿಯೇ ಈ ದರ ಅಧಿಕವಾಗಿದೆ ಎಂದು ಎನ್‌ಸಿಡಿಸಿ (ರೋಗ ನಿಯಂತ್ರಣ ರಾಷ್ಟ್ರೀಯ ಕೇಂದ್ರ) ನಿರ್ದೇಶಕ ಸುಜಿತ್ ಕುಮಾರ್ ಸಿಂಗ್ ಹೇಳಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ.ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ	13.47 ಕೋಟಿ	1.31 ಕೋಟಿ	10,48,085 (ಒಟ್ಟು ಸೋಂಕಿತರು)
ಸಕ್ರಿಯ ಪ್ರಕರಣ	2.337 ಕೋಟಿ	10.30 ಲಕ್ಷ	58,084
ಗುಣಮುಖ	10.84 ಕೋಟಿ	1.198 ಕೋಟಿ	9,77,169
ಸಾವು	29.18 ಲಕ್ಷ	1.683 ಲಕ್ಷ	12,813
ದಿನದ ಏರಿಕೆ: ಹೊಸ ಪ್ರಕರಣ	7.46 ಲಕ್ಷ	1.31 ಲಕ್ಷ	7,955
ಗುಣಮುಖ	5.06 ಲಕ್ಷ	73,986	3,220
ಸಾವು	13,881	662	46

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 89,293 ಬ್ರೆಜಿಲ್; 80,161 ಅಮೆರಿಕ; 15,869 ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 68.70 ಅಮೆರಿಕ; 45.37 ಫ್ರಾನ್ಸ್; 12.08 ಬ್ರೆಜಿಲ್

ಎಲ್ಲಿ ಹೆಚ್ಚು ಸಾವು: 57,187 ಮಹಾರಾಷ್ಟ್ರ; 12,863 ತಮಿಳುನಾಡು; 11,457 ದೆಹಲಿ

378 ಐಸಿಯುನಲ್ಲಿ ಇರುವವರು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 32.66 ಮಹಾರಾಷ್ಟ್ರ; 11.54 ಕೇರಳ; 9.18 ಆಂಧ್ರಪ್ರದೇಶ

ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ facebook LIVE fb.com/prajavani.net

ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!

ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ

ಡಾ.ಚಂದ್ರ ಗಿರೀಶ್, ಪ್ರಾಂಶುಪಾಲರು, ವಿದ್ಯಾನಿಧಿ ಪಿಯು ಕಾಲೇಜು, ರಾಯಚೂರು ಇವರಿಂದ ಟಿಪ್ಸ್

ಇಂದಿನ ವಿಷಯ: ಜೀವಶಾಸ್ತ್ರ ಭಾಗ-2

ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ

ಏಪ್ರಿಲ್ 10 ಸಂಜೆ 4.30 ರಿಂದ 6.00

12ರಿಂದ ಧರ್ಮಸ್ಥಳದ ಜಾತ್ರೆ

ಪ್ರಜಾವಾಣಿ ವಾರ್ತೆ

ಉಜಿರೆ: ಧರ್ಮಸ್ಥಳದಲ್ಲಿ ಇದೇ 12ರಿಂದ 21ರವರೆಗೆ ವರ್ಷಾವಧಿ ಜಾತ್ರೆ ನಡೆಯುತ್ತದೆ.

ಇದೇ 16ರಿಂದ 21ರ ವರೆಗೆ ಬೆಳಿಗ್ಗೆ ಗಂಟೆ 8.30ರ ವರೆಗೆ ದೇವರ ದರ್ಶನಕ್ಕೆ ಅವಕಾಶವಿಲ್ಲ. ಸಂಜೆ 5 ಗಂಟೆಯಿಂದ ರಾತ್ರಿ 8 ಗಂಟೆ ವರೆಗೆ ಮಾತ್ರ ಭಕ್ತರನ್ನು ಗರ್ಭಗುಡಿಯ ಆವರಣಕ್ಕೆ ಬಿಡಲಾಗುವುದು ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಪಾಟೀಲಗೆ ಗೌರವ ಡಾಕ್ಟರೇಟ್, ದಳವಾಯಿಗೆ ಡಿ.ಲಿಟ್

ಗದಗ: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಶನಿವಾರ (ಏ.10) ನಡೆಯಲಿದ್ದು, ಗದಗ ಶಾಸಕ ಎಚ್.ಕೆ.ಪಾಟೀಲ ಅವರಿಗೆ ಗೌರವ ಡಾಕ್ಟರೇಟ್ ಹಾಗೂ ಡಾ. ಅಶೋಕ ಮಹಾದೇವ ದಳವಾಯಿ ಅವರಿಗೆ ಡಿ.ಲಿಟ್ ಪದವಿ ನೀಡಿ ಗೌರವಿಸಲಾಗುವುದು ಎಂದು ಕುಲಪತಿ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ ತಿಳಿಸಿದರು.

ಎಚ್.ಕೆ.ಪಾಟೀಲ

ಡಾ. ಅಶೋಕ ಮಹಾದೇವ ದಳವಾಯಿ

ಮೀಸಲಾತಿ: ಕಿವಿಗೆ ಹೂವಿಡುತ್ತಿರುವ ಸಿ.ಎಂ: ಟೀಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ವಾಲ್ಮೀಕಿ ಸಮುದಾಯಕ್ಕೆ ಶೇ 7.5 ಮೀಸಲಾತಿ ನೀಡುವ ವಿಚಾರದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸಮಾಜದವರ ಕಿವಿಯ ಮೇಲೆ ಹೂವಿಡುವ ಕೆಲಸ ಮಾಡುತ್ತಿದ್ದಾರೆ' ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಸನ್ನಾನಂದಪುರಿ ಸ್ವಾಮೀಜಿ

ವಾಲ್ಮೀಕಿ ಜಾತ್ರೆಯ ಯಶಸ್ವಿಗೆ ಶ್ರಮಿಸಿದವರನ್ನು ಶುಕ್ರವಾರ ಸನ್ಮಾನಿಸಿ ಅವರು ಮಾತನಾಡಿದರು.

'ರಾಜನಹಳ್ಳಿಯಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಿದ್ದರಿಂದ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿ ರಚಿಸಲಾಗಿತ್ತು. ಮತ್ತೆ ಹೋರಾಟ ನಡೆಸಿದಾಗ ಮೂಗಿಗೆ ತುಪ್ಪ ಸವರುವಂತೆ ಸಚಿವ ಸಂಪುಟ ಉಪ ಸಮಿತಿ ರಚಿಸಿದರು. ಪುನಃ ಹೋರಾಟ ಪ್ರಾರಂಭಿಸಿದಾಗ ತ್ರಿಸದಸ್ಯರ ಉನ್ನತ ಸಮಿತಿಯನ್ನು ಸರ್ಕಾರ ರಚಿಸಿದೆ. ಇದನ್ನು ರಚಿಸುವ ಅವಶ್ಯಕತೆ ಇತ್ತೆ? ಯಾವ ಪ್ರಜ್ಞಾವಂತರೂ ಇದನ್ನು ಒಪ್ಪುವುದಿಲ್ಲ' ಎಂದರು.

'ಎರಡನೇ ವಾಲ್ಮೀಕಿ ಜಾತ್ರೆಯ ವೇಳೆ ಯಡಿಯೂರಪ್ಪ ಅವರು ನಾಗಮೋಹನ್ ದಾಸ್ ಸಮಿತಿ ವರದಿ ನೀಡಿದ ತಕ್ಷಣ ಮೀಸಲಾತಿ ನೀಡಲಾಗುವುದು ಎಂದು ಭರವಸೆ ನೀಡಿದ್ದರು. ನಾಗಮೋಹನ್ ದಾಸ್ ಸಮಿತಿ [illegible] ವರದಿ ನೀಡಿದ್ದರೂ ಮೀಸಲಾತಿ ನೀಡಿಲ್ಲ. ಈ [illegible] ಜಾತ್ರೆಯಲ್ಲಿ ಮತ್ತೆ ಕಿವಿಯ ಮೇಲೆ ಹೂವಿಡುತ್ತಾರೆ ಎಂಬುದು ಗೊತ್ತಾಗಿ ಮೀಸಲಾತಿ ಘೋಷಣೆ ಮಾಡಲೇಬೇಕು ಎಂದು ಅವರನ್ನು ಪಟ್ಟು ಹಿಡಿದು ಕೇಳಿದೆ' ಎಂದರು.

ಶಿವಮೊಗ್ಗ ಸ್ಮಾರ್ಟ್‌ಸಿಟಿ ಲಿಮಿಟೆಡ್

ನೊಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್, ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ ಶಿವಮೊಗ್ಗ–577201 Email : shimogasmartcity@gmail.com. P.No: 08182-279951

ಇ–ಹರಾಜು ಪ್ರಕಟಣೆ

ಟೆಂಡರ್ : ಕ್ರ.ಸಂ:ಶಿಸ್ಮಾಸಿಲಿ:ಸಿಆರ್:152:2017–18 ದಿನಾಂಕ:08.04.2021

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ನ ಯೋಜನೆಯ ಅನುದಾನದ ಹೆಚ್ಚುವರಿ ಮೊತ್ತವನ್ನು ಷೆಡ್ಯೂಲ್ ಬ್ಯಾಂಕ್‌ನಲ್ಲಿ ಠೇವಣಿ ರೂಪದಲ್ಲಿ ಹೂಡಿಕೆ ಮಾಡಲು ಇ ಹರಾಜನ್ನು ಆಹ್ವಾನಿಸಲಾಗಿರುತ್ತದೆ. ಇ–ಹರಾಜು ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in. ರಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ.	ಲಭ್ಯವಿರುವ ಅನುದಾನ (ರೂಕೋಟಿಗಳಲ್ಲಿ)	ಹೂಡಿಕೆಯ ಅವಧಿ	ಅರ್ಹತೆ	ಇ–ಹರಾಜು ಪ್ರಕಟಣೆ ದಿನಾಂಕ	ಲೈವ್ ಹರಾಜಿನ ದಿನಾಂಕ ಮತ್ತು ಸಮಯ	ಹೂಡಿಕೆಯ ದಿನಾಂಕ
ಅನುದಾನದ ವಿವರ : ಶಿವಮೊಗ್ಗ ಸ್ಮಾರ್ಟ್ ಸಿಟಿ ಪ್ರಾಜೆಕ್ಟ್ ಅನುದಾನ						
1	42.00 ಕೋಟಿ (21 ಕೋಟಿ x 2 ಪ್ಯಾಕೇಜ್‌ಗಳು)	3 ತಿಂಗಳು	ಸಾರ್ವಜನಿಕ ಸ್ವಾಮ್ಯದ ಷೆಡ್ಯೂಲ್ ಬ್ಯಾಂಕ್ & RRB' S	08.04.2021	ದಿ:29.04.2021 ಬೆಳಿಗ್ಗೆ 11.00ಗಂಟೆಯಿಂದ ಅಪರಾಹ್ನ 12.30 ಗಂಟೆಯವರೆಗೆ	ದಿ: 03.05.2021 ರಿಂದ ದಿ: 07.05.2021
2	18.00 ಕೋಟಿ (9 ಕೋಟಿ x 2 ಪ್ಯಾಕೇಜ್‌ಗಳು)	3 ತಿಂಗಳು	ಖಾಸಗಿ ಸ್ವಾಮ್ಯದ ಷೆಡ್ಯೂಲ್ ಬ್ಯಾಂಕ್	08.04.2021	ದಿ:29.04.2021 ಅಪರಾಹ್ನ 12.30ಗಂಟೆಯಿಂದ ಅಪರಾಹ್ನ 2.00 ಗಂಟೆಯವರೆಗೆ	

ಇ ಎಂ ಡಿ ಮೊತ್ತ ರೂ 10000/– ಗಳನ್ನು ಇ–ಪೋರ್ಟಲ್ ಮೂಲಕ ಪಾವತಿಸುವುದು.

ಕ್ರ.ಸಂ : ವಿವರ: 1) ಇ ಹರಾಜು ಪ್ರಕಟಣೆ ದಿನಾಂಕ : **08.04.2021.** 2) ಪ್ರಿ ಬಿಡ್ ಮೀಟಿಂಗ್ ದಿನಾಂಕ : **20.04.2021 ರ ಅಪರಾಹ್ನ 03.00 ಗಂಟೆಗೆ.** 3) ಅರ್ಹತಾ ಮಾನದಂಡ ಅನುಬಂಧ–A ಮತ್ತು ಅನುಬಂಧ–B ಅನ್ನು ಇ–ಪೋರ್ಟಲ್ ನಲ್ಲಿ Upload ಮಾಡಲು ಕಡೆಯ ದಿನಾಂಕ : **23.04.2021ರ ಸಂಜೆ 4.00 ಗಂಟೆಯ ಒಳಗೆ.** 4) ಲೈವ್ ಹರಾಜು ದಿನಾಂಕ : **29.04.2021 (ಬೆಳಿಗ್ಗೆ 11.00 ಗಂಟೆಯಿಂದ ಅಪರಾಹ್ನ 2.00ಗಂಟೆಯವರೆಗೆ).** 5) ಹೂಡಿಕೆಯ ದಿನಾಂಕ : **03.05.2021 ರಿಂದ 07.05.2021ರವರೆಗೆ.**

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.71–04/ಝೇಂಕಾರ್/2021–22

ರಾಜ್ಯ ಒಕ್ಕಲಿಗರ ಸಂಘ

148, 'ನಾಡಪ್ರಭು ಕೆಂಪೇಗೌಡ ಭವನ', ಕೆ.ಆರ್. ರಸ್ತೆ, ವಿ.ವಿ. ಪುರಂ ಬೆಂಗಳೂರು–560 004

ಸಂಖ್ಯೆ:ರಾ.ಒ.ಸಂ/ಚುನಾವಣಾಧಿಕಾರಿ/ 07/2021–22 ದಿನಾಂಕ: 09–04–2021

ಚುನಾವಣಾ ಅಧಿಸೂಚನೆ

ವಿಷಯ : ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆ–2021 ಅಧಿಸೂಚನೆ ಹೊರಡಿಸುವ ಬಗ್ಗೆ.
ಉಲ್ಲೇಖ : 1. ಸರ್ಕಾರದ ಆದೇಶದ ಸಂಖ್ಯೆ ಸಇ112 ಸಸಂನೋಂ 2018 ದಿನಾಂಕ 06–03–2021.
2. ಸರ್ಕಾರದ ಆದೇಶದ ಸಂಖ್ಯೆ ಸಇ112 ಸಸಂನೋಂ 2018 ದಿನಾಂಕ 01–04–2021.

ಮೇಲಿನ ಉಲ್ಲೇಖ–1 ರ ಕರ್ನಾಟಕ ಸರ್ಕಾರದ ಆದೇಶದಲ್ಲಿ ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಇದರ ಕಾರ್ಯಕಾರಿ ಸಮಿತಿ ಚುನಾವಣೆ ನಡೆಸಲು ಚುನಾವಣಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ಈ ಚುನಾವಣೆಯನ್ನು ರಾಜ್ಯ ಒಕ್ಕಲಿಗರ ಸಂಘದ ನಿಬಂಧನೆಗಳು ಕರ್ನಾಟಕ ಸಂಘಗಳ ಕಾಯ್ದೆ 1960 ರ ಸಾಮಾನ್ಯ ಚುನಾವಣಾ ನಿಯಮಗಳನ್ವಯ ಚುನಾವಣೆ ನಡೆಸಲಾಗುವುದು.

ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಗೆ ರಾಜ್ಯದ 11 ಜಿಲ್ಲೆ ಹಾಗೂ ಹೊರರಾಜ್ಯಗಳ ಮತದಾರರು ಮತ ಚಲಾಯಿಸಿ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಆಯ್ಕೆ ಮಾಡುತ್ತಾರೆ.

ಉಲ್ಲೇಖ–2 ರ ಸರ್ಕಾರದ ಆದೇಶದಂತೆ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಚುನಾವಣಾ ಪ್ರಕ್ರಿಯೆಗಳನ್ನು ಸಮರ್ಪಕವಾಗಿ ನಡೆಸಲು ಜಿಲ್ಲಾ ಕೇಂದ್ರದ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು (DRCS) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳನ್ನು (ARCS) ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಜಿಲ್ಲಾ ಚುನಾವಣಾಧಿಕಾರಿಗಳಾಗಿ ನೇಮಕ ಮಾಡಿ ಆದೇಶಿಸಲಾಗಿದೆ.

11 ಜಿಲ್ಲಾ ಕ್ಷೇತ್ರಗಳಿಂದ 35 ಸ್ಥಾನಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಮುಂದಿನ ಐದು ವರ್ಷಗಳ ಅವಧಿಗೆ ಆಯ್ಕೆ ಮಾಡಲು ದಿನಾಂಕ: 16–05–2021 ರ ಭಾನುವಾರದಂದು ಚುನಾವಣೆ ನಡೆಸುವ ಸಂಬಂಧ ಅಧಿಸೂಚನೆಯನ್ನು ಈ ಮೂಲಕ ಹೊರಡಿಸಿ ಪ್ರಕಟಿಸಿರುತ್ತೇನೆ. ತತ್ಸಂಬಂಧವಾಗಿ ಎಲ್ಲಾ ಜಿಲ್ಲಾ ಕ್ಷೇತ್ರಗಳಿಗೆ ಅನ್ವಯವಾಗುವಂತೆ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿರುತ್ತದೆ.

ಚುನಾವಣಾ ವೇಳಾಪಟ್ಟಿ

ಕ್ರಮ ಸಂಖ್ಯೆ	ವಿವರಗಳು	ದಿನಾಂಕ ಮತ್ತು ಸಮಯ	ನಿಯೋಜನೆಗೊಂಡಿರುವ ಅಧಿಕಾರಿ ಮತ್ತು ಸ್ಥಳ
01	ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರು ನಾಮಪತ್ರವನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿ, ದಿನಾಂಕ, ವೇಳೆ ಮತ್ತು ಸ್ಥಳ.	ಪ್ರಾರಂಭ : ದಿನಾಂಕಃ 21–04–2021 ರ ಬುಧವಾರ ಪೂರ್ವಾಹ್ನ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ. ಮುಕ್ತಾಯ: ದಿನಾಂಕ ಃ 28–04–2021ರ ಬುಧವಾರ ಪೂರ್ವಾಹ್ನ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ. (ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ).	ಆಯಾ ಜಿಲ್ಲಾ ಕ್ಷೇತ್ರದ ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಲ್ಲಿ. ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ.
02	ನಾಮಪತ್ರಗಳ ಪರಿಶೀಲನೆ.	ದಿನಾಂಕಃ 29–04–2021 **ರ ಗುರುವಾರ** ಪೂರ್ವಾಹ್ನ ಃ 11.00 ರಿಂದ.	ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಂದ ಅವರ ಕಛೇರಿಯಲ್ಲಿ.
03	ಕ್ರಮಬದ್ಧ ಉಮೇದುವಾರರ ಪಟ್ಟಿ ಪ್ರಕಟಣೆ	ದಿನಾಂಕಃ 29–04–2021 ರ ಗುರುವಾರ, ಪೂರ್ವಾಹ್ನ 11–00 ಗಂಟೆ ನಾಮಪತ್ರಗಳ ಪರಿಶೀಲನೆ ನಂತರ.	ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಂದ, ಅವರ ಕಛೇರಿಯ ಸೂಚನಾ ಫಲಕದಲ್ಲಿ.
04	ನಾಮಪತ್ರಗಳನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ.	ದಿನಾಂಕಃ 30–04–2021 ರ ಶುಕ್ರವಾರ ಮಧ್ಯಾಹ್ನ ಃ 3.00 ಗಂಟೆಯೊಳಗೆ.	ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ, ಅವರ ಕಛೇರಿಯಲ್ಲಿ.
05	ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ.	ದಿನಾಂಕಃ 30–04–2021 ಶುಕ್ರವಾರ ಮಧ್ಯಾಹ್ನ ಃ 3.00 ಗಂಟೆಯ ನಂತರ.	ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಂದ, ಅವರ ಕಛೇರಿಯ ಸೂಚನಾ ಫಲಕದಲ್ಲಿ.
06	ಉಮೇದುವಾರರಿಗೆ ಚುನಾವಣಾ ಚಿಹ್ನೆಗಳ ಹಂಚಿಕೆ [ಬೆಂಗಳೂರು ನಗರ, ತಮಿಳುನಾಡು (ಹೊಸೂರು), ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಭ್ಯರ್ಥಿಗಳಿಗೆ ಮಾತ್ರ ಅನುಕ್ರಮ ಸಂಖ್ಯೆ ನೀಡಿ ಪಟ್ಟಿ ಪ್ರಕಟಿಸುವುದು]	ದಿನಾಂಕಃ 03–05–2021 ಸೋಮವಾರ ಪೂರ್ವಾಹ್ನ ಃ 11.00 ಗಂಟೆಯಿಂದ.	ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಂದ, ಅವರ ಕಛೇರಿಯಲ್ಲಿ.
07	ಅಗತ್ಯಬಿದ್ದಲ್ಲಿ, ಮತದಾನ ನಡೆಸುವ ದಿನಾಂಕ, ಸಮಯ ಮತ್ತು ಸ್ಥಳ.	ದಿನಾಂಕಃ 16–05–2021 ರ ಭಾನುವಾರ ಪೂರ್ವಾಹ್ನ ಃ 7–00 ರಿಂದ ಸಂಜೆ ಃ 5–00 ಗಂಟೆಯವರೆಗೆ.	ಆಯಾ ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳು ನಿಗದಿಪಡಿಸಿದ ಜಿಲ್ಲಾ / ತಾಲೂಕು ಕೇಂದ್ರಗಳಲ್ಲಿ. ಬೆಂಗಳೂರು ಜಿಲ್ಲೆ ಮತ್ತು ನಗರ ಕ್ಷೇತ್ರದಲ್ಲಿ ಅಂಚೆ ಪಿನ್ ಕೋಡ್ ಅನ್ವಯ ನಿಗದಿಪಡಿಸಿದ ಮತದಾನದ ಕೇಂದ್ರಗಳಲ್ಲಿ.
08	ಮತಗಳ ಎಣಿಕೆ.	ದಿನಾಂಕಃ 18–05–2021 ರ ಮಂಗಳವಾರ ಪೂರ್ವಾಹ್ನ : 9–00 ರಿಂದ ಎಣಿಕೆ ಮುಗಿಯುವ ತನಕ.	ಆಯಾ ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳು ನಿಗದಿಪಡಿಸಿದ ಜಿಲ್ಲಾ ಕ್ಷೇತ್ರದ ಕೇಂದ್ರಗಳಲ್ಲಿ.
09	ಚುನಾವಣಾ ಫಲಿತಾಂಶ ಘೋಷಣೆ	ದಿನಾಂಕಃ 18–05–2021 ರ ಮಂಗಳವಾರ ಮತ ಎಣಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ	ಜಿಲ್ಲಾ ಕ್ಷೇತ್ರದ ಮತ ಎಣಿಕೆಯ ಕೇಂದ್ರಗಳಲ್ಲಿ, ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳಿಂದ.

ಈ ಸಂಬಂಧ ಸಂಘದ ಚುನಾವಣಾಕಾರ್ಯಗಳನ್ನು ನಿರ್ವಹಿಸಲು ಈ ಕೆಳಕಂಡ ಜಿಲ್ಲಾಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ.

ಕ್ರಮ ಸಂಖ್ಯೆ	ಜಿಲ್ಲಾ ಕ್ಷೇತ್ರ	ಅಧಿಕಾರಿಯ ಹೆಸರು, ಹುದ್ದೆ ಮತ್ತು ಕಛೇರಿ ವಿಳಾಸ
01	ಬೆಂಗಳೂರು ನಗರ, ತಮಿಳುನಾಡು(ಹೊಸೂರು), ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ	ಶ್ರೀ ಶಶಿಧರ್.ಪಿ, ಸಹಕಾರ ಸಂಘಗಳ ಉಪನಿಬಂಧಕರು, 1ನೇ ವಲಯ – **ಜಿಲ್ಲಾ ಚುನಾವಣಾಧಿಕಾರಿಗಳು**, ಬೆಂಗಳೂರು
02	ಮೈಸೂರು, ತಮಿಳುನಾಡು (ಊಟಿ) ಮತ್ತು ಚಾಮರಾಜನಗರ ಜಿಲ್ಲೆ	ಶ್ರೀ ವಿಜಯಕುಮಾರ್, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ – **ಜಿಲ್ಲಾ ಚುನಾವಣಾಧಿಕಾರಿಗಳು**, ಮೈಸೂರು ಜಿಲ್ಲೆ
03	ಮಂಡ್ಯ ಜಿಲ್ಲೆ	ಶ್ರಿ ವಿಕ್ರಮ ರಾಜೇ ಅರಸ್. ಸಹಕಾರ ಸಂಘಗಳ ಉಪನಿಬಂಧಕರು (ಪ್ರಭಾರಿ), ಮಂಡ್ಯ ಜಿಲ್ಲೆ – **ಜಿಲ್ಲಾ ಚುನಾವಣಾಧಿಕಾರಿಗಳು**, ಮಂಡ್ಯ ಜಿಲ್ಲೆ
04	ಹಾಸನ ಜಿಲ್ಲೆ	ಶ್ರೀ ದಯಾನಂದ್, ಸಹಕಾರ ಸಂಘಗಳ ಉಪನಿಬಂಧಕರು, ಹಾಸನ ಜಿಲ್ಲೆ, – **ಜಿಲ್ಲಾ ಚುನಾವಣಾಧಿಕಾರಿಗಳು**, ಹಾಸನ ಜಿಲ್ಲೆ
05	ತುಮಕೂರು ಜಿಲ್ಲೆ	ಶ್ರೀ ಆರ್.ಜೆ.ಕಾಂತರಾಜು, ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಜಿಲ್ಲೆ, – **ಜಿಲ್ಲಾ ಚುನಾವಣಾಧಿಕಾರಿಗಳು**, ತುಮಕೂರು ಜಿಲ್ಲೆ
06	ಚಿತ್ರದುರ್ಗ ಜಿಲ್ಲೆ (ದಾವಣಗೆರೆ, ಗದಗ, ಹುಬ್ಬಳ್ಳಿ, ಇತ್ಯಾದಿ ಸೇರಿ)	ಶ್ರೀ ಜಯಪ್ರಕಾಶ್.ಬಿ., ಸಹಕಾರ ಸಂಘಗಳ ಉಪನಿಬಂಧಕರು, ಚಿತ್ರದುರ್ಗ ಜಿಲ್ಲೆ, ದಾವಣಗೆರೆ.
07	ಕೋಲಾರ ಮತ್ತು ಚಿಕ್ಕಬಳ್ಳಾಪುರ (ಆಂಧ್ರಪ್ರದೇಶ ಸೇರಿ)	ಶ್ರೀ ಎನ್.ವೆಂಕಟೇಶ್ , ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, – **ಜಿಲ್ಲಾ ಚುನಾವಣಾಧಿಕಾರಿಗಳು**, ಕೋಲಾರ ಜಿಲ್ಲೆ
08	ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆ (ಕಾಸರಗೋಡು ಸೇರಿ)	ಶ್ರೀ ಪ್ರವೀಣ್ ಬಿ ನಾಯಕ್. ಸಹಕಾರ ಸಂಘಗಳ ಉಪನಿಬಂಧಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು – **ಜಿಲ್ಲಾ ಚುನಾವಣಾಧಿಕಾರಿಗಳು**, ದಕ್ಷಿಣ ಕನ್ನಡ ಜಿಲ್ಲೆ
09	ಕೊಡಗು ಜಿಲ್ಲೆ	ಶ್ರೀ ಬಿ.ಕೆ.ಸಲೀಂ, ಸಹಕಾರ ಸಂಘಗಳ ಉಪನಿಬಂಧಕರು, ಕೊಡಗು ಜಿಲ್ಲೆ, ಮಡಿಕೇರಿ. – **ಜಿಲ್ಲಾ ಚುನಾವಣಾಧಿಕಾರಿಗಳು**, ಕೊಡಗು ಜಿಲ್ಲೆ
10	ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆ	ಶ್ರೀ ನಾಗೇಶ್ ಎಸ್ ದೊಂಗ್ರೆ, ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, – **ಜಿಲ್ಲಾ ಚುನಾವಣಾಧಿಕಾರಿಗಳು**, ಶಿವಮೊಗ್ಗ ಜಿಲ್ಲೆ
11	ಚಿಕ್ಕಮಗಳೂರು ಜಿಲ್ಲೆ	ಶ್ರೀ. ಲಕ್ಷ್ಮಿ ನಾರಾಯಣ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು ಜಿಲ್ಲೆ – **ಜಿಲ್ಲಾ ಚುನಾವಣಾಧಿಕಾರಿಗಳು**, ಚಿಕ್ಕಮಗಳೂರು ಜಿಲ್ಲೆ

ವಿಶೇಷ ಸೂಚನೆ: 1. ಆಯಾ ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳ ಕಛೇರಿಯು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಾಗಿರುತ್ತದೆ. **2**. ಬೆಂಗಳೂರು ಕ್ಷೇತ್ರದ ಚುನಾವಣಾಧಿಕಾರಿಗಳ ಕಛೇರಿ ರಾಜ್ಯಒಕ್ಕಲಿಗರ ಸಂಘದ ಕೇಂದ್ರ ಕಛೇರಿಯಲ್ಲಿರುತ್ತದೆ. 3. ಚುನಾವಣಾ ಮತಕೇಂದ್ರಗಳ ವಿವರ ಹಾಗೂ ಮತ ಎಣಿಕೆ ಕೇಂದ್ರಗಳ ವಿವರಗಳನ್ನು ರಾಜ್ಯ ಒಕ್ಕಲಿಗರ ಸಂಘದ ಅಂತರ್ಜಾಲ ತಾಣ **www.rvsangha.org** ರಲ್ಲಿ ಹಾಗೂ ಜಿಲ್ಲಾ ಕ್ಷೇತ್ರ ಚುನಾವಣಾಧಿಕಾರಿಗಳ ಕಛೇರಿಗಳಲ್ಲಿ ಪ್ರಕಟಿಸಲಾಗುವುದು. 4. ನಾಮಪತ್ರ ಸಲ್ಲಿಸಲು ವಿವರವಾದ ಸೂಚನೆಗಳ ವಿವರಗಳನ್ನು ರಾಜ್ಯ ಒಕ್ಕಲಿಗರ ಸಂಘದ ಅಂತರ್ಜಾಲ ತಾಣ **www.rvsangha.org** ರಲ್ಲಿ ಪ್ರಕಟಿಸಲಾಗಿದೆ.

ದಿನಾಂಕ : 09.04.2021
ಸ್ಥಳ : ಬೆಂಗಳೂರು

ಪಿ.ಎನ್.ರವೀಂದ್ರ, ಭಾ.ಆ.ಸೇ
ಚುನಾವಣಾಧಿಕಾರಿಗಳು
ರಾಜ್ಯ ಒಕ್ಕಲಿಗರ ಸಂಘ (ರಿ)

ಪ್ರಜಾವಾಣಿ ಉದ್ಯೋಗ ವಾಣಿ



ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:

Mob : 96069 12220

ಕರ್ನಾಟಕ ಸರ್ಕಾರ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288

ಸಂಖ್ಯೆ: ಕವಶಿಸಸ/ಸಕಾಅ/ಟೆಂಡರ್–01/2021–22 ದಿನಾಂಕ: 08.04.2021

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ **ತುಮಕೂರು, ಹಾಸನ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ನೀರು ಸರಬರಾಜು ಮತ್ತು ದುರಸ್ಥಿ ಕಾಮಗಾರಿಗಳಿಗೆ ಕೆಳಕಂಡಂತೆ ಇಂಡೆಂಟ್ ಸಂಖ್ಯೆ: 2896 (ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮಾತ್ರ) ಇಂಡೆಂಟ್ ಸಂಖ್ಯೆ: 2892 (ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮಾತ್ರ) ಇಂಡೆಂಟ್ ಸಂಖ್ಯೆ: 2894, 2893, 2782 (ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮಾತ್ರ)** ಇ–ಪೋರ್ಟಲ್ ಮುಖಾಂತರ ದಿನಾಂಕ: **09.04.2021** ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **10.05.2021** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

DIPR/DDU/YC/116/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಐಟಿ ಸಲಹೆಗಾರರ ಕಚೇರಿ, 16ನೇ ಅಡ್ಡರಸ್ತೆ, ಮಲ್ಲೇಶ್ವರಂ ಐಪಿಪಿ ದತ್ತಾಂಶ ಕೇಂದ್ರ, ಬೆಂಗಳೂರು – 560 003.

ಸಂಖ್ಯೆ: ಬೃಬೆಂಮಪಾ/ಎಸ್‌ವೈಎಸ್/ಜಿಎಲ್/652/2019–20 ದಿನಾಂಕ: 08.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಅರ್ಹ ಬಿಡ್ಡುದಾರರುಗಳಿಂದ "ಬೃ.ಬೆಂ.ಮ.ಪಾಲಿಕೆಗೆ ವಿಡಿಯೋ ಕಾನ್ಫರೆನ್ಸ್ ಸೊಲ್ಯೂಷನ್ ಒದಗಿಸಲು ಮತ್ತು ಅಳವಡಿಸಲು" ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸುವ ನಿರೀಕ್ಷಿತ ತಯಾರಕರು ಮೇಲ್ಕಂಡ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಬಿಡ್ಡುದಾರರುಗಳು ಪ್ರತ್ಯೇಕವಾಗಿ ಮೊಹರಾದ ದ್ವಿಲಕೋಟೆಗಳನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಸಲ್ಲಿಸಬೇಕಾಗಿದ್ದು, ಒಂದರಲ್ಲಿ ಇಎಂಡಿ ಮತ್ತು ಮತ್ತೊಂದರಲ್ಲಿ ಈ ಟೆಂಡರನ್ನು ಪಡೆದುಕೊಳ್ಳಲು ಅವರ ಅರ್ಹತೆ/ಸಾಮರ್ಥ್ಯಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ಸಲ್ಲಿಸಬೇಕು ಹಾಗೂ ಇದನ್ನು ಮೊದಲು ತೆರೆಯಲಾಗುತ್ತದೆ ಮತ್ತು ದರಬಿಡ್‌ಗಳನ್ನು ಹೊಂದಿರುವ ಎರಡನೇ ಲಕೋಟೆಯನ್ನು ಬಿಡ್ಡುದಾರರುಗಳು ತಾಂತ್ರಿಕವಾಗಿ ಅರ್ಹರಾದಲ್ಲಿ ತೆರೆಯಲಾಗುತ್ತದೆ.

1. ಸರ್ಕಾರದ ಆದೇಶದನ್ವಯ ಟೆಂಡರುಗಳು ಇಎಂಡಿ ಘೋಷಣೆ ಪ್ರಮಾಣಪತ್ರವನ್ನು ಒಳಗೊಂಡಿರತಕ್ಕದ್ದು.
2. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಿಗದಿಪಡಿಸಿರುವ ದಿನಾಂಕ ಮತ್ತು ಸಮಯದಂತೆ ವಿದ್ಯುನ್ಮಾನವಾಗಿ (ಅಂತರ್ಜಾಲದ ಮೂಲಕ ಆನ್‌ಲೈನ್‌ನಲ್ಲಿ) ಸಲ್ಲಿಸತಕ್ಕದ್ದು. ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ, ತಿಳಿಸಿರುವ ದಿನಾಂಕ ಮತ್ತು ಸಮಯದ ರೀತ್ಯಾ ಭಾಗವಹಿಸಲಿಚ್ಛಿಸುವ ಟೆಂಡರುದಾರರ ಸಮ್ಮುಖದಲ್ಲಿ ಐ.ಟಿ. ಸಲಹೆಗಾರರ ಕಚೇರಿ, 16ನೇ ಅಡ್ಡರಸ್ತೆ, ಮಲ್ಲೇಶ್ವರಂ, ಐಪಿಪಿ ದತ್ತಾಂಶ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು – 560 003 ಇಲ್ಲಿ ತೆರೆಯಲಾಗುವುದು.
3. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **12–04–2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಬಿಡ್ ಪೂರ್ವಭಾವಿ ಆಕ್ಷೇಪಣೆಗಳನ್ನು ಇ–ಮೇಲ್ itadv@bbmp.gov.in ಮೂಲಕ ಅಥವಾ ಈ ಕಚೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ **16–04–2021** ರ ಸಂಜೆ **4:00** ಗಂಟೆಯವರೆಗೆ.
5. ಬಿಡ್ ಪೂರ್ವಭಾವಿ ಸಭೆಯನ್ನು ಐ.ಟಿ. ಸಲಹೆಗಾರರ ಕಚೇರಿ, 16ನೇ ಅಡ್ಡರಸ್ತೆ, ಮಲ್ಲೇಶ್ವರಂ, ಐಪಿಪಿ ದತ್ತಾಂಶ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು – 560 003 ಇಲ್ಲಿ ದಿನಾಂಕ **17–04–2021**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು.
6. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ದಿನಾಂಕ **21–04–2021** ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸಬೇಕು ಹಾಗೂ ತಾಂತ್ರಿಕ ಬಿಡ್‌ಗಳನ್ನು ದಿನಾಂಕ **23–04–2021** ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು.
7. ಅರ್ಹರಾದ ಬಿಡ್ಡುದಾರರುಗಳಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ **26–04–2021**ರ ಬೆಳಿಗ್ಗೆ **11:00** ಗಂಟೆಗೆ.

ಹೆಚ್ಚಿನ ಮಾಹಿತಿಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೋಡಿಕೊಳ್ಳಬಹುದು.

ಟೆಂಡರ್‌ನ ಹೆಸರು	ಇಎಂಡಿ (₹.ಗಳಲ್ಲಿ)	ಟೆಂಡರ್ ಪ್ರಕ್ರಿಯೆ ಶುಲ್ಕ (₹.)
ಬೃ.ಬೆಂ.ಮ.ಪಾಲಿಕೆಗೆ ವಿಡಿಯೋ ಕಾನ್ಫರೆನ್ಸ್ ಸೊಲ್ಯೂಷನ್ ಒದಗಿಸುವುದು ಮತ್ತು ಅಳವಡಿಸುವುದು	ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/ 2020, ದಿನಾಂಕ: 22.12.2020ರಂತೆ ಇಎಂಡಿ ಪಾವತಿಗೆ ವಿನಾಯಿತಿ ನೀಡಲಾಗಿದೆ. ರೂ.20ರ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರವನ್ನು ನೋಟರಿ ಮಾಡಿಸಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು.	**ಇ–ಪೋರ್ಟಲ್ ಪ್ರಕಾರ**

1. ಆಸಕ್ತ ಬಿಡ್ಡುದಾರರುಗಳು ಟೆಂಡರಿನಲ್ಲಿ ಸ್ಪರ್ಧಿಸುವ ಮುನ್ನ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. 2. ಆನ್‌ಲೈನ್ ಬಿಡ್ ಸಲ್ಲಿಸುವ ಮುನ್ನ, ಬಿಡ್ಡುದಾರರುಗಳು ಎಲ್ಲಾ ಸಂಬಂಧಿತ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಲಗತ್ತಿಸಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. 3. ಬಿಡ್ ಸಲ್ಲಿಸಲು ಬೇಕಾಗಿರುವ ಎಲ್ಲಾ ಸಂಬಂಧಿತ ಮಾಹಿತಿಗಳನ್ನು ಭರ್ತಿ ಮಾಡಿ ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. 4. ನೋಂದಣಿ & ಇ–ಪಾವತಿಗಳ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22341090, 22373788ಗೆ ಸಂಪರ್ಕಿಸಿರಿ. 5. ಈ ಟೆಂಡರ್ ಪ್ರಕಟಣೆಯನ್ನು ಬೃಬೆಂಮಪಾಲಿಕೆ ಅಧಿಕೃತ ಅಂತರ್ಜಾಲ ತಾಣ www.bbmp.gov. in ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಐಟಿ ಸಲಹೆಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ–2, ಘನ ತ್ಯಾಜ್ಯ ನಿರ್ವಹಣೆ–1, ದಾಸಪ್ಪ ಆಸ್ಪತ್ರೆ ಕಟ್ಟಡದ ಹಿಂಭಾಗ, ಬೆಂಗಳೂರು–560 002.

ಸಂಖ್ಯೆ: ಕಾಪಾಅ–2/ಘತ್ಯಾನಿ/ಟೆಂಡರ್/01/2019–20 2ನೇ ಕರೆ ದಿನಾಂಕ: 09.04.2021

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಬಿ) (2ನೇ ಕರೆ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಟೆಂಡರ್)

ಕಾರ್ಯಪಾಲಕ ಅಭಿಯಂತರರು–2, ಘನ ತ್ಯಾಜ್ಯ ನಿರ್ವಹಣೆ, ಇವರು ಅರ್ಹ ಬಿಡ್ಡುದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ಹೆಸರು	ಬಿಡ್‌ಗಿಟ್ಟ ಅಂದಾಜು ಮೊತ್ತ (₹.ಗಳಲ್ಲಿ)
ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ (35) ಅರಮನೆ ನಗರ, ವಾರ್ಡ್ ಸಂಖ್ಯೆ (94) ಗಾಂಧಿನಗರ, ವಾರ್ಡ್ ಸಂಖ್ಯೆ (139) ಕೃ.ರಾ. ಮಾರುಕಟ್ಟೆ, ವಾರ್ಡ್ ಸಂಖ್ಯೆ (168) ಪಟ್ಟಾಭಿರಾಮನಗರ, ವಾರ್ಡ್ ಸಂಖ್ಯೆ (112) ದೊಮ್ಮಲೂರು, ವಾರ್ಡ್ ಸಂಖ್ಯೆ (149) ವರ್ತೂರು ಮತ್ತು ವಾರ್ಡ್ ಸಂಖ್ಯೆ (198) ಹೆಮ್ಮಿಗೆಪುರದಲ್ಲಿ ಆರ್ಗ್ಯಾನಿಕ್ ಮುನಿಸಿಪಲ್ ಘನ ತ್ಯಾಜ್ಯ ಸಂಸ್ಕರಣೆಗಳ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ 5 ಟಿಪಿಡಿ ಸಾಮರ್ಥ್ಯದ 7 ಬಯೋ–ಮೆಥಾನೆಷನ್ ಘಟಕಗಳ ಉನ್ನತೀಕರಣ.	4,50,00,000
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃ.ಬೆಂ.ಮ.ಪಾಲಿಕೆ) ಆಯ್ದ ಪ್ರದೇಶಗಳಲ್ಲಿ 15 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ–ಯೊಂದಿಗೆ 5 ಟನ್‌ಗಳ ಸಾಮರ್ಥ್ಯವುಳ್ಳ 4 ಹೊಸ ಸಣ್ಣ ಬಯೋ–ಮೆಥಾನೆಷನ್ ಘಟಕಗಳನ್ನು ನಿರ್ಮಾಣ ಮಾಡುವುದು.	10,00,00,000

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **15.04.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **03.05.2021**ರ ಸಂಜೆ **4:00** ಗಂಟೆಯವರೆಗೆ. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.04.2021**ರ ಮಧ್ಯಾಹ್ನ **3:00** ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **23.04.2021**ರ ಸಂಜೆ **4:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಘನ ತ್ಯಾಜ್ಯ ನಿರ್ವಹಣೆ, ಅನೆಕ್ಸ್–2 ಕಟ್ಟಡ, ಕೊಠಡಿ ಸಂ.301, 3ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹ ರಾಜ ಚೌಕ, ಬೆಂಗಳೂರು–02 ಇಲ್ಲಿ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **05.05.2021**ರಂದು ಸಂಜೆ **4:00** ಗಂಟೆಯ ನಂತರ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ಡುದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–2, ಘನ ತ್ಯಾಜ್ಯ ನಿರ್ವಹಣೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ.

ದೂರವಾಣಿ ಸಂಖ್ಯೆ: 08338–275101 ಇ–ಮೇಲ್ : ee.rdws.ckd@gmail.com

ಸಂಖ್ಯೆ: ಗ್ರಾಕು.ನೀ&ನೈ/ಚಿಕ್ಕೋಡಿ/ಪಿಬಿ/ಕು.ನೀ.ಸ.ಯೋ/ಕೆಡಬ್ಲ್ಯು–1/ಟೆಂಡರ್/ಟೆಂಡರ್–05–4/2021–22/48 ದಿನಾಂಕ: 03.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 054/2020–21

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಜಲ ಜೀವನ್ ಮಿಷನ್ ಅಡಿಯಲ್ಲಿ ಗ್ರಾಮಗಳ ಕ್ರಿಯಾ ಯೋಜನೆಗಳು (VAP), ಮಾಹಿತಿ ಹಾಗೂ ಸಂವಹನ (IEC) ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಚಟುವಟಿಕೆಗಳನ್ನು ನಿರ್ವಹಿಸಲು ನುರಿತ ಅನುಷ್ಠಾನ ಬೆಂಬಲ ಸಂಸ್ಥೆಗಳನ್ನು (ISAs) ನೇಮಿಸುವ ಸಲುವಾಗಿ ಎಂಪ್ಯಾನೆಲ್‌ಮೆಂಟ್ ಮಾಡಿಕೊಳ್ಳಸಲುವಾಗಿ ಸೇವಾ ಟೆಂಡರ್ ಡಾಕ್ಯುಮೆಂಟ್ KC ನಿಬಂಧನೆಗೊಳಪಟ್ಟಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಒದಗಿಸಬೇಕಾಗಿರುವ ಸೇವೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಕಾಲಾವಧಿ	ಅರ್ಹತೆ ಸಂಸ್ಥೆಗಳು
1	ಜಲ ಜೀವನ್ ಮಿಷನ್ ಅಡಿಯಲ್ಲಿ ಗ್ರಾಮಗಳ ಕ್ರಿಯಾ ಯೋಜನೆಗಳು (VAP), ಮಾಹಿತಿ ಹಾಗೂ ಸಂವಹನ (IEC) ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಚಟುವಟಿಕೆಗಳನ್ನು ನಿರ್ವಹಿಸಲು ನುರಿತ ಅನುಷ್ಠಾನ ಬೆಂಬಲ ಸಂಸ್ಥೆಗಳನ್ನು (ISAs) ಒದಗಿಸುವುದು. (RDW&S/DIV/CKD/202021/INDENT05/CALL-5)	109.18	1 ವರ್ಷ	Societies Act 1860 Public Trust Act 1982/ under Section 8 of companies Act or Experienced Self Helf Groups witin districts ರಡಿಯಲ್ಲಿ ನೊಂದಾಯಿತ ಸಂಸ್ಥೆಗಳು

01	ಆನ್ ಲೈನ್ ನಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಅಪ್ ಲೋಡ್ ಮಡುವ ದಿನಾಂಕ	: 04–04–2021 ರಂದು ಬೆಳಿಗ್ಗೆ 11:00 ಗಂಟೆ ನಂತರ
02	ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ&ನೈ ವಿಭಾಗ ಚಿಕ್ಕೋಡಿ ಇವರ ಕಚೇರಿಯಲ್ಲಿ	: 08–04–2021 ರಂದು ಬೆಳಿಗ್ಗೆ 11:00 ಗಂಟೆ ವರೆಗೆ
03	ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	: 15–04–2021 ರಂದು ಸಂಜೆ 05:00 ಗಂಟೆ ವರೆಗೆ
04	ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	: 16–04–2021 ರಂದು ಸಂಜೆ 05:30 ಗಂಟೆ ನಂತರ
05	ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	: ತಾಂತ್ರಿಕ ಬಿಡ್ ಅನುಮೋದಿಸಿದ ನಂತರ

ಸಹಿ/–
ಕಾರ್ಯನಿರ್ವಾಹ ಅಭಿಯಂತರರು
ಗ್ರಾ.ಕು.ನೀ.&ನೈ. ವಿಭಾಗ. ಚಿಕ್ಕೋಡಿ.

DIPO/BGM/RO No: 20 / 2021-22

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ–585101

ದೂರವಾಣಿ ಸಂಖ್ಯೆ: 08472–278634/256944, E-mail: eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ತಾ .ಶಾ /2020–21/57 ದಿನಾಂಕ–09.04.2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : ಚಿತ್ತಾಪೂರ ತಾಲೂಕಿನ–01 (Indent No-33304 call-2) ಚಿಂಚೋಳಿ ತಾಲೂಕಿನ–02 (Indent No-31832 call-3 & 27498 call-2). 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : 61,18,695/–, ಗರಿಷ್ಠ: 75,69,768/–, 3) ಲೆಕ್ಕ ಶಿರ್ಷಿಕೆ : Jal Jeevan Mission 2020-21. 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : 08–04–2021 ರಿಂದ 22–04–2021. 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರ್‌ಮೆಂಟ್ ಪ್ರಕಾರ. 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 22–04–2021 ಸಾಯಂಕಾಲ 4:00 ಗಂಟೆವರೆಗೆ. 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 23–04–2021 ಸಾಯಂಕಾಲ 4:01 ಗಂಟೆವರೆಗೆ. 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 26–04–2021 ಬೆ. 11.00 ಗಂಟೆಯ ನಂತರ. 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ ಕುಸನೂರ ರೋಡ, ಕಲಬುರಗಿ 11) ಅಂತರಜಾಲ ತಾಣದ ವಿಳಾಸ : www.eproc. karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/49/ಎಂ.ಸಿ&ಎ/2021–22

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಪ್ರತಿಕ್ರಿಯಿಸುವ ಮುನ್ನ ಯೋಚಿಸಿ. ವ್ಯಯಿಸುವ ಮೊದಲು ಗಳಿಸಿ. ಟೀಕಿಸುವ ಮುನ್ನ ಕಾದು ನೋಡಿ. ಕೈಬಿಡುವುದಕ್ಕಿಂತ ಮೊದಲು ಪ್ರಯತ್ನಿಸಿ.

–ಅರ್ನೆಸ್ಟ್ ಹೆಮಿಂಗ್‌ವೇ

ಸಂದೇಹಾಸ್ಪದ ನಡವಳಿಕೆ: ಚುನಾವಣಾ ಆಯೋಗದ ವಿಶ್ವಾಸಾರ್ಹತೆ ಪಾತಾಳಕ್ಕೆ

ಈ ಹಿಂದಿನ ಕೆಲವು ಚುನಾವಣೆಗಳಲ್ಲಿ ಆದಂತೆಯೇ ತಮಿಳುನಾಡು, ಪುದುಚೇರಿ, ಕೇರಳ, ಪಶ್ಚಿಮ ಬಂಗಾಳ, ಅಸ್ಸಾಂ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿಯೂ ಚುನಾವಣಾ ಆಯೋಗದ ನಡವಳಿಕೆ ಪ್ರಶ್ನಾರ್ಹವಾಗಿದೆ. ಸಾಂವಿಧಾನಿಕ ಮತ್ತು ಸ್ವಾಯತ್ತ ಸಂಸ್ಥೆಯ ವಿಶ್ವಾಸಾರ್ಹತೆಗೆ ಪೆಟ್ಟು ಬಿದ್ದಿದೆ. ಈ ಬಾರಿಯ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಕೆಲವು ರಾಜ್ಯಗಳಲ್ಲಿ ಕೋಮು ಧ್ರುವೀಕರಣವನ್ನೇ ಮುಖ್ಯ ಕಾರ್ಯಸೂಚಿ ಆಗಿಸಿಕೊಂಡದ್ದು ಹೌದು. 'ಸ್ವಾಮಿಯೇ ಶರಣಂ ಅಯ್ಯಪ್ಪ' ಎಂದು ಚುನಾವಣಾ ಪ್ರಚಾರ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಬಾರಿ ಪಠಿಸಿದ್ದಾರೆ. ಅವರ ನೇತೃತ್ವದ ಬಿಜೆಪಿಯು ಕೇರಳದಲ್ಲಿ ಶಬರಿಮಲೆಗೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶದ ವಿಚಾರವನ್ನೇ ಇರಿಸಿಕೊಂಡು ಪ್ರಚಾರ ನಡೆಸಿದೆ. ಪಶ್ಚಿಮ ಬಂಗಾಳದಲ್ಲಿ 'ಜೈ ಶ್ರೀರಾಮ್' ಘೋಷಣೆ ಚುನಾವಣಾ ಪ್ರಚಾರದ ಉದ್ದಕ್ಕೂ ಮೊಳಗಿದೆ. ಮಾದರಿ ನೀತಿ ಸಂಹಿತೆ ಉಲ್ಲಂಘನೆಯ ಆರೋಪದಲ್ಲಿ ಈ ಯಾರಿಗೂ ಆಯೋಗವು ನೋಟಿಸ್ ಕೊಟ್ಟಿಲ್ಲ. ಆದರೆ, 'ಮುಸ್ಲಿಮರ ಮತ ವಿವಿಧ ಪಕ್ಷಗಳಿಗೆ ಹಂಚಿ ಹೋಗಬಾರದು' ಎಂದು ಹೇಳಿದ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರಿಗೆ ನೋಟಿಸ್ ನೀಡಲಾಗಿದೆ. ವಿರೋಧ ಪಕ್ಷದ ಮುಖಂಡರೊಬ್ಬರಿಗೆ ಬೆದರಿಕೆ ಒಡ್ಡಿದ ಆರೋಪದಲ್ಲಿ ಬಿಜೆಪಿ ಮುಖಂಡ ಹಿಮಂತ್ ಬಿಸ್ವ ಶರ್ಮಾ ಅವರಿಗೆ ನೀಡಿದ್ದ ಶಿಕ್ಷೆಯಲ್ಲಿ ವಿನಾಯಿತಿ ಕೊಡಲಾಗಿದೆ. ಆದರೆ, ಅದೇ ರೀತಿ ಶಿಕ್ಷೆಗೆ ಒಳಗಾಗಿದ್ದ ಡಿಎಂಕೆಯ ಎ.ರಾಜಾ ಅವರಿಗೆ ವಿನಾಯಿತಿ ಸಿಕ್ಕಿಲ್ಲ. ಇತ್ತೀಚಿನ ವರ್ಷಗಳಲ್ಲಿ ಪ್ರತೀ ಬಾರಿ ಯಾವುದಾದರೂ ಚುನಾವಣೆ ನಡೆದಾಗ ಮತಯಂತ್ರಗಳು ಚರಂಡಿಯಲ್ಲಿಯೋ ಅಥವಾ ಇನ್ನೆಲ್ಲೋ ಸಿಗುವುದು ಸಾಮಾನ್ಯವಾಗಿದೆ. ಈ ಬಾರಿ ಬಿಜೆಪಿ ಅಭ್ಯರ್ಥಿಯೊಬ್ಬರ ಹೆಂಡತಿಯ ಕಾರಿನಲ್ಲಿ ಸಾಗಿಸಲಾಯಿತು. ಇಂತಹ ಘಟನೆಗಳು ಮತಯಂತ್ರದ ಮೇಲೆ ಜನರು ನಂಬಿಕೆಯನ್ನೇ ಕಳೆದುಕೊಳ್ಳುವಂತೆ ಮಾಡುತ್ತವೆ. ಚುನಾವಣೆ ಅರ್ಥಹೀನ ಎನಿಸುತ್ತದೆ. ಆಯೋಗವು ನಗೆಪಾಟಲಿಗೆ ಈಡಾಗುತ್ತದೆ. 'ಮರಾಠಾ ಅಭಿವೃದ್ಧಿ ನಿಗಮಕ್ಕೆ ಮಂಗಳವಾರವಷ್ಟೇ (ಏ. 6) ₹ 50 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ' ಎಂದು ಕರ್ನಾಟಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಮರಾಠಾ ಸಮುದಾಯದ ಜನರು ಗಣನೀಯ ಪ್ರಮಾಣದಲ್ಲಿರುವ ಬೆಳಗಾವಿ ಲೋಕಸಭೆ, ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭೆ ಕ್ಷೇತ್ರಗಳ ಉಪಚುನಾವಣಾ ಪ್ರಕ್ರಿಯೆಯ ನಡುವೆಯೇ ಯಡಿಯೂರಪ್ಪ ಹೀಗೆ ಹೇಳಿದ್ದಾರೆ. ಆದರೆ, ಇದು ನೀತಿ ಸಂಹಿತೆಯ ಉಲ್ಲಂಘನೆ ಎಂದು ಆಯೋಗಕ್ಕೆ ಇನ್ನೂ ಅನಿಸಿಲ್ಲ.

ಚುನಾವಣಾ ಆಯೋಗವು ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಬೇಕು; ಮಾತ್ರವಲ್ಲ, ಅದು ಪ್ರತೀ ಹಂತದಲ್ಲಿ ಜನರಿಗೆ ಮನವರಿಕೆಯೂ ಆಗಬೇಕು

ಆಯೋಗವು ಆಡಳಿತ ಪಕ್ಷದತ್ತ ವಾಲಿದೆ ಎಂಬ ಆರೋಪಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲದಂತಹ ಘಟನೆಗಳು ಚುನಾವಣಾ ಪ್ರಕ್ರಿಯೆಯಲ್ಲಿ ನಡೆದಿವೆ. ಚುನಾವಣೆ ಗೆದ್ದು ಅಧಿಕಾರಕ್ಕೆ ಏರುವುದು ಬಿಟ್ಟು ಬೇರೆ ಯಾವ ನೈತಿಕತೆಯೂ ಇಲ್ಲ ಎಂಬ ನೆಲೆಗೆ ರಾಜಕೀಯ ಪಕ್ಷಗಳು ಬಂದಿರುವ ಈ ಸಂದರ್ಭದಲ್ಲಿ ಆಯೋಗದ ಹೊಣೆಗಾರಿಕೆ ಇನ್ನೂ ಹೆಚ್ಚು. ಆದರೆ, ಆ ಹೊಣೆಗಾರಿಕೆಯ ಅರಿವು ಆಯೋಗಕ್ಕೆ ಇದೆಯೇ ಎಂಬ ಅನುಮಾನ ಜನರಲ್ಲಿ ಇದೆ. ಕೇರಳ ವಿಧಾನಸಭೆಯಿಂದ ರಾಜ್ಯಸಭೆಯ ಮೂರು ಸ್ಥಾನಗಳ ಚುನಾವಣೆ ವಿಚಾರದಲ್ಲಿ ಆಯೋಗವು ನಡೆದುಕೊಂಡ ರೀತಿ ಕೂಡ ಇದಕ್ಕೆ ಪುಷ್ಟಿ ನೀಡುತ್ತದೆ. ದಿನಾಂಕ ಘೋಷಿಸಿದ ಬಳಿಕ ಕೇಂದ್ರದಿಂದ ಪತ್ರ ಬಂತು ಎಂಬ ಕಾರಣಕ್ಕೆ ಚುನಾವಣಾ ಪ್ರಕ್ರಿಯೆಯನ್ನು ಆಯೋಗವು ಅಮಾನತಿನಲ್ಲಿ ಇರಿಸಿದ ಕ್ರಮವು ಕೇರಳ ಹೈಕೋರ್ಟ್ ಮೆಟ್ಟಿಲೇರಿದೆ. ಜಗತ್ತಿನಲ್ಲಿ ಈಗ ಅಸ್ತಿತ್ವದಲ್ಲಿರುವ ಆಡಳಿತ ವ್ಯವಸ್ಥೆಗಳಲ್ಲಿ ಪ್ರಜಾಪ್ರಭುತ್ವವೇ ಅತ್ಯುತ್ತಮ. ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಾಗಿ ಕೆಲಸ ಮಾಡಬೇಕೆಂದರೆ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಡೆಯಬೇಕು. ಚುನಾವಣೆಯು ನ್ಯಾಯಸಮ್ಮತವಾಗಿ ನಡೆಯದಿದ್ದರೆ, ಪ್ರಜಾಪ್ರಭುತ್ವವು ಆ ಮುಖವಾಡ ಹಾಕಿರುವ ನಿರಂಕುಶಾಧಿಕಾರವಾಗುತ್ತದೆ. ಹಾಗೆ ಆಗಬಾರದು ಎಂಬ ಕಾರಣಕ್ಕಾಗಿಯೇ ಚುನಾವಣಾ ಆಯೋಗ ಎಂಬ ಪ್ರತ್ಯೇಕ ಸಾಂವಿಧಾನಿಕ, ಸ್ವಾಯತ್ತ ಸಂಸ್ಥೆಯನ್ನು ರೂಪಿಸಲಾಗಿದೆ. ಈ ಸಂಸ್ಥೆಗೆ ಇರುವ ಅಧಿಕಾರ ಏನು ಮತ್ತು ಅದನ್ನು ಬಳಸಿಕೊಂಡು ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ಹೇಗೆ ನಡೆಸಬಹುದು ಎಂಬುದನ್ನು ಈ ಹಿಂದೆ ಇದ್ದ ಕೆಲವು ಮುಖ್ಯ ಚುನಾವಣಾ ಆಯುಕ್ತರು ತೋರಿಸಿಕೊಟ್ಟಿದ್ದಾರೆ. ಈಗಿನ ಚುನಾವಣಾ ಆಯೋಗವು ಇವನ್ನೆಲ್ಲ ಮರೆಯಬಾರದು. ಆಯೋಗವು ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಬೇಕು; ಮಾತ್ರವಲ್ಲ, ಅದು ಪ್ರತೀ ಹಂತದಲ್ಲಿ ಜನರಿಗೆ ಮನವರಿಕೆಯೂ ಆಗಬೇಕು. ಆದರೆ, ಹತ್ತು ಹಲವು ಅನುಮಾನಗಳಿಗೆ ಗುರಿಯಾಗಿರುವ ಈಗಿನ ಆಯೋಗದಿಂದ ಇದನ್ನು ನಿರೀಕ್ಷಿಸುವುದು ಸಾಧ್ಯವೇ?

ದಿನದ ಟ್ವೀಟ್

ಮಹಾ ಉತ್ಸವ–ಮಹಾ ಎಚ್ಚರ!

ಪ್ರಧಾನಿ ನರೇಂದ್ರ ಮೋದಿ ಅವರು 'ಮೆಗಾ ಲಸಿಕೆ ಉತ್ಸವ'ಕ್ಕೆ ಕರೆ ನೀಡಿದ್ದಾರೆ. ಅವರ ನೇತೃತ್ವದ ಸರ್ಕಾರವು ಬಹುಶಃ ಈ ಉತ್ಸವವನ್ನು ಹರಿದ್ವಾರದ ಮಹಾ ಕುಂಭಮೇಳದಿಂದ ಆರಂಭಿಸಬಹುದು. ಪವಿತ್ರ ಸ್ನಾನಕ್ಕಾಗಿ ನಿಗದಿತ ಶುಭ ದಿನಗಳಂದು ಮುಂದಿನ ವಾರ ಲಕ್ಷಾಂತರ ಜನ ಅಲ್ಲಿಗೆ ಬರುತ್ತಾರೆ!

ಎಂ.ಕೆ. ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಬುಧವಾರ, 10-4-1996

• ಬೆಳಗಾವಿ, ನಲಗೊಂಡ ಚುನಾವಣೆ ಮುಂದಕ್ಕೆ

ನವದೆಹಲಿ, ಏ. 9– ಚುನಾವಣಾ ಇತಿಹಾಸದಲ್ಲೇ ಅಪರೂಪವೆನ್ನಲಾದ, ಅಭ್ಯರ್ಥಿಗಳ ಸಂಖ್ಯೆ ಅಧಿಕವಾಗಿರುವ ಕರ್ನಾಟಕದ ಬೆಳಗಾವಿ, ಆಂಧ್ರ ಪ್ರದೇಶದ ನಲಗೊಂಡ ಲೋಕಸಭಾ ಕ್ಷೇತ್ರಗಳು ಮತ್ತು ತಮಿಳುನಾಡಿನ ಮಡುಕುರುಚಿ ವಿಧಾನಸಭೆ ಕ್ಷೇತ್ರದ ಚುನಾವಣೆಯನ್ನು ಒಂದು ತಿಂಗಳವರೆಗೆ ಮುಂದೂಡುವ ನಿರ್ಧಾರವನ್ನು ಚುನಾವಣಾ ಆಯೋಗ ಇಂದು ಕೈಗೊಂಡಿತು.

ಅಭ್ಯರ್ಥಿಗಳು ಅತಿ ಹೆಚ್ಚಾಗಿರುವುದರಿಂದ ಈ ಮೂರು ಕ್ಷೇತ್ರಗಳಲ್ಲಿ ಮುಕ್ತ ಹಾಗೂ ನ್ಯಾಯಯುತ ಚುನಾವಣೆ ನಡೆಸಲು ಉಂಟಾಗುವ ಆಡಳಿತಾತ್ಮಕ ಮತ್ತಿತರ ತೊಂದರೆಗಳ ಬಗ್ಗೆ ಅವಲೋಕಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಚುನಾವಣಾ ಆಯುಕ್ತ ಜಿ.ವಿ.ಜಿ. ಕೃಷ್ಣಮೂರ್ತಿ ಸುದ್ದಿಗಾರರಿಗೆ ತಿಳಿಸಿದರು.

• ರಾಜ್ಯಸಭೆ: ಲೀಲಾದೇವಿ ಉಭಯಸಂಕಟ

ಬೆಂಗಳೂರು, ಏ. 9– ಜನತಾದಳದ ಹಿರಿಯ ಮುಖಂಡ, ಆಂಧ್ರ ಪ್ರದೇಶದ ಜೈಪಾಲ್ ರೆಡ್ಡಿ ಅವರನ್ನು ಕರ್ನಾಟಕದಿಂದ ರಾಜ್ಯಸಭೆಗೆ ಕಳುಹಿಸಲು ತೆರೆಮರೆಯಲ್ಲಿ ಸನ್ನಾಹ ನಡೆದಿದೆ. ಅವರಿಗೆ ಅವಕಾಶ ಕಲ್ಪಿಸಲು ಇತ್ತೀಚೆಗಷ್ಟೇ ರಾಜ್ಯಸಭೆಗೆ ಆಯ್ಕೆಯಾಗಿರುವ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರಿಂದ ರಾಜೀನಾಮೆ ಕೊಡಿಸಲು ದಳದ ಕೆಲವು ಮುಖಂಡರು ತೀವ್ರ ಪ್ರಯತ್ನ ನಡೆಸಿದ್ದಾರೆ.

ಪಕ್ಷದ ಮುಖಂಡರ ಒತ್ತಡಕ್ಕೆ ಮಣಿದು ಒಲ್ಲದ ಮನಸ್ಸಿನಿಂದಲೇ ರಾಜ್ಯಸಭೆಗೆ ಸ್ಪರ್ಧಿಸಿ ಆಯ್ಕೆಯಾದ ಲೀಲಾದೇವಿ ಪ್ರಸಾದ್ ಅವರು, ಸಂಸತ್ ಸದಸ್ಯೆಯಾಗಿ ದೆಹಲಿಗೆ ಹೋಗಬೇಕೋ ಅಥವಾ ಮಂತ್ರಿಯಾಗಿ ರಾಜ್ಯದಲ್ಲೇ ಉಳಿಯಬೇಕೋ ಎಂಬ ತೀರ್ಮಾನವನ್ನು ಇನ್ನೂ ಕೈಗೊಂಡಿಲ್ಲ.

50 ವರ್ಷಗಳ ಹಿಂದೆ

ಶನಿವಾರ, 10-4-1971

• ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ ಸರ್ಕಾರ ಇಲ್ಲ

ದೆಹಲಿ, ಏ. 9– ಮೈಸೂರು ರಾಜ್ಯದಲ್ಲಿ ಸರ್ಕಾರ ರಚನೆಗೆ ಯಾವ ಯತ್ನವನ್ನೂ ನಡೆಸಬಾರದೆಂದು ಆಡಳಿತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ.ಸಂಜೀವಯ್ಯನವರು ಇಂದು ರಾಜ್ಯ ಶಾಖೆಗೆ ಸೂಚನೆ ನೀಡಿದರು.

ರಾಜ್ಯದಲ್ಲಿ ಸರ್ಕಾರ ರಚಿಸಲು ಹೈಕಮಾಂಡ್ ವಿರೋಧಕ್ಕೆ ಕಾರಣಗಳೇನೆಂಬುದನ್ನು ಶ್ರೀ ಉಮಾಶಂಕರ್ ದೀಕ್ಷಿತ್‌ರವರು ಶ್ರೀ ದೇವರಾಜ ಅರಸ್ ಮತ್ತು ಶ್ರೀ ಎಚ್. ಸಿದ್ಧವೀರಪ್ಪನವರಿಗೆ ತಿಳಿಸಿದ್ದರು. ರಾಜ್ಯದಲ್ಲಿ ಮಂತ್ರಿಮಂಡಲ ರಚನೆಗೆ ಪಕ್ಷದಲ್ಲಿ ಸರ್ವಾನುಮತವಿಲ್ಲ ಎಂದು ಹೈಕಮಾಂಡ್ ಭಾವಿಸಿದೆಯೆಂದು ವರದಿಯಾಗಿದೆ.

• ಬಾಂಗ್ಲಾದೇಶದ ಅರ್ಧ ಭಾಗ ವಿಮುಕ್ತಿ

ಖುಷ್ತಿಯಾ, ಏ. 9– ದೇಶಪ್ರೇಮ ಮತ್ತು ಉತ್ಸಾಹಗಳೇ ಪ್ರಮುಖ ಆಯುಧಗಳಾಗಿ, ಎರಡು ವಾರಗಳ ಹಿಂದೆ ಸ್ವಾತಂತ್ರ್ಯ ಸಮರವನ್ನಾರಂಭಿಸಿದ ಪೂರ್ವ ಬಂಗಾಳದ ಜನರು ಇಂದು ತಮ್ಮ ಪ್ರಾಂತ್ಯದ ಅರ್ಧಭಾಗವನ್ನು ವಶಪಡಿಸಿಕೊಂಡಿರುವಂತೆ ಕಂಡುಬರುತ್ತಿದೆ.

ಕನಿಷ್ಠ ಪಕ್ಷ ಅಲ್ಲಿಯ ಎರಡೂವರೆ ಕೋಟಿ ಜನರ (ಮೂರನೇ ಒಂದು ಭಾಗದಷ್ಟು) ಮಟ್ಟಿಗಾದರೂ ಸ್ವತಂತ್ರ ಬಾಂಗ್ಲಾದೇಶದ ಕನಸು ನನಸಾಗಿದೆ.

ವಾಯುಪಡೆಯ ಈ 'ಹಿರಿಯ ನಾಗರಿಕ'ನ ಸೇವೆಯ ನಿವೃತ್ತಿ ಸಾಧ್ಯವಾಗುತ್ತಿಲ್ಲ ಏಕೆ?

ಮಿಗ್: ಮಹತ್ವ, ವೈಫಲ್ಯ, ಸುರಕ್ಷತೆ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಸುಮಾರು 60 ವರ್ಷಗಳಿಂದ, ಪ್ರತೀ ಎರಡು ತಿಂಗಳಿಗೆ ಸರಾಸರಿ ಒಂದರಂತೆ ಹಾರಾಟದಲ್ಲಿ ತೊಂದರೆಯುಂಟಾಗಿ ನೆಲಕ್ಕುರುಳುತ್ತಿರುವ ಭಾರತೀಯ ವಾಯುಸೇನೆಯ ಯುದ್ಧವಿಮಾನ ಮಿಗ್-21, ವಾಯುಸೇನೆ ಮತ್ತು ರಕ್ಷಣಾ ಸಚಿವಾಲಯ ಎರಡಕ್ಕೂ ಬಹು ದೊಡ್ಡ ತಲೆನೋವಿನ ಸಂಗತಿ.

ಈ ಅಪಘಾತಗಳಲ್ಲಿ ತೀರಾ ಇತ್ತೀಚಿನದು ಮಾರ್ಚ್ 17ರಂದು ಗ್ವಾಲಿಯರ್ ವಾಯುನೆಲೆಯಿಂದ ಆಕಾಶಕ್ಕೇರಿ, ಕೆಲವೇ ನಿಮಿಷಗಳಲ್ಲಿ ನೆಲಕ್ಕೆ ಬಿದ್ದ ಮಿಗ್-21 ಬೈಸನ್ ಯುದ್ಧವಿಮಾನ. ಈ ಅಪಘಾತದಲ್ಲಿ, ಮುಂದಿನ ಕೆಲವೇ ದಿನಗಳಲ್ಲಿ ದೇಶದ ಮೊತ್ತಮೊದಲ ರಫೇಲ್ ಸ್ಕ್ವಾಡ್ರನ್‌ನ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಲಿದ್ದ ಗ್ರೂಪ್ ಕ್ಯಾಪ್ಟನ್ ಅಶೀಶ್ ಗುಪ್ತ ಸಾವಿಗೀಡಾದರು. ಇದು ಅಪಘಾತದಲ್ಲಿ ನಾಶವಾದ 400ನೆಯ ಮಿಗ್-21 ವಿಮಾನವಾಗಿತ್ತು. ಅದರ ಹಿಂದಿನ ಅಪಘಾತ ಜನವರಿ 5ರಂದು, ರಾಜಸ್ಥಾನದ ಸುರತ್‌ಗಡ ಬಳಿ ಸಂಭವಿಸಿತ್ತು. ಈ 60 ವರ್ಷಗಳ ಅವಧಿಯಲ್ಲಿ ಮಿಗ್ ಯುದ್ಧ ವಿಮಾನ ವನ್ನು ಹಾರಿಸುತ್ತಿದ್ದ 200 ಪೈಲಟ್‌ಗಳು ಮತ್ತು 40 ಸಾರ್ವಜನಿಕರು ಮೃತಪಟ್ಟಿದ್ದಾರೆ. ಮಿಗ್-21ರ ಈ ಅನಾಹುತಗಳ ಸರಮಾಲೆಯಿಂದಲೇ ಅದಕ್ಕೆ 'ಹಾರಾಡುವ ಶವಪೆಟ್ಟಿಗೆ', 'ವಿಧವೆಯರ ಸೃಷ್ಟಿಕರ್ತ' ಎಂಬ ಅಡ್ಡ ಹೆಸರುಗಳಿವೆ.

ಮಿಗ್-21, ಶತ್ರು ವಿಮಾನಗಳನ್ನು ಆಗಸದಲ್ಲಿಯೇ ಅಡ್ಡಗಟ್ಟಿ ಎದುರಿಸುವ, ಒಂದು ಎಂಜಿನ್, ಒಬ್ಬ ಪೈಲಟ್ ಇರುವ ಸೂಪರ್‌ಸಾನಿಕ್ ಜೆಟ್ ಯುದ್ಧ ವಿಮಾನ. ಸೋವಿಯತ್ ಒಕ್ಕೂಟದ 'ಮಿಕಯಾನ್- ಗುರೆವಿಚ್' ವಿಮಾನ ವಿನ್ಯಾಸ ಸಂಸ್ಥೆಯಲ್ಲಿ ವಿನ್ಯಾಸಗೊಂಡು, ಸಿದ್ಧವಾಗಿ, ಪ್ರಪಂಚದ ನಾಲ್ಕು ಖಂಡಗಳ 60 ದೇಶಗಳ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿದ ನಂತರ ಇಂದಿಗೂ 14 ದೇಶಗಳ ವಾಯುಸೇನೆಯಲ್ಲಿ ಪ್ರಬಲ ಸ್ಥಾನದಲ್ಲಿದೆ.

ಎರಡನೆಯ ಮಹಾಯುದ್ಧದ ನಂತರ, ಪ್ರಪಂಚದ ಯುದ್ಧವಿಮಾನಗಳ ಇತಿಹಾಸದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಉತ್ಪಾದನೆಯಾಗಿರುವ ಯುದ್ಧವಿಮಾನವೆಂಬ ಹೆಗ್ಗಳಿಕೆ ಇದಕ್ಕಿದೆ. ಪ್ರಪಂಚದ ಬಹುತೇಕ ದೇಶಗಳ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುವ ಮಿಗ್-21 ಸುರಕ್ಷತೆಯ ದೃಷ್ಟಿಯಿಂದ ಸಮಾಧಾನಕರವಾಗಿಲ್ಲ ಎಂಬುದು ವೈಮಾನಿಕ ತಜ್ಞರ ಅಭಿಪ್ರಾಯ. ಅವುಗಳ ಸುರಕ್ಷತೆಯ ಬಗ್ಗೆ ಅನೇಕ ಪ್ರಶ್ನೆಗಳು, ಅತ್ಯಂತ ಕಟುವಾದ ಟೀಕೆ ಟಿಪ್ಪಣಿಗಳಿವೆ.

ಮಿಗ್-21, ಭಾರತದ ವಾಯುಸೇನೆಗೆ ಮೊದಲ ಸೂಪರ್‌ಸಾನಿಕ್ ಜೆಟ್ ಯುದ್ಧ ವಿಮಾನವಾಗಿ ಸೇರ್ಪಡೆಯಾದದ್ದು ಚೀನಾದೊಂದಿಗೆ ನಡೆದ ಯುದ್ಧದ ನಂತರ, 1963-64ರಲ್ಲಿ. 1965ರ ಭಾರತ-ಪಾಕ್ ಯುದ್ಧದಲ್ಲಿ ಅದರ ಪಾತ್ರ ಸೀಮಿತವಾಗಿದ್ದರೂ ಅಲ್ಲಿಂದ ಮುಂದೆ ನಡೆದ ಎಲ್ಲ ಯುದ್ಧಗಳಲ್ಲಿ ಅದು ಭಾಗವಹಿಸಿದೆ. ಮಿಗ್-21ರ ಮೂಲ ಸ್ವರೂಪವನ್ನು ಉಳಿಸಿಕೊಂಡು, ವಿಮಾನೋಪಕರಣಗಳು, ಶಸ್ತ್ರಾಸ್ತ್ರಗಳು, ರಾಡಾರ್ ವ್ಯವಸ್ಥೆ, ಎಲೆಕ್ಟ್ರಾನಿಕ್ ಯುದ್ಧತಂತ್ರ ವ್ಯವಸ್ಥೆಗಳು ಮುಂತಾದವುಗಳಲ್ಲಿ ಕಾಲದಿಂದ ಕಾಲಕ್ಕೆ ಉನ್ನತೀಕರಣಗೊಂಡ ಮಿಗ್- 21ರ ರೂಪಾಂತರಗೊಂಡ ನಾಲ್ಕು ಮುಖ್ಯ ಯುದ್ಧ ವಿಮಾನಗಳು (ವೇರಿಯಂಟ್ಸ್) ನಮ್ಮ ವಾಯುಬಲದಲ್ಲಿವೆ.

ಮಿಗ್-21ರ ಸುರಕ್ಷತೆಗೆ ಸಂಬಂಧಿಸಿದ ಪ್ರಶ್ನೆಗಳು ಮತ್ತು ಕುಂದುಕೊರತೆಗಳನ್ನು ವಿವಿಧ ಕಾಲಘಟ್ಟಗಳಲ್ಲಿ ಹಲವಾರು ಉನ್ನತ ಮಟ್ಟದ ಪರಿಣತರ ಸಮಿತಿಗಳು ವಿವರವಾಗಿ ಪರಿಶೀಲಿಸಿವೆ. 1977-82ರ ನಡುವಿನ ಅಪಘಾತಗಳನ್ನು ಪರಿಶೀಲಿಸಿದ, ವಾಯುಪಡೆಯ ಮುಖ್ಯಸ್ಥರಾಗಿದ್ದ ಏರ್ ಚೀಫ್ ಮಾರ್ಷಲ್ ಲಾ ಫಾಂಟೇನ್ ಅಧ್ಯಕ್ಷತೆಯ ಸಮಿತಿಯು ಶೇ 58ರಷ್ಟು ಅಪಘಾತಗಳಿಗೆ ಮಾನವ ತಪ್ಪುಗಳೇ (ಹ್ಯೂಮನ್ ಎರರ್) ಕಾರಣವೆಂದು ಅಭಿಪ್ರಾಯಪಟ್ಟಿದೆ. 1977-1987ರ 10 ವರ್ಷಗಳ ಅವಧಿಯಲ್ಲಿನ ಅಪಘಾತಗಳನ್ನು ಅಧ್ಯಯನ ಮಾಡಿದ, ಸಂಪೂರ್ಣವಾಗಿ ವಾಯುಸೇನೆಯ ಅಧಿಕಾರಿಗಳೇ ಇದ್ದ ಏರ್ ಹೆಡ್‌ಕ್ವಾರ್ಟರ್ಸ್ ಸಮಿತಿಯು ಶೇ 51.6ರಷ್ಟು ಅಪಘಾತಗಳಿಗೆ ಪೈಲಟ್‌ಗಳಿಂದಾದ ತಪ್ಪುಗಳು ಕಾರಣ ಎನ್ನುತ್ತದೆ. ಏರ್ ಮಾರ್ಷಲ್ ಛಡ್ಡಾ ಸಮಿತಿಯು ತರಬೇತಿಯ ಕುಂದುಕೊರತೆಗಳ ಮೇಲೆ ಗಮನ ಹರಿಸಿದೆ. ಭಾರತದ ರಾಷ್ಟ್ರಪತಿಯಾಗಿದ್ದ ಡಾ. ಅಬ್ದುಲ್ ಕಲಾಂ ಅವರು, ರಕ್ಷಣಾ ಸಚಿವರ ಮುಖ್ಯ ಸಲಹೆಗಾರರೂ ಯುದ್ಧ ವಿಮಾನಗಳ ಅಪಘಾತ ಪರಿಶೀಲನಾ ಸಮಿತಿಯ ಅಧ್ಯಕ್ಷರೂ ಆಗಿದ್ದ ಸಮಯದಲ್ಲಿ ನೀಡಿದ ವಿವರವಾದ ವರದಿಯು ಮಿಗ್-21 ವಿಮಾನದ ಆರ್-25 ಮತ್ತು ಆರ್-29 ಎಂಜಿನ್‌ಗಳಲ್ಲಿ ಇರುವ ಸಮಸ್ಯೆಗಳು, ಹಾರಾಟದ ಸಮಯದಲ್ಲಿ ಅಂಗ ಭಾಗಗಳಲ್ಲಿ ಬಳಸಲಾಗಿರುವ ವಿಶೇಷ ವಸ್ತುಗಳ ವೈಫಲ್ಯ (ಮೆಟೀರಿಯಲ್ ಫೇಲ್ಯೂರ್), ವಿಮಾನದ ಸುಸ್ಥಿತಿಯ ನಿರ್ವಹಣೆ, ವಿಮಾನದ ಭಾಗಗಳನ್ನು ಸಂಪೂರ್ಣವಾಗಿ ಕಳಚಿ, ಪರೀಕ್ಷಿಸಿ, ಮತ್ತೆ ಜೋಡಿಸುವಲ್ಲಿನ ಸಣ್ಣ ತಪ್ಪು, ಅಚಾತುರ್ಯಗಳನ್ನು ಎತ್ತಿ ತೋರುತ್ತದೆ. ಸೋವಿಯತ್ ಒಕ್ಕೂಟದ ಲೈಸನ್ಸ್ ಪಡೆದ ನಂತರ ಭಾರತದಲ್ಲಿ ಮಿಗ್ ವಿಮಾನಗಳು ಉತ್ಪಾದನೆಯಾಗುತ್ತಿದ್ದರೂ, ಎಂಜಿನ್‌ನ ವಿನ್ಯಾಸಕ್ಕೆ ಸಂಬಂಧಿಸಿದ ಅಗತ್ಯ ಮಾಹಿತಿಯನ್ನು ಪಡೆಯುವುದರಲ್ಲಿರುವ ವಿಪರೀತ ನಿಧಾನ ಪ್ರವೃತ್ತಿಯನ್ನೂ ಈ ವರದಿ ದಾಖಲಿಸಿದೆ.

ಮಿಗ್-21, ಶಬ್ದದ ಅಲೆಗಳಿಗಿಂತಲೂ ಹಲವಾರು ಪಟ್ಟು ವೇಗವಾಗಿ ಚಲಿಸುವ ಸೂಪರ್‌ಸಾನಿಕ್ ಯುದ್ಧ ವಿಮಾನ. ಅದರ ಗರಿಷ್ಠ ವೇಗ ಗಂಟೆಗೆ 2,229 ಕಿ.ಮೀಗಳು. ಅಂತಹ ವಿಮಾನಗಳನ್ನು ಹಾರಿಸಲು ಪೈಲಟ್‌ಗಳಿಗೆ ತರಬೇತಿ ಬೇಕು. ಹೀಗಾಗಿ ಮಿಗ್-21 ವಿಮಾನದ ಜೊತೆಗೆ ಹಾರಾಟದ ತರಬೇತಿ ನೀಡಲು, ಮಿಗ್-21 ತರಬೇತಿ ವಿಮಾನವನ್ನೂ ಸರ್ಕಾರ ಕೊಳ್ಳಬೇಕಿತ್ತು. ಆದರೆ ಹಾಗಾಗಲಿಲ್ಲ. ತರಬೇತಿಗೆ ಬಳಕೆಯಾದದ್ದು 1964ರಲ್ಲಿ ಬೆಂಗಳೂರಿನ ಎಚ್‌ಎಎಲ್ ಉತ್ಪಾದಿಸಿದ ಕಿರಣ್ ಜೆಟ್ ಟ್ರೈನರ್. ಅದರ ಗರಿಷ್ಠ ವೇಗ ಗಂಟೆಗೆ 323 ಕಿ.ಮೀ. ಹೀಗಾಗಿ ಟ್ರೈನರ್ ವಿಮಾನ ಮತ್ತು ಮಿಗ್-21 ಯುದ್ಧ ವಿಮಾನಗಳ ನಡುವೆ ಕಾರ್ಯಾಚರಣೆಯಲ್ಲಿ ಸಂಬಂಧವೇ ಇಲ್ಲದಂತಹ ಪರಿಸ್ಥಿತಿ. ಮುಂದೆ 1980, 1990 ಮತ್ತು 2000ದ ದಶಕದ ಹಲವಾರು ವರ್ಷಗಳವರೆಗೆ ಮಿಗ್-21 ಯುದ್ಧ ವಿಮಾನವನ್ನೇ ತರಬೇತಿಗಾಗಿ ಬಳಸಲಾಯಿತು. ಇದು ಕೂಡ ಅನೇಕ ಅಪಘಾತಗಳಿಗೆ ಕಾರಣವಾಯಿತೆಂದು ವರದಿಗಳು ತಿಳಿಸುತ್ತವೆ.

ಮಿಗ್-21ರ ಸುರಕ್ಷತೆಗೆ ಸಂಬಂಧಿಸಿದ ಎಲ್ಲ ಉನ್ನತ ಮಟ್ಟದ ಸಮಿತಿಗಳ ವರದಿಗಳೂ ಅತ್ಯಾಧುನಿಕ ಜೆಟ್ ಟ್ರೈನರ್ ವಿಮಾನದ ಅಗತ್ಯವನ್ನು ಒತ್ತಿ ಹೇಳಿದ್ದರಿಂದ, ಕಟ್ಟಕಡೆಗೆ ಮಿಗ್-21 ಭಾರತದ ವಾಯುಪಡೆಗೆ ಸೇರಿದ 40 ವರ್ಷಗಳ ನಂತರ, 2004ರಲ್ಲಿ ಬ್ರಿಟನ್ ಮೂಲದ ಹಾಕ್-132 ಅಡ್ವಾನ್ಸ್ಡ್ ಜೆಟ್ ಟ್ರೈನರ್ (ಎಜೆಟಿ) ವಿಮಾನವನ್ನು ಕೊಳ್ಳಲು ನಿರ್ಧರಿಸಲಾಯಿತು. 2008ರಲ್ಲಿ ಈ ತರಬೇತಿ ವಿಮಾನ ವಾಯುಪಡೆಗೆ ಸೇರಿದ ನಂತರ ಅಪಘಾತಗಳ ಸಂಖ್ಯೆ ಕಡಿಮೆಯಾದದ್ದನ್ನು ಅಧ್ಯಯನಗಳು ದಾಖಲಿಸಿವೆ.

1964ರಲ್ಲಿ ಭಾರತದ ವಾಯುಪಡೆಯನ್ನು ಸೇರಿ, ಇದೀಗ 'ಹಿರಿಯ ನಾಗರಿಕ'ನಾಗುವ ಹಂತದಲ್ಲಿರುವ ಮಿಗ್ ವಿಮಾನಕ್ಕೆ ಬಿಡಿ ಭಾಗಗಳ ಲಭ್ಯತೆ ಮತ್ತೊಂದು ದೊಡ್ಡ ಸಮಸ್ಯೆ. ಮಿಗ್- 21ರ ಉತ್ಪಾದನೆಯನ್ನು ಅಂದಿನ ಸೋವಿಯತ್ ರಷ್ಯಾ 1985ರಲ್ಲಿಯೇ ಸಂಪೂರ್ಣವಾಗಿ ನಿಲ್ಲಿಸಿದ್ದರಿಂದ ಈ ಸಮಸ್ಯೆ ಬಹಳ ತೀವ್ರವಾಗಿದೆ. ಈ ಪರಿಸ್ಥಿತಿ ಕೂಡ ಅಪಘಾತಗಳಿಗೆ ಎಡೆಮಾಡಿಕೊಡುತ್ತದೆ.

ಭಾರತದ ವಾಯುಪಡೆಯಲ್ಲಿ ಇಂದಿಗೂ ಸೇವೆಯಲ್ಲಿರುವ ಮಿಗ್- 21ರ ವಿವಿಧ ರೂಪಾಂತರಿಗಳನ್ನು ಸೇವೆಯಿಂದ ಕೂಡಲೇ ನಿವೃತ್ತಿಗೊಳಿಸಿ ಮುಂದಾಗುವ ಅಪಘಾತ, ಪ್ರಾಣಹಾನಿಯನ್ನು ತಪ್ಪಿಸಬೇಕೆಂಬ ಒತ್ತಾಯವಿದೆ. ವಾಯುಸೇನೆಯಲ್ಲಿ ರಫೇಲ್, ಸುಖೋಯ್, ಮಿರಾಜ್ 2000, ಮಿಗ್-29ರಂತಹ ಆಧುನಿಕ ಯುದ್ಧ ವಿಮಾನಗಳಿದ್ದರೂ, ಭಾರತದ ಸದ್ಯದ ರಕ್ಷಣಾ ಪರಿಸ್ಥಿತಿಯಲ್ಲಿ ಮಿಗ್- 21 ಹಾಗೂ ಅದರ ರೂಪಾಂತರಿಗಳನ್ನು ಏಕಾಏಕಿ ನಿವೃತ್ತಿಗೊಳಿಸುವುದು ಅಸಾಧ್ಯವೆಂಬುದು ರಕ್ಷಣಾ ಪರಿಣತರ ಅಭಿಪ್ರಾಯ.

ನಮ್ಮ ದೇಶದ ಅತ್ಯಾಧುನಿಕ ಯುದ್ಧ ವಿಮಾನವಾದ ತೇಜಸ್-ಎಂಕೆ-1ಎ ಮಾದರಿಯ 123 ವಿಮಾನಗಳು ಹಂತ ಹಂತವಾಗಿ ವಾಯುಸೇನೆಗೆ ಸೇರ್ಪಡೆಯಾಗಲು ಪ್ರಾರಂಭವಾಗಿ, ಎಲ್ಲ 36 ರಫೇಲ್ ಯುದ್ಧವಿಮಾನಗಳ ಸೇವೆ ವಾಯುಸೇನೆಗೆ ಲಭ್ಯವಿದ್ದಾಗ ಮಿಗ್- 21ರ ಹಂತ ಹಂತದ ನಿವೃತ್ತಿ ಪ್ರಾರಂಭವಾಗಿ, 2024ರ ಅಂತ್ಯದ ವೇಳೆಗೆ ನಿವೃತ್ತಿಯ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಅಲ್ಲಿಯವರೆಗೆ ಅತ್ಯಂತ ಕಟ್ಟುನಿಟ್ಟಾದ ತರಬೇತಿ, ನಿರ್ವಹಣೆ, ಕೌಶಲಗಳ ಉನ್ನತೀಕರಣ ಮುಂತಾದ ಕ್ರಮಗಳಿಂದ ಮಾತ್ರ ಅಪಘಾತಗಳ ಸಂಖ್ಯೆಯನ್ನು ಇಳಿಸಬಹುದು.

ಚುರುಮುರಿ

ಪುರಾಣ, ಪುಣ್ಯಕಥೆ!

• ಬಿ.ಎನ್.ಮಲ್ಲೇಶ್

'ಪಮ್ಮಿ, ಏನೇ ಇದೂ... ತಿಂಡಿ ಅಂದ್ರೆ ಬರೀ ಉಪ್ಪಿಟ್ಟು ಇಲ್ಲ ಚಿತ್ರಾನ್ನನಾ? ಈ ಎರಡು ಬಿಟ್ರೆ ನಿಂಗೆ ಬೇರೆ ಮಾಡಾಕೆ ಬರಲ್ವ?' ಟಿ.ವಿ ಪತ್ರಕರ್ತ ತೆಪರೇಸಿ ಹೆಂಡ್ತಿ ಮೇಲೆ ರೇಗಿದ.

ಪಮ್ಮಿಗೂ ಸಿಟ್ಟು ಬಂತು, 'ಸುಮ್ನೆ ತಿಂದು ಎದ್ದೋಗಿ. ನೀವು ಇಡೀ ದಿನ ಟೀವಿಲಿ ಒಂದು ಸೀಡಿ, ಇನ್ನೊಂದು ಕೊರೊನಾ ಎರಡ್ನೇ ಕುಯ್ತೀರಾ? ನಾವೂ ಸುಮ್ನೆ ನೋಡಲ್ವ?' ಎಂದಳು.

ಯಾಕೋ ಕೇಸು ಉಲ್ಟಾ ಹೊಡೀತೈತೆ ಅಂದುಕೊಂಡ ತೆಪರೇಸಿ 'ನಾವೆಂಗಾರ ಕುಯ್ತೀವಿ, ನೀವ್ಯಾಕೆ ಟೀವಿ ನೋಡ್ತೀರಿ? ಬಿಟ್ಟಾಯ್ತಪ್ಪ...' ಎಂದ.

'ನಾವು ಟೀವಿ ನೋಡದಿದ್ರೆ ನಿಮ್ಮ ಹೊಟ್ಟೆಪಾಡು ನಡೀಬೇಕಲ್ಲ... ನಾವು ಟೀವಿ ನೋಡೋದ್ರಿಂದಾನೇ ನಿಮ್ಮ ಟಿಆರ್‌ಪಿ ಹೆಚ್ಚೋದು, ನಿಮ್ ಟೀವಿ ನಡಿಯೋದು'.

ಕರೆಕ್ಟಾಗಿ ಏಟು ಹಾಕ್ತದಾಳಲ್ಲ ಎಂದು ಯೋಚಿಸಿದ ತೆಪರೇಸಿ 'ನಿಮ್ಮಿಂದ ನಮ್ ಟೀವಿ ನಡೀಬಹುದು, ಆದ್ರೆ ನಮ್ಮಿಂದ ಇಡೀ ಸರ್ಕಾರನೇ ನಡೀತೈತಿ ಗೊತ್ತಾ?' ಅಂದ.

'ನಿಮ್ಮಂಥ ಕುಡುಕರು ಕೊಡೋ ಟ್ಯಾಕ್ಸ್‌ನಿಂದ ಸರ್ಕಾರ ನಡೀತೈತಿ ಅಂತಾನಾ? ಇದು ಹಳೆ ಡೈಲಾಗು. ಇಡೀ ದಿನ ಎರಡನೇ ಅಲೆ, ಮೂರನೇ ಅಲೆ ಅಂತ ತೋರ್ಸಿದ್ದೇ ತೋರ್ಸಿ ನಮ್ ಬಿ.ಪಿ. ಏರಿಸೋ ಬದ್ಲು ನಿಮ್ ಟೀವಿಲಿ ಒಳ್ಳೆ ಕಾರ್ಯಕ್ರಮ ತೋರ್ಸಿ' ಪಮ್ಮಿ ಸವಾಲು ಹಾಕಿದಳು.

'ನೀವು ಈಟುದ್ದ ಇರೋದ್ನ ಆಟುದ್ದ ತೋರ್ಸೊ ಧಾರಾವಾಹಿಗಳ್ನ ಬಾಯಿ ಬಿಟ್ಕಂಡ್ ನೋಡ್ತಾ ಕೂತಿರ್ತೀರಾ? ಅದನ್ನ ಬಿಡಿ ಮೊದ್ಲು' ತೆಪರೇಸಿನೂ ಬಿಡಲಿಲ್ಲ.

'ಆಯ್ತು ಆಯ್ತು, ಸದ್ಯ ಗೌರ್ಮೆಂಟ್ ಬಸ್ ನೌಕರರಿಗೆ ಒಂದು ಥ್ಯಾಂಕ್ಸ್ ಹೇಳಬೇಕು, ಸ್ಟ್ರೈಕ್ ಮಾಡಿದ್ದಕ್ಕೆ...'

'ಯಾಕೆ?'

'ನಿಮ್ಮ ಸೀಡಿ ಪುರಾಣ, ಕೊರೊನಾ ಪುಣ್ಯಕತೆಗಳನ್ನ ಸ್ವಲ್ಪ ದಿನನಾದ್ರು ಟೀವಿಯಿಂದ ಓಡಿಸಿದ್ದಕ್ಕೆ...!'

ಸಂಗತ

ವೈರುಧ್ಯದಲ್ಲಿ ದೇಶದ ಆರೋಗ್ಯ

ಏರುತ್ತಿರುವ ಕೋವಿಡ್ ರೋಗದಿಂದಾಗುವ ಹಾನಿ ತಡೆಯಲು ಸರ್ಕಾರದ ಮುಂದಿರುವ ಏಕೈಕ ಪ್ರಬಲ ಅಸ್ತ್ರವೆಂದರೆ ಕೋವಿಡ್ ಲಸಿಕೆಯೊಂದೇ

• ಡಾ. ಲಕ್ಷ್ಮಣ ವಿ.ಎ.

ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಗುಡ್ಡಟ್ಟಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆ ದಿನ ಎಂದಿನಂತೆ ಲಸಿಕೆ ನೀಡುವ ವ್ಯವಸ್ಥಾಪನದಲ್ಲಿ ಮಗ್ನನಾಗಿದ್ದೆ. ಭಾನುವಾರವೂ ಬಿಡುವಿರದ ಈ ಲಸಿಕೆ ಅಭಿಯಾನದ ಒಂದು ಭಾಗವಾಗಿ, ಸೀಮಿತ ಆರೋಗ್ಯ ಸಿಬ್ಬಂದಿಯೊಂದಿಗೆ ನಮಗೆ ನೀಡಿದ ಲಸಿಕೆ ಹಾಗೂ ಕೋವಿಡ್ ಟೆಸ್ಟಿಂಗ್ ಆಯಾ ದಿನದ ಗುರಿ ತಲುಪುವುದು ಸವಾಲೇ ಸರಿ.

ಇಂತಹ ಒಂದು ನಿಗಿ ನಿಗಿ ಕೆಂಡದಂತಹ ಮಾರ್ಚ್ ತಿಂಗಳಿನ ಮಧ್ಯಾಹ್ನ ಒಬ್ಬ ಶ್ರೀಮಂತ ಯುವಕ, ಜೊತೆಗೆ ಇಬ್ಬರು ತರುಣಿಯರು ನನ್ನ ಮುಂದೆ ನಿಂತರು. ಕಾರಣ ಕೇಳಿದರೆ, ಲಸಿಕೆ ಪಡೆಯಬೇಕೆಂದರು. ನಾನು ಅವರ ಆಧಾರ್ ಕಾರ್ಡ್ ನೋಡಿ, ನಿಮಗೆ ಕಡಿಮೆ ವಯಸ್ಸಾದ್ದರಿಂದ ಲಸಿಕೆ ನೀಡಲು ಸಾಧ್ಯವಿಲ್ಲವೆಂದೆ. ಆದರೆ ಅವರು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಕೊಡುತ್ತಿದ್ದಾರೆ, ನಿಮಗೇಕೆ ಕೊಡಲಾಗುವುದಿಲ್ಲ ಎಂದು ಪಟ್ಟು ಹಿಡಿದರು. ಖಾಸಗಿ ಆಸ್ಪತ್ರೆಗೇ ತೆರಳಿ ಲಸಿಕೆ ಪಡೆಯಲು ಹೇಳಿದೆ. ಇಲ್ಲ, ಅವರಿಗೆ ಆಗುವುದಿಲ್ಲವಂತೆ. ದುಡ್ಡು ಕೊಟ್ಟರೆ (ಲಂಚ) ಸರ್ಕಾರಿ ಆಸ್ಪತ್ರೆಯಲ್ಲಿ ಕೊಡುತ್ತಾರೆ ಅಂತ ಅವರೇ ಹೇಳಿ ಕಳುಹಿಸಿದರು ಎಂದು ಹೇಳಿದಾಗ, ಅವರಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ, ಸರ್ಕಾರದ ಮಾರ್ಗಸೂಚಿಗಳ ಬಗ್ಗೆ ವಿವರಿಸಲು ನೋಡಿದೆ. ಆದರೆ ಆ ಯುವಕ ಎಷ್ಟು ದುಡ್ಡು ಕೊಟ್ಟಾದರೂ ಸರಿ ತಮಗೆ ಲಸಿಕೆ ಬೇಕೆಂದು ಹಟ ಹಿಡಿದು ಇನ್ನಿಲ್ಲದ ಆಮಿಷವೊಡ್ಡಿ, ಕೊನೆಗೆ ತನ್ನ ಡ್ರೈವರನನ್ನೂ ಸಂಧಾನಕ್ಕೆ ಕಳುಹಿಸಿ ವ್ಯವಹಾರ ಕುದುರಿಸಲು ನೋಡಿದ. ಕೊನೆಗೆ ಅವನನ್ನು ಉದಾಸೀನ ಮಾಡಿ ಆಸ್ಪತ್ರೆಯಿಂದ ಆಚೆ ಹಾಕುವುದು ಒಂದು ಸಾಹಸವೇ ಆಯಿತು.

ಆ ಯುವಕ– ಯುವತಿಯರಿಗೆ ಲಸಿಕೆ ಪಡೆಯುವ ಆಸೆ ಇದ್ದದ್ದು ತಪ್ಪಲ್ಲ. ಭಾರತ ಬಿಟ್ಟು ಬೇರೆ ದೇಶಗಳಲ್ಲಿ ಇದು ಈಗ ಸಾಧ್ಯವೂ ಆಗಿರಬಹುದು. ಆದರೆ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ಈಗಿರುವ ನೀತಿಯಂತೆ, ಮೊದಲು ಆರೋಗ್ಯ ಕಾರ್ಯಕರ್ತರಿಗೆ ನಂತರ ಕೋವಿಡ್ ಕರ್ತವ್ಯದ ಮುಂಚೂಣಿ ಯೋಧರಿಗೆ ಹಾಗೂ ನಲವತ್ತೈದು ವರ್ಷ ಮೇಲ್ಪಟ್ಟವರಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ಈ ವರ್ಗದವರೆಲ್ಲಾ ಕೋವಿಡ್ ಲಸಿಕೆಯನ್ನು ಪಡೆಯುವ ಅದೃಷ್ಟದ ಫಲಾನುಭವಿಗಳೆಂದೇ ಪರಿಗಣಿಸಬಹುದು.

ಆದರೆ ಅದೃಷ್ಟದ ಈ ಮುಂಚೂಣಿ ಗುಂಪು ಲಸಿಕೆ ಪಡೆಯುವಲ್ಲಿ ಉದಾಸೀನ ಮಾಡುತ್ತಿರುವುದರ ಹಿಂದಿನ ಮರ್ಮವಾದರೂ ಏನಿರಬಹುದು? ನಾನು ಕೆಲಸ ಮಾಡುವ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಒಟ್ಟು ಮೂವತ್ತಾರು ಸಾವಿರ ಜನಸಂಖ್ಯೆ ಇದೆ. ಲಸಿಕೆ ನೀಡಲು ಆರೂವರೆ ಸಾವಿರ ಫಲಾನುಭವಿಗಳನ್ನು ಗುರುತಿಸಲಾಗಿದೆ. ಈ ಆರೋಗ್ಯ ವ್ಯವಸ್ಥೆಯ ಬೇರುಮೂಲವಾದ 'ಆಶಾ' ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ, ಲಸಿಕೆ ಪಡೆಯಲು ಪ್ರೋತ್ಸಾಹಿಸಿ, ಬಂದು ಹೋಗಲು ವಾಹನ ವ್ಯವಸ್ಥೆ ಮಾಡಿಸುವುದಾಗಿ ಹೇಳಿದರೂ ಫಲಾನುಭವಿಗಳು ಹಿಂದೇಟು ಹಾಕುತ್ತಾರೆ. ಇದಕ್ಕೆ, ಲಸಿಕೆಯ ನಿರೀಕ್ಷಿತ ಫಲಿತಾಂಶದ ಬಗೆಗಿರುವ ಗೊಂದಲ, ಲಸಿಕೆ ನಂತರ ಉಂಟಾಗುವ ಅಡ್ಡ ಪರಿಣಾಮ ಅಥವಾ ಆಮೇಲೆ ತೆಗೆದುಕೊಂಡರಾಯಿತು ಎಂಬ ಉಡಾಫೆ, ಸಾಮಾಜಿಕ ಮಾಧ್ಯಮದಲ್ಲಿ ಲಸಿಕೆಯ ಬಗೆಗಿನ ಅಪಪ್ರಚಾರ ಇನ್ನೂ ಹತ್ತು ಹಲವು ಕಾರಣಗಳಿವೆ.

ಲಸಿಕೆ ಪಡೆದ ಮೇಲೆ ವ್ಯಕ್ತಿ ಕೊರೊನಾದಿಂದ ಸಂಪೂರ್ಣವಾಗಿ ಸುರಕ್ಷೆ ಪಡೆಯುತ್ತಾನೆ ಎಂಬುದಾಗಿ ವಿಜ್ಞಾನಿಗಳು ಎಲ್ಲಿಯೂ ಹೇಳಿಲ್ಲ. ಮಕ್ಕಳಿಗೆ ನೀಡುವ ಟೆಟಾನಸ್, ಡಿಪಿಟಿ, ದಡಾರ ಮುಂತಾದ ಲಸಿಕೆಗಳಂತೆ ಕೋವಿಡ್ ಲಸಿಕೆ ಕೂಡ ತನ್ನ ಇತಿಮಿತಿಯಲ್ಲೇ ಕೆಲಸ ಮಾಡುತ್ತದೆ. ಮಾಸ್ಕ್ ಧರಿಸುವಿಕೆ, ಪರಸ್ಪರ ಅಂತರ ಕಾಯ್ದುಕೊಳ್ಳುವುದು ಹೇಗೆ ಕೊರೊನಾ ತಡೆಗೆ ಸಹಕಾರಿಯೋ ಹಾಗೇ ಲಸಿಕೆ ಕೂಡ ಕೊರೊನಾದ ವಿರುದ್ಧ ದೇಹಕ್ಕೆ ಬಲ ನೀಡುವ ಒಂದು ಆಯುಧ. ಎರಡು ಡೋಸ್ ಲಸಿಕೆ ಪಡೆದ 45 ದಿನಗಳಲ್ಲಿ ದೇಹ ಕೊರೊನಾ ಎದುರಿಸಲು ಸಜ್ಜಾಗುತ್ತದೆ ಎಂದು ಅಧ್ಯಯನ ವರದಿಗಳು ಹೇಳುತ್ತವೆ.

ಲಸಿಕೆ ಪಡೆದ ನಂತರವೂ ದೇಹ ಹೊಕ್ಕರೆ ಕೊರೊನಾ ಬಲು ಬೇಗ ದೇಹದ ಇಮ್ಯೂನ್ ವಿರುದ್ಧ ಸೋಲುತ್ತದೆ. ಹೃದಯಾಘಾತ, ಪಾರ್ಶ್ವವಾಯು ಇನ್ನಿತರ ಗಂಭೀರ ಹಾನಿ ಹಾಗೂ ಸಾವನ್ನೂ ತಡೆಯಬಹುದು. ಏರುತ್ತಿರುವ ಕೋವಿಡ್ ರೋಗದಿಂದಾಗುವ ಹಾನಿ ತಡೆಯಲು ಸರ್ಕಾರದ ಮುಂದಿರುವ ಏಕೈಕ ಪ್ರಬಲ ಅಸ್ತ್ರವೆಂದರೆ ಕೋವಿಡ್ ಲಸಿಕೆಯೊಂದೇ.

ಒಂದು ಕಡೆ ಎಷ್ಟು ದುಡ್ಡು ಕೊಟ್ಟಾದರೂ ಲಸಿಕೆ ಪಡೆಯುತ್ತೇನೆಂಬ ಉಳ್ಳ ಯುವಕರ ಉತ್ಸಾಹ, ಇನ್ನೊಂದೆಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ಕೊಡುತ್ತೇವೆಂದರೂ ಒಪ್ಪದ ಮಧ್ಯಮವರ್ಗ. ಭಾರತದ ಆರೋಗ್ಯ ಸದ್ಯ ಈ ಎರಡರ ವೈರುಧ್ಯದಲ್ಲಿ ಜೀಕುತ್ತಿದೆ.

ಕೋವಿಡ್‌ನಿಂದ ಜಗತ್ತಿನಲ್ಲಿ ಆಗುತ್ತಿರುವ ತಲ್ಲಣ, ಸಾವು ನೋವು, ಆತ್ಮಹತ್ಯೆ, ಮನೆಯವರನ್ನು ಕಳೆದುಕೊಳ್ಳುವ ನೋವು, ಇದಕ್ಕಿರುವ ಈಗಿನ ಏಕೈಕ ಪರಿಹಾರವೆಂದರೆ ಲಸಿಕೆಯೊಂದೇ. ಜೊತೆಗೆ ಕೋವಿಡ್ ಮಾರ್ಗಸೂಚಿಯ ಸೂಕ್ತ ಪಾಲನೆ.

ವಾಚಕರ ವಾಣಿ

ವೈದ್ಯಕೀಯ ಪ್ರಮಾಣಪತ್ರ: ನಿರ್ಲಕ್ಷ್ಯ ಸಲ್ಲ

ಕೊರೊನಾ ಎರಡನೇ ಅಲೆಯ ಬಗ್ಗೆ ರಾಜ್ಯ ಸರ್ಕಾರವು ನಿರ್ಲಕ್ಷ್ಯ ತಾಳಿದಂತಿದೆ. ಅದಕ್ಕೆ ನಿದರ್ಶನವೆಂಬಂತೆ, ನಮ್ಮ ಕುಟುಂಬದ ಅನುಭವವೊಂದನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿ ವಾಸವಾಗಿರುವ ಗೃಹಿಣಿ. ನನ್ನ ಮಗ ಜಿ.ಶ್ರೀಧರ ತಾನು ಕೆಲಸ ಮಾಡುತ್ತಿರುವ ಕಂಪನಿಯ ಮೀಟಿಂಗ್‌ಗೆಂದು ಸೋಮವಾರ ದೆಹಲಿಗೆ ವಿಮಾನದಲ್ಲಿ ತುರ್ತು ಪ್ರಯಾಣ ಬೆಳೆಸಿದ್ದ. ಮತ್ತೆ ಗುರುವಾರದಂದು ಸರ್ಕಾರದ ನಿಯಮದಂತೆ ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ವೈದ್ಯರ ಪ್ರಮಾಣಪತ್ರದೊಂದಿಗೆ ಬೆಂಗಳೂರಿಗೆ ವಾಪಸಾದ. ಆದರೆ ಈ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಯಾರೊಬ್ಬರೂ ಕೊರೊನಾ ಪರೀಕ್ಷೆ ಬಗ್ಗೆ ಆತನನ್ನು ವಿಚಾರಿಸಲಿಲ್ಲವಂತೆ.

ಇದು ಹೀಗೇ ಮುಂದುವರಿದರೆ ಕೊರೊನಾವನ್ನು ನಿಯಂತ್ರಿಸಲು ಹೇಗೆ ಸಾಧ್ಯ? ಪ್ರತಿನಿತ್ಯ ವಿಮಾನಗಳಲ್ಲಿ ಸಾವಿರಾರು ಮಂದಿ ಪ್ರಯಾಣಿಸುತ್ತಾರೆ. ಹೀಗಾಗಿ ಈ ವಿಷಯವನ್ನು ಅತಿ ಗಂಭೀರವಾಗಿ ಪರಿಗಣಿಸದೆ ಸಂಬಂಧಪಟ್ಟವರು ನಿರ್ಲಕ್ಷ್ಯ ತಾಳಿರುವುದು ಅಚ್ಚರಿಯೇ ಸರಿ. ದೇಶದಾದ್ಯಂತ ದಿನೇ ದಿನೇ ಹೆಚ್ಚಾಗುತ್ತಲೇ ಇರುವ ಕೊರೊನಾ ಎರಡನೇ ಅಲೆಯನ್ನು ನಿಯಂತ್ರಿಸಬೇಕಾದರೆ ದೇಶ-ವಿದೇಶಗಳಿಂದ ವಿಮಾನದಲ್ಲಿ ಬರುವವರನ್ನು ಮೊದಲು ಪರೀಕ್ಷೆಗೆ ಒಳಪಡಿಸಿ, ಅವರ ವೈದ್ಯಕೀಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಪರೀಕ್ಷಿಸಬೇಕು. ಆಗ ಮಾತ್ರ ಮುಂದಾಗಬಹುದಾದ ಹೆಚ್ಚಿನ ಅಪಾಯವನ್ನು ತಡೆಗಟ್ಟಲು ಸಾಧ್ಯ.

ಜಯಮ್ಮ ಗೋಪಾಲಕೃಷ್ಣ, ಬೆಂಗಳೂರು

ಸಭೆಗೆ ಶಿಸ್ತುಬದ್ಧ ಹಾಜರಾತಿ ಮುಖ್ಯ

ದಾವಣಗೆರೆ ಮಹಾನಗರಪಾಲಿಕೆಯ ಸಾಮಾನ್ಯ ಸಭೆಗೆ ಸದಸ್ಯರೊಬ್ಬರು ಬರ್ಮುಡಾ ಹಾಕಿಕೊಂಡು ಪಾಲ್ಗೊಂಡಿದ್ದು (ಪ್ರ.ವಾ., ಏ. 8) ವಿಷಾದನೀಯ ಸಂಗತಿ. ಸಭೆ ಅಂದರೆ ಅದಕ್ಕೆ ತನ್ನದೇ ಆದ ಗೌರವ ಇರುತ್ತದೆ. ಎಂತಹ ಸಭೆಯೇ ಆಗಲಿ ಅದು ಪ್ರಮುಖ ವಿಷಯಗಳ ಚರ್ಚೆ, ಸಮಸ್ಯೆಗಳ ಮಂಡನೆ, ಪರಿಹಾರಗಳು, ವಿಚಾರ ವಿನಿಮಯಗಳಿಂದ ಕೂಡಿರುತ್ತದೆ. ಸಭೆಗೆ ದಾಖಲೆಗಳ ಜೊತೆ ಶಿಸ್ತುಬದ್ಧವಾಗಿ ಹಾಜರಾಗುವುದು ಅಷ್ಟೇ ಮುಖ್ಯವಾಗಿರುತ್ತದೆ. ನಾವು ಹಾಕಿಕೊಳ್ಳುವ ಬಟ್ಟೆ ನಮ್ಮ ಗುಣವನ್ನು ತೋರಿಸುತ್ತದೆ ಎಂಬ ಮಾತಿದೆ. ಕೆಲ ದಿನಗಳ ಹಿಂದೆ ವಿಧಾನಸಭೆಯಲ್ಲಿ ಶಾಸಕರೊಬ್ಬರು ತಮ್ಮ ಶರ್ಟ್ ಬಿಚ್ಚಿ ಸಭೆಗೆ ಅಗೌರವ ತಂದಿದ್ದನ್ನು ನಾವು ನೋಡಿದ್ದೇವೆ. ಇಂತಹ ಪ್ರಸಂಗಗಳನ್ನು ನೋಡಿದರೆ, ಸಭೆ, ಸಮಾರಂಭಗಳಿಗೆ ವಸ್ತ್ರಸಂಹಿತೆ ಜಾರಿಗೆ ಬಂದರೂ ಅಚ್ಚರಿ ಪಡಬೇಕಿಲ್ಲ.

ದಿಲೀಪ್, ದಾವಣಗೆರೆ

ತಾರತಮ್ಯ ನಿವಾರಣೆ ಕ್ರಮ: ಕಟ್ಟುನಿಟ್ಟಾಗಿ ಜಾರಿಯಾಗಲಿ

ಇತ್ತೀಚೆಗೆ ಬಿಡುಗಡೆಯಾಗಿರುವ ವಿಶ್ವ ಆರ್ಥಿಕ ವೇದಿಕೆಯ ಗ್ಲೋಬಲ್ ಜೆಂಡರ್ ಗ್ಯಾಪ್ ರಿಪೋರ್ಟ್– 2021 ವರದಿಯಲ್ಲಿ, ಜಗತ್ತಿನ 156 ದೇಶಗಳ ರ‍್ಯಾಂಕ್ ಪಟ್ಟಿಯಲ್ಲಿ ಭಾರತದ ಸ್ಥಾನ 140ಕ್ಕೆ ಇಳಿದಿರುವುದು ಕಳವಳಕಾರಿ. 2020ರ ವರದಿಯಲ್ಲಿ 112ನೇ ಸ್ಥಾನ ಪಡೆದಿದ್ದ ಭಾರತ ಈ ಬಾರಿ 28 ಸ್ಥಾನಗಳ ಕುಸಿತ ಕಂಡಿದೆ. ಮಹಿಳೆ ಹಿಂದಿನಂತಲ್ಲದೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಬೇರೆಬೇರೆ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪುರುಷನಿಗೆ ಸಮಾನವಾಗಿ ಬದುಕಬಲ್ಲಳು. ಆದರೂ ಮಹಿಳೆ ಸಮಾಜದಲ್ಲಿ ತಾರತಮ್ಯಕ್ಕೆ ಗುರಿಯಾಗುತ್ತಿರುವುದು ದುಃಖದ ಸಂಗತಿ.

ಮಹಿಳಾ ಸಬಲೀಕರಣ, ಮಹಿಳಾ ಮೀಸಲಾತಿ, ಸಮಾನ ವೇತನ ಕಾಯ್ದೆ ಎಲ್ಲವೂ ಬರವಣಿಗೆ ರೂಪದಲ್ಲಿ ಮಾತ್ರ ಇರದೆ ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ಬರಬೇಕಾಗಿದೆ.

ನಿರ್ಮಲ ನಾಗೇಶ್, ಧಾರವಾಡ

ರಸಗೊಬ್ಬರ ಬೆಲೆ ಏರಿಕೆ: ತತ್ತರಿಸಿದ ಕೃಷಿಕ

ರಸಗೊಬ್ಬರದ ಬೆಲೆಯನ್ನು ದಿಢೀರ್ ಏರಿಕೆ ಮಾಡಿರುವುದು ಸರಿಯಲ್ಲ. ಈಗಾಗಲೇ ಜನರು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ದರ ಏರಿಕೆಯಿಂದ ತತ್ತರಿಸಿದ್ದಾರೆ. ಇದೀಗ ರಸಗೊಬ್ಬರದ ಬೆಲೆ ಏರಿಕೆ ಕಂಡು ರೈತರು ದಂಗಾಗಿದ್ದಾರೆ. ಬೆಲೆ ಏರಿಕೆಯಿಂದ ಕೃಷಿಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಸರ್ಕಾರ ಕೂಡಲೇ ಭಾರತೀಯ ರೈತರ ರಸಗೊಬ್ಬರ ಸಹಕಾರಿ ಸಂಸ್ಥೆ (ಇಫ್ಕೊ) ಜೊತೆ ಚರ್ಚಿಸಿ, ರೈತರ ಮೇಲಿನ ಆರ್ಥಿಕ ಭಾರ ಕಡಿಮೆ ಮಾಡಬೇಕು. ಕೃಷಿಕರಿಗೆ ಅನುಕೂಲ ಮಾಡಿಕೊಡಬೇಕು.

ನಬಿಸಾಬ್ ಬಿಂಜವಾಡಗಿ, ದೋಟಿಹಾಳ

ವಿನೂತನ ಚುನಾವಣಾ ತಂತ್ರ: ಎಚ್ಚರವಿರಲಿ

ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎಂಇಎಸ್ ಹಾಗೂ ಶಿವಸೇನಾ ಬೆಂಬಲಿತ ಅಭ್ಯರ್ಥಿ ಶುಭಂ ಸೆಳಕೆ ಅವರು ಮರಾಠಿ ಭಾಷಿಕರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಪ್ರಚೋದನಕಾರಿ ಭಾಷಣ ಮಾಡುವ ಮೂಲಕ ಜನರಿಂದ ವೋಟು ಕೇಳಿ ನೋಟು ಪಡೆಯುತ್ತಿರುವ ನಡವಳಿಕೆ (ಪ್ರ.ವಾ, ಏ. 6) ಒಪ್ಪುವಂಥದ್ದಲ್ಲ. ಚುನಾವಣಾ ವೆಚ್ಚಕ್ಕೆ ಬಹಿರಂಗವಾಗಿ ದೇಣಿಗೆ ಸಂಗ್ರಹಿಸುವುದಕ್ಕೆ ಅವಕಾಶ ಇರಬಹುದು. ಆದರೆ ಪ್ರಚೋದನಕಾರಿ ಭಾಷಣ ಮಾಡಿ ಹಣ ಸಂಗ್ರಹಿಸುವುದು ಸರಿಯೇ?

ಅಭ್ಯರ್ಥಿಗಳು ಇಂತಿಷ್ಟೇ ಹಣ ಖರ್ಚು ಮಾಡಬೇಕು ಎಂಬ ನಿಯಮವಿದೆ. ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿ ಖರ್ಚು ಮಾಡಬೇಕಾಗುತ್ತದೆ. ಜನರಿಗೆ ನೋಟು ಕೊಟ್ಟು ವೋಟು ಪಡೆಯುವಂಥ ಕೆಟ್ಟ ನಡವಳಿಕೆ ಇತ್ತೀಚೆಗೆ ಉಲ್ಬಣಗೊಳ್ಳುತ್ತಿದೆ. ಹೀಗಿರುವಾಗ ಅಭ್ಯರ್ಥಿಗಳು ವಿನೂತನ ತಂತ್ರಗಳನ್ನು ಬಳಸುವುದರ ಬಗ್ಗೆಯೂ ಜನ ಎಚ್ಚರ ವಹಿಸುವುದು ಒಳ್ಳೆಯದು.

ಡಾ. ಜಿ.ಬೈರೇಗೌಡ, ಬೆಂಗಳೂರು

ಇದು ಬಿಇಒ ಕಚೇರಿ ಅವ್ಯವಸ್ಥೆ

ಜಗಳೂರು ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿ (ಬಿಇಒ) ಕಚೇರಿಗೆ ಕೆಲಸದ ಮೇಲೆ ಇತ್ತೀಚೆಗೆ ಭೇಟಿ ನೀಡಿದ್ದೆ. ಅಲ್ಲಿನ ಒಂದು ಸಂದಿಯಲ್ಲಿ ಶಿಕ್ಷಕರು ಮತ್ತು ಸಿಬ್ಬಂದಿ ಬಯಲು ಶೌಚಕ್ಕೆ ಹೋಗಿ ಬರುತ್ತಿದ್ದುದನ್ನು ನೋಡಿ ಅಚ್ಚರಿಯಾಯಿತು. ಒಬ್ಬರನ್ನು 'ಏನ್ ಸರ್, ಮಕ್ಕಳಿಗೆ ಪಾಠ ಮಾಡುವ ನೀವು ಈ ರೀತಿ ಬಯಲು ಶೌಚ ಮಾಡುತ್ತಿದ್ದೀರಲ್ಲ' ಎಂದು ಕೇಳಿದೆ. ಅದಕ್ಕೆ, 'ಬೇರೆಯವರೆಲ್ಲ ನಿನಗೆ ಕಾಣಿಸುವುದಿಲ್ಲವೇ? ನನಗೇಕೆ ಕೇಳುತ್ತಿದ್ದೀಯಾ?' ಎಂಬ ಉತ್ತರ ಅವರಿಂದ ಬಂತು. ಮರುಮಾತನಾಡದೆ ವಾಪಸಾದೆ. ಇಡೀ ಒಂದು ತಾಲ್ಲೂಕಿನ ಶಾಲೆಗಳಿಗೆಲ್ಲ ಬಿಇಒ ಕಚೇರಿಯೇ ಮಾದರಿ. ಆದರೆ ನಮ್ಮ ಜಗಳೂರಿನ ಅವ್ಯವಸ್ಥೆಯನ್ನು ನೋಡಿ ಹೇಸಿಗೆಯಾಯಿತು. ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳಲಿ.

ರಾಜು ಬಿ. ಲಕ್ಕಂಪುರ, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333,
Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಸಗೊಬ್ಬರ ದರ ಏರಿಕೆ ಗೊಂದಲ

ಭಾರತದ ಅತಿದೊಡ್ಡ ರಸಗೊಬ್ಬರ ತಯಾರಿಕಾ ಕಂಪನಿ ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋ-ಆಪರೇಟಿವ್ ಲಿಮಿಟೆಡ್ (ಇಫ್ಕೊ), ಯೂರಿಯವನ್ನು ಬಿಟ್ಟು ಇತರ ರಸಗೊಬ್ಬರಗಳ ಬೆಲೆಯನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿದೆ. ಡಿಎಪಿ, ಎನ್‌ಪಿಕೆ ಮತ್ತು ಎಂಒಪಿ ಗೊಬ್ಬರಗಳ ಬೆಲೆಯಲ್ಲಿ ಶೇ 42ರಿಂದ ಶೇ 58ರವರೆಗೂ ಏರಿಕೆಯಾಗಿದೆ. ಆದರೆ, 'ರಸಗೊಬ್ಬರಗಳ ಬೆಲೆಯಲ್ಲಿ ಯಾವುದೇ ಏರಿಕೆಯಿಲ್ಲ. ಹಳೆಯ ಬೆಲೆಯಲ್ಲೇ ಮಾರಾಟ ಮಾಡಲು ನಿರ್ದೇಶನ ನೀಡಲಾಗಿದೆ' ಎಂದು ಕೇಂದ್ರ ಸರ್ಕಾರ ಹೇಳಿದೆ.

'ಏಪ್ರಿಲ್ 1ರಿಂದ ಅನ್ವಯವಾಗುವಂತೆ ಬೆಲೆ ಏರಿಕೆ ಮಾಡಲಾಗಿದೆ. ಬೇರೆ ಎಲ್ಲಾ ಖಾಸಗಿ ಕಂಪನಿಗಳು ಮಾರ್ಚ್ ತಿಂಗಳಿನಲ್ಲೇ ರಸಗೊಬ್ಬರಗಳ ಬೆಲೆಯನ್ನು ಏರಿಕೆ ಮಾಡಿವೆ. ಅಲ್ಲದೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾವಸ್ತುಗಳ ಬೆಲೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಹೀಗಾಗಿ ಯೂರಿಯಯೇತರ ರಸಗೊಬ್ಬರಗಳ ಬೆಲೆಯನ್ನು ಏರಿಕೆ ಮಾಡಲೇಬೇಕಿದೆ' ಎಂದು ಇಫ್ಕೊ ತನ್ನ ಪ್ರಕಟಣೆಯಲ್ಲಿ ಹೇಳಿತ್ತು.

ದೇಶದಲ್ಲಿ ಯೂರಿಯಾ ನಂತರ ಅತಿಹೆಚ್ಚು ಬಳಕೆಯಾಗುವ ಡಿಎಪಿ ರಸಗೊಬ್ಬರದ ಬೆಲೆಯಲ್ಲಿ ಭಾರಿ ಏರಿಕೆಯಾಗಿದೆ. ಖಾಸಗಿ ಕಂಪನಿಗಳು ಮಾರ್ಚ್ ತಿಂಗಳಿನಲ್ಲೇ ಡಿಎಪಿ ಗೊಬ್ಬರದ ಬೆಲೆ ಏರಿಕೆ ಮಾಡಿದ್ದವು. ಸಿಎಫ್‌ಸಿಎಲ್ ಕಂಪನಿಯು 50 ಕೆ.ಜಿ. ಡಿಎಪಿ ಗೊಬ್ಬರದ ಚೀಲದ ಬೆಲೆಯನ್ನು ₹ 1,600ಕ್ಕೆ, ಐಪಿಎಲ್ ಡಿಎಪಿ ಬೆಲೆಯನ್ನು ₹ 1,200ರಿಂದ ₹ 1,495ಕ್ಕೆ ಏರಿಕೆ ಮಾಡಿದ್ದವು. ಕ್ರಿಬ್ಕೊ, ಎಂಸಿಎಫ್‌ಎಲ್, ಜುವಾರಿ ಆಗ್ರೊ, ಪ್ರದೀಪ್ ಫಾಸ್ಫಟ್ಸ್ ಕಂಪನಿಗಳು ಡಿಎಪಿ ರಸಗೊಬ್ಬರದ ಬೆಲೆಯನ್ನು ₹ 1,700ಕ್ಕೆ ಏರಿಕೆ ಮಾಡಿದ್ದವು. ಇದರ ಬೆನ್ನಲ್ಲೇ ಇಫ್ಕೊ ಸಹ 50 ಕೆ.ಜಿ ಡಿಎಪಿ ರಸಗೊಬ್ಬರದ ಬೆಲೆಯನ್ನು ₹ 1,200ರಿಂದ ₹ 1,700ಕ್ಕೆ ಏರಿಕೆ ಮಾಡಿ ಪ್ರಕಟಣೆ ಹೊರಡಿಸಿತ್ತು.

ನೂತನ ಬೆಲೆಯನ್ನು ಮುದ್ರಿಸಿರುವ ರಸಗೊಬ್ಬರದ ಚೀಲಗಳು ಈಗಾಗಲೇ ಗೋದಾಮುಗಳಿಗೆ ಪೂರೈಕೆಯಾಗಿವೆ.

ಸರ್ಕಾರಕ್ಕೆ ಹೊಸ ಸಂಕಷ್ಟ

ತೈಲಬೆಲೆ ಹಾಗೂ ಅಡುಗೆ ಅನಿಲದ ಬೆಲೆ ಈಗಾಗಲೇ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರ ಜತೆಯಲ್ಲೇ ರಸಗೊಬ್ಬರದ ಬೆಲೆ ಏರಿಕೆಯು ಸರ್ಕಾರಕ್ಕೆ ಭಾರಿ ತಲೆನೋವಾಗಲಿದೆ. ಇದು ರಾಜಕೀಯ ಮತ್ತು ಆರ್ಥಿಕವಾಗಿ ದೇಶದ ಮೇಲೆ ಪರಿಣಾಮ ಬೀರಲಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಸರ್ಕಾರ ಹೇಳಿದ್ದರೂ ಆ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ಗೊಬ್ಬರದ ಬೆಲೆ ಏರಿಕೆಯಿಂದಾಗಿ, ಎಕರೆವಾರು ಕೃಷಿ ವೆಚ್ಚದಲ್ಲಿ ಕನಿಷ್ಠವೆಂದರೂ ₹1000 ಏರಿಕೆ ಆಗಬಹುದು. ಇದರ ಪರಿಣಾಮ ವಿವಿಧ ಕ್ಷೇತ್ರಗಳ ಮೇಲೆ ಆಗುತ್ತದೆ ಎಂದು ಅವರು ಹೇಳುತ್ತಾರೆ.

ಆಹಾರಧಾನ್ಯ ಉತ್ಪಾದನಾ ವೆಚ್ಚ ಹೆಚ್ಚಾಗುವುದರಿಂದ ರೈತರಿಗೆ ನೆರವಾಗಲು ಸರ್ಕಾರವು ಕನಿಷ್ಠ ಬೆಂಬಲ ಬೆಲೆಯನ್ನೂ ಭಾರಿ ಪ್ರಮಾಣದಲ್ಲಿ ಹೆಚ್ಚಿಸಬೇಕಾಗುತ್ತದೆ ಎಂದೂ ಅವರು ಹೇಳುತ್ತಾರೆ.

ಇಫ್ಕೊ ಬೆಲೆ ಏರಿಕೆ



ಸಬ್ಸಿಡಿ ಇಳಿಕೆ, ಬೆಲೆ ಏರಿಕೆ

ರಸಗೊಬ್ಬರಕ್ಕೆ ನೀಡುತ್ತಿರುವ ಸಹಾಯಧನವನ್ನು ಕೇಂದ್ರ ಸರ್ಕಾರವು ಪ್ರತಿ ಆರ್ಥಿಕ ವರ್ಷದಲ್ಲಿ ಇಳಿಕೆ ಮಾಡುತ್ತಲೇ ಬಂದಿದೆ. 2019-20ನೇ ಸಾಲಿನಿಂದ ಈ ಇಳಿಕೆ ಆರಂಭವಾಗಿತ್ತು. 2020-21ನೇ ಸಾಲಿನಲ್ಲಿ ಕೋವಿಡ್ ಲಾಕ್‌ಡೌನ್ ಕಾರಣ ರಸಗೊಬ್ಬರಕ್ಕೆ ಅತ್ಯಧಿಕ ಪ್ರಮಾಣದಲ್ಲಿ ಸಹಾಯಧನ ನೀಡಲಾಗಿತ್ತು. ಆದರೆ, 2021-22ನೇ ಸಾಲಿನಲ್ಲಿ ರಸಗೊಬ್ಬರ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಇಳಿಕೆ ಮಾಡಿದೆ. ಈ ಕಾರಣದಿಂದಲೇ ಕಂಪನಿಗಳು ರಸಗೊಬ್ಬರದ ಬೆಲೆ ಏರಿಕೆ ಮಾಡಿವೆ ಎಂದು ವಿರೋಧ ಪಕ್ಷಗಳು ವಿಶ್ಲೇಷಿಸಿವೆ.



'ಹಳೆಯ ದರದಲ್ಲಿ ಮಾರಾಟ'

ಬೆಲೆ ಏರಿಕೆ ಪ್ರಕಟಣೆಯು ಗುರುವಾರ ಮಧ್ಯಾಹ್ನ ಹೊರಬಿದ್ದಿತ್ತು. ಈ ಪ್ರಕಟಣೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಹೀಗಾಗಿ ಕೇಂದ್ರ ರಸಗೊಬ್ಬರ ಸಚಿವಾಲಯವು ಗುರುವಾರ ರಾತ್ರಿ ತುರ್ತು ಸಭೆ ನಡೆಸಿತು. ದೇಶದ ಗೊಬ್ಬರ ತಯಾರಿಕಾ ಖಾಸಗಿ ಕಂಪನಿಗಳ ಜತೆಯೂ ಸಭೆ ನಡೆಸಿತು.

ಇದರ ಬೆನ್ನಲ್ಲೇ ಶುಕ್ರವಾರ ಮಧ್ಯಾಹ್ನ, 'ರಸಗೊಬ್ಬರಗಳ ಬೆಲೆಯಲ್ಲಿ ಏರಿಕೆಯಿಲ್ಲ. ಏರಿಕೆ ಮಾಡಿಲ್ಲ. ಹಳೆಯ ದರದಲ್ಲೇ ಗೊಬ್ಬರಗಳನ್ನು ಮಾರಾಟ ಮಾಡುವಂತೆ ಖಾಸಗಿ ಕಂಪನಿಗಳಿಗೆ ನಿರ್ದೇಶನ ನೀಡಿದ್ದೇವೆ. ಖಾಸಗಿ ಕಂಪನಿಗಳೂ ಇದಕ್ಕೆ ಒಪ್ಪಿಕೊಂಡಿವೆ. ರೈತರ ಹಿತಾಸಕ್ತಿಯೇ ನಮ್ಮ ಆದ್ಯತೆ' ಎಂದು ರಸಗೊಬ್ಬರಗಳ ರಾಜ್ಯ ಖಾತೆ ಸಚಿವ ಮನ್ಸುಖ್ ಮಾಂಡವೀಯ ಹೇಳಿಕೆ ನೀಡಿದ್ದಾರೆ.

ಆದರೆ, ಬೆಲೆಯನ್ನು ಇಳಿಕೆ ಮಾಡುವ ಸಂಬಂಧ ಯಾವ ಕಂಪನಿಯೂ ಅಧಿಕೃತ ಪ್ರಕಟಣೆ ಹೊರಡಿಸಿಲ್ಲ.

ಇಫ್ಕೊ ಸ್ಪಷ್ಟನೆಯೂ ಅಸ್ಪಷ್ಟ

ಇಫ್ಕೊ ಸಹ ಈ ಬಗ್ಗೆ ಗುರುವಾರವೇ ಸ್ಪಷ್ಟನೆ ನೀಡಿತ್ತು. '50 ಕೆ.ಜಿ ಡಿಎಪಿ ಗೊಬ್ಬರದ ಚೀಲದ ಮೇಲೆ ₹ 1,700 ಎಂದು ತಾತ್ಕಾಲಿಕ ಬೆಲೆ ಮುದ್ರಿಸಿದ್ದೇವೆ. ಆ ಬೆಲೆಯಲ್ಲಿ ರೈತರಿಗೆ ಗೊಬ್ಬರ ಮಾರಾಟ ಮಾಡುವುದಿಲ್ಲ' ಎಂದು ಇಫ್ಕೊ ಸಿಇಒ ಯು.ಸಿ.ಅಶ್ವಥಿ ಹೇಳಿದ್ದಾರೆ.

'ಇಫ್ಕೊ ಗೋದಾಮುಗಳಲ್ಲಿ 11.7 ಲಕ್ಷ ಟನ್‌ನಷ್ಟು ಗೊಬ್ಬರ ಸಂಗ್ರಹ ಇದೆ. ಈ ರಸಗೊಬ್ಬರವನ್ನು ಹಳೆಯ ದರದಲ್ಲೇ ಮಾರಾಟ ಮಾಡುತ್ತೇವೆ. 50 ಕೆ.ಜಿ. ಡಿಎಪಿ ಚೀಲ ₹ 1,200ಕ್ಕೆ ಮಾರಾಟ ಮಾಡಲಾಗುವುದು' ಎಂದು ಅವರು ಹೇಳಿದ್ದಾರೆ. ಆದರೆ ಇಫ್ಕೊ ಪ್ರಕಟಣೆ ಬೇರೆ ರೀತಿಯ ಸ್ಪಷ್ಟನೆ ನೀಡಿದೆ.

'ಏಪ್ರಿಲ್‌ನಲ್ಲಿ ಕಚ್ಚಾವಸ್ತುಗಳ ಬೆಲೆಯಲ್ಲಿ ಏರಿಕೆಯಾಗಿದೆ. ಏಪ್ರಿಲ್‌ನಲ್ಲಿ ತಯಾರಿಸಲಾದ ಡಿಎಪಿ ಗೊಬ್ಬರಗಳ ಚೀಲದ ಮೇಲೆ ₹ 1,700 ಎಂದು ಮುದ್ರಿಸಲಾಗಿದೆ. ಇವುಗಳನ್ನು ಸಂಗ್ರಹದ ಉದ್ದೇಶದಿಂದ ಮಾತ್ರವೇ ಗೋದಾಮುಗಳಿಗೆ ಸಾಗಿಸಲಾಗಿದೆ. ಅವುಗಳನ್ನು ರೈತರಿಗೆ ಮಾರಾಟ ಮಾಡುವುದಿಲ್ಲ' ಎಂದು ಇಫ್ಕೊ ತನ್ನ ಪ್ರಕಟಣೆಯಲ್ಲಿ ವಿವರಿಸಿದೆ.

'ಹಳೆಯ ದಾಸ್ತಾನು ಹಳೆಯ ದರಕ್ಕೇ ಮಾರಾಟವಾಗಲಿದೆ. ಹೊಸ ದಾಸ್ತಾನು ಮುಗಿದ ಮೇಲೆ, ರಸಗೊಬ್ಬರದ ಬೆಲೆ ಇಳಿಕೆಯಾಗುವ ಸಾಧ್ಯತೆ ಇದೆ' ಎಂದೂ ಅದೇ ಪ್ರಕಟಣೆಯಲ್ಲಿ ಹೇಳಿದೆ.

'ಹಳೆಯ ದಾಸ್ತಾನನ್ನು ಹಳೆಯ ದರದಲ್ಲಿ ಮಾರಾಟ ಮಾಡುತ್ತೇವೆ ಎಂದು ಇಫ್ಕೊ ಸಿಇಒ ಹೇಳಿದ್ದಾರೆ. ಹೊಸ ದಾಸ್ತಾನನ್ನು ರೈತರಿಗೆ ಮಾರಾಟ ಮಾಡುವುದಿಲ್ಲ. ಆದರೆ ಹೊಸ ದಾಸ್ತಾನು ಖಾಲಿಯಾದ ಮೇಲೆ ಬೆಲೆ ಇಳಿಕೆಯಾಗುತ್ತದೆ ಎಂದು ಇಫ್ಕೊ ಪ್ರಕಟಣೆ ಹೇಳಿದೆ. ಇದರಲ್ಲಿ ಯಾವುದು ನಿಜ. ಹೊಸ ದಾಸ್ತಾನನ್ನು ಮಾರಾಟ ಮಾಡದಿದ್ದರೆ, ಅದು ಖಾಲಿಯಾಗುವುದು ಹೇಗೆ? ಹೊಸ ದಾಸ್ತಾನು ಖಾಲಿಯಾದ ಮೇಲೆ ಬೆಲೆ ಇಳಿಕೆಯಾಗುತ್ತದೆ ಎಂದರೆ ಅರ್ಥವೇನು' ಎಂದು ಟ್ವಿಟರ್‌ನಲ್ಲಿ ಹಲವರು ಪ್ರಶ್ನಿಸಿದ್ದಾರೆ.

ಆಧಾರ: ಪಿಟಿಐ, ಇಫ್ಕೊ, ದಿ ಫರ್ಟಿಲೈಸರ್ ಅಸೋಸಿಯೇಷನ್ ಆಫ್ ಇಂಡಿಯಾ, ಕೇಂದ್ರ ಬಜೆಟ್ 2021–22

ಕಾಲಯಾನವೇ ಯುಗದ ಧರ್ಮ

ಕಾಲ ಯಾರನ್ನೂ ಕಾಯುವುದಿಲ್ಲ, ತನ್ನ ಪರ್ಯಟನೆ ಮಾಡುತ್ತಲೇ ಇರುತ್ತದೆ. ಈ ಕಾಲನ ಹೆಜ್ಜೆಯೊಂದಿಗೆ ಇಷ್ಟವಿರಲಿ, ಇಲ್ಲದಿರಲಿ, ಎಲ್ಲರೂ ಹೆಜ್ಜೆ ಹಾಕಲೇಬೇಕು. ಹುಟ್ಟಿದ ಎಲ್ಲಾ ಜೀವಿಗಳು ನವ ಚೈತನ್ಯಕ್ಕಾಗಿ ಕಾಲನ ಯಾನದಲ್ಲಿ ಪಾಲ್ಗೊಳ್ಳಲೇಬೇಕು. ಗತಿಸಿದ ಜೀವಗಳು ಸಹ ಮರುಹುಟ್ಟಿಗೆ ಕಾಲನ ಗತಿಯನ್ನು ಚಾತಕಪಕ್ಷಿಯಂತೆ ಕಾಯಲೇಬೇಕು. ಸೃಷ್ಟಿಯ ಈ ಜೀವ-ಜೀವನಯಾನದಲ್ಲಿ ಕಾಲ ಉರುಳುತ್ತಲೇ ಇರುತ್ತದೆ. ಇದೇ ಯುಗಧರ್ಮ. ಇದನ್ನು ಬಿಟ್ಟು, ಸೃಷ್ಟಿಪಥದಾಚೆ ನಡೆದರೆ, ಅದರ ದುಷ್ಫಲವನ್ನು ಅನುಭವಿಸಬೇಕಾಗುತ್ತದೆ.

ಇಂದು ಮನುಷ್ಯ ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಸೃಷ್ಟಿನಿಯಮವನ್ನು ಮೀರಿದ್ದೇ ಕಾರಣ. ಅದರ ಪಾಪದ ಫಲವನ್ನು ಅನಾರೋಗ್ಯ, ಅನಾಹುತ, ಅನಾಚಾರದ ರೂಪದಲ್ಲಿ ಅನುಭವಿಸುತ್ತಿದ್ದಾನೆ. ಈ ಭೂಮಿಯಲ್ಲಿ ಹುಟ್ಟಿದ ಪ್ರತಿ ಜೀವಿಗೂ ಒಂದೇ ನಿಯಮ. ಮನುಷ್ಯನಿಗಾಗೇ ಪ್ರತ್ಯೇಕ ನಿಯಮವನ್ನ ಭಗವಂತ ರೂಪಿಸಿಲ್ಲ. ಆದರೆ ಮನುಷ್ಯನಿಗೆ ಒಂದಷ್ಟು ಹೆಚ್ಚು ಬುದ್ಧಿ ಕೊಟ್ಟಿದ್ದಾನಷ್ಟೆ. ಅಷ್ಟಕ್ಕೆ ತಾನೇ ಜಗತ್ತಿಗೆ ಅತಿ ಬುದ್ಧಿವಂತ ಅಂದುಕೊಂಡ ಮಾನವ, ಭೂಮಂಡಲದಲ್ಲಿ ಕೂತು ಬ್ರಹ್ಮಾಂಡವನ್ನು ಅಳೆಯುತ್ತಾ ಬಾವಿಕಪ್ಪೆಯಂತಾದ.

ಮನುಷ್ಯ ಎಂಥ ಮೂರ್ಖನೆಂದರೆ, ತನ್ನ ದೇಹ ಪ್ರಕೃತಿ ಸಹಜವಾಗಿ ಬೆಳೆಯುವುದರ ಬದಲು, ಕೃತಕವಾಗಿ ಬೆಳೆಸಲು ಹೋಗಿ ಆರೋಗ್ಯ ಹಾಳು ಮಾಡಿಕೊಂಡ. ನೀರಲ್ಲಿ ಬೆಳೆಯುವ ಪಾಚಿ ಒಂದು ಸಸ್ಯ ಅಂತ ಗುರುತಿಸಿದರೂ, ಪಾಚಿಗಟ್ಟಿದ ನೀರನ್ನು ಅಸಹ್ಯಿಸಿದ. ಆದರೆ, ಅದೇ ಪಾಚಿಯಿಂದ ಗುಳಿಗೆ ತಯಾರಿಸಿ, ಪೌಷ್ಟಿಕ ಆಹಾರ ಅಂತ ಸಂಭ್ರಮಿಸಿದ. ತನ್ನ ದೇಹ ಸಹ ಸೂಕ್ಷ್ಮ ಜೀವಿಗಳಿಂದಲೇ ನಿರ್ಮಿತವಾಗಿದೆ ಎಂಬ ಪರಮ ಸತ್ಯ ತಿಳಿಯದೆ, ತಾನು ತಿನ್ನುವ ಅನ್ನ, ಕುಡಿಯುವ ನೀರು, ಧರಿಸುವ ಬಟ್ಟೆ ಎಲ್ಲದಕ್ಕೂ ಕೀಟನಾಶಕ ಬಳಸಿ ಹಾಳಾದ.

ಬಹುಶಃ ಮನುಷ್ಯ ಒಂದಿಷ್ಟು ಹಾಳಾಗಿದ್ದು ಕೂಡಿಡುವ ದುರ್ಬುದ್ಧಿಯಿಂದಾದರೆ, ಮತ್ತಷ್ಟು ಹಾಳಾಗಿದ್ದು ಜಗತ್ತನ್ನು ಸೂಕ್ಷ್ಮದರ್ಶಕ ಹಿಡಿದು ನೋಡುವ ಅಲ್ಪಬುದ್ಧಿಯಿಂದ. ಭಗವಂತನ ಬ್ರಹ್ಮಾಂಡ ಸೃಷ್ಟಿಯನ್ನು ಸೂಕ್ಷ್ಮದರ್ಶಕದಿಂದ ನೋಡಲು ಹೋಗಿ ವಿಭ್ರಾಂತನಾದ. ತನ್ನ ಸುತ್ತಾ ಇಷ್ಟೊಂದು ಕ್ರಿಮಿಗಳಿವೆಯೇ ಅಂತ ಬೆಚ್ಚಿಬಿದ್ದು ಅವುಗಳ ನಿರ್ನಾಮಕ್ಕೆ ಮುಂದಾದ. ಆದರೆ ಅಲ್ಪಜ್ಞನಿಗೆ ಈ ಸಣ್ಣ ಸಣ್ಣ ಸೂಕ್ಷ್ಮ ಜೀವಿಗಳಿಂದಲೇ ಈ ಬ್ರಹ್ಮಾಂಡ ಸೃಷ್ಟಿಯಾಗಿದೆ ಎಂಬ ಅವನೇ ಪ್ರತಿಪಾದಿಸಿದ ಪರಮಾಣುತತ್ವವನ್ನು ಮರೆತುಬಿಟ್ಟ.

ಈ ಭೂಮಿ ಸೃಷ್ಟಿಯಾಗಿ ಕೋಟ್ಯಂತರ ವರ್ಷಗಳಾಗಿವೆ. ಮನುಷ್ಯ ಭೂಮಿಗೆ ಬಂದು ಲಕ್ಷಾಂತರ ವರ್ಷಗಳಾಗಿವೆ. ಇಲ್ಲಿಯವರೆಗೆ ಮನುಷ್ಯ ಬದುಕಿದ್ದಾನೆಂದರೆ ಹಿಂದೆ ಅವನು ಬದುಕಿದ ರೀತಿ ಸರಿ ಇದೆ ಎಂದರ್ಥ. ಇಂಥ ಸೂಕ್ಷ್ಮ ಅರಿಯದ ಮನುಷ್ಯ ಸೂಕ್ಷ್ಮ ಜೀವಿಗಳ ನಾಶಕ್ಕೆ ಯತ್ನಿಸಿ ತನ್ನ ವಿನಾಶವನ್ನು ತಾನೇ ತಂದುಕೊಳ್ಳುತ್ತಿದ್ದಾನೆ. ಭಗವಂತ ಭೂಮಿಗೆ ಕಳುಹಿಸುವಾಗ ಒಂದಷ್ಟು ಜೀವಾಣುಗಳನ್ನು ನಮ್ಮ ದೇಹದೊಳಗೆ ತುಂಬಿಸಿ ಕಳುಹಿಸಿರುತ್ತಾನೆ. ಅದನ್ನ ಜತನದಿಂದ ಕಾಪಾಡಿಕೊಂಡು, ವೃದ್ಧಿಸಿಕೊಂಡು ಬರುತ್ತೇವೋ ಅಲ್ಲಿವರೆಗೆ ಈ ದೇಹ ಸುರಕ್ಷಿತವಾಗಿರುತ್ತದೆ. ಇಂಥ ರಕ್ಷಕ ಜೀವಾಣುಗಳನ್ನೆ ಮೂರ್ಖನಂತೆ ಕೊಂದು, ಈಗ ಸಣ್ಣ ಕ್ರಿಮಿಗೂ ಬೆಚ್ಚಿ ಬೀಳುತ್ತಿದ್ದಾನೆ.

ವೈವಸ್ವತ ಮನ್ವಂತರದ ಪ್ಲವನಾಮ ಸಂವತ್ಸರದಲ್ಲಾದರೂ ಮಾನವ ತನ್ನ ಅಲ್ಪಬುದ್ಧಿ ಬಿಟ್ಟು, ವಿಶಾಲಬುದ್ಧಿಯಿಂದ ಪ್ರಕೃತಿಯೊಂದಿಗೆ ಒಡನಾಡುವುದನ್ನು ರೂಢಿಸಿಕೊಳ್ಳಲಿ. ಬಿಸಿಲಲ್ಲಿ ಬೆವರಿಸುವ, ಮಳೆಯಲ್ಲಿ ತೊಯ್ಯಿಸುವ, ಚಳಿಯಲ್ಲಿ ನಡುಗಿಸುವ ಪ್ರಕೃತಿಯ ಒಸಗೆಯನ್ನು ಪ್ರಾಂಜಲ ಮನಸ್ಸಿನಿಂದ ಆಸ್ವಾದಿಸಲಿ. ಯುಗದ ಯುಗಳ ಗೀತೆಗೆ ಕೊರಳೊಡ್ಡುವ ಪಕ್ಷಿಗಳಂತೆ, ಹಸಿರ ಹರ್ಷದಿಂದ ತೂಗಾಡುವ ಗಿಡಮರಗಳಂತೆ ಮನುಷ್ಯ ಭೂರಮೆಯ ವಸಂತೋತ್ಸವದಲ್ಲಿ ಮಿಂದೆದ್ದರೆ 'ಸಚ್ಚಿದಾನಂದ'ದ ಯುಗಧರ್ಮ ಸಾಕಾರವಾಗುತ್ತದೆ.

ಬೆಲೆ ನಿಯಂತ್ರಣ ಸಾಧ್ಯವೇ?

ರಸಗೊಬ್ಬರಗಳ ಬೆಲೆ ನಿಯಂತ್ರಣವು ಸುಮಾರು ಐದು ದಶಕಕ್ಕೂ ಹೆಚ್ಚು ಕಾಲದಿಂದ ಚರ್ಚೆಯ ವಿಚಾರವಾಗಿದೆ. ಈ ಕುರಿತು ಸ್ಪಷ್ಟವಾದ ನೀತಿ ರೂಪಿಸಲು 1977ರಲ್ಲಿ ಮರಾಠೆ ಸಮಿತಿ, 1992ರಲ್ಲಿ ಜಂಟಿ ಸಂಸದೀಯ ಸಮಿತಿ, 1998ರಲ್ಲಿ ಬೆಲೆ ನೀತಿ ಪರಿಶೀಲನೆಗಾಗಿ ಹನುಮಂತರಾವ್ ಸಮಿತಿ, 2000ದಲ್ಲಿ ವೆಚ್ಚ ಸುಧಾರಣಾ ಸಮಿತಿ, 2001ರಲ್ಲಿ ರಸಗೊಬ್ಬರಗಳ ತಯಾರಿಕಾ ವೆಚ್ಚ ಅಧ್ಯಯನ ಸಮಿತಿ, 2005 ಫಾಸ್ಫೇಟಿಕ್ ರಸಗೊಬ್ಬರಗಳ ನೀತಿ ರಚನೆಗೆ ತಜ್ಞರ ಸಮಿತಿ... ಹೀಗೆ ಹತ್ತಾರು ಸಮಿತಿಗಳು ರಚನೆಯಾಗಿವೆ. ಅವು ಕಾಲಕಾಲಕ್ಕೆ ವರದಿಗಳನ್ನೂ ನೀಡುತ್ತಾ ಬಂದಿವೆ.

1977ರ ಮರಾಠೆ ಸಮಿತಿಯ ಸಲಹೆಗಳ ಆಧಾರದಲ್ಲಿ, ಯೂರಿಯಾದ ಬೆಲೆ ನಿಗದಿ ವ್ಯವಸ್ಥೆಯನ್ನು ಜಾರಿ ಮಾಡಲಾಗಿತ್ತು. ಅದರಂತೆ ಇತರ ಸಮಿತಿಗಳು ಕಾಲಕಾಲಕ್ಕೆ ನೀಡಿದ ಸಲಹೆಗಳ ಆಧಾರದಲ್ಲಿ ಗೊಬ್ಬರದ ಬೆಲೆ, ಸಬ್ಸಿಡಿ ಮುಂತಾದ ವಿಚಾರಗಳಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡುತ್ತಾ ಬರಲಾಗಿದೆ.

1991ರಲ್ಲಿ ರಚನೆಯಾಗಿದ್ದ ಜಂಟಿ ಸಂಸದೀಯ ಸಮಿತಿಯು ಪಾಸ್ಫೇಟ್ ಮತ್ತು ಪೊಟಾಷ್ ಮೇಲಿನ ಬೆಲೆ ನಿಯಂತ್ರಣವನ್ನು ರದ್ದು ಪಡಿಸಿ, ಯೂರಿಯಾ ಬೆಲೆಯಲ್ಲಿ ಶೇ 10ರಷ್ಟು ಇಳಿಕೆ ಮಾಡುವ ಪ್ರಸ್ತಾವವನ್ನು ನೀಡಿತು. ಇದು ಜಾರಿಯಾಗುತ್ತಿದ್ದಂತೆ ಪಾಸ್ಫೇಟ್ ಹಾಗೂ ಪೊಟಾಷ್ ಬೆಲೆ ಹೆಚ್ಚಳವಾಗಿ, ಅದರ ಬಳಕೆಯಲ್ಲಿ ಭಾರಿ ಇಳಿಕೆ ಕಂಡುಬಂತು. ಎನ್‌ಪಿಕೆ ಬಳಕೆ ಪ್ರಮಾಣವು ಮತ್ತೆ ಹಿಂದಿನ ಸ್ಥಿತಿಗೆ ಹೋಗಬೇಕಾದರೆ ಸಾಕಷ್ಟು ವರ್ಷಗಳೇ ಬೇಕಾದವು. ಆದರೆ, ಇತರ ಸಮಿತಿಗಳ ವರದಿಗಳು ಹೆಚ್ಚಿನವುಗಳಿಗೆ ಸಬ್ಸಿಡಿ ಸಹಿತವಾದ ಪರಿಹಾರ ಕ್ರಮಗಳನ್ನೇ ಸೂಚಿಸಿದ್ದವು.

ಈ ವಿಚಾರದಲ್ಲಿ ಎಷ್ಟೇ ಬದಲಾವಣೆಗಳಾಗಿದ್ದರೂ ಇತ್ತೀಚಿನವರೆಗೂ ದೇಶದಲ್ಲಿ ರಸಗೊಬ್ಬರ ತಯಾರಿಕಾ ಸಂಸ್ಥೆಗಳು ಸಂಪೂರ್ಣವಾಗಿ ನಿಯಂತ್ರಣ ಮುಕ್ತವಾಗಿರಲಿಲ್ಲ. ಆದ್ದರಿಂದ ಈ ಕ್ಷೇತ್ರದಲ್ಲಿ ಆಗಿರುವ ಹೂಡಿಕೆ ಕಡಿಮೆ ಎಂದು ಉದ್ದಿಮೆ ವಲಯ ಹೇಳುತ್ತದೆ.

ದೀರ್ಘಕಾಲದಿಂದ ರಸಗೊಬ್ಬರಗಳ ಅನಿಯಂತ್ರಿತವಾದ ಬಳಕೆಯಿಂದ ಭೂಮಿಯು ಫಲವತ್ತತೆ ಕಳೆದುಕೊಳ್ಳುತ್ತಿರುವುದನ್ನು ಮನಗಂಡ ಸರ್ಕಾರವು 2009ರಲ್ಲಿ ಪೋಷಕಾಂಶ ಆಧಾರಿತ ಸಬ್ಸಿಡಿ ವ್ಯವಸ್ಥೆ ಜಾರಿಮಾಡಿತು. ಇದರಿಂದ ಈ ಕ್ಷೇತ್ರಕ್ಕೆ ಇನ್ನಷ್ಟು ಹೂಡಿಕೆ ಬರಬಹುದು ಎಂದೂ ನಿರೀಕ್ಷಿಸಲಾಗಿತ್ತು. ಯೂರಿಯಾ ಅನ್ನು ಈ ವ್ಯವಸ್ಥೆಯಿಂದ ಹೊರಗಿಡಲಾಯಿತು. ಆದರೆ, ಈ ವ್ಯವಸ್ಥೆಯ ಅನುಷ್ಠಾನವು ಸರಿಯಾಗಿ ಆಗಲಿಲ್ಲ.

ಚುನಾವಣೆ ಕಾರಣ?

ರಸಗೊಬ್ಬರಗಳ ಬೆಲೆ ಏರಿಕೆಗೆ ಕಂಪನಿಗಳು ಈಗ ನಿರ್ಧರಿಸಿದ್ದರೂ ಅದನ್ನು ತಡೆಯುವಂತೆ ಸರ್ಕಾರ ಕಂಪನಿಗಳಿಗೆ ಸೂಚನೆ ನೀಡಿದೆ. ಆದರೆ ಯೂರಿಯಯೇತರ ರಸಗೊಬ್ಬರಗಳನ್ನು ಬೆಲೆ ನಿಯಂತ್ರಣದಿಂದ ಮುಕ್ತಗೊಳಿಸಿರುವುದರಿಂದ ಬೆಲೆ ಏರಿಕೆ ತಡೆ ಸರ್ಕಾರದಿಂದ ಸಾಧ್ಯವಾಗಬಹುದೇ ಎಂಬ ಪ್ರಶ್ನೆ ಮೂಡಿದೆ. ಪಶ್ಚಿಮ ಬಂಗಾಳದಲ್ಲಿ ಐದು ಹಂತದ ಮತದಾನ ಬಾಕಿ ಇರುವುದರಿಂದ ಸರ್ಕಾರವು ಕಂಪನಿಗಳ ಮೇಲೆ ಒತ್ತಡ ಹೇರಿ, ಸದ್ಯಕ್ಕೆ ಬೆಲೆ ಏರಿಕೆಯನ್ನು ತಡೆಹಿಡಿದಿದೆ. ಚುನಾವಣಾ ಫಲಿತಾಂಶದ ಬಳಿಕ ಬೆಲೆ ಏರಿಕೆ ಖಚಿತ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಆರಂಭವಾಗಿದೆ.

ಕಳಸ ಪಟ್ಟಣ, ಆಸುಪಾಸು ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಉತ್ತಮ ಮಳೆ ಸುರಿದಿದೆ.

ಉಷ್ಣಾಂಶ ಅಲ್ಪ ಇಳಿಕೆ: ಕಾಫಿ, ಅಡಿಕೆ ಫಸಲಿಗೆ ಅನುಕೂಲ

ವಿವಿಧೆಡೆ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ಮಳೆಯಾಗಿದ್ದು, ಬಿಸಿಲಿನಿಂದ ತತ್ತರಿಸಿದ ಜನತೆಗೆ ತಂಪೆರೆದಿದೆ.

ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಗದಗ, ವಿಜಯಪುರ, ಹಾವೇರಿ ಜಿಲ್ಲೆಗಳಲ್ಲಿ ಸಾಯಂಕಾಲ ಗುಡುಗು ಸಹಿತ ಮಳೆಯಾಗಿದೆ.

ಬೆಳಗಾವಿ ನಗರ ಮತ್ತು ರಾಮದುರ್ಗ, ಅಥಣಿ, ಗೋಕಾಕದಲ್ಲಿ ಕೆಲ ಕಾಲ ಜೋರು ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಯಿತು. ವಿಜಯಪುರ ಜಿಲ್ಲೆಯ ಹೊರ್ತಿ, ತಿಕೋಟಾ, ಕಲಕೇರಿ, ಸಿಂದಗಿಯಲ್ಲಿಯೂ ಗುಡುಗು, ಸಿಡಿಲಿನ ಮಳೆ ಬಿದ್ದಿದೆ.

ಹುಬ್ಬಳ್ಳಿ, ಧಾರವಾಡ ನಗರದಲ್ಲಿ ಕೆಲ ಸಮಯ ಧಾರಾಕಾರ ಮಳೆಯಾಗಿದೆ. ಹಾವೇರಿಯ ಹಾನಗಲ್ ಹಾಗೂ ಗದಗದಲ್ಲಿಯೂ ಮಳೆಯಾಗಿದೆ.

ಕಳಸ ಪಟ್ಟಣ ಮತ್ತು ಆಸುಪಾಸಿನ ಪ್ರದೇಶದಲ್ಲಿ ಶುಕ್ರವಾರ ಸಂಜೆ ಉತ್ತಮ ಮಳೆ ಸುರಿಯಿತು. ಎರಡು ದಿನಗಳಿಂದ ಮೋಡ ಕವಿದರೂ, ಮಳೆಯಾಗದೇ ರೈತರು ನಿರಾಶರಾಗಿದ್ದರು.

ಸಂಜೆ 4ಗಂಟೆಗೆ ಭಾರಿ ಗಾಳಿ ಜೊತೆಗೆ ಸುಮಾರು ಅರ್ಧಗಂಟೆ ಉತ್ತಮ ಮಳೆಯಾಯಿತು. ತೇವಾಂಶದ ಕೊರತೆಯಿಂದ ಬಳಲುತ್ತಿದ್ದ ಅಡಿಕೆ, ಕಾಫಿ ಫಸಲಿಗೆ ಈ ಮಳೆ ಅನುಕೂಲವಾಗಿದೆ. ಗರಿಷ್ಠ ಪ್ರಮಾಣಕ್ಕೆ ಏರಿದ್ದ ಹಗಲಿನ ಉಷ್ಣಾಂಶ ಕೂಡ ಈ ಮಳೆಯಿಂದ ಕುಸಿದಿದೆ.

ಕಲಬುರ್ಗಿ ನಗರವೂ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಶುಕ್ರವಾರ ಮಧ್ಯಾಹ್ನ ಅರ್ಧ ಗಂಟೆಗೂ ಹೆಚ್ಚು ತುಂತುರು ಮಳೆ ಸುರಿಯಿತು.

ಒಂದು ವಾರದಿಂದ ನಗರದ ಗರಿಷ್ಠ ಉಷ್ಣಾಂಶ 40ರಿಂದ 42 ಡಿಗ್ರಿ ದಾಟಿದೆ. ಬಿಸಿಲಿನ ತಾಪಕ್ಕೆ ತತ್ತರಿಸಿದ ಜನರಿಗೆ ಶುಕ್ರವಾರ ಸುರಿದ ಮಳೆ ತುಸು ತಂಪೆರೆಯಿತು.

ಕುಲಪತಿ ಹುದ್ದೆಗೆ ಹಣ: ಪ್ರಾಧ್ಯಾಪಕ ಅಮಾನತು

ಪ್ರಜಾವಾಣಿ ವಾರ್ತೆ

ಮಂಗಳೂರು: ಕುಲಪತಿ ಹುದ್ದೆ ಪಡೆಯಲು ರಾಮಸೇನೆ ಸ್ಥಾಪಕಾಧ್ಯಕ್ಷ ಪ್ರಸಾದ್ ಅತ್ತಾವರ್‌ಗೆ ₹17.50 ಲಕ್ಷ ನೀಡಿದ್ದ ಮಂಗಳೂರು ವಿಶ್ವವಿದ್ಯಾಲಯದ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಎಂ.ಜೈಶಂಕರ್ ಅವರನ್ನು ಅಮಾನತು ಮಾಡಲಾಗಿದೆ.

ಮಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಪಿ.ಎಸ್.ಯಡಪಡಿತ್ತಾಯ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ. ಸಿಂಡಿಕೇಟ್ ಸದಸ್ಯರ ಮನವಿಯಂತೆ ಪ್ರಕರಣದ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತನಿಖೆ ಮಾಡಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಡಾ.ಎಂ.ಜೈಶಂಕರ್‌ಗೆ ನೋಟಿಸ್ ನೀಡಲಾಗಿತ್ತು. ಆಂತರಿಕ ತನಿಖಾ ವರದಿ ಬರುವವರೆಗೆ ಡಾ.ಜೈಶಂಕರ್ ಅವರನ್ನು ಅಮಾನತು ಮಾಡಲು ಶುಕ್ರವಾರ ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲಾಗಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತನಿಖೆ ಮಾಡಿಸಲಾಗುವುದು' ಎಂದು ಕುಲಪತಿ ಡಾ.ಪಿ.ಎಸ್.ಯಡಪಡಿತ್ತಾಯ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆ ಪಡೆಯಲು ಪ್ರಸಾದ್ ಅತ್ತಾವರ್‌ಗೆ ₹17.50 ಲಕ್ಷ ನೀಡಿದ್ದ ಡಾ.ಜೈಶಂಕರ್, ವಂಚನೆಗೆ ಒಳಗಾದ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು.

ಗುಂಡಣ್ಣ

ದಿನ ಭವಿಷ್ಯ

ಶನಿವಾರ 10 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೇವತಿ ಚತುರ್ದಶೀ ಗಂ. 57-50 (ಬೆ.ಘ್ರಾ. 5-25) ಶನಿವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 1-16 (ಬೆ. 6-47) ಬ್ರಹ್ಮ ನಾಮ ಯೋಗ ಗಂ 18-19 ಭದ್ರೆ ಕರಣ ಗಂ. 26-41 ವಿಷ ಗಂ. 26-54 ಅಮೃತ ಗಂ. 52-33 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-15 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 7

ಮೇಷ: ಅನಗತ್ಯ ಸಿಟ್ಟಿನಿಂದುಂಟಾಗುವ ನಷ್ಟ ತಪ್ಪಿಸಲು ಶಾಂತಿ ಸಮಾಧಾನದಿಂದ ವರ್ತಿಸುವುದು ಒಳಿತು. ನ್ಯಾಯಾಲಯದಲ್ಲಿನ ವ್ಯವಹಾರವನ್ನು ಮುಂದಕ್ಕೆ ಹಾಕುವುದು ಉತ್ತಮ. ಕ್ರೀಡಾ ಪಟುಗಳಿಗೆ ಉತ್ತಮ ಅವಕಾಶ.

ವೃಷಭ: ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳು ಅಂತ್ಯಗೊಂಡು ನೆಮ್ಮದಿ ಮೂಡಿಬರಲಿದೆ. ಮಾತಿನಿಂದುಂಟಾಗುವ ವೈಮನಸ್ಸಿಗಿಂತಲೂ ಮೌನವೇ ವಾಸಿ. ಇತರರ ಬಗ್ಗೆ ಅವಹೇಳನ ಸಲ್ಲ.

ಮಿಥುನ: ಉದ್ಯೋಗದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಅವಶ್ಯ. ಸಹೋದ್ಯೋಗಿಗಳೊಂದಿಗೆ ಸಹಕಾರ ಮನೋಭಾವದಿಂದಿರುವುದು ಒಳಿತು. ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಕರ್ಕಾಟಕ: ವಾಹನ ಚಾಲನೆಯಲ್ಲಿ ಮುಂಜಾಗ್ರತೆ ವಹಿಸುವುದು ಒಳಿತು. ವಿದೇಶ ಪ್ರಯಾಣ ಸಾಧ್ಯತೆ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಆಪ್ತರೊಂದಿಗೆ ಮನದಿಂಗಿತವನ್ನು ಮುಕ್ತವಾಗಿ ಹಂಚಿಕೊಳ್ಳಿ.

ಸಿಂಹ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನ. ಕ್ರೀಡಾಪಟುಗಳಿಗೆ ಅವಕಾಶಗಳು ಹೆಚ್ಚಿ ಪುರಸ್ಕಾರಕ್ಕೆ ಪಾತ್ರರಾಗುವ ಸಾಧ್ಯತೆ. ಸಮಾಧಾನ ಚಿತ್ತರಾಗಿ ವ್ಯವಹರಿಸುವುದು ಒಳಿತು.

ಕನ್ಯಾ: ಹಣಕಾಸಿನ ವಿಷಯದಲ್ಲಿ ಯಾವುದೇ ಆತಂಕಕ್ಕೆ ಅವಕಾಶವಿಲ್ಲ. ಹೊಸ ಹೊಸ ವ್ಯವಹಾರ ಆರಂಭಿಸುವ ಯೋಜನೆ ಕೈಗೂಡಲಿದೆ. ಆಸ್ತಿ-ಪಾಸ್ತಿಗಳ ವಿಷಯದಲ್ಲಿ ಜತನ ಮಾಡುವುದು ಒಳಿತು.

ತುಲಾ: ಬೇರೆಯವರ ಒಳಸಂಚಿಗೆ ಬಲಿಪಶುವಾಗದೇ ವಿವೇಚನೆಯಿಂದ ವ್ಯವಹರಿಸುವುದು ಒಳಿತು. ಆರ್ಥಿಕ ಒತ್ತಡಗಳಿಂದಾಗಿ ಕಿರಿಕಿರಿ. ವೆಚ್ಚದ ಮೇಲೆ ಹಿಡಿತ ಅಗತ್ಯವೆನಿಸುತ್ತಿದೆ.

ವೃಶ್ಚಿಕ: ನಿಮ್ಮ ವೈಯಕ್ತಿಕ ವಿಚಾರಗಳನ್ನು ಇತರರೊಡನೆ ಚರ್ಚಿಸುವುದರಿಂದ ತೊಂದರೆ. ಉತ್ಪಾದನಾ ಕ್ಷೇತ್ರದಲ್ಲಿ ಲಾಭ. ಹಿರಿಯರ ಆರೋಗ್ಯದ ವಿಚಾರದಲ್ಲಿ ಕಾಳಜಿ ಅಗತ್ಯ. ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ.

ಧನು: ಉದ್ಯೋಗಾಕಾಂಕ್ಷಿಗಳಿಗೆ ಅವಕಾಶಗಳು ದೊರಕಲಿವೆ. ಪ್ರೀತಿಪಾತ್ರರೊಂದಿಗೆ ಸಂಬಂಧ ಬೆಸೆಯುವ ಸಾಧ್ಯತೆ. ದಾಂಪತ್ಯದಲ್ಲಿ ಸಾಮರಸ್ಯದಿಂದಾಗಿ ನೆಮ್ಮದಿ ಮೂಡಿಬರುವುದು.

ಮಕರ: ವೈದ್ಯಕೀಯ ಕ್ಷೇತ್ರದಲ್ಲಿ ವ್ಯವಹರಿಸುವವರಿಗೆ ವೃಥಾ ಆರೋಪಗಳನ್ನು ಎದುರಿಸಬೇಕಾದೀತು. ಯೋಜನೆಗಳು ಕೈಗೂಡಿ ಯಶಸ್ಸು. ಆತ್ಮೀಯರೊಂದಿಗೆ ದೂರ ಪ್ರಯಾಣ ಸಾಧ್ಯತೆ.

ಕುಂಭ: ಕಂಪ್ಯೂಟರ್ ಮುಂತಾದ ತಾಂತ್ರಿಕ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಉತ್ತಮ ಲಾಭ. ವಿದ್ಯಾರ್ಥಿಗಳಿ ಚಂಚಲತೆಯಿಂದಾಗಿ ಓದಿನಲ್ಲಿ ಹಿನ್ನಡೆ. ನ್ಯಾಯಾಲಯದಲ್ಲಿನ ಕಟ್ಲೆಗಳಲ್ಲಿ ಯಶ.

ಮೀನ: ಹಮ್ಮಿಕೊಂಡ ಯೋಜನೆಗಳಿಗೆ ಸಹಕಾರ ದೊರೆಯುವುದರಿಂದ ಯಶಸ್ಸು. ಆರ್ಥಿಕ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ದಿನಸಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿನ ಹೆಚ್ಚಳದಿಂದಾಗಿ ಉತ್ತಮ ಆದಾಯ.

ನಿಮ್ಮ ಜನ್ಮದಿನ 10-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಕೆಲಸ ಕಾರ್ಯಗಳಲ್ಲೂ ಧೈರ್ಯದಿಂದ ಮುನ್ನುಗ್ಗಿ ಯಶಸ್ಸನ್ನು ನಿಮ್ಮದಾಗಿಸಿಕೊಳ್ಳುವಿರಿ. ಆರ್ಥಿಕ ಬಲ ವೃದ್ಧಿಗಾಗಿ ಹೊಸ ಯೋಜನೆಯೊಂದನ್ನು ರೂಪಿಸಿಕೊಳ್ಳುವಿರಿ. ಸಂಗಾತಿಯ ಹಿತವನ್ನು ಕಡೆಗಣಿಸುವುದು ಸರಿಯಲ್ಲ. ಸಾಮಾಜಿಕ ಜೀವನದಲ್ಲಿ ಕೀರ್ತಿ ಲಾಭ.

ಪದಬಂಧ 4563 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಟದ ಬಯಲು ! (4)
3.ತಂದೆಯ ತಂದೆ (4)
5.ದಶಮ ಗ್ರಹ ಎನಿಸಿರುವ ಮಗಳ ಗಂಡ! (3)
6.ಕದಕ್ಕೆ ತಾಕಿಸಿರುವ ಕೆನ್ನೆ (3)
8.ಕೊನೆಗೆ ಬೆಲೆಯಿಟ್ಟಾಗಲೇ ಹೊಟ್ಟೆ ಕಾಣುವುದು! (3)
9.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
10.ಗುಂಪು ಇಲ್ಲಿ ಕಾಣುತ್ತಿದೆ (3)
12.ಬೆಲ್ಲ ಅಥವಾ ಸಕ್ಕರೆಯಿಂದ ತಯಾರಿಸಿದ ಪಾನೀಯ (3)
14.ಈಕೆ ವಿದ್ಯಾಧಿದೇವತೆ (4)
15.ಇದು ಹೂವಿನ ಶರ (4)

ಮೇಲಿಂದ ಕೆಳಕ್ಕೆ

1.ಆಗಮಗಳನ್ನು ತಿಳಿದವನು (4)
2.ಪ್ರಾಣಿ,ಪಕ್ಷಿಗಳನ್ನು ಹಿಡಿಯುವ ಸಾಧನವಿಲ್ಲಿ ಉಲ್ಟಾ ಆಗಿದೆ (2)
3.ತಂದೆ ಇಲ್ಲಿದ್ದಾನೆ (2)
4.ಕೈ ಬರಹವಿದು (4)
7.ಮಸ್ತಕದ ಬಳಿಯಿರಿಸಿದ ಹೊತ್ತಿಗೆ (3)
8.ಗೂರಲು ರೋಗ (3)
9.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
11.ವಿಷ್ಣುವಿನ ಬಳಿಯಿರಿಸಿರುವ ಅಗಲವಾದ ತಟ್ಟೆ (4)
12.ಬೀಜ ಬಿತ್ತಲು ಮಾಡಿರುವ ಮಡಿ (2)
13.ಕನಸುವಿನೊಳಗಿರುವ ಸತ್ವವುಳ್ಳ ಆಹಾರ! (2)



4562ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಭಾವಮ್ಮೈದುನ 4.ಪತ್ತಾರ 5.ಟಗರು 9.ವರ್ಜ್ಯ 10.ದರಗ 11. ಮನಾ 12.ನಸುಕು 14.ಅಂತಕ 15.ಲವಲವಿಕೆ

ಮೇಲಿಂದ ಕೆಳಕ್ಕೆ: 1.ತ್ರಿಮೈ 2.ಭಾರ 3.ನಟ 4.ಪರ್ಯವಸಾನ 6.ರುದ್ರನಾಟಕ 7.ಚಂದನ 8.ಅಂಗದ 13.ಕುಲ 14.ಅಂಕೆ 16.ಲಡಿ

ಸುಡೊಕು 4949

				7			6	
	5		4		2			1
	3	1		5		2		
6		4		3			5	
5		2	6		9			8
				2			4	
3				1			9	
		5	8		3	6		7
1				6				3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4948 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ನಮ್ಮ ಮೆಟ್ರೊ: ಶಿವಾಜಿ ನಗರದ ಪೊಲೀಸ್ ಠಾಣೆ ಬಳಿ ಅಡಿಪಾಯದ ಭಾಗ ಕುಸಿತ

ಸುರಂಗ ಕಾಮಗಾರಿ: ಕಂಪಿಸಿದ ಕಟ್ಟಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಕಂಟೋನ್ಮೆಂಟ್ ನಿಲ್ದಾಣದಿಂದ ಶಿವಾಜಿನಗರದವರೆಗೆ ಸುರಂಗ ಮಾರ್ಗ ಕೊರೆಯುವ ಕಾಮಗಾರಿ ನಡೆಯುತ್ತಿದ್ದು, ಶುಕ್ರವಾರ ಮಧ್ಯಾಹ್ನ ಇಲ್ಲಿನ ಕಟ್ಟಡಗಳು ಕಂಪಿಸಿವೆ.

ಶಿವಾಜಿ ನಗರ ಪೊಲೀಸ್ ಠಾಣೆಯಿಂದ ಸುಮಾರು 20 ಅಡಿ ದೂರದಲ್ಲಿರುವ ಬಹುಅಂತಸ್ತಿನ ಕಟ್ಟಡವೊಂದರ ಅಡಿಪಾಯದ ಬಳಿಯ ಸ್ವಲ್ಪ ಭಾಗ ಕುಸಿದಿದೆ. ಯಾವುದೇ ಅವಘಡ ಸಂಭವಿಸದಿದ್ದರೂ ಸ್ಥಳೀಯರು ಆತಂಕಗೊಂಡಿದ್ದಾರೆ.

'ಮಹೀಂದ್ರಾ ನಗರದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ ಸುರಂಗ ಕೊರೆಯಲಾಗುತ್ತಿದೆ. ಕೇವಲ 1 ಕಿ.ಮೀ. ಅಂತರದಲ್ಲಿ ಇದು ಮೂರನೇ ಬಾರಿ ಈ ರೀತಿ ಕಟ್ಟಡಗಳು ಅಲುಗಾಡುವ ಸಂದರ್ಭ ನೋಡುತ್ತಿದ್ದೇವೆ. ಆತಂಕವಾಗುತ್ತಿದೆ' ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

ಕಟ್ಟಡ ಅಡಿಪಾಯದ ಸ್ವಲ್ಪ ಭಾಗ ಕುಸಿದಿರುವುದು

ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಕಟ್ಟಡದ ಅಡಿಪಾಯದ ಬದಿಯ ಭಾಗ ಕುಸಿದಿದೆ. ಈ ಕಟ್ಟಡದಲ್ಲಿ ವಾಸವಿದ್ದವರು ನಿಗಮದ ಸೂಚನೆ ಮೇರೆಗೆ ನಾಲ್ಕು ದಿನಗಳ ಹಿಂದೆಯೇ ಮನೆ ಖಾಲಿ ಮಾಡಿದ್ದಾರೆ. ಆದರೆ, ಮನೆಯಲ್ಲಿನ ವಸ್ತುಗಳು ಹಾಗೇ ಇದ್ದವು.

ಮೆಟ್ರೊ ಕಾರ್ಮಿಕರು ಸಂಜೆ 4ರವರೆಗೂ ವಸ್ತುಗಳನ್ನೆಲ್ಲ ತೆರವುಗೊಳಿಸಿ, ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರು.

'ಕಟ್ಟಡದ ಕೆಳಗಡೆಯೇ ವಿದ್ಯುತ್ ಕಂಬ ಇದೆ. ಕಟ್ಟಡದ ಸ್ವಲ್ಪ ದೂರದಲ್ಲಿನ ಮನೆಗಳಲ್ಲಿ ಜನ ವಾಸಿಸುತ್ತಿದ್ದಾರೆ. ಎರಡು-ಮೂರು ದಿನಗಳಲ್ಲಿ ರಂಜಾನ್ ಕೂಡ ಇದೆ. ಹೆಚ್ಚು ಜನ ಶಿವಾಜಿ ನಗರದಲ್ಲಿ ಓಡಾಡುತ್ತಾರೆ. ಈ ವೇಳೆಯಲ್ಲಿ ಹೆಚ್ಚು ಮುನ್ನೆಚ್ಚರಿಕೆ ಕ್ರಮಗಳನ್ನು ಬಿಎಂಆರ್‌ಸಿಎಲ್ ತೆಗೆದುಕೊಳ್ಳಬೇಕು' ಎಂದು ಸ್ಥಳೀಯ ನಿವಾಸಿ, ಹಿರಿಯ ನಾಗರಿಕ ಮಹಮ್ಮದ್ ಸಿದ್ದಿಕಿ 'ಪ್ರಜಾವಾಣಿ'ಗೆ ತಿಳಿಸಿದರು.

'ಶಿವಾಜಿನಗರ ನಗರದ ಅತಿ ಹಳೆಯ ಪ್ರದೇಶ. ಹಳೆಯ ಕಟ್ಟಡಗಳು ಇಲ್ಲಿವೆ. ಅಲ್ಲದೆ, ಭೂಮಿಯ ತೀರಾ ಮೇಲ್ಪದರದಲ್ಲಿ ನೀರು ಮತ್ತು ದೊಡ್ಡ ಬಂಡೆಗಳು ಇವೆ. ಅದರ ಮೇಲೆ ಈ ಪ್ರದೇಶ ನಿರ್ಮಾಣವಾಗಿದೆ. ಸುರಂಗ ಕೊರೆಯುವಾಗ ಎಷ್ಟು ಜಾಗ್ರತೆ ವಹಿಸಿದರೂ ಕಡಿಮೆಯೇ' ಎಂದು ಅವರು ಹೇಳಿದರು.

'ಹಗಲು ಮತ್ತು ರಾತ್ರಿಯ ವೇಳೆ ಕಾರ್ಮಿಕರು ಮಾತ್ರ ಕೆಲಸ ಮಾಡುತ್ತಾರೆ. ನಿಗಮದ ಅಧಿಕಾರಿಯೊಬ್ಬರು ಸ್ಥಳದಲ್ಲಿರಬೇಕು. ಮೇಲ್ವಿಚಾರಕರೊಬ್ಬರನ್ನು ನೇಮಕ ಮಾಡುವ ಅಗತ್ಯವಿದೆ' ಎಂದು ಅವರು ಸಲಹೆ ನೀಡಿದರು.

'ಮೊದಲನೇ ಹಂತದ ಅನುಭವದ ಆಧಾರದ ಮೇಲೆ ಈ ಬಾರಿ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಕಾಮಗಾರಿ ವೇಳೆ ಯಾವ ಕಟ್ಟಡಗಳಿಗೆ ಹಾನಿ ಆಗಬಹುದು ಎಂಬ ಸಮೀಕ್ಷೆ ನಡೆಸಿ, ಆ ಕಟ್ಟಡಗಳಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ' ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ ಚೌಹಾಣ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಟ್ಟಡದವರು ವಸ್ತುಗಳನ್ನು ತೆರವುಗೊಳಿಸದ ಕಾರಣ, ನಮ್ಮ ಕಾರ್ಮಿಕರೇ ಅವುಗಳನ್ನು ತೆರವುಗೊಳಿಸಿದ್ದಾರೆ. ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸ್ಥಳದಲ್ಲಿ ಯಾವಾಗಲೂ ಮೇಲ್ವಿಚಾರಕರೊಬ್ಬರು ಇರುತ್ತಾರೆ' ಎಂದೂ ಹೇಳಿದರು.

ರಾಕೇಶ್ ಸಿಂಗ್‌ಗೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಹೊಣೆ

ಬೆಂಗಳೂರು: ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಹಿರಿಯ ಐಎಎಸ್ ಅಧಿಕಾರಿಯಾಗಿರುವ ರಾಕೇಶ್ ಸಿಂಗ್ ಅವರು ಬಿಡಿಎಯ ಆಡಳಿತಾಧಿಕಾರಿ ಮತ್ತು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನೂ ನಿಭಾಯಿಸುತ್ತಿದ್ದಾರೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅಜಯ್ ಸೇಠ್ ಅವರು ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಸುದ್ದಿ 2 ನಿಮಿಷ

ನಟ ರಕ್ಷಿತ್ ಶೆಟ್ಟಿ ಬಂಧನಕ್ಕೆ ಜಾಮೀನು ರಹಿತ ವಾರೆಂಟ್

ಬೆಂಗಳೂರು: ಅನುಮತಿ ಇಲ್ಲದೇ 'ಕಿರಿಕ್ ಪಾರ್ಟಿ' ಸಿನಿಮಾದಲ್ಲಿ ಹಾಡು ಬಳಸಿದ್ದ ಮೊಕದ್ದಮೆಗೆ ಸಂಬಂಧಪಟ್ಟಂತೆ ನಟ ರಕ್ಷಿತ್ ಶೆಟ್ಟಿ ಬಂಧನಕ್ಕೆ ನಗರದ 9ನೇ ಎಸಿಎಂಎಂ ನ್ಯಾಯಾಲಯ ಜಾಮೀನು ರಹಿತ ವಾರೆಂಟ್ ಜಾರಿಗೊಳಿಸಿದೆ.

'ಶಾಂತಿ ಕ್ರಾಂತಿ' ಚಿತ್ರದ ಹಾಡನ್ನು ಲಹರಿ ಸಂಸ್ಥೆ ಅನುಮತಿ ಇಲ್ಲದೇ ಕಿರಿಕ್ ಪಾರ್ಟಿ ಸಿನಿಮಾದಲ್ಲಿ ಬಳಸಲಾಗಿತ್ತು. ರಕ್ಷಿತ್ ಶೆಟ್ಟಿ, ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಮತ್ತು ಪರಮ್ವ ಸ್ಟುಡಿಯೊ ವಿರುದ್ಧ ಲಹರಿ ಸಂಸ್ಥೆಯವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು.

ಮೊಕದ್ದಮೆ ವಿಚಾರಣೆಗೆ ಹಲವು ಬಾರಿ ಗೈರಾಗಿದ್ದರಿಂದಾಗಿ ನಟ, ಸಂಗೀತ ನಿರ್ದೇಶಕ, ಪರಮ್ವ ಸ್ಟುಡಿಯೊ ಮಾಲೀಕರ ವಿರುದ್ಧ ವಾರೆಂಟ್ ಜಾರಿ ಮಾಡಲಾಗಿದೆ. ಆರೋಪಿಗಳನ್ನೂ ಬಂಧಿಸಿ ಏಪ್ರಿಲ್ 27ರಂದು ವಿಚಾರಣೆಗೆ ಹಾಜರುಪಡಿಸುವಂತೆ ಪೊಲೀಸರಿಗೆ ನ್ಯಾಯಾಲಯ ಆದೇಶದಲ್ಲಿ ಹೇಳಿದೆ.

ಮೆಟ್ರೊ ನಿಲ್ದಾಣದಲ್ಲಿ ಮೃತದೇಹ ಪತ್ತೆ

ಬೆಂಗಳೂರು: ಯಲಚೇನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ನಾಗರಾಜ್ (52) ಎಂಬುವವರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಶುಕ್ರವಾರ ಪತ್ತೆಯಾಗಿದೆ.

'ಸುಬ್ರಹ್ಮಣ್ಯಪುರ ನಿವಾಸಿ ನಾಗರಾಜ್, ರಿಯಲ್ ಎಸ್ಟೇಟ್ ಏಜೆಂಟ್ ಆಗಿದ್ದರು. ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ನಿಲ್ದಾಣದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ಡಿವಿಆರ್ ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ. ನಾಗರಾಜ್ ಅವರು ನಿಲ್ದಾಣಕ್ಕೆ ಬಂದಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸಿಬ್ಬಂದಿಯಿಂದಲೂ ಹೇಳಿಕೆ ಪಡೆಯಲಾಗಿದೆ' ಎಂದೂ ತಿಳಿಸಿದರು.

'ಏಪ್ರಿಲ್ 4ರಂದು ನಾಗರಾಜ್, ಮೆಟ್ರೊ ನಿಲ್ದಾಣಕ್ಕೆ ಬಂದಿದ್ದರು. ಆದರೆ, ಅವರ ಬಳಿ ಮೆಟ್ರೊ ಕಾರ್ಡ್ ಇರಲಿಲ್ಲ. ಹೀಗಾಗಿ, ಸಿಬ್ಬಂದಿ ಒಳ ಬಿಟ್ಟಿರಲಿಲ್ಲ. ಬಳಿಕ, ನಾಗರಾಜ್ ಪ್ರವೇಶ ದ್ವಾರದಲ್ಲೇ ನಿಂತಿದ್ದರು. ಮೂತ್ರ ವಿಸರ್ಜನೆಗೆ ಹೋಗಲು ಮುಂದಾಗಿದ್ದರು. ಅದೇ ಸಂದರ್ಭದಲ್ಲೇ ನಿಲ್ದಾಣದ ಕೆಳಗೆ ಬಿದ್ದಿದ್ದರು. ನಂತರ, ತೀವ್ರವಾಗಿ ಗಾಯಗೊಂಡು ಅಲ್ಲಿಯೇ ಅವರು ಮೃತಪಟ್ಟಿರುವ ಶಂಕೆ ಇದೆ' ಎಂದು ಪೊಲೀಸರು ಹೇಳಿದರು.

'ನಾಗರಾಜ್ ಬಿದ್ದಿರುವುದು ಯಾರಿಗೂ ಗೊತ್ತಾಗಿರಲಿಲ್ಲ. ಶುಕ್ರವಾರ ಬೆಳಿಗ್ಗೆ ದುರ್ವಾಸನೆ ಬರಲಾರಂಭಿಸಿತ್ತು. ಸ್ವಚ್ಛತಾ ಸಿಬ್ಬಂದಿ, ನಿಲ್ದಾಣದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಬಳಿಕ ಠಾಣೆಗೆ ವಿಷಯ ತಿಳಿಸಿದ್ದರು' ಎಂದೂ ತಿಳಿಸಿದರು.

ಬೀಗ ಹಾಕುವುದನ್ನೇ ಮರೆತ ಮಹಿಳೆ; ಮನೆಗೆ ನುಗ್ಗಿದ್ದ ಕಳ್ಳ

ಬೆಂಗಳೂರು: ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿ ಪ್ರಶಾಂತ್ ಅಲಿಯಾಸ್ ಸೋಡುನನ್ನು (21) ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರ ಮಂಜುನಾಥನಗರ ನಿವಾಸಿ ಪ್ರಶಾಂತ್, ಹಲವು ವರ್ಷಗಳಿಂದ ಕಳ್ಳತನ ಎಸಗುತ್ತಿದ್ದ. ಆತನಿಂದ ₹ 16.85 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಗೀತಾ, 2020ರ ಡಿ. 29ರಂದು ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದರು. ಮನೆಗೆ ಬೀಗ ಹಾಕಿ ಹೋಗುವುದನ್ನೇ ಮರೆತಿದ್ದರು. ಮನೆ ಗುರುತಿಸಿದ್ದ ಆರೋಪಿ, ಒಳನುಗ್ಗಿ ಬೀರುವಿನಲ್ಲಿಟ್ಟ 17 ಗ್ರಾಂ ಚಿನ್ನಾಭರಣ ಹಾಗೂ ₹ 15,000 ನಗದು ಕದ್ದು ಹೋಗಿದ್ದ. ಮಧ್ಯಾಹ್ನ ಊಟಕ್ಕೆಂದು ಗೀತಾ ಮನೆಗೆ ಬಂದಾಗ, ಕಳ್ಳತನವಾಗಿರುವುದು ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು.'

'ಆರೋಪಿ ಪ್ರಶಾಂತ್, ಕೆ.ಪಿ. ಅಗ್ರಹಾರ, ಬ್ಯಾಡರಹಳ್ಳಿ, ಬಸವೇಶ್ವರನಗರ, ವಿಜಯನಗರ, ಜ್ಞಾನಭಾರತಿ, ಜಗಜೀವನ್‌ರಾಮ್ ನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ಸುಬ್ರಹ್ಮಣ್ಯನಗರ ಠಾಣೆ ವ್ಯಾಪ್ತಿಗಳಲ್ಲೂ ಆರೋಪಿ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಡಿ.ಜೆ.ಹಳ್ಳಿ ಸುಹೇಲ್ ಷರೀಫ್ ಕೊಲೆ; ಆರೋಪಿಗಳ ಬಂಧನ

ಮಸೀದಿ ಉಸ್ತುವಾರಿ ಕೈತಪ್ಪಿದ್ದಕ್ಕೆ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸುಹೇಲ್ ಷರೀಫ್ ಅಲಿಯಾಸ್ ಗಾರ್ಡನ್ ಷರೀಫ್ (36) ಹತ್ಯೆ ಪ್ರಕರಣ ಸಂಬಂಧ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ. ನಗರ ಮೋದಿ ಗಾರ್ಡನ್‌ನ ಜಮೀರ್ ಖಾನ್ (46), ಇಮ್ರಾನ್ (27), ಫಯಾಜ್ ಖಾನ್ (55), ಸೈಯದ್ ಸನಾವುಲ್ಲಾ (33) ಹಾಗೂ ಫೈರೋಜ್ ಖಾನ್ (34) ಬಂಧಿತರು.

'ಕೊಲೆಯಾದ ಸುಹೇಲ್ ಷರೀಫ್,

ಅಪರಾಧ ಸುದ್ದಿ

ಮೋದಿ ಗಾರ್ಡನ್ 6ನೇ ಅಡ್ಡರಸ್ತೆಯಲ್ಲಿರುವ ಮೋದಿ ಜಿಯಾ ಮಸೀದಿ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಅವರಿಗಿಂತಲೂ ಮುನ್ನ ಆರೋಪಿ ಜಮೀರ್ ಖಾನ್ ಮಸೀದಿಯ ಉಸ್ತುವಾರಿಯಾಗಿದ್ದರು. ಉಸ್ತುವಾರಿ ಕೈತಪ್ಪಿದ್ದಕ್ಕಾಗಿ ಜಮೀರ್ ಖಾನ್, ಆಗಾಗ ಸುಹೇಲ್ ಜೊತೆ ಗಲಾಟೆ ಮಾಡುತ್ತಿದ್ದರು. ಅವರ ಮೇಲೆ ದ್ವೇಷ ಸಾಧಿಸುತ್ತಿದ್ದರು. ಕೊಲೆ ಮಾಡಲು ಸಂಚು ಸಹ ರೂಪಿಸಿದ್ದರು. ಈ ಬಗ್ಗೆ ಸುಹೇಲ್ ಪತ್ನಿ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'2019ರಲ್ಲಿ ಸುಹೇಲ್ ಹಾಗೂ ಜಮೀರ್ ಖಾನ್ ನಡುವೆ ಗಲಾಟೆ ಆಗಿತ್ತು. ಜಮೀರ್ ಖಾನ್ ಸಂಬಂಧಿಗೆ ಸುಹೇಲ್ ಮಾರಕಾಸ್ತ್ರದಿಂದ ಹೊಡೆದಿದ್ದರು. ಈ ಪ್ರಕರಣದಲ್ಲಿ ಸುಹೇಲ್ ಜೈಲಿಗೂ ಹೋಗಿ ಬಂದಿದ್ದರು. ಇದರಿಂದಾಗಿ ಇಬ್ಬರ ನಡುವೆ ದ್ವೇಷ ಮತ್ತಷ್ಟು ಹೆಚ್ಚಾಗಿತ್ತು.'

ಮಚ್ಚಿನಿಂದ ಕೊಚ್ಚಿ, ತಲೆ ಮೇಲೆ ಸಿಮೆಂಟ್ ಬ್ರಿಕ್ಸ್ ಎತ್ತಿ ಹಾಕಿದರು: 'ಏಪ್ರಿಲ್ 7ರಂದು ಬೆಳಿಗ್ಗೆ 4 ಗಂಟೆಗೆ ಸುಹೇಲ್, ಸಿಗರೇಟ್ ತರಲೆಂದು ಮನೆ ಬಳಿಯ ಅಂಗಡಿಗೆ ಹೊರಟಿದ್ದರು. ಅದೇ ಸಂದರ್ಭದಲ್ಲೇ ಆಟೊ ಹಾಗೂ ದ್ವಿಚಕ್ರ ವಾಹನದಲ್ಲಿ ಬಂದು ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಮಚ್ಚಿನಿಂದ ಹೊಡೆದಿದ್ದರು. ನಂತರ ತಲೆ ಮೇಲೆ ಸಿಮೆಂಟ್ ಬ್ರಿಕ್ಸ್ ಎತ್ತಿ ಹಾಕಿ ಕೊಂದು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಹತ್ಯೆಯ ದೃಶ್ಯ ಸ್ಥಳೀಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಸುಹೇಲ್ ಪತ್ನಿ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಅವರನ್ನು ಕಸ್ಟಡಿಗೆ ಪಡೆಯಬೇಕಿದೆ' ಎಂದೂ ತಿಳಿಸಿದರು.

ಕಳವು: ₹ 15.92 ಲಕ್ಷ ಮೌಲ್ಯ ಆಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲರ್ಸ್ ಕಾಲೊನಿಯ ಮನೆಯೊಂದರ ಚಿಲಕ ಮುರಿದು ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡು ವಿಳ್ಳುಪುರಂ ಜಿಲ್ಲೆಯ ಮಣಿ ಅಲಿಯಾಸ್ ನಾಗಮಣಿ (42), ಶ್ರೀರಾಮಪುರದ ಆರ್ಮುಗಂ (43) ಹಾಗೂ ಪಾಂಡಿಯನ್ (53) ಬಂಧಿತರು. ಇವರಿಂದ ₹ 15.92 ಲಕ್ಷ ಮೌಲ್ಯದ 316 ಗ್ರಾಂ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಡಾಲರ್ಸ್ ಕಾಲೊನಿ 2ನೇ ಹಂತದ ನಿವಾಸಿಯೊಬ್ಬರು, ಮಾರ್ಚ್ 3ರಂದು ಕೆಲಸ ನಿಮಿತ್ತ ಮನೆಯಿಂದ ಹೊರಗಡೆ ಹೋಗಿದ್ದರು. ಮಾರ್ಚ್ 5ರಂದು ಮನೆಗೆ ವಾಪಸು ಬಂದಾಗ, ಕಳ್ಳತನ ನಡೆದಿರುವುದು ಗೊತ್ತಾಗಿದೆ. ಠಾಣೆಗೆ ದೂರು ನೀಡಿದ್ದರು' ಎಂದರು.

'ಚಿಲಕ ಮುರಿದು ಒಳನುಗ್ಗಿದ್ದ ಆರೋಪಿಗಳು, ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗಿದ್ದರು. ಅವರಿಗಾಗಿ ಹುಡುಕಾಟ ನಡೆದಿತ್ತು. ಮಾ. 29ರಂದು ನಸುಕಿನಲ್ಲಿ ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಅವರ ಬಗ್ಗೆ ಅನುಮಾನಗೊಂಡ ಗಸ್ತಿನಲ್ಲಿದ್ದ ಸಿಬ್ಬಂದಿ, ಬೆನ್ನಟ್ಟಿ ಹಿಡಿದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಕೃತ್ಯ ಬಾಯ್ಬಿಟ್ಟರು' ಎಂದೂ ಪೊಲೀಸರು ಹೇಳಿದರು.

79 ಕಡೆ ಕೃತ್ಯ: '2001ರಲ್ಲಿ ಹಣ್ಣಿನ ವ್ಯಾಪಾರ ಮಾಡಲು ನಗರಕ್ಕೆ ಬಂದಿದ್ದ ಆರೋಪಿ ಮಣಿ, ಕ್ರಮೇಣ ಕಳ್ಳತನ ಮಾಡಲಾರಂಭಿಸಿದ್ದ. ಗ್ಯಾಂಗ್ ಕಟ್ಟಿಕೊಂಡಿದ್ದ. ಈ ಗ್ಯಾಂಗ್ ಇದುವರೆಗೂ 79 ಕಡೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ತಮಿಳುನಾಡಿನ ವಿವಿಧ ಕಡೆಗಳಲ್ಲಿ, ಬೆಂಗಳೂರಿನ ಸಂಜಯನಗರ, ವಿದ್ಯಾರಣ್ಯಪುರ, ಮಲ್ಲೇಶ್ವರ, ಕೊಡಿಗೇಹಳ್ಳಿ, ಸದಾಶಿವನಗರ, ಸೋಲದೇವನಹಳ್ಳಿ ಸೇರಿದಂತೆ ಹಲವೆಡೆ ಮನೆಗಳಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದಾರೆ' ಎಂದರು.

ಕದ್ದ ಬ್ಯಾಟರಿ ಮಾರಿ ಆಟೊ ಖರೀದಿ

ರಾಜರಾಜೇಶ್ವರಿನಗರದ ಕೆಂಪೇಗೌಡ ರಸ್ತೆಯಲ್ಲಿರುವ ಭೈರವೇಶ್ವರ ಬ್ಯಾಟರಿ ಅಂಗಡಿಯಲ್ಲಿ ಕಳವು ಮಾಡಿದ್ದ ಆರೋಪದಡಿ ಮೊಹಮ್ಮದ್ ಸಾಹಿಲ್‌ನನ್ನು (23) ಪೊಲೀಸರು ಬಂಧಿಸಿದ್ದಾರೆ.

'ಬನ್ನೇರುಘಟ್ಟ ರಸ್ತೆಯ ದೇವರಚಿಕ್ಕನಹಳ್ಳಿ ನಿವಾಸಿ ಸಾಹಿಲ್, ಮಾರ್ಚ್ 4ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಆತನಿಂದ ₹ 5.75 ಲಕ್ಷ ಮೌಲ್ಯದ 175 ಬ್ಯಾಟರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಂಗಡಿಯ ಶೆಟರ್ ಮೀಟಿ ಒಳನುಗ್ಗಿದ್ದ ಆರೋಪಿ, ವಿವಿಧ ಕಂಪನಿಯ ಬ್ಯಾಟರಿಗಳನ್ನು ಕದ್ದುಕೊಂಡು ಆಟೊದಲ್ಲಿ ಪರಾರಿಯಾಗಿದ್ದ. ಅದೇ ಬ್ಯಾಟರಿಗಳನ್ನು ಮಾರಾಟ ಮಾಡಿದ್ದ ಆರೋಪಿ, ಬಂದ ಹಣದಲ್ಲಿ ಆಟೊ ಖರೀದಿ ಮಾಡಿದ್ದ' ಎಂದರು.

ಸೇನಾಧಿಕಾರಿ ಹೆಸರಿನಲ್ಲಿ ವಂಚನೆ; ಆರೋಪಿ ಬಂಧನ

ಬೆಂಗಳೂರು: ಭಾರತೀಯ ಸೇನಾಧಿಕಾರಿಯೆಂದು ಹೇಳಿಕೊಂಡು ಜನರನ್ನು ವಂಚಿಸುತ್ತಿದ್ದ ಅಂಜನೇಶ್ ಮಠಪತಿ (31) ಎಂಬಾತನನ್ನು ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಂಜನೀಶ್

'ಬೆಳಗಾವಿಯ ಅಂಜನೇಶ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಸೇನಾಧಿಕಾರಿ ರೀತಿಯಲ್ಲೇ ಬಟ್ಟೆ ಹಾಕಿಕೊಂಡು ಫೋಟೊ ತೆಗೆಸಿಕೊಂಡಿದ್ದ. ಅದನ್ನೇ ಜನರಿಗೆ ತೋರಿಸಿ ವಂಚಿಸುತ್ತಿದ್ದ. ಆತನಿಂದ ನಕಲಿ ಪಿಸ್ತೂಲ್, ನಕಲಿ ಗುರುತಿನ ಚೀಟಿ, ಸಮವಸ್ತ್ರವನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

3 ವರ್ಷ ಜೈಲು ಶಿಕ್ಷೆ: ಹೊರಬಂದು ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಮೂರು ವರ್ಷ ಶಿಕ್ಷೆ ಅನುಭವಿಸಿ, ಜೈಲಿನಿಂದ ಹೊರಬಂದು ಕಳ್ಳತನ ಎಸಗುತ್ತಿದ್ದ ಆರೋಪಿ ಪ್ರೇಮ್‌ಕುಮಾರ್‌ನನ್ನು (32) ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆಜಿಎಫ್ ಅಂಡರ್‌ಸನ್ ಪೇಟೆಯ ಪ್ರೇಮ್‌ಕುಮಾರ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 14.50 ಲಕ್ಷ ಮೌಲ್ಯದ 320 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಕಬ್ಬಿಣದ ರಾಡ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಕೃಷ್ಣಪ್ಪ ಎಂಬುವವರು 2020ರ ಡಿಸೆಂಬರ್ 2ರಂದು ಕುಟುಂಬ ಸಮೇತ ಊರಿಗೆ ಹೋಗಿದ್ದರು. ಡಿ. 12ರಂದು ಅವರಿಗೆ ಕರೆ ಮಾಡಿದ್ದ ಪಕ್ಕದ ಮನೆಯವರು, 'ಯಾರೋ ನಿಮ್ಮ ಮನೆಯ ಬಾಗಿಲು ಮೀಟಿದ್ದು, ಕಳ್ಳತನ ನಡೆದಿರಬಹುದು' ಎಂದು ಮಾಹಿತಿ ನೀಡಿದ್ದರು. ಮನೆಗೆ ಬಂದಿದ್ದ ಕೃಷ್ಣಪ್ಪ, ಪರಿಶೀಲನೆ ನಡೆಸಿದಾಗ ಕಳ್ಳತನವಾಗಿದ್ದು ಗೊತ್ತಾಗಿತ್ತು. ಬಳಿಕ ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

'ಕೃತ್ಯ ಎಸಗಿ ಪರಾರಿಯಾಗುತ್ತಿದ್ದ ಆರೋಪಿಯ ಮುಖಚಹರೆ ಮನೆ ಸಮೀಪದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆತನಿಗಾಗಿ ಹುಡುಕಾಟ ನಡೆದಿತ್ತು. ಏಪ್ರಿಲ್ 20ರಂದು ಬೆಳಿಗ್ಗೆ ಶಂಕರನಗರದಲ್ಲಿ ಆರೋಪಿ ಸಿಕ್ಕಿಬಿದ್ದಿದ್ದ' ಎಂದೂ ಹೇಳಿದರು.

'ರಾಮಮೂರ್ತಿನಗರ, ವಿದ್ಯಾರಣ್ಯಪುರ, ಮಾರಿಕುಪ್ಪಂ ಠಾಣೆ ವ್ಯಾಪ್ತಿಯಲ್ಲಿ 8 ಕಡೆ ಆರೋಪಿ ಕೃತ್ಯ ಎಸಗಿದ್ದ. 2014ರಲ್ಲಿ ಆತನನ್ನು ರಾಮಮೂರ್ತಿನಗರ ಪೊಲೀಸರು ಬಂಧಿಸಿದ್ದರು. ಅದೇ ಪ್ರಕರಣದಲ್ಲಿ ಆತನಿಗೆ ಮೂರು ವರ್ಷ ಜೈಲು ಶಿಕ್ಷೆ ಆಗಿತ್ತು. ಜೈಲಿನಿಂದ ಹೊರಬಂದ ಆತ, ಪುನಃ ಕೃತ್ಯ ಎಸಗಲಾರಂಭಿಸಿದ್ದ.'

'ಬೀಗ ಹಾಕಿರುತ್ತಿದ್ದ ಹಾಗೂ ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಆರೋಪಿ ಗುರುತಿಸುತ್ತಿದ್ದ. ಅಂಥ ಮನೆಗಳಿಗೆ ಹೋಗಿ, ಕಬ್ಬಿಣದ ರಾಡ್‌ನಿಂದ ಬಾಗಿಲು ಮೀಟಿ ಒಳ ನುಗ್ಗುತ್ತಿದ್ದ. ನಗದು, ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ಕದ್ದುಕೊಂಡು ಪರಾರಿಯಾಗುತ್ತಿದ್ದ' ಎಂದೂ ತಿಳಿಸಿದರು.

ಎಟಿಎಂ, ಸಂಚಾರ ಸಿಗ್ನಲ್ ಬ್ಯಾಟರಿ ಕಳವು; ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಯಂತ್ರ ಹಾಗೂ ಸಂಚಾರ ಸಿಗ್ನಲ್‌ಗಳಲ್ಲಿ ಅಳವಡಿಸುತ್ತಿದ್ದ ಬ್ಯಾಟರಿ ಕಳವು ಮಾಡುತ್ತಿದ್ದ ಆರೋಪದಡಿ ಮಹಮ್ಮದ್ ರಿಜ್ವಾನ್‌ನನ್ನು (28) ಬಸವೇಶ್ವರನಗರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಯಾದ ಆರೋಪಿ, ತಡರಾತ್ರಿ ಹಾಗೂ ನಸುಕಿನಲ್ಲಿ ಕೃತ್ಯ ಎಸಗುತ್ತಿದ್ದ. ಆತನಿಂದ ₹ 1 ಲಕ್ಷ ಮೌಲ್ಯದ 12 ಬ್ಯಾಟರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಟಿಎಂ ಘಟಕದೊಳಗೆ ಹೋಗುತ್ತಿದ್ದ ಆರೋಪಿ, ಯಂತ್ರವನ್ನು ಹಾಳು ಮಾಡುತ್ತಿದ್ದ. ತನ್ನ ಬಳಿಯ ಆಯುಧದಿಂದ ಬ್ಯಾಟರಿ ಹೊರಗೆ ತೆಗೆದು ಅದರ ಸಮೇತ ಪರಾರಿಯಾಗುತ್ತಿದ್ದ. ಸಂಚಾರ ದಟ್ಟಣೆ ನಿರ್ವಹಣೆಗೆ ರಸ್ತೆ ಹಾಗೂ ವೃತ್ತಗಳಲ್ಲಿ ಅಳವಡಿಸಿದ್ದ ಸಿಗ್ನಲ್‌ಗಳ ಬ್ಯಾಟರಿಗಳನ್ನೂ ಆರೋಪಿ ಕದಿಯುತ್ತಿದ್ದ. ಇದುವರೆಗೂ 12 ಬ್ಯಾಟರಿಗಳನ್ನು ಆತ ಕದ್ದಿದ್ದಾನೆ' ಎಂದೂ ಅವರು ತಿಳಿಸಿದರು.

ಆಟೊದಲ್ಲಿ ಚಾಲಕನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ನಿಂತಿದ್ದ ಆಟೊದಲ್ಲಿ ಚಾಲಕ ನಾಗರಾಜ್ (50) ಎಂಬುವವರ ಮೃತದೇಹ ಶುಕ್ರವಾರ ಪತ್ತೆಯಾಗಿದೆ.

'ಹಲವು ವರ್ಷಗಳಿಂದ ಆಟೊ ಚಲಾಯಿಸುತ್ತಿದ್ದ ನಾಗರಾಜ್, ಜೊತೆಗೆ ಆಟೊದಲ್ಲಿ ಎಳನೀರು ಪೂರೈಕೆ ಕೆಲಸ ಮಾಡುತ್ತಿದ್ದರು. ಬಿಎಸ್‌ಎನ್‌ಎಲ್ ಕಚೇರಿ ಎದುರು ನಿಂತಿದ್ದ ಆಟೊದಲ್ಲೇ ಅವರ ಮೃತದೇಹವಿತ್ತು' ಎಂದು ಪೊಲೀಸರು ಹೇಳಿದರು.

'ಆಟೊ ಚಲಾಯಿಸಿಕೊಂಡು ಬಂದಿದ್ದ ನಾಗರಾಜ್, ಅನಾರೋಗ್ಯದಿಂದಾಗಿ ಆಟೊದಲ್ಲೇ ಅಸುನೀಗಿರುವ ಮಾಹಿತಿ ಇದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಉನ್ನತ ವ್ಯಾಸಂಗದತ್ತ ಚಿತ್ತ: ದಿಶಾ ರವಿ

ಬೆಂಗಳೂರು: 'ಸದ್ಯ ಯಾವುದೇ ಸಾಮಾಜಿಕ ಚಟುವಟಿಕೆ ಅಥವಾ ಅಭಿಯಾನದಲ್ಲಿ ನಾನು ತೊಡಗಿಸಿಕೊಂಡಿಲ್ಲ. ಉನ್ನತ ಶಿಕ್ಷಣ ಪಡೆಯುವತ್ತ ಹೆಚ್ಚು ಗಮನ ಕೇಂದ್ರೀಕರಿಸಿದ್ದೇನೆ' ಎಂದು ರೈತರ ಪ್ರತಿಭಟನೆಗೆ 'ಟೂಲ್ ಕಿಟ್' ರೂಪಿಸಿದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ, ಸದ್ಯ ಜಾಮೀನಿನ ಮೇಲಿರುವ ದಿಶಾ ರವಿ ಹೇಳಿದರು.

ನಗರದಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅವರು, 'ಪ್ರಜಾವಾಣಿ' ಜೊತೆ ಮಾತನಾಡಿದರು.

ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ದಿಶಾ, ಫ್ರೈಡೇ ಫಾರ್ ಫ್ಯೂಚರ್ ಸಂಸ್ಥೆ ಮೂಲಕ ಹವಾಮಾನ ಬದಲಾವಣೆ ಜಾಗೃತಿ ಅಭಿಯಾನ ನಡೆಸುತ್ತಿದ್ದರು. 'ಹವಾಮಾನ ಬದಲಾವಣೆ

ಕುರಿತು ಜಾಗೃತಿ ಮಾತ್ರವಲ್ಲ, ಆದಿವಾಸಿಗಳ ಹಕ್ಕುಗಳ ಜಾಗೃತಿಗಾಗಿಯೂ ನಾನು ಕೆಲಸ ಮಾಡಿದ್ದೇನೆ. ಹಲವು ದಲಿತ ಸಂಘಟನೆಗಳ ಜೊತೆಗೂಡಿ ಜಾತಿ ಮತ್ತು ನೈಸರ್ಗಿಕ ನ್ಯಾಯದ ಬಗ್ಗೆಯೂ ಕೆಲಸ ಮಾಡಿದ್ದೇನೆ' ಎಂದರು.

'ಪ್ರಕರಣದ ನಂತರ ಮತ್ತೆ ಕುಟುಂಬದೊಂದಿಗೆ ಸಮಯ ಕಳೆಯುತ್ತಿರುವುದು ಸಂತಸ ತಂದಿದೆ. ಬೆಂಗಳೂರಿನಲ್ಲಿ ಇರುವುದು ಹೆಚ್ಚು ಖುಷಿ ಮತ್ತು ನೆಮ್ಮದಿ ನೀಡುತ್ತದೆ' ಎಂದೂ ಹೇಳಿದರು.

ತಮ್ಮ ಬಂಧನ ಹಾಗೂ ದೆಹಲಿ ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಯ ಕುರಿತು ಯಾವುದೇ ಪ್ರತಿಕ್ರಿಯೆಯನ್ನು ಅವರು ನೀಡಲಿಲ್ಲ.

ಇಸಾಕ್ ಅಜ್ಜನ 11 ಸಾವಿರ ಪುಸ್ತಕಗಳು ಭಸ್ಮ

ಗ್ರಂಥಾಲಯಕ್ಕೆ ಕಿಡಿಗೇಡಿಗಳಿಂದ ಬೆಂಕಿ

ಪ್ರಜಾವಾಣಿ ವಾರ್ತೆ

ಮೈಸೂರು: 11 ವರ್ಷಗಳಿಂದ ಕನ್ನಡ ಕೈಂಕರ್ಯದಲ್ಲಿ ತೊಡಗಿದ್ದ ರಾಜೀವ್ ನಗರದ ಸೈಯದ್ ಇಸಾಕ್ (67) ಎಂಬುವವರ ಗ್ರಂಥಾಲಯಕ್ಕೆ ಕಿಡಿಗೇಡಿಗಳು ಶುಕ್ರವಾರ ನಸುಕಿನಲ್ಲಿ ಬೆಂಕಿ ಹಚ್ಚಿದ್ದು, ಸುಮಾರು 11 ಸಾವಿರ ಪುಸ್ತಕಗಳು ಭಸ್ಮವಾಗಿವೆ.

3 ಸಾವಿರ ಕನ್ನಡ ಪುಸ್ತಕಗಳು, ಭಗವದ್ಗೀತೆಯ 3 ಸಾವಿರ ಪ್ರತಿಗಳು, ಕುರ್‌ಆನ್‌ನ 3 ಸಾವಿರ ಪ್ರತಿಗಳು, 1 ಸಾವಿರ ಉರ್ದು ಪುಸ್ತಕಗಳು ಹಾಗೂ ಬೈಬಲ್‌ನ 1 ಸಾವಿರ ಕನ್ನಡ ಪ್ರತಿಗಳು ಇದರಲ್ಲಿ ಸೇರಿವೆ.

ನಸುಕಿನ 3.45ರ ಹೊತ್ತಿಗೆ ಬೆಂಕಿ ಕಾಣಿಸಿಕೊಂಡಿತ್ತು. ಅಗ್ನಿಶಾಮಕ ಪಡೆ ಸ್ಥಳಕ್ಕೆ ಬರುವಷ್ಟರಲ್ಲಿ ಎಲ್ಲ ಪುಸ್ತಕಗಳು ಬೆಂಕಿಗಾಹುತಿಯಾಗಿದ್ದವು. ನೂರಕ್ಕೂ ಅಧಿಕ ಮಂದಿ ಬೆಂಕಿ ನಂದಿಸಲು ಯತ್ನಿಸಿದರಾದರೂ ಫಲ ನೀಡಲಿಲ್ಲ.

ಗ್ರಂಥಾಲಯದಲ್ಲಿ ಸೈಯದ್ ಇಸಾಕ್

'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ (ಮುಡಾ) ಸೇರಿದ ಈ ಜಾಗದಲ್ಲಿ ಈ ಮೊದಲು 4 ಬಾರಿ ಕಿಡಿಗೇಡಿಗಳು ತೊಂದರೆ ಕೊಟ್ಟಿದ್ದರು. ಗ್ರಂಥಾಲಯದ ಮುಂದೆ ಏನೇನೋ ಬರೆಯುತ್ತಿದ್ದರು. ಕನ್ನಡದ ಬರಹಗಳಿಗೆ ಮಸಿ ಬಳಿಯುತ್ತಿದ್ದರು. ಗ್ರಂಥಾಲಯ ನಡೆಸಬಾರದೆಂದು ಕರೆ ಮಾಡುತ್ತಿದ್ದರು. ಅದನ್ನೆಲ್ಲಾ ಸಹಿಸಿಕೊಂಡು ಸುಮ್ಮನಿದ್ದೆ. ಈಗ ಗ್ರಂಥಾಲಯಕ್ಕೆ ಬೆಂಕಿ ಇಟ್ಟಿದ್ದಾರೆ' ಎಂದು ಇಸಾಕ್ ಅಳಲು ತೋಡಿಕೊಂಡರು.

2011ರಲ್ಲಿ ಇಲ್ಲಿ ಗುಡಿಸಲಿನಲ್ಲಿ ಗ್ರಂಥಾಲಯ ಆರಂಭಿಸಿದ್ದರು. ಈಚೆಗೆ ಶೀಟ್ ಹಾಕಿ ಮಳಿಗೆಯಾಗಿ ಮಾಡಿಕೊಂಡು 11 ಸಾವಿರ ಪುಸ್ತಕ ಇಡುವುದರ ಜೊತೆಗೆ ನಿತ್ಯ 18 ದಿನಪತ್ರಿಕೆ ತರಿಸುತ್ತಿದ್ದರು. ಬೆಳಿಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆವರೆಗೆ ಸಾರ್ವಜನಿಕರಿಗೆ ಓದಲು ಉಚಿತವಾಗಿ ನೀಡುತ್ತಿದ್ದರು.

ಚಿತ್ರಾವಳಿ

ಹೆಬ್ಬಾಳ ವಾರ್ಡ್ ವ್ಯಾಪ್ತಿಯಲ್ಲಿ ಶುಕ್ರವಾರ ನಡೆದ ಗಂಗಾಕಲ್ಯಾಣ ಸಂಘದ ನೂತನ ಕಟ್ಟಡ, ಅಂಗನವಾಡಿ ಕೇಂದ್ರ ಹಾಗೂ ಅಂಬೇಡ್ಕರ್ ಸಮುದಾಯ ಭವನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ಬೈರತಿ ಸುರೇಶ್ ಹಾಗೂ ಕಾಂಗ್ರೆಸ್ ಮುಖಂಡ ಆನಂದ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಇದ್ದರು

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷೆ ಸವಿತಾ ವಿ.ಅಮರಶೆಟ್ಟಿ ಅವರು ಯಲಹಂಕದ ರೇಷ್ಮೆ ಹುರಿ ಘಟಕ, ಕೈಮಗ್ಗ ಘಟಕ ಮತ್ತು ವಿದ್ಯುತ್ ಮಗ್ಗಾ ಘಟಕಗಳಿಗೆ ಶುಕ್ರವಾರ ಭೇಟಿ ನೀಡಿ ಅಲ್ಲಿನ ರೇಷ್ಮೆ ಉತ್ಪನ್ನಗಳ ತಯಾರಿಕೆಯ ಗುಣಮಟ್ಟ ವೀಕ್ಷಿಸಿದರು. ಬಳಿಕ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಕೇಂದ್ರ ರೇಷ್ಮೆ ಮಂಡಳಿಯ ಜಂಟಿ ನಿರ್ದೇಶಕ ಉದಯ್ ಸಿ.ಜವಳಿ ಹಾಗೂ ಕೇಂದ್ರ ರೇಷ್ಮೆ ಮಂಡಳಿಯ ಸಹಾಯಕ ತಾಂತ್ರಿಕರಾದ ಲೋಕೇಶ್ ಹಾಲಿಕಟ್ಟಿ ಇದ್ದರು.

ಕಾಂಗ್ರೆಸ್‌ನವರು ಕೈಲಾಗದವರು: ಯಡಿಯೂರಪ್ಪ ಕಿಡಿ

ಪರಿಶಿಷ್ಟ ಜಾತಿಯವರ ಮನೆಯಲ್ಲಿ ಸಿ.ಎಂ ಉಪಾಹಾರ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಇಲ್ಲಿಯ ಅಂಬೇಡ್ಕರ್ ನಗರದ ಪರಿಶಿಷ್ಟ ಜಾತಿಯ (ಎಡಗೈ) ಖಾಸಿಂ ಮುರಾರಿ ಅವರ ಮನೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶುಕ್ರವಾರ ಉಪಾಹಾರ ಸೇವಿಸಿದರು.

ನೀರಾವರಿ ಇಲಾಖೆಯಲ್ಲಿ ದಿನಗೂಲಿಯಾಗಿರುವ ಖಾಸಿಂ ಅವರದ್ದು ಚಿಕ್ಕ ಮನೆ. ಅಲ್ಲಿಯೇ ಮುಖ್ಯಮಂತ್ರಿ ಅವರಿಗೆ ಮಂಡಕ್ಕಿ ಚುಡಾ, ಅವಲಕ್ಕಿ, ಉಪ್ಪಿಟ್ಟು, ಶಿರಾ ಹಾಗೂ ಚಹಾ ವ್ಯವಸ್ಥೆ ಮಾಡಿದ್ದರು. ಚುಡಾ ಮತ್ತು ಉಪ್ಪಿಟ್ಟನ್ನು ನಾಲ್ಕು ತುತ್ತು ತಿಂದ ಸಿ.ಎಂ, ಚಹಾ ಸೇವಿಸಿದರು. ಮಿನರಲ್ ನೀರು ಕುಡಿದರು. ಕುಟುಂಬದ ಸದಸ್ಯರ ಕುಶಲೋಪರಿ ವಿಚಾರಿಸಿ ಹೊರಬಂದರು.

ಕಾಂಗ್ರೆಸ್‌ನವರು ಕೈಲಾಗದವರು: ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, 'ಕಾಂಗ್ರೆಸ್‌ನವರು ಕೈಲಾಗದವರು, ಬರೀ ಆರೋಪಗಳನ್ನು ಮಾಡುತ್ತಾ ಮೈ ಪರಚಿಕೊಳ್ಳುತ್ತಿದ್ದಾರೆ' ಎಂದು ಕಿಡಿಕಾರಿದರು.

ವಿಧಾನಸಭೆ ಉಪಚುನಾವಣೆ ಪ್ರಚಾರಕ್ಕಾಗಿ ಮಸ್ಕಿಗೆ ಬಂದಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಶುಕ್ರವಾರ ಅಂಬೇಡ್ಕರ್ ನಗರದ ಪರಿಶಿಷ್ಟ ಜಾತಿಯ ಖಾಸಿಂ ಮುರಾರಿ ಅವರ ಮನೆಯಲ್ಲಿ ಉಪಾಹಾರ ಸೇವಿಸಿದರು

'ಕ್ಷೇತ್ರದಲ್ಲಿ ಪ್ರತಾಪಗೌಡ ಪಾಟೀಲರ ವಿರೋಧಿ ಅಲೆ ಇದೆ ಎಂಬುದು ಸುಳ್ಳು. ನಾವು ಮಸ್ಕಿ, ಬಸವಕಲ್ಯಾಣ ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದ್ದೇವೆ' ಎಂದರು.

'ಕಾಂಗ್ರೆಸ್‌ನವರು ಏನೇ ಮಾಡಿದರೂ ಬಿಜೆಪಿ ಅಭ್ಯರ್ಥಿ 25 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ. 5ಎ ಉಪ ಕಾಲುವೆ ನಿರ್ಮಾಣದ ಬಗ್ಗೆ ತಜ್ಞರ ಸಭೆ ಕರೆದು ಚರ್ಚಿಸುತ್ತೇನೆ. ಇದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುತ್ತೇನೆ. ಉಪ ಕಾಲುವೆ ನಿರ್ಮಾಣದ ಬಗ್ಗೆ ತುರ್ತಾಗಿ ಭರವಸೆ ಕೊಡುವುದಕ್ಕೆ ಆಗುವುದಿಲ್ಲ' ಎಂದು ಹೇಳಿದರು.

ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ, ಸಂಸದ ಸಂಗಣ್ಣ ಕರಡಿ, ಶಾಸಕರಾದ ರಾಜುಗೌಡ, ಪರಣ್ಣ ಮುನ್ನೊಳ್ಳಿ, ಬಸವರಾಜ ಧಡೆಸೂಗೂರ ಇದ್ದರು.

'ವಾಹನಗಳಿಗೆ ಇಂಡಿಕೇಟರ್ ಬಳಸದಿದ್ದರೆ ₹500 ದಂಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಹನಗಳ ಸೈಡ್ ಮಿರರ್ ಹಾಗೂ ಇಂಡಿಕೇಟರ್ ಉಪಯೋಗಿಸದಿದ್ದರಿಂದ ನಗರದಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ಪ್ರತಿಯೊಂದು ವಾಹನಗಳಲ್ಲೂ ಸೈಡ್ ಮಿರರ್ ಹಾಗೂ ಇಂಡಿಕೇಟರ್ ಬಳಸಬೇಕು. ತಪ್ಪಿದರೆ, ಅಂಥವರ ವಿರುದ್ಧ ಮುಂದಿನ ದಿನಗಳಲ್ಲಿ ಪ್ರಕರಣ ದಾಖಲಿಸಿಕೊಂಡು ₹500 ದಂಡ ವಿಧಿಸಲಾಗುವುದು' ಎಂದು ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಸಂಚಾರ ನಿಯಮ ಪಾಲನೆ ಹಾಗೂ ರಸ್ತೆ ಅಪಘಾತಗಳನ್ನು ತಡೆಗಟ್ಟುವುದು ಕೇವಲ ಪೊಲೀಸರ ಕರ್ತವ್ಯವಲ್ಲ, ಪ್ರತಿಯೊಬ್ಬ ನಾಗರಿಕರ ಕರ್ತವ್ಯ' ಎಂದಿದ್ದಾರೆ.

'ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದು, ವಾಹನಗಳಲ್ಲಿರುವ ಸೈಡ್ ಮಿರರ್ ಹಾಗೂ ಇಂಡಿಕೇಟರ್ ಬಳಸದಿರುವುದು ಅಪಘಾತಕ್ಕೆ ಪ್ರಮುಖ ಕಾರಣವಾಗಿದೆ. ಈ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಿ ಹೊಸ ಉಪಕ್ರಮವನ್ನು ಕೈಗೊಳ್ಳಲಾಗುತ್ತಿದೆ' ಎಂದೂ ಹೇಳಿದ್ದಾರೆ.

'ದ್ವಿಚಕ್ರ ವಾಹನಗಳಿಂದ ನಗರದಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದು, ದ್ವಿಚಕ್ರ ವಾಹನ ಸವಾರರೇ ಹೆಚ್ಚಿನ ಸಂಖ್ಯೆಯಲ್ಲೇ ಮೃತಪಡುತ್ತಿದ್ದಾರೆ. ಹಿಂದೆ ಬರುವ ವಾಹನಗಳನ್ನು ಕನ್ನಡಿಯಲ್ಲಿ ನೋಡದೇ, ವಾಹನ ಚಲಾಯಿಸುವಾಗ ಇಂಡಿಕೇಟರ್ ಸಿಗ್ನಲ್ ಕೊಡದೇ ಚಾಲಕರು/ಸವಾರರು ಮುಂದಕ್ಕೆ ಹೋಗುತ್ತಿದ್ದಾರೆ. ಹಿಂದೆ ಬರುವವರಿಗೆ ಗೊಂದಲವಾಗಿ ಅಪಘಾತಗಳು ಸಂಭವಿಸುತ್ತಿವೆ' ಎಂದೂ ತಿಳಿಸಿದ್ದಾರೆ.

ಬಿಎಂಎಸ್ ಎಜುಕೇಷನಲ್ ಟ್ರಸ್ಟ್‌ನ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಕರಣ

ಸೀಟ್ ಬ್ಲಾಕಿಂಗ್ ಆರೋಪ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಆರೋಪಕ್ಕೆ ಸಂಬಂಧಿಸಿದಂತೆ ಬಂದ ಹಲವು ದೂರುಗಳನ್ನು ಆಧರಿಸಿ ಬಿಎಂಎಸ್ ಎಜುಕೇಷನಲ್ ಟ್ರಸ್ಟ್‌ನ ಅಡಿಯಲ್ಲಿರುವ ಎರಡು ಎಂಜಿನಿಯರಿಂಗ್ ಕಾಲೇಜುಗಳಿಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಮನೋಹರ್ ನೇತೃತ್ವದ ಪ್ರವೇಶಾತಿ ಮೇಲ್ವಿಚಾರಣಾ ಸಮಿತಿ (ಎಒಸಿ) ನೋಟಿಸ್ ನೋಟಿದೆ.

2020–21ನೇ ಶೈಕ್ಷಣಿಕ ಸಾಲಿನಲ್ಲಿ ಸೀಟ್ ಬ್ಲಾಕಿಂಗ್ ಮೂಲಕ ಟ್ರಸ್ಟ್‌ನ ಎರಡು ಎಂಜಿನಿಯರಿಂಗ್ ಕಾಲೇಜುಗಳಿಗೆ ಆಯ್ಕೆಯಾದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆದಿಲ್ಲ. ಆ ಮೂಲಕ, ವಿದ್ಯಾರ್ಥಿಗಳ ಪ್ರವೇಶ ನೀಡುವಾಗ ಅಕ್ರಮ ಎಸಗಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಈ ಬಗ್ಗೆ 10 ದಿನಗಳ ಒಳಗೆ ಪ್ರತಿಕ್ರಿಯಿಸಬೇಕು ಎಂದು ಏ. 7ರಂದು ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿಗೆ ಸಮಿತಿ ನೋಟಿಸ್ ನೀಡಿದೆ.

ಬಿಎಂಎಸ್ ಟ್ರಸ್ಟ್‌ನ ಪ್ರತಿಕ್ರಿಯೆ

ಈ ಬಗ್ಗೆ ಪ್ರತಿಕ್ರಿಯೆಗೆ ಕಾಲೇಜಿನ ಟ್ರಸ್ಟಿ ಡಾ. ರಾಗಿಣಿ ನಾರಾಯಣ್ ಅವರನ್ನು ಸಂಪರ್ಕಿಸಿದಾಗ ಕಾಲೇಜಿನ ನಿರ್ದೇಶಕ ಡಾ. ಮುರಳಿಕೃಷ್ಣ ಅವರನ್ನು ಸಂಪರ್ಕಿಸುವಂತೆ ತಿಳಿಸಿದರು. ಆದರೆ, ಮುರಳಿಕೃಷ್ಣ, 'ಪ್ರವೇಶ ಪ್ರಕ್ರಿಯೆಯಲ್ಲಿ ನನ್ನ ಪಾತ್ರ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಟ್ರಸ್ಟ್‌ನ ಪ್ರವೇಶ ಸಮಿತಿಯ ಅಧ್ಯಕ್ಷ ದಯಾನಂದ ಪೈ ಅವರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ. ಬಿಎಂಎಸ್ ಟ್ರಸ್ಟ್‌ನ ಟ್ರಸ್ಟಿಯೂ ಆಗಿರುವ ನಿವೃತ್ತ ಐಎಎಸ್ ಅಧಿಕಾರಿ ಎಂ. ಮದನ್ ಗೋಪಾಲ್ ಮಾತನಾಡಿ, 'ಸಿಇಟಿಗೆ ಮರಳಿಸಿದ ಸೀಟುಗಳನ್ನು ಭರ್ತಿ ಮಾಡಿದರೆ ಅಕ್ರಮ. ನಾವು ಆ ರೀತಿ ಮಾಡಿಲ್ಲ. ಕಾಮೆಡ್–ಕೆ ಸೀಟುಗಳು ಮರಳಿಸಿದ್ದರೆ, ಅವುಗಳನ್ನು ಮ್ಯಾನೇಜ್‌ಮೆಂಟ್ ಮಟ್ಟದಲ್ಲಿ ತುಂಬಿಸಿಕೊಳ್ಳುತ್ತಿದ್ದೇವೆ. ಅದರಲ್ಲಿ ಅವ್ಯವಹಾರ ನಡೆದಿದ್ದರೆ ತನಿಖೆ ನಡೆಸಲಾಗುವುದು' ಎಂದರು.

ಸಮಿತಿಯ ಪ್ರಾಥಮಿಕ ಮಾಹಿತಿ ಪ್ರಕಾರ ಸೀಟ್ ಬ್ಲಾಕಿಂಗ್‌ನಲ್ಲಿ ದಂಧೆಯಲ್ಲಿ ಬಿಎಂಎಸ್ ಕಾಲೇಜು ಆಫ್ ಎಂಜಿನಿಯರಿಂಗ್ (ಬಿಎಂಸಿಇ) ಮತ್ತು ಬಿಎಂಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎಂಎಸ್‌ಐಟಿ) ಸಂಸ್ಥೆ ಭಾಗಿಯಾಗಿರುವ ಆರೋಪವಿದೆ. 'ಈ ಎರಡೂ ಕಾಲೇಜುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ. ಈ ಬಾರಿ ಕೌನ್ಸೆಲಿಂಗ್‌ಗೂ ಮೊದಲು ಈ ಬಗ್ಗೆ ಕಾಲೇಜುಗಳಿಗೆ ಎಚ್ಚರಿಕೆ ನೀಡಲಾಗಿತ್ತು' ಎಂದು ಕಾಮೆಡ್–ಕೆ ನೀಡಿದ್ದ ಮಾಹಿತಿಯನ್ನೂ ಸಮಿತಿ ತನ್ನ ನೋಟಿಸ್‌ನಲ್ಲಿ ಉಲ್ಲೇಖಿಸಿದೆ.

ಲಭ್ಯ ದಾಖಲೆಗಳ ಪ್ರಕಾರ, ಈ ಬಾರಿ ಕಾಮೆಡ್–ಕೆ ಅಡಿ ಬಿಎಂಸಿಇಗೆ ಹಂಚಿಕೆಯಾದ 277 ಸೀಟುಗಳಲ್ಲಿ 152 ವಿದ್ಯಾರ್ಥಿಗಳು ವರದಿ ಮಾಡಿಕೊಂಡಿಲ್ಲ. ಕಳೆದ ವರ್ಷ 161ರಲ್ಲಿ 92 ಮಂದಿ ದಾಖಲು ಮಾಡಿಕೊಂಡಿರಲಿಲ್ಲ. ಅದೇ ರೀತಿ ಬಿಎಂಎಸ್‌ಐಟಿಗೆ ಈ ವರ್ಷ 180 ಸೀಟು ಹಂಚಿಕೆಯಾಗಿದ್ದು, 79 ವಿದ್ಯಾರ್ಥಿಗಳು ಪ್ರವೇಶ ಪಡೆದಿಲ್ಲ. ಕೆಇಎ ಮೂಲಕ ಬಿಎಂಸಿಇಗೆ ಸೀಟ್ ಹಂಚಿಕೆಯಲ್ಲಿ ಆಯ್ಕೆಯಾದ 18 ವಿದ್ಯಾರ್ಥಿಗಳು ಕಾಲೇಜಿನಲ್ಲಿ ವರದಿ ಮಾಡಿಕೊಂಡಿಲ್ಲ. 7 ವಿದ್ಯಾರ್ಥಿಗಳು ಆರಂಭಿಕ ಸುತ್ತಿನ ಬಳಿಕ ಪ್ರವೇಶ ರದ್ದು ಮಾಡಿಕೊಂಡಿದ್ದಾರೆ. ಅದೇ ರೀತಿ ಬಿಎಂಎಸ್‌ಐಟಿಯಲ್ಲಿ 6 ವಿದ್ಯಾರ್ಥಿಗಳು ವರದಿ ಮಾಡಿಕೊಂಡಿಲ್ಲ, ಒಬ್ಬ ವಿದ್ಯಾರ್ಥಿ ಪ್ರವೇಶ ರದ್ದು ಮಾಡಿಕೊಂಡಿದ್ದಾನೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ. ಈ ರೀತಿ ವರದಿ ಮಾಡಿಕೊಳ್ಳದೆ ಖಾಲಿ ಉಳಿದ ಸೀಟುಗಳನ್ನು ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಕಾಲೇಜುಗಳು ಭರ್ತಿ ಮಾಡಿಕೊಂಡಿರುವುದನ್ನು ಸಮಿತಿ ಪತ್ತೆ ಮಾಡಿದೆ.

ಬೆಂಗಳೂರಿನ ಸುತ್ತಮುತ್ತಲಿನ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳಿಗೆ ಭಾರಿ ಬೇಡಿಕೆ ಇದೆ. ಹೀಗಾಗಿ, ಸೀಟು ಆಯ್ಕೆ ಮಾಡಿಕೊಂಡ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡಿಲ್ಲ ಎಂಬ ಅಂಶವನ್ನು ನಂಬುವುದು ಕಷ್ಟ. ಕಾಮೆಡ್–ಕೆ ಸಲ್ಲಿಸಿರುವ ದಾಖಲೆಗಳ ಪ್ರಕಾರ, ವರದಿ ಮಾಡಿಕೊಳ್ಳದ ವಿದ್ಯಾರ್ಥಿಗಳ ಶುಲ್ಕವನ್ನು ಮರು ಪಾವತಿಸುವಂತೆ ಈ ಕಾಲೇಜುಗಳು ಬೇಡಿಕೆ ಮುಂದಿಟ್ಟಿವೆ ಎಂದೂ ನೋಟಿಸ್‌ನಲ್ಲಿದೆ.

ಬಿಎಂಎಸ್ ಟ್ರಸ್ಟ್‌ನ ಕಾಲೇಜುಗಳಲ್ಲಿನ ಪ್ರವೇಶ ಪ್ರಕ್ರಿಯೆಯನ್ನು ತಮ್ಮ ವಶಕ್ಕೆ ಪಡೆಯುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವ ಎಚ್ಚರಿಕೆಯನ್ನೂ ನೋಟಿಸ್‌ನಲ್ಲಿ ಸಮಿತಿ ನೀಡಿದೆ. ಅಲ್ಲದೆ, 2020–21 ಮತ್ತು ಹಿಂದಿನ ಎರಡು ವರ್ಷಗಳಲ್ಲಿ ಕಾಲೇಜುಗಳಲ್ಲಿ ಸಿಇಟಿ ರ‍್ಯಾಂಕಿಂಗ್ ಸಹಿತ ಮ್ಯಾನೇಜ್‌ಮೆಂಟ್ ಕೋಟಾದಡಿ ಪ್ರವೇಶ ನೀಡಿದ ವಿದ್ಯಾರ್ಥಿಗಳ ಪಟ್ಟಿ ಮತ್ತು ಪಡೆದ ಶುಲ್ಕದ ವಿವರ ನೀಡಬೇಕು. ಜೊತೆಗೆ, ವರದಿ ಮಾಡಿಕೊಳ್ಳದ ವಿದ್ಯಾರ್ಥಿಗಳ ವಿಭಾಗದಲ್ಲಿ ಆಡಳಿತ ಮಂಡಳಿ ಪ್ರವೇಶ ನೀಡಿದ ವಿದ್ಯಾರ್ಥಿಗಳ ಪಟ್ಟಿಯನ್ನೂ ನೀಡುವಂತೆ ತಿಳಿಸಿದೆ.

ಆರೋಗ್ಯ ಮಾಹಿತಿ ಕೇಳಿದ ಎಸ್‌ಐಟಿ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆ ಹೇಳಿಕೆ ಪಡೆದು ವೈದ್ಯಕೀಯ ಪರೀಕ್ಷೆ ಮುಗಿಸಿರುವ ಎಸ್‌ಐಟಿ ಅಧಿಕಾರಿಗಳು, ಆರೋಪಿಯೂ ಆಗಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿಕೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಕೊರೊನಾ ಸೋಂಕು ತಗುಲಿದ್ದರಿಂದ ಅವರ ಆರೋಗ್ಯ ಸ್ಥಿತಿ ಬಗ್ಗೆ ಮಾಹಿತಿ ನೀಡುವಂತೆ ಎಸ್‌ಐಟಿ ಅಧಿಕಾರಿಗಳು, ಗೋಕಾಕ್ ಆಸ್ಪತ್ರೆ ವೈದ್ಯಾಧಿಕಾರಿಯನ್ನು ಕೋರಿದ್ದಾರೆ.

'ಜಾರಕಿಹೊಳಿ ಅವರಿಗೆ ಮನೆಯಲ್ಲೂ ಚಿಕಿತ್ಸೆ ಮುಂದುವರಿಸಲಾಗಿದೆಯೇ? ಕ್ವಾರಂಟೈನ್ ಅವಧಿ ಪೂರ್ಣಗೊಳ್ಳಲು ಎಷ್ಟು ದಿನ ಬೇಕು?' ಎಂದು ಎಸ್‌ಐಟಿ ಅಧಿಕಾರಿಗಳು ಕೇಳಿದ್ದಾರೆ.

ರಮೇಶ ಜಾರಕಿಹೊಳಿ ಅವರು ನೀಡಿದ್ದ ದೂರು ಆಧರಿಸಿ ಹನಿಟ್ರ್ಯಾಪ್ ಆಯಾಮದಲ್ಲಿ ಎಸ್‌ಐಟಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ವ್ಯಕ್ತಿಗಳು ಅಧಿಕಾರಿಗಳ ಕೈಗೆ ಸಿಕ್ಕಿಲ್ಲ.

'ಪ್ರತಿಭಟನೆಗೆ ಮಕ್ಕಳ ಬಳಕೆ ಸಲ್ಲ'

ಬೆಂಗಳೂರು: 'ರಾಜ್ಯದಲ್ಲಿ ವಿವಿಧ ಮುಷ್ಕರಗಳು ನಡೆಯುತ್ತಿವೆ. ಸರ್ಕಾರಿ ನೌಕರರೂ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಮುಷ್ಕರ ನಿರತ ನೌಕರರು ತಮ್ಮ ಮಕ್ಕಳನ್ನು ಪ್ರತಿಭಟನೆಗೆ ಬಳಸಿಕೊಳ್ಳುತ್ತಿರುವುದು ಸರಿಯಲ್ಲ' ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ಅಭಿಪ್ರಾಯಪಟ್ಟಿದೆ.

'ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಈ ಸಂದರ್ಭದಲ್ಲಿ ಪುಟ್ಟ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು. ನೌಕರರಿಗೆ ಅನ್ಯಾಯವಾಗಿದ್ದರೆ ಅವರ ಸಂಘಟನೆಯ ಮೂಲಕ ಹೋರಾಟ ಮಾಡಬೇಕೇ ಹೊರತು ಮಕ್ಕಳನ್ನು ಮುಷ್ಕರದಲ್ಲಿ ಬಳಸಿಕೊಳ್ಳಬಾರದು' ಎಂದು ಟ್ರಸ್ಟ್‌ನ ನಿರ್ದೇಶಕ ನಾಗಸಿಂಹ ಜಿ. ರಾವ್ ಹೇಳಿದ್ದಾರೆ. 'ಮಕ್ಕಳನ್ನು ಈ ರೀತಿ ಮುಷ್ಕರಕ್ಕೆ ಬಳಸಿಕೊಳ್ಳುವುದು ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 19ರ ಉಲ್ಲಂಘನೆಯಾಗುತ್ತದೆ. ಮುಷ್ಕರದಲ್ಲಿ ಮಕ್ಕಳನ್ನು ಬಳಸುವುದು ಮಾತ್ರವಲ್ಲ ಮಕ್ಕಳಿಂದ ತಮ್ಮ ಮಾತನ್ನು ಆಡಿಸಿ ವಿಡಿಯೊ ಮಾಡಿ ಅದನ್ನು ವಾಟ್ಸ್‌ಆ್ಯಪ್‌ನಲ್ಲಿ ಹರಿಬಿಡಲಾಗುತ್ತಿದೆ. ಇದು ಸರಿಯಲ್ಲ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಾಗಸಿಂಹ

'ವಿಡಿಯೊದಲ್ಲಿ ಸರ್ಕಾರವನ್ನು ಹೀಯಾಳಿಸುವ ಮಕ್ಕಳಿಗೆ ತಾವು ಏನು ಮಾತನಾಡುತ್ತಿದ್ದೇವೆ ಎಂಬುದರ ಅರಿವಿಲ್ಲ . ಮುಷ್ಕರಗಳಿಗೆ, ಚುನಾವಣಾ ಪ್ರಚಾರಗಳಿಗೆ, ಧಾರ್ಮಿಕ ಪ್ರಚಾರಗಳಿಗೆ ಮಕ್ಕಳನ್ನು ಬಳಸುವುದು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಸರ್ಕಾರ ಮಕ್ಕಳ ಬಗ್ಗೆ ಜಾಗೃತಿ ವಹಿಸಿ ಕೂಡಲೇ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಬೇಕು' ಎಂದರು.

ಅನುಕಂಪದ ನೌಕರಿ: ನಿಯಮ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಹುದ್ದೆಯಲ್ಲಿದ್ದವರು ಮೃತಪಟ್ಟರೆ, ಅನುಕಂಪದ ಆಧಾರದಲ್ಲಿ ಅವಲಂಬಿತರಿಗೆ ಸರ್ಕಾರಿ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಕುರಿತಂತೆ ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ತಿದ್ದುಪಡಿ ನಿಯಮದ ಪ್ರಕಾರ, ಸರ್ಕಾರಿ ನೌಕರ ಮೃತಪಟ್ಟರೆ ಆತನ ಜೊತೆ ವಾಸವಿದ್ದ ವಿಧವಾ ಪತ್ನಿ ಅನುಕಂಪದ ಆಧಾರದಲ್ಲಿ ಹುದ್ದೆ ಪಡೆಯಲು ಅರ್ಹರಾಗುತ್ತಾರೆ.

ನೇಮಕಾತಿಗೆ ಆಕೆಗೆ ಅರ್ಹತೆ ಇಲ್ಲದಿದ್ದರೆ ಅಥವಾ ನೇಮಕಾತಿ ಬಯಸದೇ ಇದ್ದರೆ ಆಕೆ ಆಯ್ಕೆ ಮಾಡಿದ ಮಗ ಅಥವಾ ಮಗಳು ಹುದ್ದೆ ಪಡೆಯಲು ಅರ್ಹರಾಗುತ್ತಾರೆ.

ವಿವಾಹಿತ ಮಹಿಳಾ ನೌಕರರು ಮೃತಪಟ್ಟರೆ ಆಕೆಯ ವಿಧುರ ಪತಿಯು ಆಯ್ಕೆ ಮಾಡಿದ ಮಗ ಅಥವಾ ಮಗಳು ಅಥವಾ ಮೃತಳ ಅವಲಂಬಿತ ಮಗ, ಮಗಳು ಅರ್ಹರಿಲ್ಲದಿದ್ದರೆ ಅಥವಾ ನೇಮಕಾತಿ ಬಯಸದೇ ಇದ್ದರೆ, ವಿಧುರ ಪತಿಯನ್ನು ಹುದ್ದೆಗೆ ಪರಿಗಣಿಸಬಹುದು.

ಪತಿ ಮೊದಲೇ ಮೃತಪಟ್ಟಿದ್ದರೆ, ಮಕ್ಕಳ ವಯಸ್ಸಿಗೆ ಅನುಗುಣವಾಗಿ ಹುದ್ದೆ ನೀಡಬೇಕು ಎಂದೂ ನಿಯಮ ತಿದ್ದುಪಡಿ ಮಾಡಲಾಗಿದೆ.

ಶೇ 9.1ರಷ್ಟು ಕುಸಿದ ತೈಲ ಬಳಕೆ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಭಾರತದ ತೈಲ ಬೇಡಿಕೆಯು ಶೇಕಡ 9.1ರಷ್ಟು ಕಡಿಮೆ ಆಗಿದೆ. 1998–99ರ ನಂತರ ಇಷ್ಟು ಪ್ರಮಾಣದಲ್ಲಿ ಬೇಡಿಕೆ ಕಡಿಮೆ ಆಗಿರುವುದು ಇದೇ ಮೊದಲು. ಬೇಡಿಕೆ ಕಡಿಮೆ ಆಗಲು ಪ್ರಮುಖ ಕಾರಣ ಲಾಕ್‌ಡೌನ್.

ಪದವಿಗಳ ಮಾನ್ಯತೆ: ನ್ಯಾಯಾಲಯ ನಿರ್ಧರಿಸಲಾಗದು–ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಪದವಿ ಕೋರ್ಸ್ ಮತ್ತು ಮೂಲ ವಿಜ್ಞಾನ ಪದವಿ ಕೋರ್ಸ್‌ಗಳು ಸಮಾನವೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವ ವಿಚಾರದಲ್ಲಿ ನ್ಯಾಯಾಲಯಗಳು ವೃತ್ತಿಪರ ಸಂಸ್ಥೆಗಳಲ್ಲ ಎಂದು ಹೈಕೋರ್ಟ್ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ.

ಬೆಂಗಳೂರು ಜಲಮಂಡಳಿಯ ಸಹಾಯಕ/ ಗುಮಾಸ್ತ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿದ್ದ ಏಳು ಅಭ್ಯರ್ಥಿಗಳ ಎಂಜಿನಿಯರಿಂಗ್ ಪದವಿಗಳನ್ನು ವಿಜ್ಞಾನ ಪದವಿ ಎಂದು ಪರಿಗಣಿಸುವಂತೆ ಹೈಕೋರ್ಟ್ ವಿಭಾಗೀಯ ಪೀಠ 2020ರ ಸೆಪ್ಟೆಂಬರ್ 3ರಂದು ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಜಲಮಂಡಳಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ವೇಳೆ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಅರ್ಜಿ ಸಲ್ಲಿಸುವವರು ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಕಲಾ, ವಾಣಿಜ್ಯ ಅಥವಾ ವಿಜ್ಞಾನ ವಿಷಯದಲ್ಲಿ ಪದವಿ ಪಡೆದಿರಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಏಳು ಮಂದಿ ಎಂಜಿನಿಯರಿಂಗ್ (ಬಿಇ) ಪದವೀಧರರೂ ಅರ್ಜಿ ಸಲ್ಲಿಸಿದ್ದರು. ವಿಜ್ಞಾನ ಪದವೀಧರರೆಂದು ಪರಿಗಣಿಸಬೇಕೆಂಬ ಅವರ ಕೋರಿಕೆಯನ್ನು ಜಲಮಂಡಳಿ ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಗಳನ್ನು ಮಾನ್ಯ ಮಾಡುವಂತೆ ಏಕಸದಸ್ಯ ಪೀಠ ಆದೇಶಿಸಿತ್ತು.

'ಯುಜಿಸಿಯಂತಹ ವೃತ್ತಿಪರ ಸಂಸ್ಥೆಗಳೇ ಈ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯ' ಎಂಬ ಅಭಿಪ್ರಾಯ ನೀಡಿದ ನ್ಯಾಯಪೀಠ, ಜಲಮಂಡಳಿಯ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದೆ.

WEEKEND CORNER ಕ್ಲಾಸಿಫೈಡ್ಸ್

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

FLAT No WLM093 was BOOKED in the name of Mrs. Ashu Chandok D/o Late Sh. Chunni Lal Wasson & Mukesh Chandok S/o Late Sh Manohar Lal R/o R/o 14/21 2nd Floor East Patel Nagar, New Delhi-110 008. Mrs. Ashu Chandok has expired on 17th February 2021 and accordingly the name of Mr. Mukesh Chandok is being noted in DLF's record in respect of the captioned FLAT. If anybody has any objection to this, he or she may approach **M/s. Rajapura Homes Private Limited** (formerly known as M/s. DLF Homes Rajapura Private Limited) PROPERTY NO-356/1/1, AKSHAYA NAGAR MAIN ROAD. BEGUR ROAD, BEGUR, BANGALORE-560068, Or the undersigned within 21 days of publication of this notice.

A. NAGARAJA, B.Sc, LL.B., Advocate
No. 6, KHB Buildings II Block, 13th Cross, Indiranagar II Stage, Bangalore-560 038
Tel: 25297511, Mob: 9448067511
E-mail: A.Nagaraja_adv@yahoo.com

BUSINESS

Business Offers

Finance

FINANCE REQUIRED on Commercial Project Land. Contact 7676770503

JOB OPPORTUNITIES

Engg/ Production Technical

MNC REQUIRED Diplomo Mechanicals, Electronics, Fitters, Welders, Electricians, CNC Operators, Storekeepers, Accountants. Monica: 7204367465/ 9845379900

CONSTRUCTION SITE supervisor with 3 + years experience for site in Kammanahalli (HRBR Layout) should have 2 wheeler and construction knowledge. Contact: 080- 26603729 / 080-26602089 E-mail: anvesh@mahendraperfumery.com.

Graphic Designers

WANTED GRAPHIC Designer for Wallpaper Printing Co.- (Coreldraw, Photoshop & Illustrator) Min 5 Years Exp. at Shantinagar Bangalore, Call 9342935865

Hospital & Medical Jobs

Required **Therapy Specialist**
Need a shoulder therapy specialist to treat a patient in Malleshwaram every day for next 6 months.
Please contact **98450 08202**

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

MATRIMONIAL

Grooms Wanted

Brahmin

BEAUTIFUL/ FAIR Brahmin girl, Vashishtha gotra working in Tata Elxsi in Mumbai needs suitable groom in Brahmin or Kshetriya community with good academic career and job. Contact 9766141863/ 9146337958

PERSONAL

Change of Name

I, SURESH.T @ SURYA.T, S/o. Thimme Gowda .B, aged about 25 years, R/at No.5, Magadi Main Road, Kaveripura, Basaveshwaranagar, Bangalore-560079, have declare that SURESH.T and SURYA.T is the name of one and the same person only. Vide affidavit dated 06-04-2021 sworn before XXIV Addl. Chief Metropolitan Magistrate, Bangalore.

I, RAJESHWARI .N alias N. Gangarajamma W/o Late Lokesh B.R age 47 Years Residing at #06, Thigalarapalya Main Road, Karihobanahalli, Peenya Small Industries, Bangalore-560058. declare that both above names belongs to one & Same Person Only. Vide affidavit dated 22.03.2021 before notary Gangambika.H.S, Bangalore

I, NOORAIN SHARIFFA R/a#157, 2nd Main, 3rd Cross, Viveknagar Further Extension, Viveknagar, Bangalore-47 have Changed NOORAIN SHARIFF Vide Affidavit 09.04.2021 Before Notary Shivashanakarappa, Bangalore.

6504010P SEP/ASH, Patil Mayur Kailas 2ATC mother name service record SANGITA to SANGITA KAILAS PATIL notary B.M. Chandrashekar, Bangalore

6504010P SEP/ASH, Patil Mayur Kailas 2ATC father name service record PATIL KAILAS RUPCHAND to KAILAS RUPCHAND PATIL notary B.M. Chandrashekar, Bangalore

KHUSHBU KUMARI W/o. JC672130W, SUB/MT Govind Kumar Singh Vill: Fatehpur Ragho Hazipur, Vaishali, Bihar, my name KHUSHBU KUMARI to KHUSBOO DEVI notary KV Mani, Bangalore.

I, PUJA Rani Kankani have changed my Minor Son's name from NAMAN SAH to NAMAN KANKANI, vide affidavit 09/04/2021 before Notary H.S.Sakalesh Aradhya, Bangalore.

SMT VENKATALAXMI W/o. 6489810N, HAV, Bandaru Bhaskar Rao, Vill: VLN Puram P Bonangi Visakhapatnam, AP, my name SMT VENKATALAXMI to BANDARU VENKATA LAXMI notary Meerhassan, Bangalore.

I, UZMAA SAYEDA ASGAR D/o. SYED KHALEELUR REHMAN R/a#243, 2nd Cross, Konanakunte Cross, kanakapura Road, Mango Garden, Bangalore-62 have Changed UZMA SAYEEDA ASGAR D/o. SYED KHALEELUR RAHAMAN Vide Affidavit 09.04.2021 before Notary Shivashanakarappa, Bangalore.

Lost

LOST
I, G. Divya Shree
D/o. Late. C. Ramalakshmamma R/at. #167, 4th Block, 4th 'B' Main, Basaveshwaranagar, Blr-79 have lost my original sale deed of Site No.167, old. Sy. No-21-116-167, Document No. 3301, MVD- 308/91-92 Registered on 18-11-1991 at Rajajinagar Sub Registrar office.
If anybody found pls contact-9739277468 or inform nearby Police Station.

LOST
I, Darshan Mariyappa
S/o H.K.Mariyappa &
Suman Mariyappa Melville
D/o H.K.Mariyappa
R/at. G-6, Brigade Rathna Apartment, No.42, Ranga Rao Road, Sankarpuram, Bangalore have lost original sale deed of Document Number-543/96-97 Registered on 26-04-1996.
If anybody found pls contact: 9742801409 hkmariyappa@gmail.com or inform near by the Police Station.

SOCIAL SERVICES

Old Age Home

SUKHSHANTHI LUXURY Retirement Home. Furnished Accommodation with 3 meals, 24x7 Nurse, Ambulance, Library. Rent Rs. 18,890/- pm. Near Sarjapur, Bangalore. Call: 88847-10009/ 080 26629422

AUTOMOTIVE

Four Wheelers Selling

BMW

BMW X1 SDRIVE 2014 DONE 1,15,000. 2ND OWNER 13,00,000/- AudiQ5, 2011.FIRST OWNER 18,00,000/- INSURANCE UPTO APRIL 2022. OWNER-9845014561

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

MORE Classifieds IN SUPPLEMENT

8 ಸಾವಿರದತ್ತ ಕೋವಿಡ್, 46 ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತಷ್ಟು ಏರಿಕೆಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ ಸೋಂಕಿತರಾದವರ ಸಂಖ್ಯೆ 8 ಸಾವಿರದತ್ತ (7,955) ತಲುಪಿದೆ. ಕೋವಿಡ್ ಪೀಡಿತರಲ್ಲಿ 46 ಮಂದಿ ಸಾವಿಗೀಡಾಗಿರುವುದು ಶುಕ್ರವಾರ ದೃಢಪಟ್ಟಿದೆ.

ಇವು ಕಳೆದ ಆರು ತಿಂಗಳ ಬಳಿಕ ವರದಿಯಾದ ಗರಿಷ್ಠ ಸೋಂಕಿತರ ಸಂಖ್ಯೆ ಹಾಗೂ ಮರಣ ಪ್ರಕರಣಗಳಾಗಿವೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, 10 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ 5,576 ಮಂದಿ ಸೋಂಕಿತರಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 4.70 ಲಕ್ಷ ದಾಟಿದೆ. ಮೈಸೂರು (283), ಕಲಬುರ್ಗಿ (211), ಬೀದರ್ (186), ಹಾಸನ (153), ತುಮಕೂರು (145), ವಿಜಯಪುರ (127), ಚಿಕ್ಕಬಳ್ಳಾಪುರ (119), ದಕ್ಷಿಣ ಕನ್ನಡ (115) ಹಾಗೂ ಮಂಡ್ಯ (104) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ಈ ತಿಂಗಳ 9 ದಿನಗಳಲ್ಲಿ 51,081 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 10.48 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, ಸದ್ಯ 58,084 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 378 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಏರಿಕೆ ಕಂಡಿದೆ. ಒಂದು ದಿನದ ಅವಧಿಯಲ್ಲಿ 1.35 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕಿತರಲ್ಲಿ 3,220 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.77 ಲಕ್ಷ ದಾಟಿದೆ.

ಮರಣ ಪ್ರಕರಣ ಹೆಚ್ಚಳ: ಕೋವಿಡ್‌ಗೆ ಸಾವಿಗೀಡಾಗುವವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಬೆಂಗಳೂರಿನಲ್ಲಿ 29 ಮಂದಿ, ಮೈಸೂರಿನಲ್ಲಿ 5 ಮಂದಿ, ಕಲಬುರ್ಗಿ ಹಾಗೂ ಬೆಳಗಾವಿಯಲ್ಲಿ ತಲಾ ಇಬ್ಬರು, ಉತ್ತರ ಕನ್ನಡ, ಮಂಡ್ಯ, ಧಾರವಾಡ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಬೀದರ್, ಬೆಂಗಳೂರು ಗ್ರಾಮಾಂತರ ಹಾಗೂ ಬಳ್ಳಾರಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇದರಲ್ಲಿ ಬಹುತೇಕರು 50 ವರ್ಷ ಮೇಲ್ಪಟ್ಟವರಾಗಿದ್ದು, 26 ಮಂದಿ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಈ ತಿಂಗಳಲ್ಲಿ 246 ಮರಣ ಪ್ರಕರಣಗಳು ದೃಢಪಟ್ಟಿವೆ. ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಸಂಖ್ಯೆ 12,813ಕ್ಕೆ ತಲುಪಿದೆ.

ಸಂಕ್ಷಿಪ್ತ ಸುದ್ದಿ

ಕಾಶಿಯಾತ್ರೆಗೆ ಹೋಗಿದ್ದ 18 ಮಂದಿಗೆ ಕೋವಿಡ್

ಬಬ್ಬೂರು (ಹಿರಿಯೂರು): ಮಾರ್ಚ್ 23ರಂದು ಕಾಶಿ ಸೇರಿ ಉತ್ತರ ಭಾರತದ ಹಲವು ಪುಣ್ಯ ಕ್ಷೇತ್ರಗಳಿಗೆ ಪ್ರವಾಸ ಹೋಗಿದ್ದ ತಾಲ್ಲೂಕಿನ ಬಬ್ಬೂರಿನ 18 ಜನರಿಗೆ ಕೋವಿಡ್ ಪಾಸಿಟಿವ್ ಇರುವುದು ಶುಕ್ರವಾರ ದೃಢಪಟ್ಟಿದೆ.

ಬೆಂಗಳೂರಿನ ಕುಮಾರ್ ಟ್ರಾವೆಲ್ ಆ್ಯಂಡ್ ಟ್ರಾವೆಲ್ಸ್ ಮೂಲಕ ಬಬ್ಬೂರಿನ 42 ಜನ ಆಗ್ರಾ, ಅಯೋಧ್ಯೆ, ಮಥುರಾ, ದೆಹಲಿ, ಕಾಶಿ, ಕಾಶ್ಮೀರ, ಪಂಜಾಬ್ ಸೇರಿ ಹಲವು ಕಡೆ ಪ್ರವಾಸ, ಬಸ್‌ಗಳಲ್ಲಿ ಸಂಚರಿಸಿ ಏ.4ರಂದು ದೆಹಲಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಬಂದು, ಅಲ್ಲಿಂದ ಬಸ್ಸಿನಲ್ಲಿ ಊರಿಗೆ ಮರಳಿದ್ದರು. ಸೋಂಕಿತರಲ್ಲಿ 14 ಮಹಿಳೆಯರು, ನಾಲ್ವರು ಪುರುಷರು ಇದ್ದಾರೆ.

ರೆಮ್‌ಡೆಸಿವಿರ್ ಅಕ್ರಮ ಸಾಗಣೆ ಬಂಧನ

ಮುಂಬೈ (ಪಿಟಿಐ): ಕೊರೊನಾ ಸೋಂಕಿತರ ಚಿಕಿತ್ಸೆಗೆ ಪ್ರಮುಖವಾಗಿ ಬಳಕೆಯಾಗುವ 'ರೆಮ್‌ಡೆಸಿವಿರ್' ಔಷಧವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಫರರಾಜ್ ಹುಸೇನ್ (22) ಬಂಧಿತ ವ್ಯಕ್ತಿ. ಈತನನ್ನು ಮುಂಬೈನ ಅಂಧೇರಿ ಪ್ರದೇಶದಲ್ಲಿ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ಬಂಧಿತನಿಂದ ರೆಮ್‌ಡೆಸಿವಿರ್ ಔಷಧವನ್ನು ವಶಪಡಿಸಿಕೊಳ್ಳಲಾಗಿದೆ. ಈ ಔಷಧಗಳನ್ನು ಯಾರಿಗೆ ತಲುಪಿಸುತ್ತಿದ್ದ ಎಂಬ ಮಾಹಿತಿ ಲಭ್ಯವಾಗಿಲ್ಲ. ತನಿಖೆ ಮುಂದುವರಿದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಗೋವಿಂದ ಕಾರಜೋಳಗೆ ಮತ್ತೆ ಸೋಂಕು

ಮುಧೋಳ (ಬಾಗಲಕೋಟೆ ಜಿಲ್ಲೆ): ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಗೆ ಮತ್ತೆ ಕೊರೊನಾ ಸೋಂಕು ತಗುಲಿದ್ದು, ಅವರು ಬೆಂಗಳೂರಿನ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಅವರು ಗುಣಮುಖರಾಗುತ್ತಿದ್ದು ಇನ್ನೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ. ಯಾರೂ ಆತಂಕ ಪಡುವ ಅಗತ್ಯ ಇಲ್ಲ. ಅವರಿಗೆ ನಾಲ್ಕು ದಿನ ವಿಶ್ರಾಂತಿ ಅಗತ್ಯವಿದೆ' ಎಂದು ಮಣಿಪಾಲ ಆಸ್ಪತ್ರೆ ಮುಖ್ಯಸ್ಥ ಡಾ.ಸುದರ್ಶನ ಬಲ್ಲಾಳ್ ತಿಳಿಸಿದ್ದಾರೆ.

ಕಳೆದ ವರ್ಷವೂ ಅವರಿಗೆ ಸೋಂಕು ತಗುಲಿತ್ತು, ಚಿಕಿತ್ಸೆ ಬಳಿಕ ಗುಣಮುಖರಾಗಿದ್ದರು.

ಲಸಿಕೆ ವ್ಯರ್ಥ: ಸಚಿವರ ವಾದ ಅಲ್ಲಗಳೆದ ಟೋಪೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಐದು ಲಕ್ಷಕ್ಕೂ ಹೆಚ್ಚು ಕೊರೊನಾ ಲಸಿಕೆ ವ್ಯರ್ಥವಾಗಿದೆ ಎಂಬ ಕೇಂದ್ರದ ವಾದವನ್ನು ರಾಜ್ಯ ಆರೋಗ್ಯ ಸಚಿವ ರಾಜೇಶ್ ಟೋಪೆ ಅಲ್ಲಗಳೆದಿದ್ದಾರೆ.

'ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು ನೀಡಿದ ಅಂಕಿ-ಅಂಶಗಳು ಸಮರ್ಪಕವಾಗಿಲ್ಲ' ಎಂದು ರಾಜೇಶ್ ಹೇಳಿದ್ದಾರೆ.

'ಕೇಂದ್ರ ಸರ್ಕಾರವು ದೇಶದಾದ್ಯಂತ ವ್ಯರ್ಥವಾಗಿರುವ ಲಸಿಕೆಯ ಶೇಕಡಾವಾರು ಪ್ರಮಾಣವನ್ನು ಉಲ್ಲೇಖಿಸಿದ್ದಾರೆ. ಆದರೆ, ರಾಜ್ಯದಲ್ಲಿ ವ್ಯರ್ಥವಾಗಿರುವ ಲಸಿಕೆಯ ಪ್ರಮಾಣ, ಅದಕ್ಕಿಂತ ಅರ್ಧದಷ್ಟು ಕಡಿಮೆ ಇದೆ' ಎಂದು ಟೋಪೆ ಟ್ವೀಟ್ ಮಾಡಿದ್ದಾರೆ.

ಲಸಿಕೆ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರ ರಾಜಕೀಯ ಮಾಡುತ್ತಿದೆ ಎಂದು ಗುರುವಾರ ಜಾವಡೇಕರ್ ಹೇಳಿಕೆ ನೀಡಿದ್ದರು. 'ಮಹಾರಾಷ್ಟ್ರ ರಾಜ್ಯಕ್ಕೆ ಇಲ್ಲಿಯವರೆಗೆ ಲಸಿಕೆಯ 1,06,19,190 ಡೋಸ್‌ಗಳನ್ನು ಪೂರೈಸಲಾಗಿದೆ. 90,53,523 ಲಸಿಕೆಯ ಡೋಸ್ ಬಳಕೆಯಾಗಿದೆ. 7,43,280 ಡೋಸ್‌ಗಳಷ್ಟು ಲಸಿಕೆ ಪೋಲಾಗಿರುವುದು ಬಾಕಿ ಇದೆ. 23 ಲಕ್ಷ ಡೋಸ್‌ಗಳಷ್ಟು ಲಸಿಕೆ ಲಭ್ಯವಿದೆ' ಎಂದು ಜಾವಡೇಕರ್ ಟ್ವೀಟ್ ಮಾಡಿದ್ದರು.

ಮಹಾರಾಷ್ಟ್ರದಲ್ಲಿ ದಿನೇ ದಿನೇ ಕೋವಿಡ್ 19 ಪ್ರಕರಣಗಳು ಹೆಚ್ಚುತ್ತಿದ್ದು, ರಾಜ್ಯ ಸರ್ಕಾರ ಕೇಂದ್ರದಿಂದ ಹೆಚ್ಚಿನ ಲಸಿಕೆಗೆ ಬೇಡಿಕೆ ಇಟ್ಟಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ದೂರವಾಣಿ : 080–22265383
website: www.kiadb.in

ನಂ. ಐಎಡಿಬಿ/ಇಎನ್‌ಜಿ/ಇಟಿಎನ್‌ಡಿ–ಇಪಿ–02/413/2021–22 ದಿನಾಂಕ: 08.04.2021

ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಟಿ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಟಿ.ಸಿ.ಎಲ್ ನಲ್ಲಿ ನೋಂದಾಯಿತ ವರ್ಗ–1 (ವಿದ್ಯುತ್) ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: (1) ಬೆಳಗಾವಿ ಜಿಲ್ಲೆ, ಕಣಗಲಾ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ನಂ. 1 ರಿಂದ 15ರವರೆಗೆ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಅಳವಡಿಸುವ ಕಾಮಗಾರಿ. ಪ್ಯಾಕೇಜ್–1. (2) ಬೆಳಗಾವಿ ಜಿಲ್ಲೆ, ಕಣಗಲಾ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ನಂ. 16 ರಿಂದ 26ರವರೆಗೆ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಅಳವಡಿಸುವ ಕಾಮಗಾರಿ. ಪ್ಯಾಕೇಜ್–2.

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 12.05.2021, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/R.O: 090/2021-22

ಕೋವಿಡ್-19 ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್: 080–26560723

No.: KMIO/SME(1)/Tender/CW/237/2021-22 Date: 09.04.2021

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1.	No. KMIO/SME(1)/Tender/CW/237/2021-22 dated: 09.04.2021	Construction of Godown at New Residential Area of KMIO.
2	No. KMIO/SME(1)/Tender/Man Power/ 238/2021-22 dated: 09.04.2021	Providing Man Power Service of Group B & C to KMIO.
3	No. KMIO/SME(1)/Tender/Fire Extinguishers/239/2021-22 dated: 09.04.2021	Procurement of Fire Extinguishers to KMIO.
4	No. KMIO/SME(1)/Tender/Canteen/240/ 2021-22 dated: 09.04.2021	Turnkery works and to Run the Canteen at KMIO., Premises.
5	No. KMIO/SME(1)/Tender/KCDF Drugs/241/ 2021-22 dated: 09.04.2021	Procurement of Drugs to KCDF.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ಕ್ರ.ಸಂ. 1 ರಿಂದ 4ಕ್ಕೆ ದಿನಾಂಕ: **15.04.2021** ರಿಂದ **30.04.2021**ರವರೆಗೆ ಮತ್ತು ಕ್ರ.ಸಂ. 5ಕ್ಕೆ ದಿನಾಂಕ: **15.04.2021** ರಿಂದ **15.05.2021**ರವರೆಗೆ. ಬಿಡ್ಡರ್‌ಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್ ಶುಲ್ಕ ರೂ. 500/–ನ್ನು ಪಾವತಿಸಿ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **15.05.2021 ರಂದು ಮಧ್ಯಾಹ್ನ 3:00 ಗಂಟೆಯವರೆಗೆ.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

DIPR/DDU/125/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂಖ್ಯೆ:ಕರಾಸ:ರಾನವಿ:ಸಿಶಾ:ನೇಮಕ:103ಎ: 21–22 ದಿನಾಂಕ: 08–04–2021

ಕರೆ ಸೂಚನಾ ಪತ್ರ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ರಾಮನಗರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ತರಬೇತಿ ನಿರ್ವಾಹಕ, ಚಾಲಕ, ಚಾಲಕ–ಕಂ–ನಿರ್ವಾಹಕ, ತಾಂತ್ರಿಕ ಸಿಬ್ಬಂದಿಗಳು ಯಾವುದೇ ಮುನ್ಸೂಚನೆ ನೀಡದೆ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟ (ರಿ) ರವರು ದಿನಾಂಕ:07–04–2021ರಿಂದ ಅನಿರ್ದಿಷ್ಠಾವಧಿ ಮುಷ್ಕರ ಹಮ್ಮಿಕೊಂಡಿದ್ದು, ಸಂಸ್ಥೆಯು ಅಗತ್ಯ ಸೇವಾ ನಿರ್ವಹಣಾ ಕಾಯಿದೆ–2013 (Karnataka Act No-25/2015) ಯಡಿ ಬರುತ್ತಿದ್ದು ಕೆಲಸಕ್ಕೆ ಗೈರುಹಾಜರಾಗಿರುವ ನೌಕರರ ವಿರುದ್ಧ "ಕೆಲಸ ಮಾಡದಿದ್ದಾಗ ವೇತನವಿಲ್ಲ" ಎಂಬ ತತ್ವದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಹಾಗೂ ಕಾನೂನು ಬಾಹಿರ ಮುಷ್ಕರದಲ್ಲಿ ಭಾಗವಹಿಸಬಾರದಾಗಿ ಅವರಿಗೆ ಸೂಚಿಸಿದ್ದು, ಭಾಗವಹಿಸಿದಲ್ಲಿ ಕೆಲಸ ಮಾಡದಿದ್ದಾಗ ವೇತನವಿಲ್ಲವೆಂಬ ತತ್ವದ ಪ್ರಕಾರ ಕ್ರಮಕೈಗೊಳ್ಳುವುದಾಗಿ ಅನಧಿಕೃತವಾಗಿ ಗೈರುಹಾಜರಾಗಿ ನೌಕರರ ವಿರುದ್ಧ ಶಿಸ್ತು ಕ್ರಮಗಳನ್ನು ಕೈಗೊಳ್ಳುವುದಾಗಿ ಘಟಕದ ಸೂಚನಾ ಫಲಕದಲ್ಲಿ ಪ್ರದರ್ಶಿಸಿ ಮುಂಚಿತವಾಗಿ ತಿಳಿಸಿದ್ದಾಗ್ಯೂ ಸದರಿಯವರು ಕರ್ತವ್ಯಕ್ಕೆ ಗೈರುಹಾಜರಾಗಿ ಸಂಸ್ಥೆಯ ಆಡಳಿತಾತ್ಮಕ ನಿರ್ದೇಶನಗಳನ್ನು ಉಲ್ಲಂಘಿಸಿರುವುದಲ್ಲದೆ ಸಾರ್ವಜನಿಕ ಸೇವೆಗಾಗಿ ಮುಡಿಪಾಗಿರುವ ಸಂಸ್ಥೆಯ ವಾಹನಗಳನ್ನು ಕಾರ್ಯಾಚರಿಸದೆ ಸಾರ್ವಜನಿಕ ಪ್ರಯಾಣಿಕರಿಗೆ ಅನಾನುಕೂಲ ಮಾಡಿರುವುದಲ್ಲದೆ ಸಂಸ್ಥೆಗೆ ಕೆಟ್ಟ ಹೆಸರು ಬರಲು ಕಾರಣರಾಗಿರುತ್ತಾರೆ. ಸದರಿಯವರುಗಳಿಗೆ ತರಬೇತಿಗೆ ನಿಯೋಜಿಸುವ ಸಮಯದಲ್ಲಿ ಜಾರಿಗೊಳಿಸಲಾದ ತರಬೇತಿ ಪ್ರಸ್ತಾವನೆಗಳಲ್ಲಿ ತಿಳಿಸಲಾದ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ತವ್ಯದ ಮೇಲೆ ತರಬೇತಿ ಮೇಲೆ ನಿಯೋಜಿಸಿ ಕೊಂಡಿದ್ದು ಅನಧಿಕೃತವಾಗಿ ಗೈರುಹಾಜರಾಗಿ ತರಬೇತಿ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿರುತ್ತಾರೆ.

ತರಬೇತಿ ನಿಯೋಜನಾ ಆದೇಶದ ಷರತ್ತು 9 ರಲ್ಲಿ ತರಬೇತಿ ಅವಧಿಯಲ್ಲಾಗಲೀ ಅಥವಾ ವಿಸ್ತರಿಸಿದ ಅವಧಿಯಲ್ಲಾಗಲೀ ನೌಕರರು ತರಬೇತಿಗೆ ಗೈರುಹಾಜರಾದಲ್ಲಿ, ಆಸಕ್ತಿ ತೋರದಿದ್ದಲ್ಲಿ/ತೃಪ್ತಿಕರವಾಗಿ ಮುಗಿಸದಿದ್ದಲ್ಲಿ ಅಥವಾ ಯಾವುದೇ ತೆರನಾದ ದುರ್ನಡತೆ/ಗುರುತರ ಅಪರಾಧ/ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿದ್ದಲ್ಲಿ ಅವರನ್ನು ಆಯ್ಕೆಪಟ್ಟಿಯಿಂದ ಯಾವುದೇ ಮುನ್ಸೂಚನೆಯಿಲ್ಲದೆ ತೆಗೆದು ಹಾಕಲಾಗುವುದೆಂದು ತಿಳಿಸಲಾಗಿದ್ದು, ಈ ಪ್ರಕಾರ ನಿರ್ದೇಶಿಸಲ್ಪಟ್ಟ ಕಾರಣಗಳಿಗಾಗಿ ತಮ್ಮ ಹೆಸರನ್ನು ಆಯ್ಕೆ ಪಟ್ಟಿಯಿಂದ ಯಾವುದೇ ಸೂಚನೆ ಇಲ್ಲದೆ ತೆಗೆದು ಹಾಕಲಾಗುವುದು. ಆದ ಕಾರಣ ಈ ಪತ್ರ ತಲುಪಿದ ಕೂಡಲೇ ತರಬೇತಿಗೆ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲ್ಕಾಣಿಸಿ ತರಬೇತಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಇಚ್ಛೆ ಇರುವುದಿಲ್ಲ ಎಂದು ಪರಿಗಣಿಸಿ ಅವರನ್ನು ಯಾವುದೇ ಮುನ್ಸೂಚನೆ ಇಲ್ಲದೆ ತರಬೇತಿ ಹುದ್ದೆಯ ಆಯ್ಕೆ ಪಟ್ಟಿಯಿಂದ ತೆಗೆದು ಹಾಕಲಾಗುವುದು. ಮೇಲ್ಕಂಡ ಸಿಬ್ಬಂದಿಗಳಿಗೆ ವ್ಯಕ್ತಿವಾರು ಕರೆ ಪತ್ರಗಳನ್ನು ಅವರ ಮನೆ ವಿಳಾಸಕ್ಕೆ ಕಳುಹಿಸಿಕೊಡಲಾಗಿದ್ದು, ಘಟಕದ ಸೂಚನಾ ಫಲಕಗಳಲ್ಲಿಯೂ ಸಹ ಪ್ರದರ್ಶಿಸಲಾಗಿರುತ್ತದೆ. ಆದಾಗ್ಯೂ ಹೆಚ್ಚುವರಿಯಾಗಿ ಈ ಕರೆ ಪತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಕರೆ ಪತ್ರವೇ ಅಂತಿಮವಾಗಿದ್ದು ಕೂಡಲೇ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಿದೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಪತ್ರವ್ಯವಹಾರ ಮಾಡಲಾಗುವುದಿಲ್ಲ.

ಕ್ರ.ಸಂ	ಹೆಸರು(ಶ್ರೀಯುತರು)	ಹುದ್ದೆ	ಬಿ.ಸಂ	ಘಟಕ	ಕ್ರ.ಸಂ	ಹೆಸರು(ಶ್ರೀಯುತರು)	ಹುದ್ದೆ	ಬಿ.ಸಂ	ಘಟಕ
1	ಶೃತಿ.ಕೆ.ಎನ್	ಕು.ಕರ್ಮಿ	-	ಆನೇಕಲ್	41	ಅಡಿವೆಪ್ಪ ಹೂಗಾರ್	ತಾಂ.ಸ	-	ಹಾರೋಹಳ್ಳಿ
2	ನಾಗರಾಜ್	ತಾಂ.ಸ	-	ಆನೇಕಲ್	42	ದೀಪಕ್ ದುರ್ವೆ	ತಾಂ.ಸ	-	ಹಾರೋಹಳ್ಳಿ
3	ಶಿವರಾಜ ಕುಮಾರ್ ಪಾಟೀಲ್	ತಾಂ.ಸ	-	ಆನೇಕಲ್	43	ಸಿದ್ದನಗೌಡ ಹೊಸಗೌಡರ್	ತಾಂ.ಸ	-	ಹಾರೋಹಳ್ಳಿ
4	ತಿಲಕ್.ಸಿ.ವಿ	ತಾಂ.ಸ	-	ಆನೇಕಲ್	44	ರಾಮಕೃಷ್ಣಯ್ಯ.ಬಿ.ಸಿ	ಚಾ/ನಿ	1194/3869	ಹಾರೋಹಳ್ಳಿ
5	ಸಂಜೀವ್ ಕಾಂಬ್ಳೆ	ತಾಂ.ಸ	-	ಆನೇಕಲ್	45	ರವೀಶಚಾರ್.ಡಿ.ಕೆ	ಚಾ/ನಿ	268/4093	ಹಾರೋಹಳ್ಳಿ
6	ನಜಮೀನ್ ಅತ್ತಾರ್	ತಾಂ.ಸ	-	ಆನೇಕಲ್	46	ವಾಸೀಂ ಪಾಷಾ ಎಂ	ಚಾ/ನಿ	18/4154	ಹಾರೋಹಳ್ಳಿ
7	ಸುನೀತಾ.ಎಂ	ತಾಂ.ಸ	-	ಆನೇಕಲ್	47	ಮಂಜುನಾಥ.ಎಸ್	ಚಾ/ನಿ	107/4183	ಹಾರೋಹಳ್ಳಿ
8	ದಿವ್ಯ.ಎನ್	ತಾಂ.ಸ	-	ಆನೇಕಲ್	48	ಪೂಜಾ.ಹೆಚ್.ಎಸ್	ಕು.ಕರ್ಮಿ	-	ಕನಕಪುರ
9	ಬಸವರಾಜ್ ಮನಭಾವಿ	ನಿರ್ವಾಹಕ	4150	ಆನೇಕಲ್	49	ಲಾಯಪ್ಪ ಬಗಲಿ	ತಾಂ.ಸ	-	ಕನಕಪುರ
10	ರಾಮಚಂದ್ರಯ್ಯ	ಚಾ/ನಿ	933/4168	ಆನೇಕಲ್	50	ತಮ್ಮಣ್ಣ ನಡುವಿನಕೆರೆ	ತಾಂ.ಸ	-	ಕನಕಪುರ
11	ರೇವಣ್ಣ.ಟಿ.ಎಂ	ಚಾ/ನಿ	62/4170	ಆನೇಕಲ್	51	ಮಾಳಿಂಗರಾಯ ಬಿರಾದಾರ್	ತಾಂ.ಸ	-	ಕನಕಪುರ
12	ಮಳಿಯಪ್ಪ ಮಟ್ಯಾಳ	ಚಾ/ನಿ	14946/4173	ಆನೇಕಲ್	52	ಮಂಜುಳ.ಹೆಚ್.ಕೆ	ತಾಂ.ಸ	-	ಕನಕಪುರ
14	ಪುರುಷೋತ್ತಮ್ ಕೆ	ತಾಂ.ಸ	-	ಆನೇಕಲ್	53	ಲಲಿತ.ಜಿ.ರಾಗಿಣಿ	ತಾಂ.ಸ	-	ಕನಕಪುರ
15	ಶೃತಿ.ಎಂ	ಕು.ಕರ್ಮಿ	-	ಚನ್ನಪಟ್ಟಣ	54	ಅಬ್ದುಲ್ಲಾ.ಹೆಚ್	ತಾಂ.ಸ	-	ಕನಕಪುರ
16	ಲೋಕೇಶ	ತಾಂ.ಸ	-	ಚನ್ನಪಟ್ಟಣ	55	ದ್ಯಾವಪ್ಪ ಕುಳಗೇರಿ	ತಾಂ.ಸ	-	ಕನಕಪುರ
17	ಮಹೇಶ್ ಕುಂಬಾರ್	ತಾಂ.ಸ	-	ಚನ್ನಪಟ್ಟಣ	56	ಅಮೋಘಸಿದ್ದ ಹೂನೂರ	ಚಾ/ನಿ	19776/3853	ಕನಕಪುರ
18	ಶರಣ ಬಸಪ್ಪ	ತಾಂ.ಸ	-	ಚನ್ನಪಟ್ಟಣ	57	ಅಶೋಕ ಪೂಜಾರಿ	ಕು.ಕರ್ಮಿ	-	ಮಾಗಡಿ
19	ಮೀರಾಸಾಬ್ ಬಬಲೇಶ್ವರ್	ತಾಂ.ಸ	-	ಚನ್ನಪಟ್ಟಣ	58	ಗೀತಾ.ಎಂ	ತಾಂ.ಸ	-	ಮಾಗಡಿ
20	ಕವಿತ.ಜೆ.ಎನ್	ತಾಂ.ಸ	-	ಚನ್ನಪಟ್ಟಣ	59	ಮಧು.ಕೆ.ಎನ್	ತಾಂ.ಸ	-	ಮಾಗಡಿ
21	ಸಿಂಧುಶ್ರೀ.ಜಿ	ತಾಂ.ಸ	-	ಚನ್ನಪಟ್ಟಣ	60	ಜಯಣ್ಣ	ಚಾ/ನಿ	907/4174	ಮಾಗಡಿ
22	ಸುಗಲಬಾಯಿ ಕರ್ನಲ್	ತಾಂ.ಸ	-	ಚನ್ನಪಟ್ಟಣ	61	ಬಸವರಾಜ ಕುರಿ	ಚಾ/ನಿ	747/3948	ಮಾಗಡಿ
23	ನಿಂಗಣ್ಣ ಬಸವರಾಜ್ ಕುಂಬಾರ್	ತಾಂ.ಸ	-	ಚನ್ನಪಟ್ಟಣ	62	ಶ್ರೀನಿವಾಸ.ಡಿ.ಜಿ	ಚಾ/ನಿ	10749/4056	ಮಾಗಡಿ
24	ಸಂತೋಷ ಚನ್ನನಗೌಡ ಬಿರಾದಾರ	ಚಾ/ನಿ	20040/3986	ಚನ್ನಪಟ್ಟಣ	63	ಎನ್.ಲೋಕೇಶ್	ಚಾ/ನಿ	152/4084	ಮಾಗಡಿ
25	ಯೋಗೇಶ್.ಎನ್	ಚಾ/ನಿ	297/4064	ಚನ್ನಪಟ್ಟಣ	64	ರವಿ.ಎನ್	ಚಾ/ನಿ	225/4092	ಮಾಗಡಿ
26	ಶಿವಶಂಕರ ಮೂರ್ತಿ.ಎಂ.ಡಿ	ಚಾ/ನಿ	41/4073	ಚನ್ನಪಟ್ಟಣ	65	ಶಿವರಾಜು.ಎ.ಆರ್	ಚಾ/ನಿ	2637/4094	ಮಾಗಡಿ
27	ಜಲಂಧರ್	ಚಾ/ನಿ	288/4078	ಚನ್ನಪಟ್ಟಣ	66	ವಿಷ್ಣುಗೋಪಿ.ಎನ್	ಚಾ/ನಿ	6859/4097	ಮಾಗಡಿ
28	ವಿಜಯಕುಮಾರ	ಚಾ/ನಿ	14785/4083	ಚನ್ನಪಟ್ಟಣ	67	ಉಮೇಶ.ಆರ್.ಕೆ	ಚಾ/ನಿ	451/4152	ಮಾಗಡಿ
29	ಸಿದ್ದರಾಜು.ಎಸ್	ಕು.ಕರ್ಮಿ	-	ಚನ್ನಪಟ್ಟಣ	68	ಕೃಷ್ಣ.ಎಂ	ಚಾ/ನಿ	8991/4171	ಮಾಗಡಿ
30	ಮಧುಕುಮಾರ್.ಹೆಚ್.ಪಿ	ಚಾ/ನಿ	10259/4086	ಚನ್ನಪಟ್ಟಣ	69	ಮಂಜುನಾಥ.ಹೆಚ್	ಚಾ/ನಿ	8213/4169	ಮಾಗಡಿ
31	ಮಹ್ಮದ್ ರಫೀಕ್ ಗೋಗಿ	ಚಾ/ನಿ	9877/4033	ಚನ್ನಪಟ್ಟಣ	70	ಜಯಕುಮಾರ್	ಚಾ/ನಿ	985/4058	ಮಾಗಡಿ
32	ಶ್ಯಾಮ್.ಪಿ	ಕು.ಕರ್ಮಿ	-	ವಿ.ಕಾರ್ಯಾಗಾರ	71	ಅಮರ್.ಎಂ	ಕು.ಕರ್ಮಿ	-	ರಾಮನಗರ
33	ರಾಘವೇಂದ್ರ.ಆರ್	ಕು.ಕರ್ಮಿ	-	ವಿ.ಕಾರ್ಯಾಗಾರ	72	ಮಹಮ್ಮದ್ ವಾಸೀಂ ಅಕ್ರಂ	ಕು.ಕರ್ಮಿ	-	ರಾಮನಗರ
34	ಮನು.ಜಿ.ಸಿ	ಕು.ಕರ್ಮಿ	-	ವಿ.ಕಾರ್ಯಾಗಾರ	73	ಮಹಮ್ಮದ್.ಎಸ್.ಡಿ	ಕು.ಕರ್ಮಿ	-	ರಾಮನಗರ
35	ಮೊಹಮ್ಮದ್ ಜಾವೀದ್ ದರ್ವೇಶ್	ಕು.ಕರ್ಮಿ	-	ವಿ.ಕಾರ್ಯಾಗಾರ	74	ಗಂಗವ್ವ ದಶವಂತ್	ತಾಂ.ಸ	-	ರಾಮನಗರ
36	ನೇನಾವತ್ ತಿಪ್ಪೇಸ್ವಾಮಿ	ತಾಂ.ಸ	-	ವಿ.ಕಾರ್ಯಾಗಾರ	75	ಚಂದ್ರಪ್ಪ.ಎನ್.ಕೆ	ನಿರ್ವಾಹಕ	3852	ರಾಮನಗರ
37	ಸುರೇಶ್.ಕೆ.ಎನ್	ಕು.ಕರ್ಮಿ	-	ಹಾರೋಹಳ್ಳಿ	76	ನಾಗಲಿಂಗಪ್ಪ ಬಡಿಗೇರ	ಚಾ/ನಿ	67/3923	ರಾಮನಗರ
38	ಶಶಿಕುಮಾರ್.ಸಿ	ಕು.ಕರ್ಮಿ	-	ಹಾರೋಹಳ್ಳಿ	77	ರವಿ.ಡಿ.ಎನ್.	ಚಾ/ನಿ	1172/3941	ರಾಮನಗರ
39	ಶಂಕರ್‌ಲಿಂಗ ಎ ಸುರಪುರ್	ತಾಂ.ಸ	-	ಹಾರೋಹಳ್ಳಿ	78	ವೆಂಕಟೇಶ.ಬಿ	ಚಾ/ನಿ	210/4080	ರಾಮನಗರ
40	ರಾಂಸಿಂಗ್	ತಾಂ.ಸ	-	ಹಾರೋಹಳ್ಳಿ	79	ಗಿರೀಶ.ಸಿ	ಚಾ/ನಿ	194/4181	ರಾಮನಗರ
					80	ಮಂಜುನಾಥ.ಡಿ.ಕೆ	ಚಾ/ನಿ	244/4066	ರಾಮನಗರ

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ.

ವಾಸಾಸಂಇ/ಬೆಂ.ನ/ಜಿಎ/108/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ದೂರವಾಣಿ : 0836–2251955 ಇ–ಮೇಲ್ : it.hdmc@gmail.com
ನಂ:ಎಚ್‌ಡಿಎಂಸಿ:15:02:253:2021–22/204
ದಿನಾಂಕ : 09–04–2021 ಕಾ.ನಿ.ಅಭಿಯಂತರರು(ಐಟಿ) ಕಛೇರಿ, ಹುಬ್ಬಳ್ಳಿ

ದರಗಳ ಆಹ್ವಾನಿಸುವ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಿಂದ ವಿವಿಧ ವಾರ್ಡಗಳಲ್ಲಿ / ಕಛೇರಿಗಳಲ್ಲಿ ಅಳವಡಿಸಲಾದ **CCTV** ಕ್ಯಾಮರಾಗಳ ಸಮಗ್ರ ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳಲು, ಅಂಶವಾರು ದರಗಳನ್ನು(Item Rates) ಪಡೆಯಲು ಅಧಿಕೃತ ಪೂರೈಕೆದಾರರಿಂದ / ಗುತ್ತಿಗೆದಾರರಿಂದ / ಏಜೆನ್ಸಿಯವರಿಂದ / ಕಂಪನಿಯವರಿಂದ / ಸರ್ಕಾರಿ, ಅರೆ ಸರ್ಕಾರಿ ಸಂಘ ಸಂಸ್ಥೆಗಳಿಂದ ಇ–ಪ್ರೋಕ್ಯೂರಮೆಂಟ ಪೋರ್ಟಲನಲ್ಲಿ ತಮ್ಮ ಸಮರ್ಪಕ (Standard) ದರಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ: **http://www.hdmc.mrc.gov.in** ನಿಂದ ಪಡೆಯಬಹುದಾಗಿದೆ ಹಾಗೂ ಆಸಕ್ತ ಬಿಡ್‌ದಾರರು ಕಾರ್ಯನಿರ್ವಾಹಕ ಅಭಿಯಂತರರು (ಐಟಿ) ಕಚೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ದೂರವಾಣಿ ಸಂಖ್ಯೆ **0836–2251955**ಗೆ ಸಂಪರ್ಕಿಸಬಹುದು ಮತ್ತು ಅಂತರ್ ಜಾಲದ ವೆಬ್‌ಸೈಟ್ ವಿಳಾಸ **http://www.eproc.karnatak.gov.in** ಇಂಡೆಂಟ್ ನಂ. **DMA/HDMC/CCTV/AMC/2020-21** ಮೂಲಕ ಪಡೆಯಬಹುದು.

- ದರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **20–04–2021** ಸಂಜೆ 4.00 ಗಂಟೆಯವರೆಗೆ
- ಕೊಟೇಶನ ಬಿಡ್ ತೆರೆಯುವ ದಿನಾಂಕ : **21–04–2021** ಸಂಜೆ 4.30 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಐ.ಟಿ.)
ವಾಸಾಸಂಇ/ಧಾ/ಎಂಸಿಎ/32/2021–22 ಹು–ಧಾ.ಮ.ಪಾಲಿಕೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು

ದೂರವಾಣಿ : 08262 220779 E.mail.itdpchikmagalur@gmail.com
ಸಂ:ಗಿಉಯೋಚಿ/ಕವ್ಯ/ಸಿಆರ್–01/2021–2022 ದಿನಾಂಕ: 07.04.2021

::ಇ–ಟೆಂಡರ್ ಪ್ರಕಟಣೆ::

ಚಿಕ್ಕಮಗಳೂರು ಜಿಲ್ಲೆಯ ಪರಿಶಿಷ್ಟ ವರ್ಗದ ಗೌಡಲು ಮತ್ತು ಹಸಲರು ಜನಾಂಗದವರಿಗೆ ಜೂನ್ 2021 ರಿಂದ 45 ದಿನಗಳ ಅಂತರದಲ್ಲಿ 6 ಬಾರಿ, ಪೌಷ್ಠಿಕ ಆಹಾರ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರತಿ ಕುಟುಂಬಕ್ಕೆ ಶುದ್ಧೀಕರಿಸಿದ, ಅಕ್ಕಿ 8 ಕೆ.ಜಿ, ತೊಗರಿಬೇಳೆ 3 ಕೆ.ಜಿ, ಕಡಲೆಕಾಳು 1 ಕೆ.ಜಿ, ಕಡಲೆಬೀಜ(ಶೇಂಗಾಬೀಜ) 1 ಕೆ.ಜಿ, ಅಲಸಂದೆ ಮತ್ತು ಹುರುಳಿಕಾಳು –2 ಕೆ.ಜಿ, ಹೆಸರುಕಾಳು 1 ಕೆ.ಜಿ. ಸಕ್ಕರೆ 1 ಕೆ.ಜಿ, ಬೆಲ್ಲ 1 ಕೆ.ಜಿ, ಮೊಟ್ಟೆ ನಂ 30, ಅಡುಗೆ ಎಣ್ಣೆ(ಎಫ್ ಎಕ್ಯೂ) 2 ಲೀ, ನಂದಿನಿ ತುಪ್ಪ 1/2 ಕೆ.ಜಿ, 2021–2022 ನೇ ಸಾಲಿಗೆ ಸರಬರಾಜು ಮಾಡಲು ಅರ್ಹ ವ್ಯಕ್ತಿ / ಸಂಸ್ಥೆಗಳಿಂದ ಇ–ಪ್ರೂಕ್ಯೂರ್ ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಇ–ಪ್ರೂಕ್ಯೂರ್ ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಇ–ಟೆಂಡರ್ ನಲ್ಲಿ ಭಾಗವಹಿಸಬಹುದು.

ಇ–ಟೆಂಡರ್‌ನ್ನು ಆನ್ ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 10.05.2021 ಸಂಜೆ 4.00 ಗಂಟೆಯವರೆಗೆ ಹಾಗೂ ಇ–ಟೆಂಡರ್ ತೆರೆಯುವ ದಿನಾಂಕ: 14.05.2021 ರಂದು ಬೆಳಿಗ್ಗೆ 11.00 ಗಂಟೆಗೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್ ಸೈಟ್ http://eproc. karnataka .gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದಾಗಿದೆ.

ಸಹಿ/– ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ

ಸಂ: ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್1/ಎಫ್–466/117/2020–21 ದಿನಾಂಕ: 08.04.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://eproc.karnataka.gov.in** ವನ್ನು ದಿನಾಂಕ **19.04.2021**ರ ನಂತರ ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ.	ಕಾಮಗಾರಿಯ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	KPWD/2020-21/BD/WORK_INDENT136377	167.33
2)	KPWD/2020-21/BD/WORK_INDENT136384	167.42

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ_ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಅ) ಪ್ರೀ ಬಿಡುಗಳ ಮೀಟಿಂಗ್ ದಿನಾಂಕ: **19.04.2021ರಂದು 12.30ಕ್ಕೆ, ಆ)** ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **20.04.2021ರಂದು 12.00** ಗಂಟೆಯವರೆಗೆ. ಇ) ಇ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **21.04.2021ರಂದು 16.00** ಗಂಟೆಯವರೆಗೆ. **ಈ)** ತಾಂತ್ರಿಕ ಬಿಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **22.04.2021ರಂದು 16.30ಕ್ಕೆ** ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ, ಇವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರ್,
ಲೋಇ ವಿಭಾಗ, ಬಳ್ಳಾರಿ

ವಾಸಾಸಂಇ/ಬಳ್ಳಾರಿ/ಶಿರಡಿ ಸಾಯಿ/37/2021–22

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು–ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ–3:ಟೆಂಡರ್–01:2021–22 ದಿನಾಂಕ: 05.04.2021

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ: ಇ–ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ: 8443 ಶೇವಣಿ ವಂತಿಕೆ: (1) ಹಿರಿಯೂರು ಪಟ್ಟಣದಲ್ಲಿ ಕನಕ ಸಮುದಾಯ ಭವನ ನಿರ್ಮಾಣ (ವ.ಇಂ. 136847). ಅಂದಾಜು ಮೊತ್ತ: ರೂ. 100.00 ಲಕ್ಷಗಳು. (2) ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಹಿರಿಯೂರು ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡಕ್ಕೆ ಹೊಸದಾಗಿ 06 ತರಗತಿ ಕೊಠಡಿಗಳ ಹಾಗೂ 2 ಶೌಚಾಲಯ ನಿರ್ಮಾಣ ಕಾಮಗಾರಿ (ವ.ಇಂ. 101313). ಅಂದಾಜು ಮೊತ್ತ: ರೂ. 115.00 ಲಕ್ಷಗಳು. **ಇ–ಪ್ರೊಕ್ಯೂರ್‌ಮೆಂಟ್ ಮೂಲಕ– ಏಕ ಲಕೋಟೆ ಪದ್ಧತಿ: 8443 ಶೇವಣಿ ವಂತಿಕೆ:** (3) ಹಿರಿಯೂರು ತಾಲ್ಲೂಕಿನ ಮಸ್ಕಲ್ ಗ್ರಾಮದಲ್ಲಿ ಕನಕ ಸಮುದಾಯ ಭವನ ನಿರ್ಮಾಣ (ವ.ಇಂ. 136448). ಅಂದಾಜು ಮೊತ್ತ: ರೂ. 25.00 ಲಕ್ಷಗಳು.

ಕ್ರಸಂ. 3ರ ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 20.04.2021 ಸಮಯ 17:30. (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 21.04.2021 ಸಮಯ 16:00. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 22.04.2021 ಸಮಯ 16:01. **ಕ್ರಸಂ. 1 ಮತ್ತು 2 ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ:** (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 20.04.2021 ಸಮಯ 17:30. (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 21.04.2021 ಸಮಯ 16:00. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 22.04.2021 ಸಮಯ 16:01. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 26.04.2021 ಸಮಯ 11:00.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

RO No. 28: DIPR/CTA/MCA/2021-22 ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ನಂ:ಕಾಸಮಂ/ತಾ.ಶಾ./ಸ.ಇ/ಟೆಂಡರ್–01/2021/1166 ದಿ:05.04.2021

ಉಲ್ಲೇಖಿತ ಪತ್ರಗದನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್/ಸ್ಟಾಂಡರ್ಡ್ ಕನ್ಸಲ್ಟೆನ್ಸಿ ಡಾಕ್ಯೂಮೆಂಟ್ ಕೆಡಬ್ಲ್ಯೂ ನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ/ ಕನ್ಸಲ್ಟೆನ್ಸಿಯವರಿಂದ **ದಿ: 16.04.2021** ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್‌ನ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/ADM/MCA/26/21-22 dt. 08.4.2021

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವಿಜಯಪುರ ವಿಭಾಗ, ವಿಜಯಪುರ.

ಸಂಖ್ಯೆ: ಬಿ1/ಬಜೆಟ್/ಹೊರಗುತ್ತಿಗೆ/ಟೆಂಡರ್/ಸಿಆರ್–/2021–22/9 ದಿನಾಂಕ: 05.04.2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2021–22ನೇ ಸಾಲಿಗೆ ಪ್ರಾದೇಶಿಕ ಅರಣ್ಯ ವಿಭಾಗ ವಿಜಯಪುರಕ್ಕೆ ಹೊರಗುತ್ತಿಗೆ ಮೂಲಕ ಕಂಪ್ಯೂಟರ್ ಆಪರೇಟರ್–3, ವಾಹನ ಚಾಲಕರು–2, ರಾತ್ರಿ ಕಾವಲುಗಾರ–1, ವಿಶ್ರಾಂತಿ ಗೃಹಕ್ಕೆ ಕಾವಲುಗಾರ–2, ಒಟ್ಟು 8 ಜನರ ಸಿಬ್ಬಂದಿ ಸೇವೆಯನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಈ ಕಾರ್ಯಾಲಯದಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು, **ದಿನಾಂಕ: 19.04.2021ರಂದು ಸಾಯಂಕಾಲ 5.00 ಗಂಟೆಯವರೆಗೆ** ಟೆಂಡರ್ ಹಾಕುವುದು. **ದಿನಾಂಕ: 21.04.2021ರಂದು ಪೂರ್ವಾಹ್ನ 11.00 ಗಂಟೆಗೆ** ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾದ ಟೆಂಡರ್‌ಗಳ ಆರ್ಥಿಕ ಬಿಡ್‌ನ್ನು **ದಿನಾಂಕ: 22.04.2021ರಂದು ಪೂರ್ವಾಹ್ನ 11.00 ಗಂಟೆಗೆ** ತೆರೆಯಲಾಗುವುದು. ಸದರಿ ದಿನದಂದು ಯಾವುದೇ ಟೆಂಡರ್‌ಗಳು ಸ್ವೀಕೃತವಾಗದೇ ಇದ್ದಲ್ಲಿ, ಎರಡನೇ ದಿನಾಂಕವನ್ನು ಮುಂದಿನ ಮೂರು ದಿನಗಳವರೆಗೆ ವಿಸ್ತರಿಸಲಾಗುವುದು. ಈ ಬಗ್ಗೆ ವಿವರವಾದ ಮಾಹಿತಿಯನ್ನು ಕೆಲಸದ ಸಮಯದಲ್ಲಿ ಈ ಕಾರ್ಯಾಲಯದಿಂದ ಪಡೆಯುವುದು ಅಥವಾ ದೂರವಾಣಿ ಸಂಖ್ಯೆ: 08352–272165ಕ್ಕೆ ಕರೆ ಮಾಡಿ ತಿಳಿದುಕೊಳ್ಳಬಹುದು.

ಸಹಿ/- ಉಪ ಅರಣ್ಯ ಸರಂಕ್ಷಣಾಧಿಕಾರಿ, ವಿಜಯಪುರ ವಿಭಾಗ, ವಿಜಯಪುರ
ವಾ.ಸಾ.ಇ./ವಿಜಯಪುರ/18/ಎಂಸಿಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

ನೋಂದಣಿ ಸಂಖ್ಯೆ: KOL-S243-2012-13 ದಿನಾಂಕ: 15-03-2013
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
Ph:08539-225522/23 www.kimskoppal.com email: directorkimskoppal@gmail.com
ಸಂ.ಕಿಮ್ಸ್/ಕೊಪ್ಪಳ/ಸರಬರಾಜು/ಟೆಂಡರ್/1&2/2020-21 ದಿನಾಂಕ: 09.04.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜಿಲ್ಲಾ ಬೋಧಕ ಆಸ್ಪತ್ರೆಗೆ ಮತ್ತು ವಿ.ಆರ್.ಡಿ.ಎಲ್ ಪ್ರಯೋಗಾಲಯಕ್ಕೆ ಅವಶ್ಯವಿರುವ ಈ ಕೆಳಗಿನ ಸಾಮಾಗ್ರಿಗಳನ್ನು ಎಸ್.ಡಿ.ಆರ್.ಎಫ್ ಅಡಿಯಲ್ಲಿ ಅವಶ್ಯಕತೆಗನುಗುಣವಾಗಿ ಸರಬರಾಜು ಮಾಡಲು ಕೆಟಿಪಿಪಿ ಕಾಯ್ದೆ 1999–2000 ರನ್ವಯ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ.	ಟೆಂಡರ್ ಸಂಖ್ಯೆ	ವಿವರ	ಅಂದಾಜು ಮೊತ್ತ
1	ಸಂ: ಕಿಮ್ಸ್/ಕೊಪ್ಪಳ/ ಟೆಂಡರ್/1/2021–22 ದಿ:09/04/2021	ಔಷಧ, ಇನ್‌ಫ್ಲಾಮೆಟರಿ ಕಿಟ್ಸ್ ಮತ್ತು ಸರ್ಜಿಕಲ್ ಸಾಮಾಗ್ರಿಗಳ ಪೂರೈಕೆ	ರೂ. 102.79 ಲಕ್ಷಗಳು
2	ಸಂ: ಕಿಮ್ಸ್/ಕೊಪ್ಪಳ/ ಟೆಂಡರ್/2/2021–22 ದಿ:09/04/2021	ವಿ.ಆರ್.ಡಿ.ಎಲ್ ಲ್ಯಾಬ್ ಕನ್ಸೂಮೇಬಲ್ಸ್‌ಗಳ ಪೂರೈಕೆ	ರೂ. 17.02 ಲಕ್ಷಗಳು

1. ಟೆಂಡರ್‌ಗಳನ್ನು ದಿನಾಂಕ : **10/04/2021** ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17/04/2021** ಸಾಯಂಕಾಲ **05:30** ಗಂಟೆವರೆಗೆ.
3. ತಾಂತ್ರಿಕ ಲಕೋಟೆ(ಮೊದಲನೆಯ ಕವರ್) ತೆರೆಯುವ ದಿನಾಂಕ : **19/04/2021** ಬೆಳಿಗ್ಗೆ **11:30** ಗಂಟೆಗೆ.
4. ಆರ್ಥಿಕ ಬಿಡ್ ತೆರೆಯು ದಿನಾಂಕ: **20/04/2021** ಬೆಳಿಗ್ಗೆ **11:30** ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್: http://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http://www.kimskoppal.kar.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ನಿರ್ದೇಶಕರು,
ವಾಸಾಸಂಇ/ಕೊಪ್ಪಳ/17/ ಅಲಕ್‌ನಂದ/2021–22 ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ

ಕರ್ನಾಟಕ ಸರಕಾರ
ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಹಾವೇರಿ

ಜಿಲ್ಲಾಡಳಿತ ಭವನ, 'ಬಿ' ಬ್ಲಾಕ್, 1ನೇ ಮಹಡಿ, ರೂಂ.25, ಹಾವೇರಿ (ದೇವಗಿರಿ) ಪೋನ್ & ಫ್ಯಾಕ್ಸ ನಂ : 08375–249292
ಸಂ: ಉನಿಸಕಇಹಾ/ಎಸ್–8/ಹೊಸಂ/ಸಿಆರ್/2021–22 ದಿನಾಂಕ : 08–04–2021

ಟೆಂಡರ್ ಪ್ರಕಟಣೆ

ವಿಷಯ : ಸಮಾಜ ಕಲ್ಯಾಣ ಇಲಾಖೆಯ ಕಛೇರಿ ಹಾಗೂ ವಿದ್ಯಾರ್ಥಿನಿಲಯ ಹಾಗೂ ಮೊರಾರ್ಜಿ ದೇಸಾಯಿ/ಕಿತ್ತೂರ ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ/ಡಾ॥ಬಿ.ಆರ್. ಅಂಬೇಡ್ಕರ/ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯ ಮೂಲಕ ಪಡೆಯುವ ಕುರಿತು.

ಉಲ್ಲೇಖ : 1) ಮಾನ್ಯ ಆಯುಕ್ತರ ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ಇವರ ಅನುಮತಿಯಂತೆ,
2) ಮಾನ್ಯ ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಇವರ ಆದೇಶಗಳಂತೆ,

2021–22ನೇ ಸಾಲಿನಲ್ಲಿಹಾವೇರಿಜಿಲ್ಲೆಯ ಸಮಾಜಕಲ್ಯಾಣ ಇಲಾಖೆ ವ್ಯಾಪ್ತಿಗೆ ಒಳಪಡುವ ಕಛೇರಿಗಳು /ಮೊರಾರ್ಜಿದೇಸಾಯಿ/ಕಿತ್ತೂರುರಾಣಿಚೆನ್ನಮ್ಮ/ಅಟಲ ಬಿಹಾರಿ ವಾಜಪೇಯಿ ವಸತಿ ಶಾಲೆಗಳು/ಡಾ॥ ಬಿ.ಆರ್. ಅಂಬೇಡ್ಕರ/ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ/ಸರ್ಕಾರಿ ವಸತಿ ಶಾಲೆ/ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಗ್ರೂಪ್ "ಸಿ" ಮತ್ತು "ಡಿ" ವೃಂದದ ಹುದ್ದೆಗಳಾದ ಬೆರಳಚ್ಚುಗಾರರು (ಕಂಪ್ಯೂಟರ್‌ಆಪರೇಟರ್), ಅಡುಗೆಯವರು, ಅಡುಗೆ ಸಹಾಯಕರು, ಜವಾನರು, ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಗಳಿಂದ E-procurement ಮುಖಾಂತರ ಪಡೆದುಕೊಳ್ಳಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

(1) ಟೆಂಡರ್‌ದಾರರು ಆನ್‌ಲೈನ್ ಮೇಲೆ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **16.04.2021** ಸಂಜೆ 5–00 ಗಂಟೆವರೆಗೆ (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸ್ಥಳ ಹಾಗೂ ದಿನಾಂಕ : **19.04.2021** ಬೆಳಿಗ್ಗೆ 11–00 ಗಂಟೆವರೆಗೆ ಸ್ಥಳ : ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾವೇರಿ ಇವರ ಕಾರ್ಯಾಲಯ, ಜಿಲ್ಲಾಡಳಿತ ಭವನ, ಹಾವೇರಿ (3) ಆರ್ಥಿಕ ಬಿಡ್‌ಗಳನ್ನು ತೆರೆಯುವ ಸ್ಥಳ ಹಾಗೂ ದಿನಾಂಕ : **22.04.2021** ಬೆಳಿಗ್ಗೆ 11–00 ಗಂಟೆವರೆಗೆ ಸ್ಥಳ : ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾವೇರಿ ಇವರ ಕಾರ್ಯಾಲಯ, ಜಿಲ್ಲಾಡಳಿತ ಭವನ, ಹಾವೇರಿ

ಟೆಂಡರ್‌ಗಳನ್ನು ದಾಖಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ : **http://eproc.karnataka.gov.in** ಇರುತ್ತದೆ.

ಸಹಿ/– ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಹಾವೇರಿ

ವಾಸಾಸಂಇ/ಹಾವೇರಿ/ಎಂ.ಸಿ.ಎ/12/2021–22

ನಗರದ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಸರ್ಕಾರಿ ಮತ್ತು ಖಾಸಗಿ ಬಸ್ ಎರಡೂ ಕಾರ್ಯಾಚರಣೆ ನಡೆಸಿದವು (ಎಡಚಿತ್ರ). ಸರ್ಕಾರಿ ಬಸ್‌ಗಳ ಕಾರ್ಯಾಚರಣೆಗೂ ಅವಕಾಶ ನೀಡಿದ್ದರಿಂದ ನಷ್ಟವಾಗುತ್ತಿದೆ ಎಂದು ಖಾಸಗಿ ಬಸ್ ಚಾಲಕರು ಅಸಮಾಧಾನ ವ್ಯಕ್ತಪಡಿಸಿದರು –ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ
ಕನ್ನಡ ಧ್ವನಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ 'ಹರಟೆ ಕಟ್ಟೆ'
ಬೇಸಿಗೆ ಹಾಗೂ ನೀರಿನ ನಿರ್ವಹಣೆ
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ಡಾ. ಜಿ.ಎಸ್. ಶ್ರೀನಿವಾಸ ರೆಡ್ಡಿ
ನಿವೃತ್ತ ನಿರ್ದೇಶಕರು, ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ
ಡಾ. ದೇವರಾಜ ರೆಡ್ಡಿ
ಅಂತರ್ಜಲ ಹಾಗೂ ಮಳೆನೀರು ಕೊಯ್ಲು ತಜ್ಞರು

ಮಧ್ಯಾಹ್ನ 4 ಗಂಟೆಗೆ
ನೀವೂ ಆಲಿಸಿರಿ,
ಸ್ನೇಹಿತರಿಗೂ ಕೇಳಿಸಿರಿ

https://www.prajavani.net/podcast

ಬಿಎಂಟಿಸಿ ಬಸ್‌ಗಳಿಲ್ಲದೆ ತೊಂದರೆ– ನಗರದ ಹೊರಗಡೆಗೆ ಸರ್ಕಾರಿ ಬಸ್, ಖಾಸಗಿ ಬಸ್‌ಗಳ ಆಕ್ಷೇಪ

ನಗರದೊಳಗೆ ಪ್ರಯಾಣ ದುಬಾರಿ–ಕಿರಿಕಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ವೇತನ ಆಯೋಗದ ಶಿಫಾರಸು ಜಾರಿಗೆ ಒತ್ತಾಯಿಸಿ ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರ ಮೂರನೇ ದಿನವೂ ಮುಂದುವರಿಯಿತು. ನಗರದ ಮೆಜೆಸ್ಟಿಕ್, ಸ್ಯಾಟಲೈಟ್ ನಿಲ್ದಾಣ ಸೇರಿದಂತೆ ಹಲವು ಕಡೆಗಳಲ್ಲಿ ಶುಕ್ರವಾರ ಖಾಸಗಿ ಬಸ್‌ಗಳು ಕಾರ್ಯಾಚರಣೆಗೆ ಇಳಿದವು.

ಬಿಎಂಟಿಸಿಯ 100 ಬಸ್ಸುಗಳು ಸೇರಿದಂತೆ ನಿಗಮದ 673ಕ್ಕೂ ಹೆಚ್ಚು ಬಸ್ಸುಗಳು ರಸ್ತೆಗಿಳಿದಿದ್ದರಿಂದ ದೂರದ ಊರುಗಳಿಗೆ ಹೋಗುವ ಪ್ರಯಾಣಿಕರಿಗೆ ಹೆಚ್ಚು ತೊಂದರೆಯಾಗಲಿಲ್ಲ. ಆದರೆ, ಖಾಸಗಿ ಬಸ್‌ಗಳನ್ನು ಕರೆಸಿ, ಸರ್ಕಾರಿ ಬಸ್‌ಗಳಿಗೂ ಕಾರ್ಯಾಚರಣೆಗೆ ಅವಕಾಶ ನೀಡಿದ್ದರಿಂದ ನಮಗೆ ನಷ್ಟವಾಗುತ್ತಿದೆ ಎಂದು ಖಾಸಗಿ ಬಸ್‌ಗಳ ಮಾಲೀಕರು, ಚಾಲಕರು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಪೊಲೀಸ್ ಭದ್ರತೆಯಲ್ಲಿ ಮಂಗಳೂರಿಗೆ ಹೊರಟ ಕೆಎಸ್‌ಆರ್‌ಟಿಸಿ ಬಸ್ ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.

'ಎರಡು ದಿನದಿಂದ ನಾವು ಸೇವೆ ಒದಗಿಸುತ್ತಿದ್ದೇವೆ. ಈಗ ಸರ್ಕಾರಿ ಬಸ್‌ಗಳೂ ಕಾರ್ಯಾಚರಣೆ ಆರಂಭಿಸಿವೆ. ಒಂದು ಊರಿಗೆ ತೆರಳಲು ಕನಿಷ್ಠ ₹7000 ಮೊತ್ತದ ಡೀಸೆಲ್ ಹಾಕಿಸಬೇಕು. ಈಗ ಜನರೆಲ್ಲ ಸರ್ಕಾರಿ ಬಸ್‌ಗೆ ತೆರಳಿದರೆ ನಮಗೆ ನಷ್ಟವಾಗುತ್ತದೆ' ಎಂದು ಖಾಸಗಿ ಬಸ್‌ನ ಚಾಲಕರೊಬ್ಬರು ದೂರಿದರು.

'ಸರ್ಕಾರಿ ಬಸ್‌ಗಳಲ್ಲಿ ಜನ ಹೋಗಬಾರದು ಎಂಬ ಉದ್ದೇಶ ನಮ್ಮದಲ್ಲ. ಆದರೆ, ಸೇವೆ ಒದಗಿಸಿ ಎಂದು ನಮ್ಮನ್ನು ಕರೆಸಿದ್ದಾರೆ. ನಾವು ಬೆಳಿಗ್ಗೆಯಿಂದ ಪ್ರಯಾಣಿಕರಿಗೆ ಕಾಯುತ್ತಿದ್ದೇವೆ. ನಿಮ್ಮ ಸೇವೆ ಬೇಡ ಎಂದು ಮೊದಲೇ ಹೇಳಿದರೆ ನಾವು ಬರುತ್ತಿರಲಿಲ್ಲ. ಈಗ ಸೇವೆ ತೆಗೆದುಕೊಳ್ಳುವುದಾಗಿ ಕರೆಸಿ ಸುಮ್ಮನೆ ನಿಲ್ಲಿಸಿದರೆ ನಮಗೆ ಅನ್ಯಾಯವಾಗುತ್ತದೆ' ಎಂದು ಮೈಸೂರು ರಸ್ತೆಯಲ್ಲಿನ ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ ಚಾಲಕರೊಬ್ಬರು ಅಳಲು ತೋಡಿಕೊಂಡರು.

ಕೆಲವು ಚಾಲಕರು ಸರ್ಕಾರಿ ಬಸ್‌ಗಳ ಕಾರ್ಯಾಚರಣೆಗೆ ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರಿಂದ ಸ್ಥಳದಲ್ಲಿ ಕೆಲಹೊತ್ತು ಗೊಂದಲದ ವಾತಾವರಣ ಸೃಷ್ಟಿಯಾಯಿತು.

ಖಾಸಗಿ ಬಸ್ ಮಾಲೀಕರು ಮತ್ತು ಚಾಲಕರ ಸಂಘದ ಮುಖ್ಯಸ್ಥರು ಬಂದು ಮನವೊಲಿಸಿದ ನಂತರ ಎರಡೂ ವಲಯದ ಬಸ್‌ಗಳು ಕಾರ್ಯಾಚರಣೆ ನಡೆಸಿದವು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳು ಪೊಲೀಸ್ ಭದ್ರತೆಯಲ್ಲಿ ಸಂಚರಿಸಿದವು.

ಸ್ವಂತ ವಾಹನ ಇಲ್ಲ. ನಮ್ಮ ಬಡಾವಣೆಗಳಲ್ಲಿ ಬಿಎಂಟಿಸಿ ಬಸ್‌ಗಳು ಸಂಚರಿಸುತ್ತಿಲ್ಲ. ಪಾಸ್ ವ್ಯರ್ಥವಾಗುತ್ತಿದೆ. ಸರ್ಕಾರ ಬೇಗ ನಿರ್ಧಾರ ತೆಗೆದುಕೊಳ್ಳಬೇಕು

ಜಯಶ್ರೀ ಉಮತಾರ,
ಖಾಸಗಿ ಶಾಲೆ ಶಿಕ್ಷಕಿ

ಯಲಹಂಕದಿಂದ ಶಿವಾಜಿನಗರಕ್ಕೆ ಕೆಲಸಕ್ಕೆ ಬರಬೇಕು. ಎರಡೂ ದಿನಗಳಿಂದ ದಿನಕ್ಕೆ 300 ಆಟೊಗೆ ಖರ್ಚಾಗುತ್ತಿದೆ. ದುಡಿದ ಹಣವನ್ನೆಲ್ಲ ಪ್ರಯಾಣಕ್ಕೇ ಸುರಿಯಬೇಕಾಗಿದೆ. ಸಿ. ಆರ್. ಪೂರ್ಣಿಮಾ,
ಖಾಸಗಿ ಉದ್ಯೋಗಿ

ನಗರದೊಳಗೆ ಪರದಾಟ: ಹೊರ ಊರಿಗೆ ಕರೆದುಕೊಂಡು ಹೋಗಲು ಸರ್ಕಾರಿ ಹಾಗೂ ಖಾಸಗಿ ಬಸ್‌ಗಳ ನಡುವೆ ಪೈಪೋಟಿ ಏರ್ಪಟ್ಟಿದ್ದರೆ, ನಗರದೊಳಗೆ ಈ ಎರಡೂ ಬಸ್‌ಗಳ ಸೇವೆ ಇಲ್ಲದೆ ಪ್ರಯಾಣಿಕರು ಪರದಾಟ ನಡೆಸಬೇಕಾಯಿತು.

'ಬಿಎಂಟಿಸಿ ಬಸ್ ಪಾಸ್ ತೆಗೆದುಕೊಂಡೂ ವ್ಯರ್ಥವಾದಂತಾಗಿದೆ. ಸ್ವಂತ ವಾಹನವೂ ಇಲ್ಲ. ಆಟೊದವರು ದುಪ್ಪಟ್ಟು ಹಣ ಕೇಳುತ್ತಾರೆ. ಬಡ ಮತ್ತು ಮಧ್ಯಮ ವರ್ಗದವರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ. ಆದಷ್ಟು ಬೇಗ ಸಾರ್ವಜನಿಕ ಸಾರಿಗೆ ಸುಗಮವಾಗಿ ನಡೆಯಲು ಬೇಕಾದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು' ಎಂದು ಸಾರ್ವಜನಿಕರು ಒತ್ತಾಯಿಸಿದರು.

ರಾಜ್ಯದಲ್ಲಿ ಹೆಲಿ ಟೂರಿಸಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಉತ್ತೇಜಿಸುವ ಉದ್ದೇಶದಿಂದ ಇರುವ ಸೌಲಭ್ಯಗಳನ್ನು ಬಳಸಿಕೊಂಡು ಮೊದಲ ಹಂತದಲ್ಲಿ ಆರು ಪ್ರಮುಖ ನಗರಗಳಲ್ಲಿ ಹೆಲಿ ಟೂರಿಸಂ ಆರಂಭಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದರು.

ಹೆಲಿ ಟೂರಿಸಂ ಆರಂಭಿಸುವ ಕುರಿತಂತೆ ಶುಕ್ರವಾರ ಸಭೆ ನಡೆಸಿದ ಅವರು, ಅಧಿಕಾರಿಗಳು ಹಾಗೂ ಕಂಪನಿ ಮುಖ್ಯಸ್ಥರ ಜತೆ ಚರ್ಚೆ ನಡೆಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಫ್ಲೈ ಬ್ಲೇಡ್ (Fly Blade), ಚಿಪ್ಸನ್ (Chipsan) ಮತ್ತು ಥಂಬಿ (Thumby) ಕಂಪನಿಗಳ ಪ್ರತಿನಿಧಿಗಳು ಪ್ರವಾಸಿಗರಿಗೆ ಹೆಲಿಟೂರಿಸಂ ವ್ಯವಸ್ಥೆ ಕುರಿತ ಪ್ರಾತ್ಯಕ್ಷಿಕೆಯನ್ನು ನೀಡಿದರು.

ಸಭೆಯಲ್ಲಿ ಮಾತನಾಡಿದ ಯೋಗೇಶ್ವರ್, ರಾಜ್ಯದಲ್ಲಿ ಬಳಕೆಯಲ್ಲಿರುವ ಹೆಲಿಪ್ಯಾಡ್ ಹಾಗೂ ವಿಮಾನ ನಿಲ್ದಾಣಗಳನ್ನು ಬಳಸಿಕೊಂಡು ಹೆಲಿಟೂರಿಸಂ ಆರಂಭಿಸಲಾಗುವುದು. ಪ್ರಯಾಣಿಕರ ಅನುಕೂಲಕ್ಕಾಗಿ ಹೆಲಿಪ್ಯಾಡ್‌ಗಳಲ್ಲಿ ಅಗತ್ಯವಾದ ಲಾಂಜ್‌ಗಳನ್ನು ಸರ್ಕಾರವೇ ನಿರ್ಮಿಸಿಕೊಡಲಿದೆ. ಬೇಡಿಕೆ ಇರುವ ಸ್ಥಳಗಳಲ್ಲಿ ತ್ವರಿತವಾಗಿ ಹೆಲಿಪ್ಯಾಡ್‌ಗಳನ್ನು ನಿರ್ಮಿಸಿ ಅಗತ್ಯ ಅನುಮತಿಗಳನ್ನು ದೊರಕಿಸಿಕೊಡುವುದಾಗಿ ಹೇಳಿದರು.

ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಬಳ್ಳಾರಿ, ಹುಬ್ಬಳ್ಳಿ ಮತ್ತು ಕಲಬುರ್ಗಿ ಗಳಲ್ಲಿ ಹೆಲಿಟೂರಿಸಂ ಆರಂಭಿಸುವಂತೆ ಸಚಿವರು ನಿರ್ದೇಶನ ನೀಡಿದರು. ಇದಕ್ಕೆ ಸ್ಪಂದಿಸಿದ ಹೆಲಿಟೂರಿಸಂ ಕಂಪನಿಗಳು, ರಾಜ್ಯ ಸರ್ಕಾರವು ಪ್ರವಾಸಿ ಮಾರ್ಗಗಳನ್ನು ನಿಗದಿಪಡಿಸಿದ ತಕ್ಷಣ ಪ್ರವಾಸಿಗರಿಗೆ ಸೇವೆ ಒದಗಿಸಲು ಸಿದ್ಧವಿರುವುದಾಗಿ ಕಂಪೆನಿಗಳ ಪ್ರತಿನಿಧಿಗಳು ತಿಳಿಸಿದರು.

ಕಾರವಾನ್ ಸೌಲಭ್ಯ: ರಾಜ್ಯದಲ್ಲಿರುವ ಎಲ್ಲಾ ವಿಮಾನ ನಿಲ್ದಾಣಗಳು ಹಾಗೂ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರಿಗೆ ಕಾರವಾನ್ ಸೌಲಭ್ಯವನ್ನು ಒದಗಿಸಲು ಸಹ ಸಭೆ ತೀರ್ಮಾನಿಸಿತು.

ಮಂಜುನಾಥ ಆಟೊ ಮೊಬೈಲ್ಸ್ ಪ್ರೈ.ಲಿ ಸಂಸ್ಥೆ ಹಾಗೂ ಲಕ್ಷೀ ಕ್ಯಾಂಪೇನ್ ಸಂಸ್ಥೆಗಳು ಕಾರವಾನ್ ಪ್ರವಾಸದ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು.

'ದಮನಕಾರಿ ನೀತಿಯಿಂದ ಹೋರಾಟ ಹತ್ತಿಕ್ಕಲು ಆಗಲ್ಲ'

ಬೆಂಗಳೂರು: 'ಸಾರಿಗೆ ನೌಕರರ ಪ್ರತಿಭಟನೆ ಮೂರನೇ ದಿನವೂ ಮುಂದುವರಿದಿದೆ. ಹೀಗಿದ್ದರೂ ಅವರನ್ನು ಕರೆಸಿ ಮಾತನಾಡುವ ಕೆಲಸವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾಡಿಲ್ಲ. ಬದಲಾಗಿ ದಮನಕಾರಿ ನೀತಿಯ ಮೂಲಕ ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ. ಈ ಧೋರಣೆ ಕೈಬಿಟ್ಟು ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಮುಂದಾಗಬೇಕು' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಇಲ್ಲಿ ಶುಕ್ರವಾರ ಮಾತನಾಡಿದ ಅವರು, 'ಸಾರಿಗೆ ನೌಕರರು 22 ದಿನಗಳ ಹಿಂದೆಯೇ ಮುಷ್ಕರದ ಎಚ್ಚರಿಕೆ ನೀಡಿದ್ದರು. ಹೀಗಿದ್ದರೂ ಅವರ ನಾಯಕರನ್ನು ಕರೆದು ಮಾತನಾಡುವ ಗೋಜಿಗೆ ಮುಖ್ಯಮಂತ್ರಿ ಹೋಗಲಿಲ್ಲ. ರಾಜ್ಯದ ಜನರು ಇದರ ಪರಿಣಾಮ ಎದುರಿಸುವಂತಾಗಿದೆ. ಮುಷ್ಕರದಿಂದ ಸರ್ಕಾರದ ಆದಾಯಕ್ಕೆ ಪೆಟ್ಟು ಬಿದ್ದಿದೆ. ಸಾರಿಗೆ ಸೇವೆಯ ಮೇಲೆ ಅವಲಂಬಿತರಾಗಿದ್ದ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದರು.

ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ಸದಂ, 'ಈ ಹಿಂದೆ ರೈತರು ದೊಡ್ಡ ಮಟ್ಟದ ಹೋರಾಟ ಮಾಡಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದರು. ಸಾರಿಗೆ ನೌಕರರ ಮುಷ್ಕರವೂ ಅದೇ ಹಾದಿಯಲ್ಲಿ ಸಾಗುತ್ತಿದೆ. ರೈತ ಮುಖಂಡರೇ ಈ ಹೋರಾಟದ ಮುಂದಾಳತ್ವ ವಹಿಸಿರುವುದು ಮುಖ್ಯಮಂತ್ರಿಯವರನ್ನು ಕೆರಳಿಸಿದೆ. ಹೋರಾಟ ನಿರತರನ್ನು ಬೆದರಿಸುವ ಬದಲು ಅವರ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಹರಿಸಿ' ಎಂದು ಸಲಹೆ ನೀಡಿದರು.

ಮುಷ್ಕರಕ್ಕೆ ಸಚಿವ ಆರ್. ಅಶೋಕ ಪ್ರತಿಕ್ರಿಯೆ

'ಮುಳುಗುತ್ತಿರುವ ಹಡಗಿಗೆ ಇನ್ನಷ್ಟು ರಂಧ್ರ ಮಾಡಬೇಡಿ'

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): 'ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮುಳುಗುತ್ತಿರುವ ಹಡಗುಗಳಾಗಿದ್ದು, ಅವುಗಳಿಗೆ ಇನ್ನಷ್ಟು ರಂಧ್ರ ಮಾಡಿ ಮುಳುಗಿಸುತ್ತಿರುವ ಪ್ರಯತ್ನ ಸರಿಯಲ್ಲ' ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಶುಕ್ರವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನಾನೂ ಸಾರಿಗೆ ಸಚಿವನಾಗಿದ್ದವ. ಅದರ ಕಷ್ಟ ನನಗೆ ಗೊತ್ತಿದೆ. ಕಷ್ಟದಲ್ಲಿರುವ ಸಂಸ್ಥೆ ಮುಳುಗಿಸಬೇಡಿ. ಮುಳುಗಿದರೆ ಯಾರು ಮುಷ್ಕರ ಮಾಡುತ್ತಾರೋ ಅವರೇ ಕಾರಣ ಆಗುತ್ತಾರೆ ಹೊರತು, ಸರ್ಕಾರವಲ್ಲ' ಎಂದರು.

ಆರ್. ಅಶೋಕ

'ಕಷ್ಟದ ಸಂದರ್ಭದಲ್ಲಿ ಸರ್ಕಾರ ಸಾಲ ಮಾಡಿ ಸಂಬಳ ಕೊಡುತ್ತಿದ್ದರೂ ಯಾರದ್ದೋ ಮಾತು ಕೇಳಿ ನೌಕರರು ಮುಷ್ಕರ ನಡೆಸುತ್ತಿರುವುದು ಸರಿಯಲ್ಲ. ಕೋಡಿಹಳ್ಳಿ ಚಂದ್ರಶೇಖರ್ ಅವರು ಇಡೀ ಕರ್ನಾಟಕದ ರೈತರು ಬೆಳೆದ ಕೃಷಿ ಉತ್ಪನ್ನ, ತರಕಾರಿಯನ್ನು ಮಾರುಕಟ್ಟೆಗೆ ತಂದು ಹಾಕಲಾಗದ ಸ್ಥಿತಿಗೆ ತಂದಿಟ್ಟಿದ್ದಾರೆ' ಎಂದು ಆರೋಪಿಸಿದರು.

'ಸರ್ಕಾರ ಜನರಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಮಾಡಿದೆ. ನೌಕರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆಯೂ ಮುಖ್ಯಮಂತ್ರಿ ಚಿಂತನೆ ನಡೆಸಿದ್ದಾರೆ. ನೌಕರರು ಕೂಡಲೇ ಕರ್ತವ್ಯಕ್ಕೆ ಹಾಜರಾಗಬೇಕು' ಎಂದು ವಿನಂತಿಸಿದರು.

ಎನ್‌ಎಲ್‌ಎಸ್‌ಐಯು ಸಹಾಯಕ ಪ್ರಾಧ್ಯಾಪಕ ಆರ್.ವಿ.ಚಂದ್ರಶೇಖರ್

'ಶಿಕ್ಷಣ ನಮ್ಮ ಬಿಡುಗಡೆಗಿರುವ ಏಕೈಕ ಅಸ್ತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಸಮುದಾಯದ ಮಕ್ಕಳಿಗೆ ಇಂದಿಗೂ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಹೀಗಾಗಿ ಈ ಸಮುದಾಯ ಅಸಮಾನತೆಯ ಬಲೆಯೊಳಗೆ ಬಂಧಿಯಾಗಿದೆ. ಶಿಕ್ಷಣವೆಂಬ ಅಸ್ತ್ರ ದೊರೆತರೆ ಇದರಿಂದ ವಿಮೋಚನೆಗೊಳ್ಳುವುದು ಸುಲಭ' ಎಂದು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ (ಎನ್‌ಎಲ್‌ಎಸ್‌ಐಯು) ಸಹಾಯಕ ಪ್ರಾಧ್ಯಾಪಕ ಆರ್. ವಿ.ಚಂದ್ರಶೇಖರ್ ತಿಳಿಸಿದರು.

ಅಂಬೇಡ್ಕರ್ ಹಬ್ಬದ ಅಂಗವಾಗಿ ಸ್ಫೂರ್ತಿಧಾಮ ಸಂಸ್ಥೆ ಆಯೋಜಿಸಿದ್ದ 'ರಾಷ್ಟ್ರಪ್ರಭುತ್ವ–ಜಾತೀಯ ಹಿಂಸೆ/ ಅವಮಾನದ ಹೊಸ ರೂಪಗಳು' ವಿಷಯದ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ದಲಿತ ಸಮುದಾಯದ ಶೇ 34ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇಂದಿಗೂ ನಾವು ಮೇಲ್ವರ್ಗದವರ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದೇವೆ. ದಲಿತ ಪರ ದನಿ ಎತ್ತುವ, ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ತಳ ಸಮುದಾಯದ ಅಧಿಕಾರಿಗಳನ್ನು ಬೆದರಿಸುವ ಕೆಲಸ ನಡೆಯುತ್ತಿದೆ. ಅವರಿಗೆ ದೇಶದ್ರೋಹದ ಪಟ್ಟ ಕಟ್ಟಲಾಗುತ್ತಿದೆ. ಇದು ಆತಂಕಕಾರಿ' ಎಂದರು.

'ಏಕ ಭಾಷೆ ಮತ್ತು ಏಕ ಸಂಸ್ಕೃತಿ ಜಾರಿಯಾಗಬೇಕು ಎಂದು ಹಲವರು ಹೇಳುತ್ತಿದ್ದಾರೆ. ಇದು ನಮ್ಮ ಸಂಸ್ಕೃತಿಯನ್ನು ನಾಶಗೊಳಿಸುವ ಹುನ್ನಾರ. ದೇಶದ ಸಾಮಾಜಿಕ ರಚನೆಯೊಳಗೆ ಅಸಮಾನತೆ ಮನೆಮಾಡಿದೆ. ದಲಿತರಿಗೆ ಮೊದಲು ಸಂಸ್ಕೃತ ಕಲಿಯಲು ಅವಕಾಶ ಇರಲಿಲ್ಲ. ಈಗ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಕಲಿಯಲು ಅವಕಾಶ ನೀಡುತ್ತಿಲ್ಲ. ದಲಿತ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಕ್ಕರೆ ಅವರು ಉನ್ನತ ಸ್ಥಾನಕ್ಕೇರಬಹುದು ಎಂಬ ಆತಂಕ ಹಲವರಲ್ಲಿದೆ. ಹೀಗಾಗಿಯೇ ಈ ನೀತಿ ಅನುಸರಿಸುತ್ತಿದ್ದಾರೆ. ಕಾರ್ಪೊರೇಟ್ ವ್ಯವಸ್ಥೆಯಲ್ಲೂ ಈಗ ಜಾತಿ ವ್ಯವಸ್ಥೆ ನುಸುಳಿದೆ. ಮೇಲ್ವರ್ಗದವರು ತಳ ಸಮುದಾಯದವರ ಉದ್ಯೋಗ ಕಸಿದುಕೊಳ್ಳುತ್ತಿದ್ದಾರೆ' ಎಂದು ತಿಳಿಸಿದರು.

ಸ್ಫೂರ್ತಿಧಾಮ ಸಂಸ್ಥೆಯ ಅಧ್ಯಕ್ಷ ಎಸ್.ಮರಿಸ್ವಾಮಿ 'ರಾಷ್ಟ್ರಪ್ರಭುತ್ವದ ಮೂಲಕ ಒಂದು ದೇಶ, ಒಂದು ಸಂಸ್ಕೃತಿ ವ್ಯವಸ್ಥೆ ಜಾರಿಗೊಳಿಸಲು ಹೊರಟಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಉಳ್ಳವರು ಹಾಗೂ ತಳ ಸಮುದಾಯದವರನ್ನು ಪ್ರತ್ಯೇಕಿಸುತ್ತಿರುವುದೂ ಆತಂಕಕಾರಿ ಬೆಳವಣಿಗೆ' ಎಂದರು.

ಮೋಹನ್ ಭಾಗವತ್‌ಗೆ ಕೋವಿಡ್ ದೃಢ

ನಾಗ್ಪುರ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಶುಕ್ರವಾರ ಅವರನ್ನು ಇಲ್ಲಿನ ಕಿಂಗ್ಸ್‌ವೇ ಆಸ್ಪತ್ರೆಗೆ ದಾಖಲಿಸಲಾಗಿದೆ. ಭಾಗವತ್ ಅವರ ಆರೋಗ್ಯ ಸ್ಥಿರವಾಗಿದ್ದು, ನಿಗಾ ವಹಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಆಸ್ಪತ್ರೆಯಲ್ಲಿ ಬೆಂಕಿ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿ ಶುಕ್ರವಾರ ರಾತ್ರಿ ಆಸ್ಪತ್ರೆಯೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ನಾಲ್ವರು ಮೃತಪಟ್ಟಿದ್ದು, ಕೆಲವರು ಗಾಯಗೊಂಡಿದ್ದಾರೆ.

'ಆಸ್ಪತ್ರೆ ಕಟ್ಟಡದ ಎರಡನೇ ಮಹಡಿಯಲ್ಲಿದ್ದ ತೀವ್ರ ನಿಗಾ ಘಟಕದ (ಐಸಿಯು) ಹವಾನಿಯಂತ್ರಿತ ಘಟಕದಲ್ಲಿ ಬೆಂಕಿ ಮೊದಲಿಗೆ ಕಾಣಿಸಿಕೊಂಡಿತ್ತು. ಈ ಮಹಡಿಯನ್ನು ಬಿಟ್ಟು ಬೇರೆಡೆಗೆ ಬೆಂಕಿ ಹರಡಿಲ್ಲ' ಎಂದು ನಾಗ್ಪುರ ಮುನಿಸಿಫಲ್ ಕಾರ್ಪೊರೇಷನ್ (ಎನ್‌ಎಂಸಿ) ಅಗ್ನಿಶಾಮಕ ಘಟಕದ ಮುಖ್ಯ ಅಧಿಕಾರಿ ರಾಜೇಂದ್ರ ಉಚ್ಕೆ ತಿಳಿಸಿದ್ದಾರೆ.

'ಭಾರತವು ಪ್ರಾದೇಶಿಕ ವ್ಯಾಪಾರ ಒಪ್ಪಂದವನ್ನು ಬೆಂಬಲಿಸಲಿ'

ಬೆಂಗಳೂರು: 'ಭಾರತವು ಪ್ರಾದೇಶಿಕ ವ್ಯಾಪಾರ ಒಪ್ಪಂದವನ್ನು (ಆರ್‌ಟಿಎ) ಬೆಂಬಲಿಸಬೇಕು. ಜೊತೆಗೆ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು' ಎಂದು ಅಮೆರಿಕದ ಕಾನ್ಸಾಸ್ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಜ್ ಭಲಾ ಅಭಿಪ್ರಾಯಪಟ್ಟರು.

ಸಿಎಂಆರ್ ಕಾನೂನು ವಿಶ್ವವಿದ್ಯಾಲಯ ಶುಕ್ರವಾರ ಹಮ್ಮಿಕೊಂಡಿದ್ದ 'ಅಂತರರಾಷ್ಟ್ರೀಯ ವ್ಯಾಪಾರ ಕಾನೂನಿನಲ್ಲಿ ಹೊಸ ಪ್ರವೃತ್ತಿಗಳು' ಕುರಿತ ಆನ್‌ಲೈನ್ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. 'ಆರ್‌ಟಿಎ ಒಪ್ಪಂದದಲ್ಲಿ ಚೀನಾ ಪ್ರಾಬಲ್ಯ ಹೊಂದಿದೆ. ಈ ಕಾರಣಕ್ಕಾಗಿ ಭಾರತ ಇದನ್ನು ಬೆಂಬಲಿಸಲು ಹಿಂದೇಟು ಹಾಕುತ್ತಿದೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಹೊಸ ಕ್ರಾಂತಿಯಾಗಬೇಕು. ದೇಶೀಯವಾಗಿ ಹಲವು ಸುಧಾರಣೆಗಳಾದಾಗ ಮಾತ್ರ ಇದು ಸಾಧ್ಯ' ಎಂದರು.

'ರಸಗೊಬ್ಬರ ಬೆಲೆ ಏರಿಕೆ ಪ್ರಶ್ನಿಸದ ಬಿಜೆಪಿ ಸಂಸದರು ಹೇಡಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸಗೊಬ್ಬರ ಬೆಲೆ ಏರಿಕೆ ಬಗ್ಗೆ ಕೇಂದ್ರ ಸರ್ಕಾರವನ್ನು ಪ್ರಶ್ನಿಸದ ರಾಜ್ಯ ಸರ್ಕಾರ ಮತ್ತು ರಾಜ್ಯದ ಬಿಜೆಪಿ ಸಂಸದರು ಹೇಡಿಗಳು, ಗುಲಾಮೀ ಮನಸ್ಥಿತಿಯವರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ರಸಗೊಬ್ಬರಕ್ಕೆ ಈ ಬಾರಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ₹ 54,417 ಕೋಟಿ ಸಬ್ಸಿಡಿ ಕಡಿಮೆ ಮಾಡಿದೆ. ಕಳೆದ ವರ್ಷ ₹ 1,33,947 ಕೋಟಿ ಸಬ್ಸಿಡಿ ನೀಡಲಾಗಿತ್ತು. ಅದನ್ನು ಶೇ 40.62ರಷ್ಟು (₹ 79,530 ಕೋಟಿ) ಕಡಿಮೆ ಮಾಡಿದ್ದಾರೆ. ಆದ್ದರಿಂದ, ಏಪ್ರಿಲ್ 1ರಿಂದ ರಸಗೊಬ್ಬರ ಬೆಲೆ ಹೆಚ್ಚಾಗಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಯಾವ ದೃಷ್ಟಿಯಿಂದ ನೋಡಿದರೂ ಇದು ಬಡವರ, ರೈತರ, ಹಿಂದುಳಿದವರ, ದಲಿತರ, ಮಹಿಳೆಯರ, ಮಕ್ಕಳ ಪರವಾದ ಸರ್ಕಾರವಲ್ಲ. ಮೋದಿಯವರ ಭಾಷಣಗಳು ಹೂರಣ ಇಲ್ಲದ ಹೋಳಿಗೆಯಂತೆ, ಕಡುಬಿನಂತೆ. ಅವರು ಬರೀ ಸುಳ್ಳು ಹೇಳುತ್ತಾರೆ. ಇಂಥ ಮನೆಹಾಳು, ಜನದ್ರೋಹಿ ಸರ್ಕಾರವನ್ನು ನನ್ನ ಜೀವಮಾನದಲ್ಲಿ ನೋಡಿಲ್ಲ' ಎಂದಿದ್ದಾರೆ.

'ರಸಗೊಬ್ಬರ ಬೆಲೆಯನ್ನು ಮೋದಿ ಸರ್ಕಾರ ಶೇ 60ರಷ್ಟು ಹೆಚ್ಚಿಸಿದೆ. ಡಿಎಪಿ ಗೊಬ್ಬರದ ಬೆಲೆ ಏಪ್ರಿಲ್ 1ರಿಂದ ಕ್ವಿಂಟಲಿಗೆ ₹ 1,400ಗಳಷ್ಟು ಜಾಸ್ತಿಯಾಗಿದೆ. ಇದುವರೆಗೆ ₹ 2,400 ಇದ್ದ ಬೆಲೆ ಈಗ ₹ 3,800 ಆಗಿದೆ. ಎನ್‌ಪಿಕೆ (ಸಾರಜನಕ, ರಂಜಕ ಮತ್ತು ಪೊಟ್ಯಾಷ್) ಮೇಲಿನ ಬೆಲೆ ಕ್ವಿಂಟಲ್‌ಗೆ ₹ 1,250 ಹೆಚ್ಚಳವಾಗಿದೆ. ₹ 2,350ಗೆ ಸಿಗುತ್ತಿದ್ದ ಗೊಬ್ಬರ ಈಗ ₹ 3,600 ಆಗಿದೆ. ಕೇಂದ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಜಾಸ್ತಿಯಾಗಿದೆ, ಅದಕ್ಕೆ ಬೆಲೆ ಜಾಸ್ತಿ ಮಾಡಿದ್ದೇವೆ ಎನ್ನುತ್ತಾರೆ. ಇದು ಶುದ್ಧ ಸುಳ್ಳು' ಎಂದಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಸರಳ, ಸಾಂಪ್ರದಾಯಿಕ ಆಚರಣೆ

ಹುಸ್ಕೂರು ಮದ್ದೂರಮ್ಮ ಜಾತ್ರೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನಲ್ಲಿಯೇ ದೊಡ್ಡ ಜಾತ್ರೆಯೆಂದೇ ಪ್ರಸಿದ್ಧವಾಗಿರುವ ಹುಸ್ಕೂರು ಮದ್ದೂರಮ್ಮ ಜಾತ್ರೆಯು ಕೊರೊನಾ ಹಿನ್ನೆಲೆಯಲ್ಲಿ ಸರಳ ಮತ್ತು ಸಾಂಪ್ರದಾಯಿಕ ಆಚರಣೆಗೆ ಮಾತ್ರ ಸೀಮಿತವಾಗಿದೆ.

ಜಾತ್ರೆ ಅಂಗವಾಗಿ ಹುಸ್ಕೂರು ಮದ್ದೂರಮ್ಮ ದೇವಿಗೆ ಬೆಳ್ಳಿ ವಜ್ರಾಂಗಿ ಧರಿಸಿ ವಿಶೇಷ ಅಲಂಕಾರ ಮಾಡಲಾಗಿತ್ತು. ಹುಸ್ಕೂರು ಮದ್ದೂರಮ್ಮ ದೇವಿಗೆ ತೇರುಗಳನ್ನು ಎಳೆದು ತರುತ್ತಿದ್ದ ಎಂಟು ಗ್ರಾಮಗಳ ಭಕ್ತರು ದೇವಾಲಯಕ್ಕೆ ವಾದ್ಯಗಳೊಂದಿಗೆ ಆಗಮಿಸಿ ದೀಪದಾರತಿಗಳನ್ನು ಸಲ್ಲಿಸಿ ತೆರಳುತ್ತಿದ್ದ ದೃಶ್ಯ ಶುಕ್ರವಾರ ಕಂಡು ಬಂದಿತು.

ಜಾತ್ರೆಯ ಮುಖ್ಯ ಆಕರ್ಷಣೆಯೆಂದರೆ ಕುರ್ಜುಗಳು(ತೇರುಗಳು). ನಾರಾಯಣಘಟ್ಟ, ಹೀಲಲಿಗೆ, ಚಿಕ್ಕನಾಗಮಂಗಲ, ದೊಡ್ಡನಾಗಮಂಗಲ, ಕೊಡತಿ, ಸೂಲಕುಂಟೆ, ರಾಯಸಂದ್ರ, ಚೊಕ್ಕಸಂದ್ರ, ಹಾರೋಹಳ್ಳಿ, ಕಗ್ಗಲಿಪುರ, ಸಿಂಗೇನಅಗ್ರಹಾರ ಸೇರಿದಂತೆ 10ಕ್ಕೂ ಹೆಚ್ಚು ಗ್ರಾಮಗಳಿಂದ ತೇರುಗಳನ್ನು ಎತ್ತುಗಳ ಮೂಲಕ ಎಳೆದುಕೊಂಡು ಬರಲಾಗುತ್ತಿತ್ತು. ಪ್ರತಿಯೊಂದು ತೇರು ನೂರು ಅಡಿಗೂ ಎತ್ತರವಾಗಿರುತ್ತಿತ್ತು. ಆದರೆ, ಈ ವರ್ಷ ಯಾವುದೇ ಗ್ರಾಮದ ತೇರುಗಳು ಹುಸ್ಕೂರಿಗೆ ಬಂದಿಲ್ಲ. ಧಾರ್ಮಿಕ ಆಚರಣೆಗಳು ಮಾತ್ರ ನಡೆಯುತ್ತಿದ್ದು ಉತ್ಸವದ ವೈಭವ ಇಲ್ಲದಂತಾಗಿದೆ.

ಮದ್ದೂರಮ್ಮ ಜಾತ್ರೆ ಅಂಗವಾಗಿ ನಿರ್ಮಿಸಿರುವ ಆಕರ್ಷಕ ತೇರು

ಎಲ್ಲಾ ಗ್ರಾಮಗಳಲ್ಲೂ ಜಾತ್ರೆಯ ವಾತಾವರಣವಿದ್ದರೂ ತೇರುಗಳಿಲ್ಲದೇ ಬಿಕೋ ಎನ್ನುತ್ತಿದೆ. ದೊಡ್ಡನಾಗಮಂಗಲದಲ್ಲಿ ಗ್ರಾಮಸ್ಥರು 120 ಅಡಿಗೂ ಹೆಚ್ಚು ಎತ್ತರದ 20 ಅಂತಸ್ತುಗಳ ಬೃಹತ್ ತೇರನ್ನು ನಿರ್ಮಿಸಿದ್ದು, ಸುತ್ತಮುತ್ತಲ ಗ್ರಾಮಗಳ ಜನರು ತೇರಿನ ವೀಕ್ಷಣೆಗೆ ತೆರಳುತ್ತಿದ್ದ ದೃಶ್ಯ ಕಂಡುಬಂದಿತು.

ದೇವಾಲಯ ಸಮಿತಿ ಅಧ್ಯಕ್ಷ ಪಾಪಣ್ಣ ಮಾತನಾಡಿ. 'ಇತಿಹಾಸ ಪ್ರಸಿದ್ಧ ಹುಸ್ಕೂರು ಮದ್ದೂರಮ್ಮ ಜಾತ್ರೆಯು ಧಾರ್ಮಿಕ ಆಚರಣೆಗಳಿಗೆ ಮಾತ್ರ ಸೀಮಿತವಾಗಿದೆ. ದೇವಾಲಯದ ಭಕ್ತರಾದ ವಿವಿಧ ಗ್ರಾಮದ ಕುಟುಂಬಗಳು ದೇವರಿಗೆ ದೀಪದಾರತಿ ಮಾಡುವ ಕಾರ್ಯ ನಡೆದಿದೆ' ಎಂದರು.

'ಮೂರು ದಿನಗಳ ಜಾತ್ರೆಯು ತೇರುಗಳಿಲ್ಲದೇ ಸರಳವಾಗಿ ನಡೆಯುತ್ತಿದೆ. ದೇವಾಲಯ ಸಮಿತಿಯು ನಿತ್ಯ ಅನ್ನದಾಸೋಹಕ್ಕೆ ಚಾಲನೆ ನೀಡಿದ್ದು, ಪ್ರತಿದಿನ 800-1000 ಮಂದಿ ಭಕ್ತರು ದಾಸೋಹದಲ್ಲಿ ಭಾಗವಹಿಸುತ್ತಿದ್ದಾರೆ. ದಾಸೋಹಕ್ಕಾಗಿ ಪ್ರತ್ಯೇಕ ಭವನ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ' ಎಂದರು.

ಬನ್ನೇರುಘಟ್ಟ: ಬೋನಿಗೆ ಬಿದ್ದ ಕಿಲಾಡಿ ಕರಡಿ?

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಪ್ರಾಣಿ ಸಂರಕ್ಷಣಾ ಕೇಂದ್ರದ ಬಳಿ ಶುಕ್ರವಾರ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಕರಡಿಯೊಂದು ಸೆರೆ ಸಿಕ್ಕಿದ್ದು, ಇದು ಹತ್ತು ದಿನಗಳ ಹಿಂದೆ ಪರಾರಿಯಾಗಿದ್ದ ಕರಡಿಯೇ ಎಂಬ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ತುಮಕೂರಿನಿಂದ ಕರಡಿ ಸಂರಕ್ಷಿಸಿ ತಂದಿದ್ದ ತಂಡವನ್ನು ಸ್ಥಳಕ್ಕೆ ಕರೆಯಿಸಲಾಗಿದೆ.

'ಕರಡಿಯನ್ನು ಆರೈಕೆ ಮಾಡಲಾಗುತ್ತಿದೆ. ತುಮಕೂರಿನಿಂದ ಕರಡಿ ಸಂರಕ್ಷಿಸಿ ತರಲಾಗಿದ್ದ ತಂಡವನ್ನೂ ಬನ್ನೇರುಘಟ್ಟಕ್ಕೆ ಕರೆಯಿಸಲಾಗಿದ್ದು, ಅವರು ಅದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ತುಮಕೂರಿನ ಕರಡಿಯ ಹೋಲಿಕೆಗಳನ್ನು ಭಾವಚಿತ್ರಗಳ ಮೂಲಕ ಹೋಲಿಕೆ ಮಾಡುತ್ತಿದ್ದಾರೆ' ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದ್ದಾರೆ.

ಬೋನಿಗೆ ಬಿದ್ದಿರುವ ಕರಡಿ

ಸಿಬ್ಬಂದಿ ಕಾರ್ಯಾಚರಣೆ: ಕರಡಿಯು ಪ್ರಾಣಿ ಪುನರ್‌ವಸತಿ ಕೇಂದ್ರಕ್ಕೆ ಸ್ಥಳಾಂತರಿಸುವ ಸಂದರ್ಭದಲ್ಲಿ ಬೋನಿನಿಂದ ತಪ್ಪಿಸಿಕೊಂಡಿತ್ತು. ನಂತರ ಆನೇಕಲ್ ಸಮೀಪದ ಶೆಟ್ಟಿಹಳ್ಳಿ, ತಟ್ನಹಳ್ಳಿ ಗ್ರಾಮಗಳಲ್ಲಿ ಎಂಟಕ್ಕೂ ಹೆಚ್ಚು ಮಂದಿಯ ಮೇಲೆ ದಾಳಿ ನಡೆಸಿತ್ತು. ಬಳಿಕ ಬೇಗೂರು ಬಳಿ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆಯ ಸಿಬ್ಬಂದಿ ಇದನ್ನು ಹಿಡಿಯಲು ಹರಸಾಹಸ ಮಾಡಿದ್ದರೂ ಕಿಲಾಡಿ ಕರಡಿ ಕೈಗೆ ಸಿಗದೇ ಆಟವಾಡಿಸುತ್ತಿತ್ತು.

ಈ ನಡುವೆಯೇ ಅರಣ್ಯ ಇಲಾಖೆ ಸಿಬ್ಬಂದಿ ಪ್ರಾಣಿ ಸಂರಕ್ಷಣಾ ಕೇಂದ್ರದ ಬಳಿ ಇಟ್ಟಿದ್ದ ಸಿ.ಸಿ ಟಿವಿಯಲ್ಲಿ ಕರಡಿ ಓಡಾಡಿರುವ ದೃಶ್ಯಗಳು ಪತ್ತೆಯಾಗಿದ್ದವು. ಇದನ್ನು ಅನುಸರಿಸಿ ಬನ್ನೇರುಘಟ್ಟ ಜೈವಿಕ ಉದ್ಯಾನದ ಸಿಬ್ಬಂದಿ ಪ್ರಾಣಿ ಪುನರ್‌ವಸತಿ ಕೇಂದ್ರದ ಸಮೀಪ ಬೋನು ಇಟ್ಟಿದ್ದರು. ಗುರುವಾರ ರಾತ್ರಿ 10.30ಗಂಟೆಗೆ ಬೇಗಿಹಳ್ಳಿ ಬಳಿ ಕರಡಿ ಓಡಾಡಿರುವುದನ್ನು ಸ್ಥಳೀಯರು ಗುರುತಿಸಿದ್ದಾಗಿ ತಿಳಿಸಿದ್ದಾರೆ. ಬೋನಿಗೂ, ಬೇಗಿಹಳ್ಳಿಗೂ ಕೇವಲ 2 ಕಿ.ಮೀ ದೂರವಿದೆ. ಹಾಗಾಗಿ, ಪರಾರಿಯಾಗಿದ್ದ ಕರಡಿಯೇ ಬೋನಿಗೆ ಬಿದ್ದಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ. 'ಪರಾರಿಯಾಗಿದ್ದ ಕರಡಿ ಮತ್ತು ಬೋನಿಗೆ ಸಿಕ್ಕಿಬಿದ್ದಿರುವ ಕರಡಿಯ ಕೂದಲನ್ನೂ ಸಂಗ್ರಹಿಸಲಾಗಿದೆ. ಡಿಎನ್‌ಎ ಪರೀಕ್ಷೆಗೆ ಕಳುಹಿಸಲಾಗುವುದು. ವರದಿ ಬಂದ ನಂತರವಷ್ಟೇ ಸತ್ಯಾಂಶ ತಿಳಿಯಲಿದೆ. ಕರಡಿಯು ಆರೋಗ್ಯವಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಉದ್ಯಾನದ ವೈದ್ಯ ಡಾ.ಉಮಾಶಂಕರ್ ತಿಳಿಸಿದರು.

ರಸಗೊಬ್ಬರ ಬೆಲೆ ಹೆಚ್ಚಿಸದಂತೆ ತಾಕೀತು

ಒಂದನೇ ಪುಟದಿಂದ

ಡಿಎಪಿಯ ಹೊಸ ಚೀಲದ ಮೇಲೆ '₹ 1,700' ಎಂದು ಮುದ್ರಿಸಿರುವ ಇಫ್ಕೊ, 'ಇದು ರೈತರಿಗೆ ಮಾರಾಟ ಮಾಡುವ ದರ ಅಲ್ಲ' ಎಂದು ಗುರುವಾರ ಸ್ಪಷ್ಟಪಡಿಸಿತ್ತು. ಸಂಗ್ರಹದಲ್ಲಿ ಇರುವ 11.26 ಲಕ್ಷ ಟನ್ ರಸಗೊಬ್ಬರವನ್ನು ಹಳೆಯ ದರಕ್ಕೆ (ಪ್ರತಿ ಚೀಲಕ್ಕೆ ₹ 1,200) ರೈತರಿಗೆ ಮಾರಾಟ ಮಾಡಲಾಗುವುದು ಎಂದೂ ಅದು ತಿಳಿಸಿತ್ತು. ಕೆಲವು ಖಾಸಗಿ ಕಂಪನಿಗಳು ಡಿಎಪಿ ಬೆಲೆಯನ್ನು ಏಪ್ರಿಲ್ 1ರಿಂದ ಅನ್ವಯ ಆಗುವಂತೆ ಪ್ರತಿ ಚೀಲಕ್ಕೆ ₹ 1,700ಕ್ಕೆ ಹೆಚ್ಚಿಸಿವೆ. ಇನ್ನು ಕೆಲವು ಕಂಪನಿಗಳು ಡಿಎಪಿ ಬೆಲೆಯನ್ನು ₹ 1,600ಕ್ಕೆ ಹಾಗೂ ₹ 1,495ಕ್ಕೆ ಹೆಚ್ಚಿಸಿವೆ.

'ರಸಗೊಬ್ಬರ ಧಾರಣೆ ಸ್ಥಿರತೆಗೆ ಕ್ರಮ'

ಒಂದನೇ ಪುಟದಿಂದ

ಶುಕ್ರವಾರ ಪುತ್ತೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಈಗಾಗಲೇ ರಸಗೊಬ್ಬರವನ್ನು ರೈತರಿಗೆ ಸಹಾಯಧನದಲ್ಲಿ ನೀಡಲಾಗುತ್ತಿದೆ. ದರ ಏರಿಕೆ ತಹಬಂದಿಗೆ ಬಾರದಿದ್ದರೆ ಮತ್ತು ತೀರಾ ಅನಿವಾರ್ಯವಾದಲ್ಲಿ ಸಹಾಯಧನ ಹೆಚ್ಚಳದ ಬಗ್ಗೆ ಗಮನ ಹರಿಸಲಾಗುವುದು' ಎಂದು ಹೇಳಿದರು. 'ನಾವು ಈಗಲೂ ಶೇಕಡ 90ರಷ್ಟು ರಸಗೊಬ್ಬರಕ್ಕೆ ವಿದೇಶಗಳನ್ನು ಅವಲಂಬಿಸಿದ್ದೇವೆ. ಯೂರಿಯಾ ಒಂದರ ಧಾರಣೆಯಲ್ಲಿ ಶೇಕಡ 17ರಷ್ಟು ಹೆಚ್ಚಳಗೊಂಡಿದೆ. ಇತರ ಗೊಬ್ಬರಗಳ ಬೆಲೆ ಶೇ 40ರಷ್ಟು ಹೆಚ್ಚಳಗೊಂಡಿದೆ. ಕಳೆದೊಂದು ವಾರದಿಂದ ಪ್ರಮುಖ ಉತ್ಪಾದನಾ ಘಟಕಗಳ ಜತೆ ನಿರಂತರ ಮಾತುಕತೆ ನಡೆಸುತ್ತಿದ್ದೇನೆ. ಈ ಕಂಪನಿಗಳಲ್ಲಿ ಈಗಾಗಲೇ ಮುಂದಿನ ಒಂದೂವರೆ ತಿಂಗಳಿಗೆ ಆಗುವಷ್ಟು ರಸಗೊಬ್ಬರದ ದಾಸ್ತಾನಿದೆ. ಇದೆಲ್ಲವನ್ನೂ ಹಳೆಯ ದರದಲ್ಲೇ ಮಾರಾಟ ಮಾಡುವಂತೆ ಸೂಚನೆ ನೀಡಿದ್ದೇನೆ' ಎಂದು ತಿಳಿಸಿದರು.

'ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಾಲಿ ಹಂಗಾಮಿನ ಕೃಷಿ ಚಟುವಟಿಕೆ ಮುಕ್ತಾಯಗೊಳ್ಳುತ್ತಿದೆ. ಇದರ ಬೆನ್ನಲ್ಲೇ ರಸಗೊಬ್ಬರದ ಬೆಲೆಯೂ ಕಡಿಮೆಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕೆ–ಸೆಟ್ ಮುಂದೂಡಿಕೆ ಇಲ್ಲ'

ಮೈಸೂರು: ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ–ಸೆಟ್) ನಿಗದಿಯಂತೆಯೇ ಏಪ್ರಿಲ್ 11 ರಂದು (ಭಾನುವಾರ) ನಡೆಯಲಿದೆ ಎಂದು ಕೆ.ಸೆಟ್ ಸಂಯೋಜಕ ಪ್ರೊ. ರಾಜಶೇಖರ್ ತಿಳಿಸಿದರು.

ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ಮುಂದೂಡುವಂತೆ ಕೆಲವು ಅಭ್ಯರ್ಥಿಗಳು ಮನವಿ ಮಾಡಿದ್ದರು. 'ಕೆ–ಸೆಟ್ ಪರೀಕ್ಷೆಯನ್ನು ಯುಜಿಸಿ ಮಾರ್ಗಸೂಚಿಯ ಪ್ರಕಾರ ನಡೆಸಲಾಗುತ್ತದೆ. ಪ್ರಶ್ನೆಪತ್ರಿಕೆಯನ್ನು ಈಗಾಗಲೇ ಆಯಾ ನೋಡಲ್ ಕೇಂದ್ರಗಳಿಗೆ ಕಳುಹಿಸಲಾಗಿದೆ. ಪರೀಕ್ಷೆಗೆ ಎಲ್ಲ ಸಿದ್ಧತೆ ನಡೆಸಿರುವುದಿಂದ ಮುಂದೂಡಲು ಸಾಧ್ಯವಿಲ್ಲ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಸಮಸ್ಯೆ ಬಗೆಹರಿಸಲು ಮನವಿ: 'ಕೆ–ಸೆಟ್ ಪರೀಕ್ಷೆಯ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸೀಮಿತ ದಿನಗಳ ಅವಕಾಶ ಮಾತ್ರ ನೀಡಲಾಗಿತ್ತು. ಆದರೆ, ನೆಟ್‌ವರ್ಕ್ ಸಮಸ್ಯೆಯ ಕಾರಣ ಕೆಲವರಿಗೆ ನಿಗದಿತ ಗಡುವಿನ ಒಳಗಾಗಿ ಪ್ರವೇಶ ಪತ್ರ ಪಡೆದುಕೊಳ್ಳಲು ಆಗಿಲ್ಲ. ವೆಬ್‌ಸೈಟ್ ಮೂಲಕ ಪ್ರವೇಶ ಪತ್ರ ಪಡೆದುಕೊಳ್ಳಲು ಮತ್ತೆ ಅವಕಾಶ ನೀಡಬೇಕು' ಎಂದು ಅಭ್ಯರ್ಥಿ, ಮೈಸೂರಿನ ಬಿ.ಗಣೇಶ್ ಮನವಿ ಮಾಡಿದ್ದಾರೆ.

ಈ ಗೊಂದಲದ ಬಗ್ಗೆ ಪ್ರತಿಕ್ರಿಯಿಸಿದ ಪ್ರೊ.ರಾಜಶೇಖರ್, 'ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮಾರ್ಚ್ 22ರ ಮಧ್ಯರಾತ್ರಿಯವರೆಗೆ ಅವಕಾಶ ನೀಡಿದ್ದೆವು. ಸಾಕಷ್ಟು ಸಮಯಾವಕಾಶ ನೀಡಿದ್ದರೂ ಒಂದಷ್ಟು ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಪಡೆದುಕೊಂಡಿಲ್ಲ. ಮತ್ತೆ ಅವಕಾಶ ನೀಡಲು ಸಾಧ್ಯವಿಲ್ಲ' ಎಂದರು.

ನಿಧನವಾರ್ತೆ

ಬಸವರಾಜು



ನೆಲಮಂಗಲ: ಪಟ್ಟಣದ ನಿವಾಸಿಯಾದ ನಿವೃತ್ತ ಆರೋಗ್ಯ ನಿರೀಕ್ಷಕ ಬಸವರಾಜು (65) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಇವರ ಸ್ವಗ್ರಾಮ ಹೊಸದುರ್ಗದಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು.

REMEMBRANCE

G. MUNIYAPPA IAS (Retd)
10.04.2008
Inserted by
D. Radhakrishna & Brothers
Daughters
M. Kavitha, M. Rekha

ಕೊಬ್ಬರಿ ಧಾರಣೆ

ಅರಸೀಕೆರೆ	₹14800-15205
ತುರುವೇಕೆರೆ	₹15800-15800

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,873
ಇಂದಿನ ಅಂತ್ಯ	14,834
	38
ದಿನದ ಗರಿಷ್ಠ	14,918

ವಿನಿಮಯ ದರ

$ ಡಾಲರ್	74.73
£ ಪೌಂಡ್	102.39
€ ಯುರೊ	88.88
¥ ಯೆನ್ (100ಕ್ಕೆ)	68.2

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹466

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1600)
ಸೋಯಾ (ರಿಫೈನ್ಡ್)	₹1325 (1320)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1240 (1245)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹800-1000
ಮಧ್ಯಮ	₹600-800
ಸಣ್ಣ	₹300-600

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಬಿಜೆಪಿ ಕಾರ್ಯಕಾರಿಣಿ ಸಭೆ

ಹಾಸನ: ಏ.18 ಹಾಗೂ 19 ರಂದು ಹಾಸನದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಇಳಿಕೆಯ ಹಾದಿಗೆ ಹೊರಳಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮೂರು ದಿನಗಳಿಂದ ಏರುಗತಿಯಲ್ಲಿ ಸಾಗಿದ್ದ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ ಕುಸಿತ ದಾಖಲಿಸಿತು. ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಸಾಗಿರುವುದು, ಅಲ್ಲಲ್ಲಿ ಲಾಕ್‌ಡೌನ್ ಜಾರಿಗೆ ಬಂದಿರುವುದು ಹೂಡಿಕೆದಾರರು ಬ್ಯಾಂಕಿಂಗ್, ಹಣಕಾಸು ಹಾಗೂ ಮೂಲಸೌಕರ್ಯ ವಲಯಗಳ ಷೇರುಗಳನ್ನು ಮಾರಲು ಕಾರಣವಾದವು.

ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಕುಸಿಯುತ್ತಲೇ ಇರುವುದು ಕೂಡ ಹೂಡಿಕೆದಾರರು ಹಿಂದಡಿ ಇರಿಸಲು ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ. ಸೆನ್ಸೆಕ್ಸ್ 154 ಅಂಶ ಕುಸಿಯಿತು, ನಿಫ್ಟಿ 38 ಅಂಶ ಇಳಿಕೆ ಕಂಡಿತು.

ಬಜಾಜ್ ಫೈನಾನ್ಸ್ ಷೇರುಗಳು ಶೇಕಡ 3.12ರಷ್ಟು ಇಳಿಕೆ ದಾಖಲಿಸಿದವು. ಅಲ್ಟ್ರಾಟೆಕ್ ಸಿಮೆಂಟ್, ಎನ್‌ಟಿಪಿಸಿ, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಎಲ್‌ಆ್ಯಂಡ್‌ಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮೌಲ್ಯ ಕೂಡ ಇಳಿಯಿತು.

ಸನ್ ಫಾರ್ಮಾ, ಎಚ್‌ಯುಎಲ್, ಟೆಕ್ ಮಹೀಂದ್ರ, ಡಾ ರೆಡ್ಡೀಸ್ ಮತ್ತು ಟೈಟಾನ್ ಷೇರುಗಳು ಏರಿಕೆ ಕಂಡವು. 'ಜಾಗತಿಕ ಮಟ್ಟದಲ್ಲಿ ಸಕಾರಾತ್ಮಕ ವಹಿವಾಟು ಇಲ್ಲದಿದ್ದುದು ಹಾಗೂ ಕೋವಿಡ್ ಪ್ರಕರಣಗಳು ಹೆಚ್ಚಾಗಿದ್ದು ಷೇರು ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಲು ಕಾರಣ. ಬೇರೆ ಬೇರೆ ರಾಜ್ಯಗಳಲ್ಲಿ ಆರ್ಥಿಕ ಚಟುವಟಿಕೆಗಳಿಗೆ ನಿರ್ಬಂಧಗಳು ಎದುರಾಗುತ್ತಿರುವ ಕಾರಣ ಬ್ಯಾಂಕ್‌ಗಳ ಆಸ್ತಿ ಗುಣಮಟ್ಟದ ಬಗ್ಗೆ ಕಳವಳ ವ್ಯಕ್ತವಾಗುತ್ತಿದೆ. ಇದು ಖಾಸಗಿ ಬ್ಯಾಂಕ್‌ಗಳ ಷೇರು ಬೆಲೆ ಇಳಿಕೆಯಾಗಲು ಕಾರಣ' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ ಮೌಲ್ಯದಲ್ಲಿ ಮತ್ತೆ 15 ಪೈಸೆ ಇಳಿಕೆ ಆಗಿದ್ದು, ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರದ ಅಂತ್ಯಕ್ಕೆ 74.73 ಆಗಿದೆ.

ಮುಂಬೈ ಧಾರಣೆ

ಶೇಂಗಾ

9-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1610)
ಒಂದು ವಾರದ ಡೆಲಿವರಿ	1625 (1605)
ಸೋಯಾ ಕಚ್ಚಾ	1300 (1302)
ಪಾಮ್ ವಾರದ ಡೆಲಿವರಿ	1238 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,100 (46,350)
ಬೆಳ್ಳಿ ಕೆ.ಜಿ
66,750 (67,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಎನ್‌ಬಿಎಸ್ ಸಬ್ಸಿಡಿಯಲ್ಲಿ ಬದಲಾವಣೆ ಇಲ್ಲ’

ನವದೆಹಲಿ (ಪಿಟಿಐ): ಪಾಸ್ಫೇಟ್ ಹಾಗೂ ಪೊಟಾಷ್ ರಸಗೊಬ್ಬರಗಳ ಪೋಷಕಾಂಶ ಆಧಾರಿತ ಸಬ್ಸಿಡಿಯಲ್ಲಿ (ಎನ್‌ಬಿಎಸ್) ಪ್ರಸಕ್ತ ಹಣಕಾಸು ವರ್ಷದಲ್ಲಿ (2021–22) ಯಾವುದೇ ಬದಲಾವಣೆ ಮಾಡದಿರಲು ಸರ್ಕಾರ ತೀರ್ಮಾನಿಸಿದೆ.

ಕಳೆದ ಹಣಕಾಸು ವರ್ಷದಲ್ಲಿ ಸಾರಜನಕಕ್ಕೆ (ಎನ್) ಕೆ.ಜಿ.ಗೆ ₹ 18.78, ಪಾಸ್ಫೇಟ್‌ಗೆ (ಪಿ) ಕೆ.ಜಿ.ಗೆ ₹ 14.88, ಪೊಟಾಷ್‌ಗೆ (ಕೆ) ಕೆ.ಜಿ.ಗೆ ₹ 10.11 ಹಾಗೂ ಗಂಧಕಕ್ಕೆ ಕೆ.ಜಿ.ಗೆ ₹ 2.37 ಸಬ್ಸಿಡಿ ನಿಗದಿ ಮಾಡಲಾಗಿತ್ತು.

‘ಮುಂದಿನ ಆದೇಶ ಬರುವವರೆಗೂ ಪೋಷಕಾಂಶ ಆಧಾರಿತ ಗೊಬ್ಬರಗಳ ಸಬ್ಸಿಡಿಯಲ್ಲಿ ಯಾವುದೇ ಬದಲಾವಣೆ ಮಾಡದಿರಲು ತೀರ್ಮಾನಿಸಲಾಗಿದೆ’ ಎಂದು ರಸಗೊಬ್ಬರ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ. ರಸಗೊಬ್ಬರಗಳ ಬೆಲೆಯಲ್ಲಿ ಹೆಚ್ಚಳ ಮಾಡದಂತೆ ಸರ್ಕಾರ ಶುಕ್ರವಾರವೇ ಗೊಬ್ಬರ ತಯಾರಿಕಾ ಸಂಸ್ಥೆಗಳಿಗೆ ಸೂಚನೆ ನೀಡಿದೆ.

ಜಾಗತಿಕ ಮಟ್ಟದಲ್ಲಿ ರಸಗೊಬ್ಬರದ ದರ ಹೆಚ್ಚಳವಾಗಿರುವುದು ಹಾಗೂ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ ಆಗಿರುವುದರಿಂದ, ಕಳೆದ ವರ್ಷದ ಸಬ್ಸಿಡಿಯನ್ನೇ ಮುಂದುವರಿಸಿದರೆ, ಚಿಲ್ಲರೆ ಮಾರಾಟ ಬೆಲೆಯ ಮೇಲೆ ಭಾರಿ ಪರಿಣಾಮ ಉಂಟಾಗಲಿದೆ ಎಂದು ಗೊಬ್ಬರ ತಯಾರಿಕಾ ಸಂಸ್ಥೆಗಳು ಹೇಳಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	375
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಹೊಸನಗರ	
ಬಿಳಿಗೋಟು	3399-25242
ಚಾಲಿ	31999-32899
ಕೆಂಪುಗೋಟು	26919-31899
ರಾಶಿ	41509-43009
ಪುತ್ತೂರು	
ಕೋಕ	9500-24000
ಹೊಸತು	28500-41000
ಸಿದ್ದಾಪುರ	
ಬಿಳಿಗೋಟು	23608-30599
ಚಾಲಿ	34501-37099
ಕೋಕ	18269-31809
ಕೆಂಪುಗೋಟು	22099-30899
ರಾಶಿ	39039-41599
ತಟ್ಟಿಬೆಟ್ಟೆ	31809-37109
ಶಿರಸಿ	
ಬೆಟ್ಟೆ	22196-37069
ಬಿಳಿಗೋಟು	21296-32989
ಚಾಲಿ	23791-37611
ಹಳೆಚಾಲಿ	38099-40299
ರಾಶಿ	34899-41599
ಯಲ್ಲಾಪುರ	
ಆಪಿ	48869-48869
ಬಿಳಿಗೋಟು	24899-31711
ಚಾಲಿ	32299-37599
ಕೋಕ	18899-29499
ಕೆಂಪುಗೋಟು	27131-32819
ರಾಶಿ	39910-44499
ತಟ್ಟಿಬೆಟ್ಟೆ	33709-39469
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	41568-44109
ಗೊರಬಲು	16110-31679
ರಾಶಿ	39039-43099
ಸರಕು	47169-75400
ಭದ್ರಾವತಿ	
ರಾಶಿ	37799-42601
ಚನ್ನಗಿರಿ	
ರಾಶಿ	39420-43500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10000	---	9800	---ಸೆಂಟ್ಸ್
ಎಸಿ	3975	---	3775	
ಆರ್‌ಪಿ	5100	---	5100	
ಆರ್‌ಸಿ	2900	---	2875	--- ಡಾಲರ್ಸ್

ಮೂವರು ತರಬೇತಿ ಸಿಬ್ಬಂದಿ ವಜಾ

ಹುಬ್ಬಳ್ಳಿ: ಕರ್ತವ್ಯಕ್ಕೆ ಗೈರು ಹಾಜರಾದ ಹುಬ್ಬಳ್ಳಿ ಗ್ರಾಮಾಂತರ ಸಾರಿಗೆ ವಿಭಾಗೀಯ ವ್ಯಾಪ್ತಿಯ ಮೂವರು ತರಬೇತಿ ಚಾಲಕರನ್ನು ಶುಕ್ರವಾರ ವಜಾ ಮಾಡಲಾಗಿದೆ.

‘ಹುಬ್ಬಳ್ಳಿ ಗ್ರಾಮಾಂತರ ಎರಡನೇ ಡಿಪೊದ ಎಂ.ಬಿ.ಸಿಲವಡಿನ್ನಿ, ನವಲಗುಂದ ಡಿಪೊದ ಎಸ್.ಎಫ್. ಅದ್ಯಮನವರ ಮತ್ತು ಕಲಘಟಗಿ ಡಿಪೊದ ಜಗದೀಶರಾಮು ಎಂಬುವವರನ್ನು ವಜಾ ಮಾಡಲಾಗಿದೆ’ ಎಂದು ಹುಬ್ಬಳ್ಳಿ ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ ತಿಳಿಸಿದ್ದಾರೆ.

ಎನ್‌ಡಬ್ಲ್ಯುಕೆಆರ್‌ಟಿಸಿ ನೌಕರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಶಿವಕುಮಾರ ನೀಲಸಾಗರ

ಸವದತ್ತಿ (ಬೆಳಗಾವಿ ಜಿಲ್ಲೆ): ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಯ ಚಾಲಕ ಕಂ. ನಿರ್ವಾಹಕರಾಗಿದ್ದ ಶಿವಕುಮಾರ ಕಲ್ಲಪ್ಪ ನೀಲಸಾಗರ (40) ಅವರು ತಾಲ್ಲೂಕಿನ ಉಗರಗೋಳ ಗ್ರಾಮದ ತಮ್ಮ ಮನೆಯಲ್ಲಿ ಗುರುವಾರ ತಡರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸವದತ್ತಿ ಘಟಕದಲ್ಲಿ 12 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದರು. ಅವರಿಗೆ ತಂದೆ, ತಾಯಿ, ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

‘ಖಾಸಗಿಯವರಿಂದ (ಕೈ ಸಾಲ) ₹ 4 ಲಕ್ಷ ಹಾಗೂ ಕೆನರಾ ಬ್ಯಾಂಕ್‌ನಿಂದ ₹ 3 ಲಕ್ಷ ಸಾಲ ಮಾಡಿದ್ದರು. ಬೆಳೆ ಸರಿಯಾಗಿ ಬಾರದ ಇದ್ದಿದ್ದರಿಂದ, ಸಾಲ ತೀರಿಸಲಾಗದೆ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಸಾವಿನಲ್ಲಿ ಸಂಶಯವಿಲ್ಲ’ ಎಂದು ಪತ್ನಿ ಲಕ್ಷ್ಮಿ ಸವದತ್ತಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಸಾರಿಗೆ ನೌಕರರ ಸಂಘದವರು ಮನೆಗೆ ಬಂದ ಬಳಿಕ ಮತ್ತೊಂದು ದೂರು ನೀಡಿದ್ದಾರೆ.

‘ಪತಿ ಸಾವಿನ ದುಃಖದಲ್ಲಿದ್ದ ನಾನು ಮೊದಲಿಗೆ ಸರಿಯಾಗಿ ಹೇಳಿಕೆ ಕೊಡಲಾಗಿರಲಿಲ್ಲ. ಅನ್ಯಾಯ ಆಗಿರುವುದನ್ನು ಪುನರ್ ಹೇಳಿಕೆ ಮೂಲಕ ತಿಳಿಸುತ್ತಿದ್ದೇನೆ. ಎರಡು ತಿಂಗಳಿಂದಲೂ ಸಂಬಳ ಆಗಿಲ್ಲ. ಈ ತಿಂಗಳೂ ಸಂಬಳ ಆಗುವುದಿಲ್ಲ ಎಂದು ಪತಿ ಗೋಳಾಡುತ್ತಿದ್ದರು. 2 ದಿನಗಳಿಂದ 6ನೇ ವೇತನ ಆಯೋಗದ ವಿಷಯವನ್ನು ಮನಸಿಗಾಗಿ ಹಚ್ಚಿಕೊಂಡಿದ್ದರು. ಅವರು ದುಡಿದರಷ್ಟೆ ಜೀವನ ನಡೆಯುತ್ತಿತ್ತು. ಅವರ ಹೆಸರಿನಲ್ಲಿ ಹೊಲ ಅಥವಾ ಮನೆ ಇಲ್ಲ. ಆತ್ಮಹತ್ಯೆಗೆ ಬೆಳೆ ಹಾಗೂ ಸಾಲ ಕಾರಣ ಅಲ್ಲ. ಸರ್ಕಾರವೇ ಕಾರಣವಾಗಿದ್ದು ಮತ್ತು ನೇರಹೊಣೆಯಾಗಿದೆ’ ಎಂದು ಮರು ಹೇಳಿಕೆ ನೀಡಿದ್ದಾರೆ.

> ಆ ನೌಕರನ ಪತ್ನಿ ದೂರು ಕೊಟ್ಟ ನಂತರ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಪ್ರಕರಣ ದಾಖಲಾಗಿದೆ. ನೌಕರರ ಸಂಘದವರು ಮತ್ತೊಂದು ಮನವಿ ಕೊಟ್ಟಿದ್ದಾರೆ. 2ನೇ ಬಾರಿ ಕೊಟ್ಟಿರುವುದನ್ನು ಮನವಿ ಎಂದಷ್ಟೇ ಪರಿಗಣಿಸಲಾಗುತ್ತದೆ
>
> **ಲಕ್ಷ್ಮಣ ನಿಂಬರಗಿ,** ಎಸ್ಪಿ, ಬೆಳಗಾವಿ

ನೌಕರರ ಸಂಘದವರು ಸ್ಥಳೀಯರು ಮತ್ತು ಪೊಲೀಸ್ ಸಿಬ್ಬಂದಿ ಎದುರು ಬರೆದ ಪುನರ್ ಹೇಳಿಕೆಗೆ ಪತ್ನಿ ಸಹಿ ಹಾಕಿದ್ದಾರೆ. ಅದನ್ನು ಪೊಲೀಸರಿಗೆ ನೀಡಲಾಗಿದೆ.

ಇದಕ್ಕೂ ಮುನ್ನ, ಸಾರಿಗೆ ನೌಕರರು ಮೃತದೇಹವನ್ನು ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಳಿಗೆ ಸಾಗಿಸಿ ಗಮನಸೆಳೆಯಲು ಮುಂದಾಗಿದ್ದರು. ಅದಕ್ಕೆ ಪೊಲೀಸರು ಅವಕಾಶ ಕೊಡಲಿಲ್ಲ. ಮುಂಜಾಗ್ರತಾ ಕ್ರಮವಾಗಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಪ್ರಾಣಾಪಾಯದಿಂದ ಪಾರು

ಗದಗ: ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದ ಸಾರಿಗೆ ಸಂಸ್ಥೆ ನೌಕರ ವಸಂತ ರಾಮದುರ್ಗ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಗದಗ ಜಿಲ್ಲಾ ವೈದ್ಯಕೀಯ ವಿಜ್ಞಾನ ಸಂಸ್ಥೆ ನಿರ್ದೇಶಕ ಡಾ. ಭೂಸರೆಡ್ಡಿ ತಿಳಿಸಿದ್ದಾರೆ.

‘ವಸಂತ ಚೇತರಿಸಿಕೊಳ್ಳುತ್ತಿದ್ದು, ಅವರನ್ನು ಶನಿವಾರ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದು’ ಎಂದರು.

ಕೌಟುಂಬಿಕ ಕಲಹ ಕಾರಣ: ‘ಗುರುವಾರ ರಾತ್ರಿ ಸಾರಿಗೆ ಅಧಿಕಾರಿಗಳ ಕಿರುಕುಳದಿಂದ ಅವರು ವಿಷ ಕುಡಿದಿದ್ದಾರೆ ಎಂದು ಸಹೋದ್ಯೋಗಿಗಳು ಆರೋಪ ಮಾಡಿರುವುದು ಸತ್ಯಕ್ಕೆ ದೂರ. ಅಧಿಕಾರಿಗಳ ತಂಡ ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಗೆ ಭೇಟಿ ನೀಡಿ ವಸಂತ ಅವರ ಆರೋಗ್ಯ ಸ್ಥಿತಿ ವಿಚಾರಿಸಿದೆ. ಈ ವೇಳೆ ಅವರ ಜತೆ ಮಾತನಾಡಿದಾಗ, ಕೌಟುಂಬಿಕ ಕಲಹದಿಂದ ವಿಷ ಸೇವನೆ ಮಾಡಿದ್ದಾಗಿ ಹೇಳಿದ್ದಾರೆ’ ಎಂದು ಗದಗ ವಿಭಾಗದ ಸಂಚಾರ ನಿಯಂತ್ರಣಾಧಿಕಾರಿ ಜಿ.ಐ.ಬಸವಂತಪುರ ತಿಳಿಸಿದ್ದಾರೆ.

ತನಿಷ್ಕ್: ಹೊಸ ಆಭರಣ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸಮೂಹಕ್ಕೆ ಸೇರಿದ ‘ತನಿಷ್ಕ್’ ಆಭರಣ ಕಂಪನಿಯು ಬೇಸಿಗೆಯ ವಿವಾಹ ಕಾರ್ಯಕ್ರಮಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಿದ ‘ರಿವಾಹ್’ ಬ್ರ್ಯಾಂಡ್‌ನ ಚಿನ್ನಾಭರಣಗಳನ್ನು ಬಿಡುಗಡೆ ಮಾಡಿದೆ.

ರಿವಾಹ್ ಬ್ರ್ಯಾಂಡ್ ಅಡಿಯಲ್ಲಿನ ಆಭರಣಗಳು ಪ್ರಾದೇಶಿಕ ವಿನ್ಯಾಸ ಹಾಗೂ ಆಧುನಿಕ ರೂಪ ಹೊಂದಿವೆ ಎಂದು ಕಂಪನಿ ಹೇಳಿಕೊಂಡಿದೆ. ಅತ್ಯುತ್ಕೃಷ್ಟವಾದ ಕುಸುರಿಯು ವಧುವಿನ ಉಡುಪಿಗೆ ಹೆಚ್ಚಿನ ಸೌಂದರ್ಯವನ್ನು ತಂದುಕೊಡುತ್ತದೆ ಎಂದು ತನಿಷ್ಕ್ ಹೇಳಿದೆ.

‘ಮದುವೆ ಎಂಬುದು ನಮ್ಮ ಜೀವನದ ಮರೆಯಲಾಗದ ಸಂದರ್ಭಗಳಲ್ಲಿ ಒಂದು. ಮದುವೆಗಾಗಿ ಖರೀದಿಸುವ ಆಭರಣಗಳಿಗೆ ನಮ್ಮ ಮನಸ್ಸಿನಲ್ಲಿ ವಿಶೇಷ ಸ್ಥಾನ ಇರುತ್ತದೆ. ಮದುವೆ ಎಂಬುದು ನಮ್ಮ ಸಂಪ್ರದಾಯಗಳ ಶ್ರೀಮಂತಿಕೆಯ ದ್ಯೋತಕವೂ ಹೌದು. ರಿವಾಹ್ ಬ್ರ್ಯಾಂಡ್‌ನ ಆಭರಣಗಳು ಈ ಶ್ರೀಮಂತಿಕೆಯನ್ನು ಸಂಭ್ರಮದಿಂದ ಕಾಣುತ್ತವೆ’ ಎಂದು ತನಿಷ್ಕ್ ಕಂಪನಿಯ ಮಾರುಕಟ್ಟೆ ವಿಭಾಗದ ಪ್ರಧಾನ ವ್ಯವಸ್ಥಾಪಕಿ ರಂಜನಿ ಕೃಷ್ಣಸ್ವಾಮಿ ಹೇಳಿದ್ದಾರೆ.

ನೌಕರರ ಮುಷ್ಕರ ನಿಲ್ಲದು: ಕೋಡಿಹಳ್ಳಿ ಚಂದ್ರಶೇಖರ್

ಒಂದನೇ ಪುಟದಿಂದ...

ಶನಿವಾರ ಬೆಳಗಾವಿಯಲ್ಲಿ ಸಾರಿಗೆ ನೌಕರರ ಸಭೆ ನಡೆಯಲಿದೆ. ನಂತರ ಕಲಬುರ್ಗಿಯಲ್ಲಿ ಸಭೆ ನಡೆಸಲಾಗುವುದು. ಯುಗಾದಿ ಹಬ್ಬದ ದಿನ ಎಲ್ಲ ಕಡೆಗಳಲ್ಲಿ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗಳ ಮೂಲಕ ಸಾರಿಗೆ ನೌಕರರ ಕುಟುಂಬದವರು ಸರ್ಕಾರಕ್ಕೆ ಮನವಿ ಪತ್ರಗಳನ್ನು ಸಲ್ಲಿಸಲಿದ್ದಾರೆ ಎಂದರು.

ಸಾರಿಗೆ ನಿಗಮಗಳ ನೌಕರರಿಗೆ ಮಾರ್ಚ್ ತಿಂಗಳ ವೇತನ ನೀಡಿಲ್ಲ. ಯುಗಾದಿ ಹಬ್ಬದ ಬೋನಸ್ ಕೂಡ ನಿರಾಕರಿಸಲಾಗಿದೆ. ಯುಗಾದಿ ಹಬ್ಬ ಸಾರಿಗೆ ನೌಕರರಿಗೆ ಕಹಿ ತಂದಿದೆ. ಹಬ್ಬದ ದಿನ ನೌಕರರು ತಟ್ಟೆ, ಲೋಟ ಬಡಿದು ಪ್ರತಿಭಟನೆ ನಡೆಸಲಿದ್ದಾರೆ ಎಂದರು.

ಮುಷ್ಕರ ನಿಷೇಧ: ಸ್ಥಿತಿ ಜಟಿಲ

ಒಂದನೇ ಪುಟದಿಂದ...

ಸಂಧಾನ ಪ್ರಕ್ರಿಯೆ ಬಾಕಿ ಇರುವಾಗಲೇ ಮುಷ್ಕರ ಆರಂಭಿಸಿರುವುದು ಮತ್ತು ಆರನೇ ವೇತನ ಆಯೋಗದ ಶಿಫಾರಸಿನಂತೆ ಸಾರಿಗೆ ನೌಕರರ ವೇತನ ಪರಿಷ್ಕರಣೆ ಮಾಡುವ ಭರವಸೆ ನೀಡಿರುವುದಕ್ಕೆ ದಾಖಲೆಗಳನ್ನು ಸಂಘಟನೆ ಸಲ್ಲಿಸಿಲ್ಲ ಎಂಬ ಕಾರಣ ನೀಡಿರುವ ಕಾರ್ಮಿಕ ಆಯುಕ್ತರು, ಸಂಧಾನ ವಿಫಲವಾಗಿದೆ ಎಂದು ಪ್ರಕಟಿಸಿದ್ದಾರೆ.

ಸಂಧಾನ ವಿಫಲವಾದ ಬೆನ್ನಲ್ಲೇ ಆದೇಶವೊಂದನ್ನು ಹೊರಡಿಸಿರುವ ಕಾರ್ಮಿಕ ಇಲಾಖೆ, ಸಾರಿಗೆ ನಿಗಮಗಳ ನೌಕರರು ನಡೆಸುತ್ತಿರುವ ಮುಷ್ಕರವನ್ನು ನಿಷೇಧಿಸಿದೆ. ಪ್ರಕರಣವನ್ನು ಔದ್ಯಮಿಕ ನ್ಯಾಯಾಧೀಕರಣಕ್ಕೆ ವರ್ಗಾಯಿಸುವ ಆದೇಶವನ್ನೂ ಹೊರಡಿಸಿದೆ.

ಟ್ರೈನಿ ಸಿಬ್ಬಂದಿಯ ವಜಾ, ಕಾಯಂ ನೌಕರರಿಗೆ ನೋಟಿಸ್ ಜಾರಿಯಂತಹ ಕ್ರಮಗಳನ್ನು ಕೈಗೊಂಡಿದ್ದ ಸಾರಿಗೆ ಇಲಾಖೆ, ಮುಷ್ಕರಕ್ಕೆ ಕರೆ ನೀಡಿರುವ ಸಂಘಟನೆಗಳ ಮುಖಂಡರು ಹಾಗೂ ಮುಷ್ಕರ ಬೆಂಬಲಿಸಿರುವ ನೌಕರರ ವಿರುದ ಕಠಿಣ ಕ್ರಮ ಜರುಗಿಸುವ ತೀರ್ಮಾನಕ್ಕೆ ಬಂದಿದೆ. ಅದಕ್ಕೆ ಪೂರಕವಾಗಿ ಕಾರ್ಮಿಕ ಇಲಾಖೆಯು ಮುಷ್ಕರವನ್ನು ನಿಷೇಧಿಸಿದೆ. ಈ ಆದೇಶವನ್ನು ಬಳಸಿಕೊಂಡು ಸಾರಿಗೆ ನೌಕರರ ಕೂಟದ ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲು ಮಾಡುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ.

ಮತ್ತಷ್ಟು ಮಂದಿ ವಜಾ: ಮುಷ್ಕರ ಬೆಂಬಲಿಸಿ ಕರ್ತವ್ಯಕ್ಕೆ ಗೈರಾಗಿರುವ ಟ್ರೈನಿ ಮತ್ತು ತರಬೇತಿ ಅವಧಿಯಲ್ಲಿರುವ ನೌಕರರನ್ನು ಕೆಲಸದಿಂದ ವಜಾಗೊಳಿಸುವ ಪ್ರಕ್ರಿಯೆ ಮುಂದುವರಿದಿದೆ. ಬಿಎಂಟಿಸಿ ತಲಾ 60 ಟ್ರೈನಿ ಮತ್ತು ತರಬೇತಿ ನಿರತ ಸಿಬ್ಬಂದಿಯನ್ನು ಶುಕ್ರವಾರ ವಜಾಗೊಳಿಸಿದೆ. ಕೆಎಸ್‌ಆರ್‌ಟಿಸಿ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗಳಲ್ಲೂ ಹಲವು ನೌಕರರನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಕಾಯಂ ನೌಕರರಿಗೆ ನೋಟಿಸ್ ಜಾರಿಗೊಳಿಸುವ ಪ್ರಕ್ರಿಯೆಯೂ ಮುಂದುವರಿದಿದೆ. ನೌಕರರ ಕೆಲಸದ ಸ್ಥಳ, ಮನೆಗಳಿಗೆ ತೆರಳಿ ನೋಟಿಸ್ ಜಾರಿ ಮಾಡಲಾಗುತ್ತಿದೆ. ಈ ಪ್ರಕ್ರಿಯೆಯನ್ನು ಮಹಜರು ಕೂಡ ಮಾಡಲಾಗುತ್ತಿದೆ. ಕೆಲವು ನೌಕರರು ನೋಟಿಸ್ ಪಡೆಯುವುದನ್ನು ತಪ್ಪಿಸಿಕೊಳ್ಳಲು ಯತ್ನಿಸಿದ್ದು, ಜಾಹೀರಾತಿನ ಮೂಲಕ ನೋಟಿಸ್ ಪ್ರಕಟಿಸಲು ನಿರ್ಧರಿಸಲಾಗಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪರ್ಯಾಯ ಕ್ರಮಗಳತ್ತ ಚಿತ್ತ: ಎರಡು ವರ್ಷಗಳಿಂದ ಈಚೆಗೆ ನಿವೃತ್ತರಾದ ನೌಕರರ ಸೇವೆ ಬಳಕೆಗೆ ಗುರುವಾರ ತೀರ್ಮಾನ ಕೈಗೊಂಡಿದ್ದ ಸಾರಿಗೆ ಇಲಾಖೆ, ಶುಕ್ರವಾರ ಈ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದೆ. ಚಾಲಕ ಮತ್ತು ನಿರ್ವಾಹಕರ ನೇಮಕಾತಿ ಪ್ರಕ್ರಿಯೆಗಳಲ್ಲಿ ಚಾಲನಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ‘ವೇಟಿಂಗ್ ಲಿಸ್ಟ್’ನಲ್ಲಿದ್ದ ಅಭ್ಯರ್ಥಿಗಳನ್ನು ದಿನದ ವೇತನದ ಆಧಾರದಲ್ಲಿ ಬಳಸಿಕೊಳ್ಳಲು ನಿರ್ಧಾರ ಕೈಗೊಳ್ಳಲಾಗಿದೆ.

‘ದಿನವೊಂದಕ್ಕೆ ₹ 600ರ ವೇತನದ ಆಧಾರದಲ್ಲಿ ಇಂತಹ ಅಭ್ಯರ್ಥಿಗಳ ಸೇವೆಯನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ವೇಟಿಂಗ್ ಲಿಸ್ಟ್‌ನಲ್ಲಿದ್ದ ಅಭ್ಯರ್ಥಿಗಳನ್ನು ಸಂಪರ್ಕಿಸಿ ಮಾಹಿತಿ ನೀಡಲಾಗಿದೆ. ನಿವೃತ್ತರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿದೆ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ತಿಳಿಸಿದರು.

ಇನ್ನೊಂದೆಡೆ ಖಾಸಗಿ ಬಸ್‌ಗಳ ಸಂಚಾರ ಹೆಚ್ಚಿಸುವುದಕ್ಕೂ ಪೂರಕವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 2020ರ ಫೆಬ್ರುವರಿ 1ಕ್ಕೆ ಸಿಂಧುತ್ವ ಮುಕ್ತಾಯಗೊಂಡಿರುವ ವಿವಿಧ ವಾಹನಗಳ ದಾಖಲಾತಿಗಳ ಸಿಂಧುತ್ವದ ಅವಧಿಯನ್ನು 2021ರ ಜೂನ್ 30ರವರೆಗೂ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಹಟ ಬಿಟ್ಟು ಕೆಲಸಕ್ಕೆ ಬನ್ನಿ: ಬಿಎಸ್‌ವೈ

ಒಂದನೇ ಪುಟದಿಂದ...

‘ಅನೇಕ ನೌಕರರು ಕರ್ತವ್ಯಕ್ಕೆ ಮರಳಿದ್ದಾರೆ. ಸಾವಿರಾರು ನೌಕರರು ಬರಲು ಸಿದ್ಧರಿದ್ದಾರೆ. ಆದರೆ, ಅವರು ಬರದಂತೆ ಬೆದರಿಕೆ ಹಾಕುತ್ತಿದ್ದಾರೆ. ಹೆದರಿಸಿ ಅವರು ಬಸ್ ಓಡಿಸದಂತೆ ತಡೆಯುತ್ತಿದ್ದಾರೆ. ಬರುವವರಿಗೆ ಪೊಲೀಸ್ ಭದ್ರತೆ ಕೊಡುತ್ತೇವೆ. ಧೈರ್ಯವಾಗಿ ಬಸ್ ಓಡಿಸಿ’ ಎಂದೂ ವಿನಂತಿಸಿದರು.

ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಕ್ರಮ: ಸವದಿ

ಬೆಂಗಳೂರು: ಸರ್ಕಾರದ ಕರೆಗೆ ಓಗೊಟ್ಟು ಕರ್ತವ್ಯಕ್ಕೆ ಹಾಜರಾಗುವ ಸಾರಿಗೆ ನೌಕರರಿಗೆ ಅಡ್ಡಿಪಡಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಎಚ್ಚರಿಕೆ ನೀಡಿದ್ದಾರೆ.

‘ವೇತನ ಹೆಚ್ಚಳದ ಪ್ರಸ್ತಾವವನ್ನು ಒಪ್ಪಿಕೊಂಡು ಕೆಲಸಕ್ಕೆ ಹಾಜರಾಗಲು ಬಹುತೇಕ ನೌಕರರು ಸಿದ್ಧರಿದ್ದಾರೆ. ಆದರೆ, ಮುಷ್ಕರವನ್ನೇ ಪ್ರತಿಷ್ಠೆಯ ವಿಷಯವನ್ನಾಗಿ ಪರಿಗಣಿಸಿದವರು ಅಡ್ಡಿಪಡಿಸುತ್ತಿದ್ದಾರೆ’ ಎಂದರು.

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102 ದೂರವಾಣಿ: 0816–2278190 ಇ–ಮೇಲ್: smartcitytumakuru@gmail.com
CIN:U74999KA2017PLC099774
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/95/2019–20 ದಿನಾಂಕ: 08.04.2021

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in –ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.
“ತುಮಕೂರು ಅಜ್ಜಗೊಂಡನಹಳ್ಳಿ ಘನತ್ಯಾಜ್ಯ ಸಂಗ್ರಹಣೆ ಪ್ರದೇಶದಲ್ಲಿ ಲ್ಯಾಂಡ್‌ಫಿಲ್ ನಿರ್ಮಾಣ ಕಾಮಗಾರಿ” ಅಂದಾಜು ಮೊತ್ತ **ರೂ.2.97ಕೋಟಿಗಳು,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **12.05.2021;** 16:00hrs ಮತ್ತು ಟೆಂಡರ್ ತೆರೆಯುವ ದಿನಾಂಕ: **13.05.2021;** 16:00hrs.
ಸೂಚನೆ: ಟೆಂಡರ್ ದಾಸ್ತಾನು ದಿನಾಂಕ: **12.04.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಲು ಲಭ್ಯವಿರುತ್ತದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/17/MCA/2021-22

ಕ್ಲಾಸಿಫೈಡ್ಸ್
WEEKEND CORNER

Bangalore: • Jayanagar • Commercial Street • Gopalan Arcade • Mantri Square Mall • Malleshwaram 14th Cross • Royal Meenakshi Mall • Phoenix Market City • Yelahanka New Town • Gopalan Signature Mall • Belagavi • Bellary • Bidar • Bijapur • Chikmagalur • Gulburga • Hassan • Hubli • Mangalore • Mysore • Tumkur • Ahmednagar (Maharasthra)

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Devanahalli

COMMERCIAL PLOT of 4000/ 5000 sqft on highway facing Devanahalli, 5/6 kms from international Airport. Commercially converted and plans approved by Biaapa. Ready possession. Call owner on 9845035196

ಉದ್ಯೋಗಾವಕಾಶ

Accounts & Finance

ಎಂ.ಎನ್.ಸಿಗೆ ರಿಸೆಪ್ಷನಿಸ್ಟ್, ಆಫೀಸ್/ ಅಕೌಂಟ್ಸ್, ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಟೆಲಿಕಾಲರ್ಸ್, ಅಕೌಂಟೆಂಟ್ಸ್, ಫಿಟ್ಟರ್ಸ್, ವೆಲ್ಡರ್ಸ್, ಎಲೆಕ್ಟ್ರಿಷಿಯನ್ಸ್, “ರಮ್ಯ”: 7204367465/ 9845379900

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

WORK FROM HOME:ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ವಯಸ್ಸಾದವರು,ಮನೆಯಲ್ಲೇ ಕುಳಿತು ಬುಕ್ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ.8884611125, 8884611126

ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಕಂಪನಿ, ಫ್ಯಾಕ್ಟರಿ ಶೋರೂಮ್, ಬ್ಯಾಂಕಿಂಗ್, ರಿಟೇಲ್ ಕೊರಿಯರ್,ಬಿಸಿನೆಸ್ ಡಿಪಾರ್ಟ್ಮೆಂಟ್ ಗಳಲ್ಲಿ ಕೆಲಸ, ಸಂಬಳ 18,000-36,000/- ಆಯ್ದ ಭಾಗಗಳಲ್ಲಿ ವಸತಿಯೂಟವಿದೆ. 9686115054, 9902603707

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

ನೇರನೇಮಕಾತಿ ಎಲ್ಲಾ ಜಿಲ್ಲೆಗಳಿಗೆ TATA MOTORS ಟಯೋಟಾ,TVS ಬ್ರಿಟಾನಿಯಾಗಳಿಗೆ SSLC,Degree, ITI ನವರುಗಳು ವಿದ್ಯಾರ್ಹತೆಯಿಲ್ಲದವರುಗಳು 16,800-56,000/- ವಸತಿಯೂಟವಿದೆ. 7795049766, 7795048129

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720916, 7411720920

ವ್ಯಾಪಾರ

Business to Business

Services

ಕೇಂದ್ರ, ಸರ್ಕಾರದ ಸಬ್ಸಿಡಿ ಲೋನ್ ಮಾಹಿತಿಗಾಗಿ ಹಾಗೂ ಲೇಬರ್ ಕಾರ್ಡ್, ಇ.ಡಿ.ಪಿ.ಟ್ರೈನಿಂಗ್ ಗಾಗಿ ಸಂಪರ್ಕಿಸಿ :8792102232, 8147012578, 9741103367, 8088231127

Business Offers

Finance

ಮುದ್ರಾ ಯೋಜನೆಯ ಮೂಲಕ ಕೃಷಿ, ಸ್ಥಿರಾಸ್ತಿ, ವೈಯಕ್ತಿಕ ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಲಭ್ಯ. 8095868219, 7057624634

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೇ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬಸ್ ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ರಾವ್. 9901724082

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ದಂಪತಿಯ ಮಧ್ಯೆಯೂ ನುಸುಳಿದೆ ಸೈಬರ್ ಗೂಢಚಾರಿಕೆ!

ರೇಷ್ಮಾ

ಸಾಫ್ಟ್‌ವೇರ್ ಉದ್ಯೋಗಿಗಳಾದ ಸ್ಪಂದನಾ ಹಾಗೂ ವಿನೋದ್ ಮದುವೆ ಹಿರಿಯರ ನಿಶ್ಚಯದಂತೆ ನಡೆದಿತ್ತು. ಮದುವೆ ಆಗಿ ಆರು ತಿಂಗಳವರೆಗೆ ಚೆನ್ನಾಗಿಯೇ ಇದ್ದ ವಿನೋದ್ ವರ್ತನೆ ಇದ್ದಕ್ಕಿದ್ದ ಹಾಗೇ ಬದಲಾಗಿತ್ತು. ಸದಾ ಸ್ಪಂದನಾಳನ್ನು ಅನುಮಾನದಿಂದ ನೋಡುವುದು, ಕದ್ದು ಮೊಬೈಲ್ ನೋಡುವುದು ಮಾಡುತ್ತಿದ್ದ. ಕ್ಯಾಬ್‌ನಲ್ಲಿ ಬಂದರೂ ಬೈಯುವುದು, ಕಚೇರಿ ಸಿಬ್ಬಂದಿ ಜೊತೆ ಬೈಕ್ ಅಥವಾ ಕಾರಿನಲ್ಲಿ ಬಂದರೂ ಬೈಯುವುದು ಮಾಡುತ್ತಿದ್ದ. ಇದರಿಂದ ಪ್ರತಿದಿನ ಮನೆಯಲ್ಲಿ ಜಗಳವಾಗುತ್ತಿತ್ತು. ಜಗಳ ವಿಪರೀತವಾದಾಗ ಇಬ್ಬರ ತಂದೆ–ತಾಯಿ ಸಂಧಾನಕ್ಕೆ ಕರೆದರು.

> ಸಂಗಾತಿಯ ಮೇಲೆ ಅನುಮಾನಪಡುವುದು ಹೊಸ ವಿಷಯವೇನಲ್ಲ. ಆದರೆ ಆ ಅನುಮಾನದ ಜೊತೆ ಸೈಬರ್ ಗೂಢಚಾರಿಕೆ ನಡೆಸುವುದು ಇತ್ತೀಚಿನ ಬೆಳವಣಿಗೆ. ಇದರಿಂದ ಸಂಬಂಧ ಸುಧಾರಿಸುವ ಬದಲು ಬಿಗಡಾಯಿಸುತ್ತ ಹೋಗುತ್ತದೆ.

‘ಸ್ಪಂದನಾಳ ಹಿಂದಿನ ಪ್ರೀತಿಯ ಬಗ್ಗೆ ಗೊತ್ತು. ಮದುವೆ ಆದ ಮೇಲೂ ಅವನ ಬಗ್ಗೆ ಮಾತನಾಡುವುದು ಕೂಡ ನನಗೆ ಗೊತ್ತಿದೆ’ ಎಂದು ವಿನೋದ್ ದೂರಿದ್ದಲ್ಲದೇ ಆಕೆ ತನ್ನ ತಾಯಿಯ ಜೊತೆ ಫೋನ್‌ನಲ್ಲಿ ತನ್ನ ಬಗ್ಗೆ ದೂರಿದ್ದು.. ಹಳೆಯ ಗೆಳೆಯನನ್ನೇ ಮದುವೆಯಾಗಬೇಕಿತ್ತು ಎಂದು ಹಳಹಳಿಸಿದ್ದು.. ಎಲ್ಲವನ್ನೂ ಹೇಳಿದಾಗ ಇವೆಲ್ಲ ಆತನಿಗೆ ಗೊತ್ತಾಗಿದ್ದು ಹೇಗೆ ಎಂದು ಸ್ಪಂದನಾಳ ಕುಟುಂಬದವರಿಗೆ ಅಚ್ಚರಿಯಾಗಿತ್ತು. ಶಂಕೆಗೊಂಡ ಸ್ಪಂದನಾ ಕೊಂಚ ವಿಚಾರಿಸಿದಾಗ ಗೊತ್ತಾಗಿದ್ದು, ವಿನೋದ್ ಮೊಬೈಲ್ ಅಪ್ಲಿಕೇಶನ್‌ವೊಂದರ ಮೂಲಕ ಅವಳ ಮೊಬೈಲ್ ಮೇಲೆ ಗೂಢಚಾರಿಕೆ ಮಾಡಿದ್ದ! ಮದುವೆ ನಂತರ ಆತ ಉಡುಗೊರೆ ಕೊಟ್ಟಿದ್ದ ಫೋನ್‌ನಲ್ಲಿ ಇದಕ್ಕೆ ಸಂಬಂಧಿಸಿದ ಆ್ಯಪ್ ಡೌನ್‌ಲೋಡ್ ಮಾಡಿಟ್ಟಿದ್ದ. ರಾಜಿ– ಸಂಧಾನ ಯಾವುದೂ ಫಲ ಕಾಣದೆ ಈಗ ಇಬ್ಬರೂ ವಿಚ್ಛೇದನದ ಹಾದಿಯಲ್ಲಿದ್ದಾರೆ.

ಇದು ಸೈಬರ್ ಗೂಢಚಾರಿಕೆ. ಪುರುಷರು ತಾವು ಮದುವೆಯಾಗುವ ಹುಡುಗಿ ಅಥವಾ ಹೆಂಡತಿಯ ವರ್ತನೆ, ಚಾರಿತ್ರ್ಯದ ಮೇಲೆ ಅನುಮಾನ ಪಟ್ಟು ಮೊಬೈಲ್ ಅಪ್ಲಿಕೇಶ್‌ನಗಳ ಮೂಲಕ ಅವರಿಗೆ ತಿಳಿಯದಂತೆ ಖಾಸಗಿ ವಿಷಯವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವ ಪ್ರಕರಣಗಳು ಹೆಚ್ಚುತ್ತಿವೆ ಎಂದಿದೆ ಇತ್ತೀಚೆಗೆ ಪ್ರಕಟವಾದ ಸಮೀಕ್ಷೆ. ಖಾಸಗಿ ಗೂಢಚಾರಿ ಸಂಸ್ಥೆಗಳ ಏಜೆಂಟ್‌ಗಳ ಮೂಲಕ ಅವರ ಹಿನ್ನೆಲೆ ಹಾಗೂ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವ ಪ್ರಕರಣಗಳೂ ಜಾಸ್ತಿಯಾಗುತ್ತಿವೆ. ಈ ಹಿಂದೆ ಹಿಂದಿಯ ಖಾಸಗಿ ವಾಹಿನಿಯೊಂದರಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಕಾರ್ಯಕ್ರಮವೊಂದು ಕೂಡ ಪ್ರಸಾರವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

‘ಈಗಿನ ಯುವಕರು ಹೆಂಡತಿ ಅಥವಾ ಪ್ರೇಯಸಿ ಮೇಲೆ ಗೂಢಚಾರಿಕೆ ನಡೆಸಲು ಸ್ಪೈ ಏಜೆಂಟ್ ಅಥವಾ ಪತ್ತೇದಾರಿ ಸಂಸ್ಥೆಗೆ ಲಕ್ಷಾಂತರ ರೂಪಾಯಿ ನೀಡುತ್ತಿದ್ದಾರೆ’ ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಬೆಂಗಳೂರು ಮೂಲದ ಪತ್ತೇದಾರಿ ಸಂಸ್ಥೆಯೊಂದರ ಏಜೆಂಟ್. ಗಂಡನ ಮೇಲೂ ಹೆಂಡತಿ ಗೂಢಚಾರಿಕೆ ನಡೆಸುವ ಪ್ರಕರಣಗಳೂ ಸಾಕಷ್ಟಿವೆ. ಆದರೆ ಶೇಕಡಾವಾರು ನೋಡಿದರೆ ಗಂಡಸರೇ ಹೆಣ್ಣುಮಕ್ಕಳ ಮೇಲೆ ಗೂಢಚಾರಿಕೆ ನಡೆಸುವುದು ಹೆಚ್ಚು ಎನ್ನುವ ಏಜೆಂಟ್, ಆಧುನಿಕ ತಂತ್ರಜ್ಞಾನ ಅಂದರೆ ಮೊಬೈಲ್ ಆ್ಯಪ್‌ಗಳನ್ನು ಬಳಸಿ ಗ್ರಾಹಕರ ಕೆಲಸ ಮಾಡಿಕೊಡಲಾಗುವುದು ಎನ್ನುತ್ತಾರೆ.

‘ಆದರೆ ಈ ರೀತಿ ನಮಗೆ ತಿಳಿಯದಂತೆ ನಮ್ಮ ವೈಯಕ್ತಿಕ ಮಾಹಿತಿಯನ್ನು ಕದಿಯುವುದು, ನಮ್ಮ ವಿಷಯವನ್ನು ರಹಸ್ಯವಾಗಿ ತಿಳಿದುಕೊಳ್ಳುವುದು ಆ ಮೂಲಕ ಸಂಸಾರದಲ್ಲಿ ನಂಬಿಕೆ ಕಳೆದುಹೋಗುವಂತೆ ಮಾಡುವುದು ಕೂಡ ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ’ ಎನ್ನುತ್ತಾರೆ ವಕೀಲರಾದ ಶಾಂಭವಿ ಅರ್ಕೇಶ್.

ಬದಲಾದ ಉದ್ಯೋಗ ಸಂಸ್ಕೃತಿಯೂ ಕಾರಣ

ನಗರಗಳಲ್ಲಿ ಬದಲಾಗುತ್ತಿರುವ ಜನರ ಮನಸ್ಥಿತಿ ಹಾಗೂ ಉದ್ಯೋಗ ಸಂಸ್ಕೃತಿಯು ಸಂಬಂಧದಲ್ಲಿ ನಂಬಿಕೆ ಕಳೆದು ಹೋಗುವಂತೆ ಮಾಡುತ್ತಿದೆ. ಅತಿಯಾದ ಸ್ವೇಚ್ಛಾಚಾರ, ಸ್ವಾತಂತ್ರ್ಯವೂ ಗಂಡನಿಗೆ ಹೆಂಡತಿಯ ಮೇಲೆ ಅನುಮಾನ ಹುಟ್ಟುವಂತೆ ಮಾಡಿರುವುದು ಸುಳ್ಳಲ್ಲ. ಹಲವು ಶ್ರೀಮಂತರ ಮಕ್ಕಳು, ಸೆಲೆಬ್ರಿಟಿಗಳು ತಮ್ಮ ಭವಿಷ್ಯದ ಜೀವನ ಚೆನ್ನಾಗಿರಬೇಕು ಎಂಬ ಕಾರಣಕ್ಕೂ ಮದುವೆ ಫಿಕ್ಸ್ ಆದ ಕೂಡಲೇ ಪತ್ತೇದಾರ ಏಜೆನ್ಸಿಗಳ ಮೂಲಕ ತಮ್ಮ ಸಂಗಾತಿಯಾಗುವವರ ವೈಯಕ್ತಿಕ ಮಾಹಿತಿಗಳನ್ನು ಕಲೆ ಹಾಕುತ್ತಾರಂತೆ. ಹಲವರು ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿದ ಮೇಲೆ ಸುಳಿವೇ ಸಿಗದಂತೆ ಅದನ್ನು ಅಳಿಸಿ ಹಾಕಲೂ ತಿಳಿಸುತ್ತಾರಂತೆ.



> ತಂತ್ರಜ್ಞಾನದ ಅಭಿವೃದ್ಧಿ, ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳು ಈಗ ಸುಲಭವಾಗಿ ಸಿಗುತ್ತಿರುವುದು ಸಂಬಂಧದಲ್ಲಿ ಗೂಢಚಾರಿಕೆ ಹೆಚ್ಚಲು ಮುಖ್ಯ ಕಾರಣ. ಇದರಿಂದ ಸಂಬಂಧದಲ್ಲಿ ಜಗಳ, ಮನಸ್ತಾಪಗಳು ನಡೆಯುತ್ತಲೇ ಇವೆ. ಹಿಂದೆಲ್ಲಾ ಫೋನ್, ತಂತ್ರಜ್ಞಾನ ಏನೂ ಇರಲಿಲ್ಲ. ಆಗೆಲ್ಲಾ ಸಂಬಂಧ ಅನ್ನುವುದು ನಡೆಯುತ್ತಿದ್ದದ್ದೇ ನಂಬಿಕೆ ಮೇಲೆ. ಈಗ ಒಬ್ಬರಿಗೊಬ್ಬರು ನಂಬಿಕೆಯನ್ನೇ ಕಳೆದುಕೊಂಡಿರುವುದರಿಂದ ಪತ್ತೇದಾರಿಕೆ ಮಾಡುವುದು ಸಾಮಾನ್ಯವಾಗಿದೆ. ನಮ್ಮ ರಾಜ್ಯದಲ್ಲಿ ಅದರಲ್ಲೂ ಯುವಕರಲ್ಲಿ ಇಂತಹ ಗೂಢಚಾರಿಕೆ ನಡೆಸುವ ಮನಸ್ಥಿತಿ ಹೆಚ್ಚಿದೆ. ಇದಕ್ಕೆ ಕಾರಣಗಳು ಹಲವಿರಬಹುದು. ಆದರೆ ಇವೆಲ್ಲವೂ ಕಾನೂನುಬಾಹಿರವಾದದ್ದು. ಇದರೊಂದಿಗೆ ಏಜೆಂಟ್ ಅಥವಾ ಅಪ್ಲಿಕೇಶನ್ ನೀಡಿದ ಮಾಹಿತಿಯನ್ನೇ ನಿಜ ಎಂದು ನಂಬುವುದು ಹೇಗೆ? ಮದುವೆಗಿಂತ ಮುಂಚೆ ಅಥವಾ ಮದುವೆ ಆದ ಮೇಲೆ ಪತ್ತೇದಾರಿಕೆ ಮಾಡಿ ಮುಂದೆ ಸರಿ ಹೋಗಬಹುದು ಎಂದು ಸಂಬಂಧ ಸರಿದೂಗಿಸಲು ಹೊರಟರೆ ಅದು ಸಾಧ್ಯವಿಲ್ಲ. ಯಾಕೆಂದರೆ ಮುಂದೆ ಎಂದೋ ಜಗಳವಾದಾಗ ಈ ವಿಷಯ ಬಂದಾಗ ಮತ್ತೆ ಸಂಬಂಧ ಹದಗೆಡುತ್ತದೆ.
>
> **ಶುಭಾಮಂಗಳ ರಮೇಶ್,** ಸೈಬರ್ ಸೆಕ್ಯೂರಿಟಿ ತಜ್ಞೆ, ಗ್ಲೋಬಲ್ ಸೈಬರ್ ಸೆಕ್ಯೂರಿಟಿ ರೆಸ್ಪಾನ್ಸ್ ಟೀಂ

ಹೆಣ್ಣುಮಕ್ಕಳಿಗೇ ಶಿಕ್ಷೆ

‘ಹೆಣ್ಣು ಗಂಡಿನೊಂದಿಗೆ ಸ್ನೇಹಪರತೆಯಿಂದ ಇರುವುದನ್ನು ಸಮಾಜ ಸಹಿಸುವುದಿಲ್ಲ. ಗಂಡು ಏನೇ ಮಾಡಿದರೂ ಸರಿ ಎಂಬ ಭಾವನೆ ಇದೆ. ತನ್ನ ಹೆಂಡತಿ ಅಥವಾ ಪ್ರೇಮಿಯ ಮೇಲೆ ಗಂಡಸರು ಅನುಮಾನ ಪಡುವುದು ಜಾಸ್ತಿ. ಈಗಂತೂ ಹಲವರು ಉದ್ಯೋಗಸ್ಥರಾದ ಕಾರಣ ಉದ್ಯೋಗ ಸ್ಥಳದಲ್ಲಿ ಅಥವಾ ಕಾಲೇಜು ದಿನಗಳಲ್ಲಿ ತನ್ನ ಹೆಂಡತಿ ಹೇಗಿದ್ದಳು, ಉದ್ಯೋಗ ಸಿಕ್ಕಿದ ಮೇಲೆ ಯಾರ ಜೊತೆಗೆಲ್ಲಾ ತಿರುಗಾಡುತ್ತಾಳೆ, ಮಾತನಾಡುತ್ತಾಳೆ ಎಂಬುದನ್ನೆಲ್ಲಾ ತಿಳಿಯಲು ಹೆಂಡತಿಯ ಮೇಲೆ ಗೂಢಚಾರಿಕೆ ನಡೆಸುತ್ತಾರೆ’ ಎನ್ನುವುದು ಬ್ಯಾಂಕ್ ಉದ್ಯೋಗಿ ಶಾಲಿನ ಮಹೇಶ್ ಅವರ ಅಭಿಪ್ರಾಯ.

ಸಂಬಂಧದಲ್ಲಿ ನಂಬಿಕೆಯೇ ಬುನಾದಿ

‘ನಂಬಿಕೆ ಇಲ್ಲ ಎಂದ ಮಾತ್ರಕ್ಕೆ ಅನುಮಾನ ಪಟ್ಟು ಗೂಢಚಾರಿಕೆ ನಡೆಸುವುದು ಸರಿಯಲ್ಲ. ಅನುಮಾನ ಬಂದಾಗ ಕುಳಿತು ಮಾತನಾಡಿ ಪರಿಹರಿಸಿಕೊಳ್ಳಬೇಕು. ಅದು ಬಿಟ್ಟು ಆ್ಯಪ್‌ಗಳ ಮೂಲಕವೋ ಏಜೆನ್ಸಿಗಳ ಮೂಲಕವೋ ವೈಯಕ್ತಿಕ ವಿಷಯಗಳನ್ನು ತಿಳಿದುಕೊಂಡು ಅದನ್ನು ಜಗಜ್ಜಾಹೀರು ಮಾಡುವುದು ಸರಿಯಲ್ಲ’ ಎನ್ನುವ ಆಪ್ತ ಸಮಾಲೋಚಕಿ ಪ್ರಮೀಳಾ ಎಸ್., ‘ಇದರಿಂದಾಗಿ ಹೆಣ್ಣುಮಕ್ಕಳು ಬಹಳ ಬೇಗ ಖಿನ್ನತೆಗೆ ಒಳಗಾಗುತ್ತಾರೆ. ಆತ್ಮಹತ್ಯೆಯಂತಹ ಕೆಟ್ಟ ನಿರ್ಧಾರ ಮಾಡಿದ ಉದಾಹರಣೆಗಳೂ ಇವೆ’ ಎನ್ನುತ್ತಾರೆ. ಗೂಢಚಾರಿಕೆಯಿಂದ ಪರಸ್ಪರ ನಂಬಿಕೆಯ ಕೊಂಡಿ ಕಳಚುವುದಲ್ಲದೇ ವಿಚ್ಛೇದನಕ್ಕೂ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಎಚ್ಚರಿಸುತ್ತಾರೆ ಅವರು.

ಪ್ರಜಾವಾಣಿ ನೋಡಿಯೊ

ಬೇಸಿಗೆಯಲ್ಲಾಗುವ ಸನ್‌ಟ್ಯಾನ್ ನಿವಾರಣೆ ಹೇಗೆ?

ಇದರ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಯುಗಾದಿ ಸಂಭ್ರಮಕ್ಕೆ ಮಾವಿನ ಹಣ್ಣಿನ ಖೀರ್

ನಳಪಾಕ

ವೇದಾವತಿ ಎಚ್.ಎಸ್.

ತೊಗರಿಬೇಳೆ ಒಬ್ಬಟ್ಟು

ಬೇಕಾಗುವ ಸಾಮಗ್ರಿಗಳು:
ತೊಗರಿಬೇಳೆ – 1 ಕಪ್ (250 ಗ್ರಾಂ), ಹಸಿ ತೆಂಗಿನತುರಿ – 1/2 ಕಪ್, ಬೆಲ್ಲದ ಪುಡಿ – ಒಂದೂಕಾಲು ಕಪ್, ಏಲಕ್ಕಿಪುಡಿ – 1/4 ಟೀ ಚಮಚ, ಮೈದಾಹಿಟ್ಟು – 1 ಕಪ್ (250 ಗ್ರಾಂ), ಉಪ್ಪು – 1/4 ಟೀ ಚಮಚ, ತುಪ್ಪ – 2 ಟೇಬಲ್ ಚಮಚ, ಅರಸಿನಪುಡಿ – 1/2 ಟೀ ಚಮಚ, ನೀರು – ಹದಕ್ಕೆ, ಎಣ್ಣೆ– 4 ಟೇಬಲ್ ಚಮಚ, ತುಪ್ಪ/ಎಣ್ಣೆ ಬೇಯಿಸಲು.

ತಯಾರಿಸುವ ವಿಧಾನ: ಬೇಳೆಯನ್ನು ತೊಳೆಯಿರಿ. 4 ಕಪ್ ನೀರನ್ನು ಹಾಕಿ ಬೇಯಿಸಲು ಇಡಿ. 10ರಿಂದ 15 ನಿಮಿಷಗಳ ಕಾಲ ಬೇಳೆ ಮೃದುವಾಗುವವರೆಗೆ ಬೇಯಿಸಿ. ಬೆಂದ ಬೇಳೆಯಲ್ಲಿರುವ ನೀರನ್ನು ಸೋಸಿಕೊಳ್ಳಿ. ಮಿಕ್ಸಿಯಲ್ಲಿ ಬೇಳೆ, ತೆಂಗಿನತುರಿ ಮತ್ತು ಏಲಕ್ಕಿಯನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿದ ಮಿಶ್ರಣವನ್ನು ಬಾಣಲೆಗೆ ಹಾಕಿ. ಬೆಲ್ಲದ ಪುಡಿಯನ್ನು ಸೇರಿಸಿ. ಬೆಲ್ಲವನ್ನು ಬೇಕಿದ್ದರೆ 1/4 ಕಪ್ ನೀರನ್ನು ಹಾಕಿ ಕರಗಿಸಿ ಸೋಸಿ ಹಾಕಿ. ಬೆಲ್ಲದಲ್ಲಿ ಕಸ, ಮಣ್ಣು ಇದ್ದರೆ ಹೋಗುತ್ತದೆ. ಮಧ್ಯಮ ಉರಿಯಲ್ಲಿ ಉಂಡೆ ಪಾಕ ಬರುವವರೆಗೆ ಮಗುಚಿ. ನಂತರ ಆರಲು ಬಿಡಿ.

ಕಣಕಕ್ಕೆ: ಪಾತ್ರೆಯಲ್ಲಿ ಉಪ್ಪು, 1 ಟೇಬಲ್ ಚಮಚ ತುಪ್ಪ, ಅರಸಿನ ಪುಡಿ, ಮೈದಾಹಿಟ್ಟನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಸ್ವಲ್ಪ ಸ್ವಲ್ಪವೇ ನೀರನ್ನು ಹಾಕಿಕೊಳ್ಳುತ್ತಾ ಹಿಟ್ಟನ್ನು ಮೃದುವಾಗಿ ನಾದಿಕೊಳ್ಳಿ. ಹಿಟ್ಟು ಚಪಾತಿ ಹಿಟ್ಟಿಗಿಂತಲೂ ಮೃದುವಾಗಿರಲಿ. ತಯಾರಿಸಿದ ಕಣಕದ ಹಿಟ್ಟನ್ನು ಒಂದು ಗಂಟೆ ಕಾಲ ಮುಚ್ಚಿಡಿ. ನಂತರ ಹಿಟ್ಟನ್ನು ಮೃದುವಾಗಿ ಹಿಗ್ಗುವಂತೆ ನಾದಿಕೊಳ್ಳಿ. ಹಿಟ್ಟಿನ ಮೇಲೆ ಎಣ್ಣೆಯನ್ನು ಹಾಕಿಡಿ. ಬೇಳೆಯ ಹೂರಣವನ್ನು ನಿಮಗೆ ಬೇಕಾದ ಗಾತ್ರಕ್ಕೆ ಉಂಡೆಗಳನ್ನು ಕಟ್ಟಿಕೊಳ್ಳಿ. ಹೂರಣದ ಗಾತ್ರದಷ್ಟೇ ಕಣಕದ ಹಿಟ್ಟನ್ನು ತೆಗೆದುಕೊಳ್ಳಿ. ಕಣಕವನ್ನು ಚಪ್ಪಟೆಯಾಗಿ ಮಾಡಿ ಅದರಲ್ಲಿ ಹೂರಣದ ಉಂಡೆಯನ್ನು ಇಟ್ಟು ಗಟ್ಟಿಯಾಗಿ ಮುಚ್ಚಿ. ಈ ಉಂಡೆಗಳನ್ನು ಬಾಳೆಎಲೆ ಅಥವಾ ಬೈಡಿಂಗ್ ಶೀಟ್‌ನಲ್ಲಿ ತೆಳುವಾಗಿ ಲಟ್ಟಿಸಿಕೊಳ್ಳಿ. ತವಕ್ಕೆ ತುಪ್ಪ/ಎಣ್ಣೆಯನ್ನು ಸವರಿ ಲಟ್ಟಿಸಿಕೊಂಡ ಒಬ್ಬಟ್ಟನ್ನು ಹಾಕಿ. ಮಧ್ಯಮ ಉರಿಯಲ್ಲಿ ಎರಡೂ ಬದಿಯನ್ನು ಬೇಯಿಸಿ. ರುಚಿಕರವಾದ ಒಬ್ಬಟ್ಟು ಸವಿಯಲು ಸಿದ್ಧ.

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾವಿನ ಹಣ್ಣಿನ ಖೀರ್

ಬೇಕಾಗುವ ಸಾಮಗ್ರಿಗಳು: ಸಿಹಿ ಮಾವಿನ ಹಣ್ಣಿನ ಗಟ್ಟಿಯಾದ ರಸ – 1 ಕಪ್, ಚಿಕ್ಕದಾಗಿ ಕತ್ತರಿಸಿದ ಮಾವಿನಹಣ್ಣಿನ ತುಂಡುಗಳು – 1 ಕಪ್, ಹಾಲು – 1 ಲೀಟರ್, ತುಪ್ಪ – 1 ಟೇಬಲ್ ಚಮಚ, ಏಲಕ್ಕಿ ಪುಡಿ – 1/2 ಟೀ ಚಮಚ, ಶ್ಯಾವಿಗೆ – 1 ಕಪ್, ಸಕ್ಕರೆ – 1/2 ಕಪ್, ಕೇಸರಿ ದಳಗಳು – 10-15 (ಕೇಸರಿ ದಳವನ್ನು 2 ಟೇಬಲ್ ಚಮಚ ಬಿಸಿ ಹಾಲಿನಲ್ಲಿ ನೆನೆಸಿಡಿ). ಬಾದಾಮಿ, ಪಿಸ್ತಾ ಮತ್ತು ಗೋಡಂಬಿ ಚೂರುಗಳು ಅಲಂಕಾರಕ್ಕೆ ಸ್ವಲ್ಪ.

ತಯಾರಿಸುವ ವಿಧಾನ: ಬಾಣಲೆಯಲ್ಲಿ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಶ್ಯಾವಿಗೆಯನ್ನು ಹಾಕಿ ಬಣ್ಣ ಬದಲಾಗುವವರೆಗೆ ಹುರಿಯಿರಿ. ಹಾಲನ್ನು ಕುದಿಸಿ ಅದಕ್ಕೆ ಸಕ್ಕರೆಯನ್ನು ಸೇರಿಸಿ. ಸಕ್ಕರೆ ಕರಗಿದ ನಂತರ ಹುರಿದುಕೊಂಡ ಶ್ಯಾವಿಗೆಯನ್ನು ಹಾಕಿ. ಮೆತ್ತಗಾಗುವವರೆಗೆ ಬೇಯಿಸಿ. ನಂತರ ನೆನೆಸಿಟ್ಟ ಕೇಸರಿಯನ್ನು ಹಾಕಿ. ಏಲಕ್ಕಿಪುಡಿಯನ್ನು ಸೇರಿಸಿ. ಶ್ಯಾವಿಗೆ ಹಾಲಿನೊಂದಿಗೆ ಚೆನ್ನಾಗಿ ಬೆಂದು ಗಟ್ಟಿಯಾಗುತ್ತಾ ಬಂದಾಗ ಒಲೆಯನ್ನು ಆರಿಸಿ. ಪೂರ್ತಿ ಆರಲು ಬಿಡಿ. ನಂತರ ಗಟ್ಟಿಯಾದ ಮಾವಿನ ಹಣ್ಣಿನ ರಸವನ್ನು ಸೇರಿಸಿ ಮಿಶ್ರಣ ಮಾಡಿ. ತಯಾರಿಸಿದ ಪಾಯಸಕ್ಕೆ ಮಾವಿನ ಹಣ್ಣಿನ ತುಂಡುಗಳು, ಬಾದಾಮಿ, ಗೋಡಂಬಿ, ಪಿಸ್ತಾವನ್ನು ಹಾಕಿ ಅಲಂಕರಿಸಿ.

ಹೊಸ ತೊಡಕಿಗೆ ಮಟನ್ ಕರಿ

ಯುಗಾದಿ ಹಬ್ಬ ಎಂದಾಕ್ಷಣ ನೆನಪಾಗುವುದು ಬೇವು–ಬೆಲ್ಲದೊಂದಿಗೆ ಸಿಹಿ ಒಬ್ಬಟ್ಟು. ಯುಗಾದಿ ದಿನ ಸಿಹಿಯೂಟ ಮಾಡುವ ಹಳೇ ಮೈಸೂರು ಭಾಗದ ಜನ ಮರುದಿನ ಹೊಸ ತೊಡಕು ಆಚರಿಸುತ್ತಾರೆ. ಅಂದು ಬಗೆ ಬಗೆಯ ಮಾಂಸದ ಅಡುಗೆ ಮಾಡಿ ಬಾಡೂಟ ಮಾಡುತ್ತಾರೆ. ಇದು ಹಿಂದಿನಿಂದಲೂ ಈ ಭಾಗದಲ್ಲಿ ಆಚರಿಸಿಕೊಂಡು ಬಂದ ಆಚರಣೆಯಾಗಿದ್ದು ಈಗಲೂ ಮುಂದುವರಿದಿದೆ.

ಮಟನ್ ಕರಿ

ಬೇಕಾಗುವ ಸಾಮಗ್ರಿಗಳು: ಈರುಳ್ಳಿ – 2 ದೊಡ್ಡದು ಹೆಚ್ಚಿದ್ದು, ಟೊಮೆಟೊ – 2 ದೊಡ್ಡದು ಹೆಚ್ಚಿದ್ದು, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 3 ಚಮಚ, ಗರಂಮಸಾಲೆ – 2 ಚಮಚ, ಕೊತ್ತಂಬರಿ ಪುಡಿ – 2 ಚಮಚ, ಜೀರಿಗೆ ಪುಡಿ – 2 ಚಮಚ, ಅರಿಸಿನ – ಅರ್ಧ ಚಮಚ, ಖಾರದಪುಡಿ – ಅರ್ಧ ಚಮಚ, ಕುರಿ ಮಾಂಸ – ಅರ್ಧ ಕೆ.ಜಿ, ಉಪ್ಪು – ರುಚಿಗೆ, ಎಣ್ಣೆ– ಸ್ವಲ್ಪ, ಕೊತ್ತಂಬರಿ ಸೊಪ್ಪು – ಹೆಚ್ಚಿದ್ದು 2 ಚಮಚ.

ತಯಾರಿಸುವ ವಿಧಾನ: ದಪ್ಪ ತಳದ ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಈರುಳ್ಳಿ ಹಾಕಿ ಬಣ್ಣ ಬದಲಾಗುವವರೆಗೂ ಹುರಿಯಿರಿ. ನಂತರ ಈರುಳ್ಳಿಯನ್ನು ತೆಗೆದಿರಿಸಿ. ತಣ್ಣಗಾದಾಗ ಮೇಲೆ ಮಿಕ್ಸಿಗೆ ಈರುಳ್ಳಿ ಹಾಗೂ ಸ್ವಲ್ಪ ನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಅದನ್ನು ತೆಗೆದಿರಿಸಿ ಮಿಕ್ಸಿ ಜಾರಿಗೆ ಟೊಮೆಟೊ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ರುಬ್ಬಿಕೊಳ್ಳಿ. ಮತ್ತೆ ಪ್ಯಾನ್ ಬಿಸಿ ಮಾಡಿ ಅದಕ್ಕೆ ರುಬ್ಬಿಕೊಂಡ ಈರುಳ್ಳಿ ಪೇಸ್ಟ್ ಹಾಕಿ 2 ರಿಂದ 3 ನಿಮಿಷ ಹುರಿದುಕೊಳ್ಳಿ. ಅದಕ್ಕೆ ಟೊಮೆಟೊ ಪೇಸ್ಟ್, ಗರಂಮಸಾಲೆ, ಕೊತ್ತಂಬರಿ ಪುಡಿ, ಜೀರಿಗೆ ಪುಡಿ, ಅರಿಸಿನ ಪುಡಿ, ಖಾರದಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ, ಎಣ್ಣೆ ಬಿಡುವವರೆಗೂ ಕುದಿಸಿ. ಕುರಿ ಮಾಂಸವನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಮಸಾಲೆ ಹೋಳುಗಳಿಗೆ ಹಿಡಿಯುವವರೆಗೆ ಕೈಯಾಡಿಸಿ. ನಂತರ ಅರ್ಧ ಕಪ್ ನೀರು ಹಾಕಿ ಮತ್ತೆ ಎಲ್ಲವನ್ನೂ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಕುರಿ ಮಾಂಸ ಬೇಯುವವರೆಗೆ ಬೇಯಿಸಿ. ಚೆನ್ನಾಗಿ ಕುದಿದು, ಮಾಂಸ ಬೆಂದು ಮಂದ ಆಗುವವರೆಗೂ ಕುದಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ.

ಹೆಚ್ಚಾಗಿರುವ ಸಂತಾನಹೀನತೆಗೆ ಪಿಸಿಒಡಿ ಕಾರಣವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **ಪ್ರಶ್ನೆ: ನನಗೆ 27 ವರ್ಷ. ಮದುವೆಯಾಗಿ 4 ವರ್ಷ ಆಗ್ತಾ ಬಂತು. ಇನ್ನೂ ಮಗು ಆಗಿಲ್ಲ. ಪಿ.ಸಿ.ಒ.ಡಿ ಸಮಸ್ಯೆ ಇದೆ. ಆಸ್ಪತ್ರೆಗೆ ಹೋಗಿ ಹೋಗಿ ಸಾಕಾಗಿ ಈಗ ಮನೆ ಮದ್ದು ಅನುಸರಿಸುತ್ತಿದ್ದೇನೆ. ಇದರಿಂದ ಸಮಸ್ಯೆ ಆಗುತ್ತಾ? ಏನು ಮಾಡೋದು ತಿಳಿಯುತ್ತಿಲ್ಲ. ನನ್ನ ಗಂಡನಿಗೆ 28 ವರ್ಷಗಳು.**

ಹೆಸರು, ಊರು ತಿಳಿಸಿಲ್ಲ

ಉತ್ತರ: ಪಿ.ಸಿ.ಒ.ಡಿ ಆಧುನಿಕ ಜಗತ್ತಿನಲ್ಲಿ ಮಹಿಳೆಯರನ್ನು ಕಾಡಿಸಿ ಹೆಣ್ತನವನ್ನೇ ಕಸಿಯುತ್ತಿರುವ ಬಹುದೊಡ್ಡ ಪಿಡುಗಾಗಿದೆ. ಅನಿಯಮಿತ ಋತುಚಕ್ರ, ಬಂಜೆತನ ಅಷ್ಟೇ ಅಲ್ಲ ಇನ್ಸುಲಿನ್ ಪ್ರತಿರೋಧತೆಯೂ ಹೆಚ್ಚಾಗಿ ದೀರ್ಘಾವಧಿಯ ಆರೋಗ್ಯ ಸಮಸ್ಯೆಗಳೂ ಉಂಟಾದಾಗ ಈ ಸಮಸ್ಯೆಯನ್ನು ಪಿ.ಸಿ.ಒ.ಎಸ್ ಅನ್ನುತ್ತೇವೆ. ಇದಕ್ಕೆ ನಿರ್ದಿಷ್ಟ ಕಾರಣ ಹೇಳಲು ಸಾಧ್ಯವಿಲ್ಲದಿದ್ದರೂ ಆನುವಂಶೀಯ ಕಾರಣಗಳೊಂದಿಗೆ ಅಸಮರ್ಪಕ ಜೀವನಶೈಲಿ, ಎಗ್ಗಿಲ್ಲದೆ ನಮ್ಮ ಶರೀರವನ್ನು ಸೇರುತ್ತಿರುವ ರಾಸಾಯನಿಕಗಳು, (ಆಹಾರದ ಮೂಲಕವಾಗಿ, ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ, ಕೃತಕ ಸೌಂದರ್ಯವರ್ಧಕ ಬಳಕೆ ಇತ್ಯಾದಿಯಿಂದ) ಮಾನಸಿಕ ಒತ್ತಡ, ದೈಹಿಕ ಶ್ರಮವಿಲ್ಲದಿರುವಿಕೆ, ನಿದ್ರಾಹೀನತೆ ಹೀಗೆ ಹಲವು ಕಾರಣಗಳಿಂದ ಉಂಟಾಗುವ ಹಾರ್ಮೋನು ಅಸಮತೋಲನದಿಂದ ಪಿ.ಸಿ.ಒ.ಡಿ ಸಮಸ್ಯೆ ಉಂಟಾಗುತ್ತದೆ. ಕಾರಣ ನಿರ್ದಿಷ್ಟವಾಗಿಲ್ಲದಿರುವುದರಿಂದ ಚಿಕಿತ್ಸೆಯೂ ನಿರ್ದಿಷ್ಟವಾಗಿಲ್ಲ.

ಆದರೆ ಪಿ.ಸಿ.ಒ.ಡಿಯಲ್ಲಿ ಜೀವನಶೈಲಿ ಬದಲಾವಣೆ ಮಾಡಿಕೊಳ್ಳುವುದೇ ಚಿಕಿತ್ಸೆಯಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಆಹಾರ ಸೇವನೆಯಲ್ಲಿ ಪ್ರಕೃತಿದತ್ತವಾಗಿ ಸ್ಥಳೀಯವಾಗಿ ಸಿಗುವ ತಾಜಾ ಆಹಾರವನ್ನು ಹೆಚ್ಚು ಹೆಚ್ಚು ಸೇವಿಸಿ. ಹಸಿರು ಸೊಪ್ಪು ತರಕಾರಿಗಳನ್ನು, ಮೊಳಕೆಕಾಳುಗಳು, ಹಣ್ಣುಗಳನ್ನು ಧಾರಾಳವಾಗಿ ದಿನ ಸೇವಿಸಿ. ಮೊಬೈಲ್ ನೊಡುತ್ತಾ ಟಿ.ವಿ ನೋಡುತ್ತಾ ಆಹಾರ ಸೇವಿಸಬೇಡಿ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ. ಹಾಲು ಹಾಗೂ ಹೈನು ಪದಾರ್ಥಗಳ ಬಳಕೆ ಕಡಿಮೆ ಮಾಡಿ. ಪ್ರತಿದಿನ ಸೂರ್ಯನ ಬೆಳಕಿಗೆ 20 ನಿಮಿಷವಾದರೂ ಮೈ ಒಡ್ಡಿ. (ಬೆಳಿಗ್ಗೆ 11ರಿಂದ 3 ಗಂಟೆಯೊಳಗಾಗಿ) ರಾತ್ರಿ 6ರಿಂದ 8 ಗಂಟೆ ನಿದ್ರಿಸಿ. ಯೋಗ, ಪ್ರಾಣಾಯಾಮವನ್ನು ನಿಯಮಿತವಾಗಿ ಮಾಡಿ ಒತ್ತಡ ಕಡಿಮೆ ಮಾಡಿಕೊಳ್ಳಿ. ದಿನ ಕನಿಷ್ಠ ಒಂದು ಗಂಟೆಯಾದರೂ ದೈಹಿಕ ಚಟುವಟಿಕೆ (ಏರೋಬಿಕ್ಸ್, ಸ್ವಿಮ್ಮಿಂಗ್, ಡ್ಯಾನ್ಸಿಂಗ್, ಸೈಕ್ಲಿಂಗ್ ಇತ್ಯಾದಿ) ಮಾಡಲೇಬೇಕು. ಜೊತೆಗೆ ಧೂಮಪಾನ, ಮದ್ಯಪಾನದಿಂದ ದೂರವಿರಿ. ನಿತ್ಯ 3 ರಿಂದ 4 ಲೀಟರ್ ನೀರನ್ನು ಸೇವಿಸಿ. ನೀವು ಬೇಸರಿಸದೆ, ಖಿನ್ನತೆಗೊಳಗಾಗದೆ ಮತ್ತೊಮ್ಮೆ ಸ್ತ್ರೀರೋಗ ತಜ್ಞರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಿರಿ. ನಿಮ್ಮ ಪತಿಯ ಪರೀಕ್ಷೆಯೂ ಆಗಲಿ.

- **ಪ್ರಶ್ನೆ: ನನಗೆ ಮದುವೆ ಆಗಿ 5 ವರ್ಷಗಳಾಗಿದೆ, ನನಗೆ 5 ತಿಂಗಳಲ್ಲಿ ಅಬಾರ್ಷನ್ ಆಯಿತು. ಮೊದಲು ಋತುಚಕ್ರ ಸರಿಯಾಗಿತ್ತು. ಈಗ 4 ತಿಂಗಳಿಂದ ಋತುಚಕ್ರ ಸರಿಯಾಗಿ ಆಗುತ್ತಿಲ್ಲ. ಈಗ ಮತ್ತೆ ಮಕ್ಕಳಿಗಾಗಿ ಪ್ರಯತ್ನಿಸುತ್ತಿದ್ದೇವೆ. ನನ್ನ ಸಮಸ್ಯೆಗೆ ಕಾರಣ ಹಾಗೂ ಪರಿಹಾರ ತಿಳಿಸಿ.**

ಗಿರಿಜಾ, ಊರು ತಿಳಿಸಿಲ್ಲ

ಉತ್ತರ: ಗಿರಿಜಾರವರೇ ನೀವು ನಿಮ್ಮ ವಯಸ್ಸೆಷ್ಟು ತೂಕವೆಷ್ಟು ಇತ್ಯಾದಿ ಯಾವ ವಿವರವನ್ನೂ ಕೊಟ್ಟಿಲ್ಲ. ಋತುಚಕ್ರ ಸರಿಯಾಗಿಲ್ಲದಿರುವುದಕ್ಕೆ ಕಾರಣ ಪಿ.ಸಿ.ಒ.ಡಿ ಸಮಸ್ಯೆಯೂ ಇರಬಹುದು. ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯರಲ್ಲಿ ಪ್ರತಿ ತಿಂಗಳು ಅಂಡಾಶಯದಿಂದ ಒಂದೇ ಒಂದು ಅಂಡಾಣು ಬಿಡುಗಡೆಯಾಗುತ್ತದೆ. ಆದರೆ ಪಿ.ಸಿ.ಒ.ಡಿ ಸಮಸ್ಯೆಯಲ್ಲಿ ಅಂಡಾಣು ಬಿಡುಗಡೆಯಾಗುವುದೇ ಇಲ್ಲ. ಇದರಿಂದ ಋತುಚಕ್ರದಲ್ಲಿ ಕೂಡಾ ಏರುಪೇರಾಗುತ್ತದೆ. ಬಂಜೆತನವೂ ಉಂಟಾಗುತ್ತದೆ. ಇದಲ್ಲದೇ ಥೈರಾಯ್ಡ್ ಸಮಸ್ಯೆಯಿಂದಲೂ, ಅತಿಯಾದ ಒತ್ತಡದಿಂದಲೂ, ಬೊಜ್ಜಿನಿಂದಲೂ ಋತುಚಕ್ರ ಸರಿಯಾಗಿ ಆಗದೇ ಇರಬಹುದು. ನೀವು ತುರ್ತಾಗಿ ತಜ್ಞ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ. ಪಿ.ಸಿ.ಒ.ಡಿ ಸಮಸ್ಯೆಯಿದ್ದರೆ ಈ ಮೇಲೆ ತಿಳಿಸಿದ ಹಾಗೆ ಜೀವನಶೈಲಿ ಬದಲಾವಣೆ ಮಾಡಿಕೊಂಡರೆ ಉತ್ತಮ ಫಲಿತಾಂಶ ದೊರಕುವುದು.

- **ಪ್ರಶ್ನೆ: ನನಗೆ 25 ವರ್ಷ. ಸರಿಯಾಗಿ ಮುಟ್ಟು ಆಗುತ್ತಿಲ್ಲ, ಹಾರ್ಮೋನ್ ವ್ಯತ್ಯಾಸದಿಂದ ಈ ರೀತಿ ಆಗುತ್ತಿದೆ ಎಂದು ವೈದ್ಯರು ಹೇಳುತ್ತಾರೆ, ಇದಕ್ಕೆ ಪರಿಹಾರ ತಿಳಿಸಿ.**

ಕವಿತಾ, ಊರು ತಿಳಿಸಿಲ್ಲ.

ಕವಿತಾರವರೇ ನಿಮ್ಮ ತೂಕ, ನೀವು ವಿವಾಹಿತರೇ, ಎಷ್ಟು ದಿನಕ್ಕೊಮ್ಮೆ ಋತುಚಕ್ರ ಆಗುತ್ತದೆ ಎಂಬ ಯಾವ ಮಾಹಿತಿಯನ್ನೂ ತಿಳಿಸಿಲ್ಲ ನಿಮಗೆ ಪಿ.ಸಿ.ಒ.ಡಿ ಸಮಸ್ಯೆ ಇರಬಹುದು ಅನಿಸುತ್ತದೆ. ಆ ಬಗ್ಗೆ ನಾನು ಅಂಕಣದಲ್ಲಿನ ಪಿ.ಸಿ.ಒ.ಡಿ ಪ್ರಶ್ನೆಗೆ ಉತ್ತರಿಸಿದ್ದೇನೆ. ಅದನ್ನು ಅನುಸರಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...
ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಜಾಹೀರಾತು

ಪೈಲ್ಸ್ / ಮೂಲವ್ಯಾದಿ

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಗುದದ್ವಾರದ ಬಳಿ ಮಲ ವಿಸರ್ಜನೆ ಭಾಗದಲ್ಲಿ ರಕ್ತನಾಳಗಳು ಊದಿಕೊಂಡು ರಕ್ತಸ್ರಾವವಾಗಿ ವಿಪರೀತ ಯಾತನೆ ನೋವು ಉಂಟು ಮಾಡುತ್ತದೆ ಅತ್ತ ಕೂರಲು ಬಾರದೆ ಅತ್ತ ನಿಲ್ಲಲೂ ಆಗದೆ ಬಹಳಷ್ಟು ನೋವು ಉಂಟು ಮಾಡುತ್ತದೆ.

ರೋಗದ ಲಕ್ಷಣಗಳು
1. ಗುದದ್ವಾರದಲ್ಲಿ ಮಲ ವಿಸರ್ಜನೆ ಮಾಡುವಾಗ ನೋವು ಮತ್ತು ಯಾತನೆ.
2. ಗುದದ್ವಾರದ ಬಳಿ ತುರಿಕೆ ಉಂಟಾಗುತ್ತದೆ
3. ಮಲ ವಿಸರ್ಜನೆ ಬಳಿಕ ಗುದದ್ವಾರದಿಂದ ರಕ್ತ ಬರುವುದು.
4. ಮಲ ವಿಸರ್ಜನೆ ಬಳಿಕವೂ ಪುನಃ ಮಲ ವಿಸರ್ಜನೆಗೆ ಹೋಗಬೇಕೆನ್ನುಸುವುದು ಆದರೆ ಮಲ ವಿಸರ್ಜನೆ ಆಗುವುದಿಲ್ಲ.
5. ನಿಮ್ಮ ಗುದದ್ವಾರದ ಸುತ್ತ ಗಡ್ಡೆ ಬೆಳೆದಂತೆ ಭಾಸವಾಗುವುದು.
6. ಕುಳಿತುಕೊಳ್ಳಲು ಸಾಧ್ಯವಾಗದೆ ಇರಬಹುದು ಕುಳಿತುಕೊಂಡಾಗ ನೋವು ಮತ್ತು ಮುಳ್ಳಿನ ಮೇಲೆ ಕುಳಿತಂತೆ ಭಾಸವಾಗುವುದು.

ಕಾರಣಗಳು
1. ಮಲಬದ್ಧತೆ ಮೂಲವ್ಯಾಧಿಗೆ ಅತಿ ಮುಖ್ಯವಾದ ಕಾರಣವೆನ್ನಬಹುದು
2. ಮಲ ವಿಸರ್ಜನೆ ಮಾಡುವಾಗ ನಿರಂತರವಾಗಿ ಅತಿಯಾಗಿ ಒತ್ತಡ ಹಾಕಿದಾಗಲೂ ಈ ಮೂಲವ್ಯಾದಿ ಬರುವ ಸಾಧ್ಯತೆ ಇರುತ್ತದೆ.
3. ಗರ್ಭಿಣಿಯರಲ್ಲಿ ಸಾಮನ್ಯವಾಗಿ ಪ್ರೊಜೆಸ್ಟರಾನ್ ಎಂಬ ರಸದೂತ ಹೆಚ್ಚಾಗಿರುತ್ತದೆ ಇದರಿಂದಾಗಿ ರಕ್ತ ನಾಳಗಳು ವಿಸ್ತಾರಗೊಳ್ಳುತ್ತದೆ ಗರ್ಭಿಣಿಯರಲ್ಲಿ ಕೊಡುವ ಹೆಚ್ಚಿನ ಕಬ್ಬಿಣಾಂಶಗಳಿಂದಾಗಿ ಮಲಬದ್ದತೆ ಉಂಟಾಗುವ ಸಾಧ್ಯತೆ ಹೆಚ್ಚು ಈ ಕಾರಣಗಳಿಂದಾಗಿಯೂ ಮೂಲವ್ಯಾದಿ ಉಂಟಾಗುವ ಸಾಧ್ಯತೆ ಇರುತ್ತದೆ.

ಮೂಲವ್ಯಾಧಿಯನ್ನು ತಡೆಯುವ ಉಪಾಯ
1. ಸಾಕಷ್ಟು ನೀರು ಕುಡಿಯಬೇಕು ದ್ರವ ಆಹಾರಕ್ಕೆ ಹೆಚ್ಚು ಒತ್ತು ನೀಡಬೇಕು.
2. ನಿಮ್ಮ ಆಹಾರ ಆಯ್ಕೆ ಮಾಡುವಾಗ ನಾರುಯುಕ್ತ ಆಹಾರಕ್ಕೆ ಹೆಚ್ಚು ಆದ್ಯತೆ ನೀಡಬೇಕು ಮನೆಯ ಆಹಾರ ಮುಖ್ಯ.
3. ಜಂಕ್ ಆಹಾರಗಳನ್ನು ತ್ಯಜಿಸುವುದು ಒಳ್ಳೆಯದು.
4. ಬಹಳ ಪ್ರಮಾಣದ ಹಣ್ಣು ತರಕಾರಿ ಯ ಸೇವನೆ ಸೂಕ್ತ
5. ಜೀವನಶೈಲಿಯನ್ನು ಬದಲಾಯಿಸಿಕೊಂಡು ಸಾಕಷ್ಟು ನಿದ್ರೆಯನ್ನು ಮಾಡಬೇಕು ನಿಯಮಿತವಾದ ದೈಹಿಕ ವ್ಯಾಯಾಮ ಅತೀ ಅಗತ್ಯ ಶೇಕಡಾ 90 ರಷ್ಟು ಮೂಲವ್ಯಾಧಿಗೆ ಜೀವನ ಶೈಲಿ ಕಾರಣವಾಗಿರುವುದು.
6. ಅತಿ ತುರಿಕೆಯಿದ್ದಲ್ಲಿ ಬಿಸಿ ನೀರಿನಲ್ಲಿ ಸ್ನಾನ ಮಾಡಿದಾಗ ನೋವು ಕಡಿಮೆ ಯಾಗುವುದು.
7. ಗುದದ್ವಾರದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ.

ಯಾವದನ್ನು ಮಾಡಬಾರದು.
1. ಮಲ ವಿಸರ್ಜನೆ ಸುಲಭವಾಗಲು ಅನಾವಶ್ಯಕವಾಗಿ ನೋವು ನಿವಾರಕ ಮಾತ್ರೆ / ಔಷಧಿ ಸೇವಿಸಬಾರದು.
2. ಮಲ ವಿಸರ್ಜಿಸಲು ಜಾಸ್ತಿ ಸಮಯ ತೆಗೆದುಕೊಳ್ಳುವುದು.
3. ಜಂಕ್ ಫುಡ್ ಹೀಟ್ ಉಂಟು ಮಾಡುವಂತಹ ಆಹಾರ ಮಸಾಲಾ ಪದಾರ್ಥಗಳನ್ನು ಮಾಂಸಾಹಾರ ಕಡಿಮೆ ಪ್ರಮಾಣದಲ್ಲಿ ತೆಗೆದುಕೊಳ್ಳುವುದು ಉತ್ತಮ.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್–ಕ್ಲಾಸ್ ಹೋಮಿಯೋಪತಿ

ಮುಖ್ಯವಾಗಿ
ಇದರಲ್ಲಿ ಎರಡು ವಿಧಗಳು ಎನ್ನಬಹುದು
ಇಂಟರ್ನಲ್ ಪೈಲ್ಸ್ (ಒಳಗಿನ ರಕ್ತನಾಳಗಳು ಒಳಗೆ ಇರುವುದು) ಇದರಲ್ಲಿ ಒಬ್ಬ ವ್ಯಕ್ತಿಯ ಮೂಲವ್ಯಾಧಿಯಿಂದ ಬಳಲುತ್ತಿರುವಾಗ ಗುದದ್ವಾರದ ರಕ್ತನಾಳಗಳು ಒಳಗಡೆಯೇ ಇದ್ದು ಮಲ ವಿಸರ್ಜಿಸುವಾಗ ಮಾತ್ರ ನೋವು ಕಾಣಿಸಿಕೊಳ್ಳುವುದು ರಕ್ತ ಸ್ರಾವವಾಗುವುದು ಉರಿಯುವುದು ತುರಿಕೆಯಾಗುವುದು ಇವೆಲ್ಲವೂ ಕೂಡ ಮಲ ವಿಸರ್ಜಿಸುವಾಗ ವ್ಯಕ್ತಿಯ ಅತಿಯಾಗಿ ಅನುಭವಿಸುವುದು.

ಎಕ್ಸ್ಟರ್ನಲ್ ಪೈಲ್ಸ್(ಹೊರ ಭಾಗದ / ತುದಿಯ ಗುದದ್ವಾರದ ರಕ್ತ ನಾಳಗಳು ಉಬ್ಬುವಿಕೆ)
ಇದರಲ್ಲಿ ವ್ಯಕ್ತಿಯು ಅದೇ ರೀತಿಯಾಗಿ ಯಾತನೆ ಅನುಭವಿಸುವುದು ಮತ್ತು ವ್ಯಕ್ತಿ ರಕ್ತ ಸ್ರಾವವಾಗುವುದು ಅಲ್ಲದೆ ಊದಿಕೊಂಡಿರುವ ರಕ್ತ ನಾಳಗಳು ಹೊರಗಡೆಯೇ ಇರುವುದು ಮತ್ತು ನೋವು ಹೆಚ್ಚಿನ ಪ್ರಮಾಣದಲ್ಲಿರುವುದು.

ಫಿಷರ್ಸ
ಗುದದ್ವಾರದ ಹತ್ತಿರ ಉಂಟಾಗಿರುವ ಬಿರುಕನ್ನು ಫಿಷರ್ ಎಂದು ಕರೆಯುತ್ತಾರೆ.
ಕಾರಣಗಳು:
- ಧೀರ್ಘಕಾಲದ ಮಲಬದ್ದತೆ ಭೇದಿ ಇರುವುದರಿಂದ ಫಿಷರ್ ಆಗುವ ಸಾಧ್ಯತೆ ಇರುತ್ತದೆ.
- ಗರ್ಭದಾರಣೆ ಸಮಯದಲ್ಲಿ ಕೂಡ ಕೆಲವು ಮಹಿಳೆಯರಲ್ಲಿ ಕಾಣಿಸಿ ಕೊಳ್ಳುತ್ತದೆ.
- ಕ್ಯಾನ್ಸರ್ ಆಲ್ಸರೇಟಿವ್ ಕೊಲೈಟಿಸ್ ರೋಗಗಳಿಂದ ಒಳಲುವವರಲ್ಲಿಯೂ ಈ ತೊಂದರೆ ಉಂಟುಗುವ ಅವಕಾಶ ಹೆಚ್ಚು.

ಫಿಸ್ತುಲಾ
ಎರಡು ಎಪಿಥಿಲಿಯಲ್ ಕಣಜಾಲಗಳ ಮದ್ಯ ಇರುವ ಒಂದು ನಾಳದ ರೀತಿಯ ನಿರ್ಮಾಣವನ್ನು ಫಿಸ್ತುಲಾ ಎಂದು ಕರೆಯುತ್ತಾರೆ .
ಫಿಸ್ತುಲಾ ಎನ್ನುವುದು ನಮ್ಮ ಶರೀರದ ಯಾವುದೇ ಭಾಗದಲ್ಲಾಗಲಿ ಏರ್ಪಡಬಹುದು ಎನಲ್ ಫಿಸ್ತುಲಾ ಇದು ಹೆಚ್ಚಾಗಿ ಅಧಿಕ ತೂಕ ಇರುವವರಲ್ಲಿ ಕಾಣಿಸುತ್ತದೆ. ಚರ್ಮದ ಮೇಲೆ ಮೊಡವೆ ರೀತಿಯಲ್ಲಿ ಮೂಡುತ್ತದೆ ಅದು ನೋವು ಊತ ಉಂಟಾಗಿ 2–3 ದಿನಗಳಲ್ಲಿ ಒಡೆದು ಕೀವು ಸೋರುತ್ತದೆ ಇವುಗಳ ಜೊತೆಗೆ ಕೆಲವರಲ್ಲಿ ಜ್ವರದ ಲಕ್ಷಣಗಳು ಸಹ ಕಾಣಿಸಿಕೊಳ್ಳಬಹುದು.
ಕಾರಣಗಳು:
ಬೊಜ್ಜು ಗಂಟೆಗಟ್ಟಲೆ ಅಲುಗಾಡದೆ ಕುಳಿತು ಕೆಲಸ ಮಾಡುವವರಲ್ಲಿ ತೀವ್ರವಾದ ಮಲ ಬದ್ಧತೆಯಿಂದ ಬಳಲುತ್ತಿರುವಿವರಲ್ಲಿ ಕ್ಯಾನ್ಸರ್ ಅಥವಾ ಅಲ್ಸರೇಟಿವ್ ಕೊಲೈಟಿಸ್ ರೋಗ ಇರುವವರಲ್ಲಿ ಫಿಸ್ತುಲಾ ಹೆಚ್ಚಾಗಿ ಕಾಣಿಸುತ್ತದೆ.
ಪರೀಕ್ಷೆಗಳು:
ಇ ಎಸ್ ಆರ್ ಫಿಸ್ತುಲಗ್ರಾಮ್ ಎಮ್ ಆರ್ ಐ ಸಿಟಿ ಸ್ಕ್ಯಾನ್ ಪರೀಕ್ಷೆಗಳು ಜೊತೆಗೆ ಇತರ ವ್ಯಾದಿಗಳು ಮತ್ತು ಅದರ ತೀವ್ರತೆಯನ್ನು ಗುರುತಿಸುತ್ತಾರೆ.

ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಚಿಕಿತ್ಸೆ:
ಇಲ್ಲಿ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ವೈದ್ಯ ಪದ್ಧತಿಯಿಂದ ಪೈಲ್ಸ್ ಫಿಷರ್ಸ್ ಫಿಸ್ತುಲಾ ಮಲ ಬದ್ಧತೆ ಮುಂತಾದ ಸಮಸ್ಯೆಗಳ ಮೂಲ ಕಾರಣಗಳನ್ನು ಗುರುತಿಸಿ ಸಂಪೂರ್ಣವಾಗಿ ವಾಸಿ ಮಾಡಲಾಗುವುದು. ಈ ಕಾಯಿಲೆಗಳು ಮತ್ತೆ ಬರದಿರುವ ಹಾಗೆ ಯಾವುದೇ ಶಸ್ತ್ರ ಚಿಕಿತ್ಸೆ ರಹಿತ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ವೈದ್ಯ ಪದ್ಧತಿಯಿಂದ ವಾಸಿ ಮಾಡಬಹುದು.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಐಪಿಎಲ್: ಹರ್ಷಲ್ ಪಟೇಲ್‌ಗೆ ಐದು ವಿಕೆಟ್; ಎಬಿ ಡಿವಿಲಿಯರ್ಸ್ ಅಮೋಘ ಬ್ಯಾಟಿಂಗ್

ಬೆಂಗಳೂರಿಗೆ ರೋಚಕ ಜಯದ 'ಹರ್ಷ'

ಚೆನ್ನೈ: ಚಿಪಾಕ್ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಜಯ ಸಾಧಿಸಿತು.

'ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 14ನೇ ಆವೃತ್ತಿಯ ಮೊದಲ ಪಂದ್ಯದಲ್ಲಿ 2 ವಿಕೆಟ್‌ಗಳಿಂದ ಗೆದ್ದು, ಅಮೋಘ ಆರಂಭ ಮಾಡಿತು. ಬೌಲಿಂಗ್‌ನಲ್ಲಿ ಮಿಂಚಿದ್ದ ಆರ್‌ಸಿಬಿಯ ಮಧ್ಯಮವೇಗಿ ಹರ್ಷಲ್ ಪಟೇಲ್ (27ಕ್ಕೆ5) ಬ್ಯಾಟಿಂಗ್‌ನಲ್ಲಿಯೂ ಮಹತ್ವದ ಕಾಣಿಕೆ ಕೊಟ್ಟರು. ಕೊನೆಯ ಎಸೆತದಲ್ಲಿ ತಂಡದ ಗೆಲುವಿಗೆ ಅಗತ್ಯವಿದ್ದ ಒಂದು ರನ್ ಗಳಿಸುವಲ್ಲಿ ಯಶಸ್ವಿಯಾದರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆರ್‌ಸಿಬಿ ನಾಯಕ ವಿರಾಟ್ ಕೊಹ್ಲಿ ನಿರ್ಧಾರವನ್ನು ಹರ್ಷಲ್ ಪಟೇಲ್ ಸಮರ್ಥಿಸಿಕೊಂಡರು. ಇನಿಂಗ್ಸ್‌ನ ಕೊನೆಯ ಐದು ಓವರ್‌ಗಳಲ್ಲಿ ಅಮೋಘವಾದ ಬೌಲಿಂಗ್ ಮಾಡಿದರು. ಅದರಿಂದಾಗಿ ಮುಂಬೈ ಇಂಡಿಯನ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಅದಕ್ಕುತ್ತರವಾಗಿ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 160 ರನ್ ಗಳಿಸಿ ಜಯಿಸಿತು.

ಈ ಮೊತ್ತವನ್ನು ಬೆನ್ನತ್ತಿದ ಬೆಂಗಳೂರು ತಂಡಕ್ಕೆ ವಿರಾಟ್ ಕೊಹ್ಲಿ (33 ರನ್) ಮತ್ತು ವಾಷಿಂಗ್ಟನ್ ಸುಂದರ್ (10 ರನ್) ಉತ್ತಮ ಆರಂಭ ನೀಡಿದರು. ಆದರೆ ಮಧ್ಯಮವೇಗಿ ಜಸ್‌ಪ್ರೀತ್ ಬೂಮ್ರಾ (26ಕ್ಕೆ2) ಮತ್ತು ಸ್ಪಿನ್ನರ್ ಕೃಣಾಲ್ ಪಾಂಡ್ಯ (28ಕ್ಕೆ2) ಆರ್‌ಸಿಬಿಯ ಸುಲಭ ಜಯದ ಕನಸಿಗೆ ಅಡ್ಡಿಯಾದರು. ಜೊತೆಯಾಟಗಳನ್ನು ಹೆಚ್ಚು ಬೆಳೆಯಲು ಬಿಡದೇ, ರನ್‌ಗಳಿಕೆಗೂ ತಡೆಯೊಡ್ಡಿದರು. ಇದರಿಂದಾಗಿ ತಂಡವು 98 ರನ್‌ಗಳಿಗೆ 3 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಈ ಹಂತದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ (39; 28ಎಸೆತ) ಮತ್ತು 'ಸೂಪರ್ ಮ್ಯಾನ್' ಎಬಿ ಡಿವಿಲಿಯರ್ಸ್ (48; 27ಎ, 2ಸಿ,4ಬೌಂಡರಿ) ಅವರ ಆಟದಿಂದ ಗೆಲುವಿನ ಭರವಸೆ ಮೂಡಿತ್ತು.

15ನೇ ಓವರ್‌ನಲ್ಲಿ ಮ್ಯಾಕ್ಸ್‌ವೆಲ್ ಔಟಾದಾಗ ಉಳಿದ ಬ್ಯಾಟ್ಸ್‌ಮನ್‌ಗಳು ಹೆಚ್ಚು ಹೊತ್ತು ನಿಲ್ಲಲಿಲ್ಲ. ಜಾನ್ಸನ್ ಹಾಕಿದ ಕೊನೆಯ ಓವರ್‌ನಲ್ಲಿ ಎಬಿ ಡಿವಿಲಿಯರ್ಸ್ ರನ್‌ಔಟ್ ಆದಾಗ, ತಂಡದ ಗೆಲುವಿಗೆ ಎರಡು ಎಸೆತಗಳಲ್ಲಿ 2 ರನ್‌ಗಳು ಬೇಕಾಗಿದ್ದವು. ಬ್ಯಾಟಿಂಗ್ ಮಾಡುತ್ತಿದ್ದ ಸಿರಾಜ್ ಐದನೇ ಎಸೆತದಲ್ಲಿ ಲೆಗ್‌ಬೈ ರನ್ ಪಡೆಯುವಲ್ಲಿ ಸಫಲರಾದರು. ಕೊನೆಯ ಎಸೆತದಲ್ಲಿ ಹರ್ಷಲ್ ಪಟೇಲ್ ಒಂದು ರನ್ ಹೊಡೆದು ಜಯದ ಮೊಹರು ಒತ್ತಿದರು.

ಹರ್ಷಲ್ ಮಿಂಚು: ಈ ಪಂದ್ಯದಲ್ಲಿ ಹರ್ಷಲ್, ಐದನೇ ಬೌಲರ್ ಆಗಿ ಕಣಕ್ಕಿಳಿದರು. ಇನಿಂಗ್ಸ್‌ನ ಕೊನೆಯ 5 ಓವರ್ ಗಳಲ್ಲಿ ಅವರ ದಾಳಿಗೆ ಮುಂಬೈ ಬ್ಯಾಟಿಂಗ್ ಪಡೆ ತತ್ತರಿಸಿತು. 16ನೇ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯ ಮತ್ತು 18ನೇ ಓವರ್‌ನಲ್ಲಿ ಇಶಾನ್ ವಿಕೆಟ್ ಕಬಳಿಸಿದರು.

ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ 'ಹ್ಯಾಟ್ರಿಕ್' ಸಾಧನೆ ತಪ್ಪಿದರೂ ಮೂರು ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವಲ್ಲಿ ಸಫಲರಾದರು. ಕಿರನ್ ಪೊಲಾರ್ಡ್, ಕೃಣಾಲ್ ಪಾಂಡ್ಯ ಮತ್ತು ಮಾರ್ಕೊ ಜಾನ್ಸನ್ ಅವರನ್ನು ಕಟ್ಟಿಹಾಕಿದರು. ಇದರಿಂದಾಗಿ ದೊಡ್ಡ ಮೊತ್ತ ಗಳಿಸುವ ಮುಂಬೈ ಉದ್ದೇಶಕ್ಕೆ ಅಡ್ಡಿಯಾಯಿತು.

ಇದಕ್ಕೂ ಮುನ್ನ ಮುಂಬೈನ ಕ್ರಿಸ್ ಲಿನ್ ಮತ್ತು ಸೂರ್ಯಕುಮಾರ್ ಯಾದವ್ (31; 23ಎಸೆತ) ಎರಡನೇ ವಿಕೆಟ್‌ಗೆ 70 ರನ್ ಸೇರಿಸಿದರು. ಕಿವೀಸ್ ಬೌಲರ್ ಕೈಲ್ ಜೆಮಿಸನ್ 11ನೇ ಓವರ್‌ನಲ್ಲಿ ಯಾದವ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. 13ನೇ ಓವರ್‌ನಲ್ಲಿ ಅರ್ಧಶತಕದಂಚಿನಲ್ಲಿದ್ದ ಕ್ರಿಸ್ ಲಿನ್ ವಿಕೆಟ್ ಗಳಿಸಿದ ವಾಷಿಂಗ್ಟನ್ ಸುಂದರ್ ಕುಣಿದಾಡಿದರು. ಇದರ ನಂತರ ಹರ್ಷಲ್ ಪಟೇಲ್ ಆಟ ಶುರುವಾಯಿತು.

ದೇವದತ್ತಗೆ ವಿಶ್ರಾಂತಿ: ಕೋವಿಡ್‌ನಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿರುವ ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರಿಗೆ ಮೊದಲ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಯಿತು. ಅದರಿಂದಾಗಿ ವಿರಾಟ್ ಕೊಹ್ಲಿ ಮತ್ತು ವಾಷಿಂಗ್ಟನ್ ಸುಂದರ್ ಆರ್‌ಸಿಬಿಗೆ ಇನಿಂಗ್ಸ್ ಆರಂಭಿಸಿದರು.

ಹರ್ಷಲ್ ಪಟೇಲ್ ಪಂದ್ಯಶ್ರೇಷ್ಠ ಪುರಸ್ಕೃತರಾದರು.

ಆರ್‌ಸಿಬಿ ತಂಡದ ಹರ್ಷಲ್ ಪಟೇಲ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಮುಂಬೈ ಇಂಡಿಯನ್ಸ್ 9ಕ್ಕೆ 159 (20 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ರನ್‌ಔಟ್ (ಕೊಹ್ಲಿ/ಚಾಹಲ್)	19
ಕ್ರಿಸ್ ಲಿನ್ ಸಿ ಮತ್ತು ಬಿ ವಾಷಿಂಗ್ಟನ್ ಸುಂದರ್	49
ಸೂರ್ಯಕುಮಾರ್ ಯಾದವ್ ಸಿ ಎಬಿ ಡಿವಿಲಿಯರ್ಸ್ ಬಿ ಕೈಲ್ ಜೆಮಿಸನ್	31
ಇಶಾನ್ ಕಿಶನ್ ಎಲ್‌ಬಿಡಬ್ಲ್ಯು ಬಿ ಹರ್ಷಲ್ ಪಟೇಲ್	28
ಹಾರ್ದಿಕ್ ಪಾಂಡ್ಯ ಎಲ್‌ಬಿಡಬ್ಲ್ಯು ಬಿ ಹರ್ಷಲ್ ಪಟೇಲ್	13
ಕೀರನ್ ಪೊಲಾರ್ಡ್ ಸಿ ವಾಷಿಂಗ್ಟನ್ ಸುಂದರ್ ಬಿ ಹರ್ಷಲ್ ಪಟೇಲ್	07
ಕೃಣಾಲ್ ಪಾಂಡ್ಯ ಸಿ ಕ್ರಿಸ್ಟಿಯನ್ ಬಿ ಹರ್ಷಲ್ ಪಟೇಲ್	07
ಮಾರ್ಕೊ ಜಾನ್ಸನ್ ಬಿ ಹರ್ಷಲ್ ಪಟೇಲ್	00
ರಾಹುಲ್ ಚಾಹರ್ ರನ್‌ಔಟ್ (ಕೊಹ್ಲಿ/ಡಿವಿಲಿಯರ್ಸ್)	00
ಜಸ್‌ಪ್ರೀತ್ ಬೂಮ್ರಾ ಔಟಾಗದೆ	01
ಇತರೆ (ನೋಬಾಲ್ 2, ವೈಡ್ 2)	04

ವಿಕೆಟ್ ಪತನ: 1–24 (ರೋಹಿತ್; 3.6), 2–94 (ಸೂರ್ಯ; 10.6), 3–105 (ಲಿನ್; 12.5), 4–135 (ಹಾರ್ದಿಕ್; 15.6), 5–145 (ಇಶಾನ್; 17.4), 6–158 (ಕೃಣಾಲ್; 19.1), 7–158 (ಪೊಲಾರ್ಡ್; 19.2)

ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–22–0, ಕೈಲ್ ಜೆಮಿಸನ್ 4–0–27–1, ಯಜುವೇಂದ್ರ ಚಾಹಲ್ 4–0–41–0, ಶಹಬಾಜ್ ನದೀಂ 1–0–14–0, ಹರ್ಷಲ್ ಪಟೇಲ್ 4–0–27–5, ಡ್ಯಾನ್ ಕ್ರಿಸ್ಟಿಯನ್ 2–0–21–0, ವಾಷಿಂಗ್ಟನ್ ಸುಂದರ್ 1–0–7–1

ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ 160 (20 ಓವರ್‌ಗಳಲ್ಲಿ)

ವಾಷಿಂಗ್ಟನ್ ಸುಂದರ್ ಸಿ ಕ್ರಿಸ್ ಲಿನ್ ಬಿ ಕೃಣಾಲ್ ಪಾಂಡ್ಯ	10
ವಿರಾಟ್ ಕೊಹ್ಲಿ ಎಲ್‌ಬಿಡಬ್ಲ್ಯು ಜಸ್‌ಪ್ರೀತ್ ಬೂಮ್ರಾ	33
ರಜತ್ ಪಾಟೀದಾರ್ ಬಿ ಟ್ರೆಂಟ್ ಬೌಲ್ಟ್	08
ಗ್ಲೆನ್ ಮ್ಯಾಕ್ಸ್‌ವೆಲ್ ಸಿ ಕ್ರಿಸ್ ಲಿನ್ ಬಿ ಮಾರ್ಕೊ ಜಾನ್ಸನ್	39
ಎಬಿ ಡಿವಿಲಿಯರ್ಸ್ ರನ್‌ಔಟ್ (ಕೃಣಾಲ್ ಪಾಂಡ್ಯ/ಇಶಾನ್ ಕಿಶನ್)	48
ಶಹಬಾಜ್ ನದೀಂ ಸಿ ಕೃಣಾಲ್ ಪಾಂಡ್ಯ ಬಿ ಮಾರ್ಕೊ ಜಾನ್ಸನ್	01
ಡ್ಯಾನ್ ಕ್ರಿಸ್ಟಿಯನ್ ಸಿ ರಾಹುಲ್ ಚಾಹರ್ ಬಿ ಜಸ್‌ಪ್ರೀತ್ ಬೂಮ್ರಾ	01
ಕೈಲ್ ಜೆಮಿಸನ್ ರನ್‌ಔಟ್ (ಜಸ್‌ಪ್ರೀತ್ ಬೂಮ್ರಾ)	04
ಹರ್ಷಲ್ ಪಟೇಲ್ ಔಟಾಗದೆ	04
ಮೊಹಮ್ಮದ್ ಸಿರಾಜ್ ಔಟಾಗದೆ	00
ಇತರೆ (ಲೆಗ್ ಬೈ 2, ನೋಬಾಲ್ 1, ವೈಡ್ 9)	12

ವಿಕೆಟ್ ಪತನ: 1–36 (ವಾಷಿಂಗ್ಟನ್, 4.2), 2–46 (ರಜತ್, 5.5), 3–98 (ವಿರಾಟ್, 12.3), 4–103 (ಮ್ಯಾಕ್ಸ್‌ವೆಲ್, 14.1), 5–106 (ಶಹಬಾಜ್, 14.6), 6–122 (ಡ್ಯಾನ್ ಕ್ರಿಸ್ಟಿಯನ್ 16.3), 7–152 (ಜೆಮಿಸನ್, 18.5), 8–158 (ಡಿವಿಲಿಯರ್ಸ್, 19.4)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–36–1, ಜಸ್‌ಪ್ರೀತ್ ಬೂಮ್ರಾ 4–0–26–2, ಮಾರ್ಕೊ ಜಾನ್ಸನ್ 4–0–28–2, ಕೃಣಾಲ್ ಪಾಂಡ್ಯ 4–0–25–1, ರಾಹುಲ್ ಚಾಹರ್ 4–0–43–0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಎರಡು ವಿಕೆಟ್‌ಗಳ ಗೆಲುವು

ಯುಜವೇಂದ್ರ ಚಾಹಲ್ ನೂರು–ಇನ್ನೂರು!

ಚೆನ್ನೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಒಂದೇ ಪಂದ್ಯದಲ್ಲಿ 'ಶತಕ' ಹಾಗೂ 'ದ್ವಿಶತಕ'ದ ದಾಖಲೆ ಮಾಡಿದ್ದಾರೆ!

ಹೌದು; ಐಪಿಎಲ್‌ನಲ್ಲಿ ಅವರು 100ನೇ ಪಂದ್ಯವಾಡಿದರು. ಜೊತೆಗೆ ಒಟ್ಟಾರೆ ಎಲ್ಲ ಹಂತದಲ್ಲಿಯೂ 200 ಟಿ20 ಪಂದ್ಯಗಳನ್ನೂ ಆಡಿರುವ ದಾಖಲೆ ಅವರದ್ದಾಯಿತು. ಈ ಪೈಕಿ ಅವರು ಆರ್‌ಸಿಬಿ ಪರ 99 ಪಂದ್ಯಗಳನ್ನು ಆಡಿದ್ದಾರೆ. ಅವರು ಈ ಹಿಂದೆ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದರು.

ಆರ್‌ಸಿಬಿ ಹಾಡಿನಲ್ಲಿ ಕನ್ನಡ ಕಡಿಮೆ: ಆಕ್ರೋಶ

ಬೆಂಗಳೂರು: ಈ ಬಾರಿಯ ಐಪಿಎಲ್ ಟೂರ್ನಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹೊಸ ಗೀತೆಯನ್ನು ಬಿಡುಗಡೆಗೊಳಿಸಿದೆ.

ಆದರೆ ಈ ಬಾರಿಯೂ ಕನ್ನಡ ಪದಗಳ ಕಡಿಮೆ ಬಳಕೆ ಮತ್ತು ಹಿಂದಿ ಹಾಗೂ ಆಂಗ್ಲ ಭಾಷೆಯ ಪದಗಳ ಜಾಸ್ತಿ ಬಳಕೆಯ ಬಗ್ಗೆ ಅಭಿಮಾನಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಬೆಂಗಳೂರು ಲಯನ್ಸ್ ಕೇಳಿ ಇವರ ಘರ್ಜನೆ' ಎಂಬ ಟ್ಯಾಗ್ ಅಡಿಯಲ್ಲಿ ಆರ್‌ಸಿಬಿ ಫ್ರಾಂಚೈಸಿಯು ಥೀಮ್ ಸಾಂಗ್ ಬಿಡುಗಡೆಗೊಳಿಸಿತ್ತು. ಆದರೆ ಗೀತೆಯಲ್ಲಿ ಕನ್ನಡ ಪದಗಳಿಗೆ ಹೆಚ್ಚಿನ ಆದ್ಯತೆ ನೀಡದಿರುವುದು ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಈ ಬಗ್ಗೆ ಟ್ವಿಟರ್‌ನಲ್ಲಿ ಟೀಕಿಸಲಾಗಿದೆ.

'ಊರಿನ ಹೆಸರು ಹಾಳು ಮಾಡೋಕೆ ಅಂತಾನೆ ತಂಡ ಕಟ್ಟಿಕೊಂಡು ಪ್ರತಿವರ್ಷ ಕಪ್ ನಮ್ಮದೇ ಅಂತ ಇರೋದು ಅನ್ಸುತ್ತೆ, ಈ ರೀತಿ ಹಿಂದಿ-ಇಂಗ್ಲಿಷ್ ಗುಲಾಮಗಿರಿಯ ಶೋಕಿ ಕನ್ನಡ ಬಳಸದೆ ಹೋದ್ರೆ ನಿಮಗೆ ಚಿಪ್ಪು ಪಕ್ಕಾ, ಕಪ್ ಅಲ್ಲ. ಕನ್ನಡವೇ ಬೇಡ ಅಂತ ಇದ್ದ ಮೇಲೆ ಬೆಂಗಳೂರು ಹೆಸರು ಯಾಕೆ? ನಾವು ಕನ್ನಡಿಗರು ಏನು ಕೇಳಿರಲಿಲ್ಲ. ಹಿಂದಿ ಹೇರಿಕೆಯನ್ನು ನಿಲ್ಲಿಸಿ' ಎಂದು ಕೃಷಿಕ್ ಎಂಬುವವರು ಟೀಕಿಸಿದ್ದಾರೆ.

'ಗುರು–ಶಿಷ್ಯ'ರ ಮುಖಾಮುಖಿ

ಐಪಿಎಲ್: ಚೆನ್ನೈ –ಡೆಲ್ಲಿ ಕ್ಯಾಪಿಟಲ್ಸ್ ಪಂದ್ಯ ಇಂದು

ರಿಷಭ್ ಪಂತ್

ಮಹೇಂದ್ರ ಸಿಂಗ್ ಧೋನಿ

ಮುಂಬೈ (ಪಿಟಿಐ): ತಮ್ಮ ಬಾಲ್ಯದಿಂದಲೂ ಮಹೇಂದ್ರಸಿಂಗ್ ಧೋನಿಯ ವಿಕೆಟ್ ಕೀಪಿಂಗ್ ಕೌಶಲಗಳನ್ನು ಕಣ್ತುಂಬಿಕೊಳ್ಳುತ್ತ ಬೆಳೆದವರು ರಿಷಭ್ ಪಂತ್.

ಕ್ರಿಕೆಟ್ ಅಂಗಳಕ್ಕೆ ಕಾಲಿಟ್ಟಾಗಿನಿಂದಲೂ ಧೋನಿಯೊಂದಿಗಿನ ಒಡನಾಟದಲ್ಲಿ ಕಲಿತದ್ದು ಅಪಾರ ಎಂದು ಅವರೇ ಹಲವು ಬಾರಿ ಹೇಳಿದ್ದಾರೆ. ಇದೀಗ ತಮ್ಮ 'ಗುರು' ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಎದುರು ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕನಾಗಿ ಕಣಕ್ಕಿಳಿಯುತ್ತಿದ್ದಾರೆ. ಗುರುವಿಗೆ ತಿರುಮಂತ್ರ ಹಾಕುವ ಛಲದಲ್ಲಿದ್ದಾರೆ.

ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಗಾಯಗೊಂಡಿದ್ದ ಶ್ರೇಯಸ್ ಅಯ್ಯರ್ ಐಪಿಎಲ್‌ನಲ್ಲಿ ಆಡುತ್ತಿಲ್ಲ. ಆದ್ದರಿಂದ ರಿಷಭ್ ಹೆಗಲಿಗೆ ನಾಯಕತ್ವದ ಹೊಣೆ ಬಿದ್ದಿದೆ. ಭಾರತ ಕ್ರಿಕೆಟ್ ತಂಡಕ್ಕೆ ಧೋನಿ ನಂತರದ ವಿಕೆಟ್‌ಕೀಪರ್ ಎಂದೇ ಭರವಸೆ ಮೂಡಿಸಿರುವ ಪಂತ್ ಮುಂದೆ ಕಠಿಣ ಸವಾಲಿದೆ.

ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಟೂರ್ನಿಯಲ್ಲಿ ಡೆಲ್ಲಿ ತಂಡವು ರನ್ನರ್ಸ್ ಅಪ್ ಆಗಿತ್ತು. ಅದೇ ಚೆನ್ನೈ ತಂಡವು ಪ್ಲೇ ಆಫ್‌ಗೂ ಪ್ರವೇಶಿಸಿರಲಿಲ್ಲ. ಡೆಲ್ಲಿ ತಂಡದಲ್ಲಿ ಅನುಭವಿ ಆಟಗಾರರಾದ ಶಿಖರ್ ಧವನ್, ಪೃಥ್ವಿ ಶಾ, ಅಜಿಂಕ್ಯ ರಹಾನೆ ಮತ್ತು ಆಸ್ಟ್ರೇಲಿಯಾದ ಸ್ಟೀವನ್ ಸ್ಮಿತ್ ಇದ್ದಾರೆ. ಈಚೆಗಿನ ಅಂತರರಾಷ್ಟ್ರೀಯ ಸರಣಿಗಳಲ್ಲಿ ಪಂತ್ ಅಮೋಘ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದರು. ಹೋದ ಐಪಿಎಲ್‌ನಲ್ಲಿ ಧವನ್ 618 ರನ್‌ಗಳನ್ನು ಪೇರಿಸಿದ್ದರು. ಪೃಥ್ವಿ ವಿಜಯ್ ಹಜಾರೆ ಟ್ರೋಫಿಯಲ್ಲಿ 827 ರನ್‌ಗಳನ್ನು ಕಲೆಹಾಕಿದ್ದರು. ತಂಡದಲ್ಲಿರುವ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್, ಶಿಮ್ರೊನ್ ಹೆಟ್ಮೆಯರ್ ಮತ್ತು ಸ್ಯಾಮ್ ಬಿಲಿಂಗ್ಸ್ ಪಂದ್ಯದ ಯಾವುದೇ ಹಂತದಲ್ಲಿಯೂ ಎದುರಾಳಿ ಬಳಗಕ್ಕೆ 'ಅಘಾತ' ನೀಡಬಲ್ಲ ಸಮರ್ಥರು.

ಬೌಲಿಂಗ್‌ನಲ್ಲಿ ಕಗಿಸೊ ರಬಾಡ, ಕ್ರಿಸ್ ವೋಕ್ಸ್ ಮತ್ತು ಎನ್ರಿಚ್ ಜೊತೆಗೆ ಈ ಬಾರಿ ಉಮೇಶ್ ಯಾದವ್ ಕೂಡ ಜೊತೆಗೂಡಿದ್ದಾರೆ. ಸ್ಪಿನ್ನರ್ ಆರ್. ಅಶ್ವಿನ್ ಮತ್ತು ಅಮಿತ್ ಮಿಶ್ರಾ ಇಲ್ಲಿ ತಮ್ಮ ಅನುಭವವನ್ನು ಪಣಕ್ಕೊಡ್ಡಲಿದ್ದಾರೆ. ಹೋದ ಬಾರಿಯ ಸೋಲು ಮರೆಸುವಂತಹ ಅಟವಾಡುವ ಛಲದಲ್ಲಿರುವ ಚೆನ್ನೈ ತಂಡದಲ್ಲಿ ಈ ಬಾರಿ ಕೆಲವು ಪ್ರಮುಖ ಬದಲಾವಣೆಗಳಿವೆ. ಐಪಿಎಲ್‌ನಲ್ಲಿ 5,368 ರನ್‌ಗಳಿಸಿರುವ ಸುರೇಶ್ ರೈನಾ ತಂಡಕ್ಕೆ ಮರಳಿದ್ದಾರೆ. ದಕ್ಷಿಣ ಆಫ್ರಿಕಾದ ಫಫ್ ಡುಪ್ಲೆಸಿ ಮತ್ತು ಅಂಬಟಿ ರಾಯುಡು ಅವರಿಂದಾಗಿ ಬ್ಯಾಟಿಂಗ್ ಪಡೆ ಬಲಿಷ್ಠವಾಗಿದೆ. ಯುವ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್, ಆಲ್‌ರೌಂಡರ್ ಸ್ಯಾಮ್ ಕರನ್ ಮತ್ತು ಮೋಯಿನ್ ಅಲಿ ತಂಡದಲ್ಲಿದ್ದಾರೆ. 'ಕ್ಯಾಪ್ಟನ್ ಕೂಲ್' ಧೋನಿ ಮಧ್ಯ ಕ್ರಮಾಂಕದ ಬ್ಯಾಟಿಂಗ್‌ಗೆ ಬಲ ತುಂಬುವ ನಿರೀಕ್ಷೆ ಇದೆ.

ಶಾರ್ದೂಲ್ ಠಾಕೂರ್, ದೀಪಕ್ ಚಾಹರ್, ಸ್ಪಿನ್ನರ್ ರವೀಂದ್ರ ಜಡೇಜ ಮತ್ತು ಕನ್ನಡಿಗ ಕೃಷ್ಣಪ್ಪ ಗೌತಮ್ ಬೌಲಿಂಗ್ ವಿಭಾಗದಲ್ಲಿದ್ದಾರೆ. ಇದರಿಂದಾಗಿ ಡೆಲ್ಲಿ ಬ್ಯಾಟಿಂಗ್ ಪಡೆಗೆ ದಿಟ್ಟ ಸವಾಲೊಡ್ಡುವ ಸಾಮರ್ಥ್ಯ ಚೆನ್ನೈನಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕೇಂದ್ರೀಯ ಪಡೆಗಳ ವಿರುದ್ಧ ಹೇಳಿಕೆ: ಚುನಾವಣಾ ಆಯೋಗ ಆಕ್ರೋಶ

ಮಮತಾ ಬ್ಯಾನರ್ಜಿಗೆ ಎರಡನೇ ನೋಟಿಸ್

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಕೇಂದ್ರೀಯ ಪಡೆಗಳ ವಿರುದ್ಧ ಮಮತಾ ಬ್ಯಾನರ್ಜಿ ಅವರು ನೀಡಿದ್ದಾರೆ ಎನ್ನಲಾದ 'ಸಂಪೂರ್ಣ ಸುಳ್ಳು, ಪ್ರಚೋದನಕಾರಿ ಮತ್ತು ಅತಿರೇಕದ ಹೇಳಿಕೆ'ಗಳ ವಿರುದ್ಧ ಚುನಾವಣಾ ಆಯೋಗವು ಗುರುವಾರ ರಾತ್ರಿ ನೋಟಿಸ್ ನೀಡಿದೆ.

ಈ ರೀತಿಯ ಹೇಳಿಕೆಗಳನ್ನು ನೀಡುವ ಮೂಲಕ ಮಮತಾ ಅವರು ಭಾರತೀಯ ದಂಡ ಸಂಹಿತೆಯ ಹಲವು ಸೆಕ್ಷನ್‌ಗಳು ಮತ್ತು ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ಆಯೋಗವು ಆರೋಪಿಸಿದೆ. ಶನಿವಾರ ಬೆಳಿಗ್ಗೆ 11 ಗಂಟೆಯೊಳಗೆ ನೋಟಿಸ್‌ಗೆ ಉತ್ತರಿಸಬೇಕು ಎಂದು ಸೂಚಿಸಲಾಗಿದೆ.

'...ಮಮತಾ ಬ್ಯಾನರ್ಜಿ ಅವರ ಹೇಳಿಕೆಯು ಸಂಪೂರ್ಣ ಸುಳ್ಳು, ಪ್ರಚೋದನಕಾರಿ ಮತ್ತು ಅತಿರೇಕದ್ದು ಎಂದು ಮೇಲ್ನೋಟಕ್ಕೇ ಕಾಣಿಸುತ್ತದೆ. ಚುನಾವಣಾ ಪ್ರಕ್ರಿಯೆಯ ನಡುವೆ ಕೇಂದ್ರ ಅರೆಸೇನಾ ಪಡೆಗೆ ಛೀಮಾರಿ ಹಾಕಿ ಅಪಮಾನಿಸುವುದು, ಸಿಬ್ಬಂದಿಯ ನೈತಿಕ ಸ್ಥೈರ್ಯವನ್ನೇ ಕುಗ್ಗಿಸುತ್ತದೆ' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

'1980ರ ದಶಕದಿಂದಲೇ ಪ್ರತಿ ಚುನಾವಣೆಯಲ್ಲಿಯೂ ವಿಶೇಷವಾಗಿ ಸಮಾಜಘಾತುಕ ಶಕ್ತಿಗಳ ಪ್ರಾಬಲ್ಯವಿದ್ದ ಪ್ರದೇಶಗಳಲ್ಲಿ ಸಿಆರ್‌ಪಿಎಫ್ ಗಮನಾರ್ಹ ಸೇವೆ ಸಲ್ಲಿಸಿದೆ' ಎಂದು ಆಯೋಗವು ಶ್ಲಾಘಿಸಿದೆ.

ಕಳೆದ ಕೆಲವು ದಿನಗಳಲ್ಲಿ ಮಮತಾ ಅವರಿಗೆ ಸಿಕ್ಕ ಎರಡನೇ ನೋಟಿಸ್ ಇದು. ಕೋಮು ಆಧಾರದಲ್ಲಿ ಮತದಾರರಿಗೆ ಮನವಿ ಮಾಡಿದ ಆರೋಪದಲ್ಲಿ ಮಮತಾ ಅವರಿಗೆ ಬುಧವಾರವೂ ಆಯೋಗವು ನೋಟಿಸ್ ನೀಡಿತ್ತು.

ಮಹಿಳಾ ಮತದಾರರನ್ನು ಸಿಆರ್‌ಪಿಎಫ್ ಬೆದರಿಸುತ್ತಿದೆ ಮತ್ತು ಅವರು ಮತಗಟ್ಟೆಗೆ ಬರುವುದನ್ನು ತಡೆಯುತ್ತಿದೆ ಎಂದು ಮಮತಾ ಇತ್ತೀಚೆಗೆ ಆರೋಪಿಸಿದ್ದರು. ಕೇಂದ್ರೀಯ ಪಡೆಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿರ್ದೇಶನದಂತೆ ಕೆಲಸ ಮಾಡುತ್ತಿದೆ ಎಂದೂ ಅವರು ಆರೋಪಿಸಿದ್ದರು.

ಶೋಕಾಸ್ ನೋಟಿಸ್ ಲೆಕ್ಕಕ್ಕಿಲ್ಲ

ಆಯೋಗದ ನೋಟಿಸ್‌ಗೆ ಮಮತಾ ಅವರು ಖಾರವಾದ ಪ್ರತಿಕ್ರಿಯೆ ನೀಡಿದ್ದಾರೆ. ಬಿಜೆಪಿ ಹೇಳಿದಂತೆ ಕೇಳುವುದನ್ನು ನಿಲ್ಲಿಸುವವರೆಗೆ ಸಿಆರ್‌ಪಿಎಫ್ ವಿರುದ್ಧ ಮಾತನಾಡುವುದನ್ನು ನಿಲ್ಲಿಸುವುದಿಲ್ಲ ಎಂದು ಅವರು ಜಮಾಲ್‌ಪುರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಹೇಳಿದ್ದಾರೆ.

ಚುನಾವಣಾ ಆಯೋಗವೇ ಬಿಜೆಪಿಯ ಕುಮ್ಮಕ್ಕಿನಂತೆ ಕೆಲಸ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮತದಾದನ ದಿನವೇ ಪ್ರಚಾರ ನಡೆಸಿದ್ದಾರೆ. ಆದರೆ, ಅವರು ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಹೇಳಲಾಗಿಲ್ಲ ಎಂದು ಮಮತಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬಿಜೆಪಿ ಹೇಳಿದಂತೆ ಕೇಳುವುದನ್ನು ನಿಲ್ಲಿಸುವ ವರೆಗೆ ಸಿಆರ್‌ಪಿಎಫ್ ಹಸ್ತಕ್ಷೇಪದ ಬಗ್ಗೆ ಮಾತನಾಡುವೆ. ಬಿಜೆಪಿ ಹೇಳಿದಂತೆ ಕೇಳುವುದನ್ನು ನಿಲ್ಲಿಸಿದ ದಿನ ಅವರಿಗೆ ಸೆಲ್ಯೂಟ್ ಕೊಡುವೆ. ನಿಮ್ಮ (ಚುನಾವಣಾ ಆಯೋಗ) ಶೋಕಾಸ್ ನೋಟಿಸ್ ನನಗೆ ಲೆಕ್ಕಕ್ಕೇ ಇಲ್ಲ' ಎಂದು ಅವರು ಹೇಳಿದ್ದಾರೆ.

'ಚುನಾವಣಾ ಆಯೋಗವು ಟಿಎಂಸಿ ಏನು ಹೇಳುತ್ತಿದೆ ಎಂಬುದನ್ನು ಆಲಿಸುವ ಗೋಜಿಗೇ ಹೋಗುವುದಿಲ್ಲ. ಆದರೆ ಬಿಜೆಪಿ ಏನು ಹೇಳುತ್ತದೆಯೋ ಹಾಗೆಯೇ ಮಾಡುತ್ತದೆ' ಎಂದೂ ಅವರು ಆಪಾದಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿರುವಾಗ ನೀವು (ಮೋದಿ) 'ಪರೀಕ್ಷಾ ಪೆ ಚರ್ಚಾ' ನಡೆಸಿದ್ದು ಏಕೆ? ಇದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಅಲ್ಲವೇ ಎಂದೂ ಅವರು ಪ್ರಶ್ನಿಸಿದ್ದಾರೆ.

'ಗೂಂಡಾ ಗೃಹ ಸಚಿವ'

ಅಮಿತ್ ಶಾ ಅವರು ಹಿಂಸಾಚಾರ ನಡೆಸಲು ಯತ್ನಿಸುತ್ತಿದ್ದಾರೆ. ಅನೈತಿಕವಾಗಿ ನಡೆದುಕೊಳ್ಳುವಂತೆ ಪೊಲೀಸರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಮಮತಾ ಆರೋಪಿಸಿದ್ದಾರೆ.

'ಇಂತಹ ಗೂಂಡಾ, ಗಲಭೆಕೋರ ಗೃಹ ಸಚಿವರನ್ನು ನನ್ನ ಜೀವನದಲ್ಲಿ ಈವರೆಗೆ ಕಂಡೇ ಇಲ್ಲ. ಅವರು ಹುಲಿಗಿಂತ ಅಪಾಯಕಾರಿ. ಅವರಲ್ಲಿ ಮಾತನಾಡುವುದಕ್ಕೇ ಜನರು ಹೆದರುತ್ತಾರೆ. ಮೊದಲು ಶಾ ಅವರನ್ನು ನಿಯಂತ್ರಿಸುವಂತೆ ಪ್ರಧಾನಿಯನ್ನು ಕೋರುತ್ತೇನೆ' ಎಂದು ಮೆಮಾರಿ ಎಂಬಲ್ಲಿ ನಡೆದ ಸಮಾವೇಶದಲ್ಲಿ ಮಮತಾ ಹೇಳಿದರು.

'ಮಮತಾಗೆ ಸೋಲಿನ ಹತಾಶೆ'

ಕೋಲ್ಕತ್ತ (ಪಿಟಿಐ): ಸೋಲು ಸನ್ನಿಹಿತ ಎಂಬುದು ಅರಿವಾಗಿ, ಹತಾಶೆಯಲ್ಲಿ ಮಮತಾ ಅವರು ಕೇಂದ್ರೀಯ ಪಡೆಗಳ ವಿರುದ್ಧ ಅಬ್ಬರಿಸುತ್ತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

'ಟಿಎಂಸಿ ಸೋಲು ಖಚಿತ ಎಂಬ ಹತಾಶೆಯು ಮಮತಾ ಅವರ ನಡವಳಿಕೆ ಮತ್ತು ಭಾಷಣಗಳಲ್ಲಿ ಎದ್ದು ಕಾಣಿಸುತ್ತಿದೆ. ಕೇಂದ್ರೀಯ ಪಡೆಗಳ ವಿರುದ್ಧ ಮಮತಾ ಅವರು ಬಳಸಿದಂತಹ ಭಾಷೆಯನ್ನು ಯಾವುದೇ ಮುಖ್ಯಮಂತ್ರಿ ಅಥವಾ ಪಕ್ಷವೊಂದರ ಮುಖ್ಯಸ್ಥರು ಬಳಸಿದ್ದನ್ನು ನಾನು ನೋಡೇ ಇಲ್ಲ. ಅವರು ಅರಾಜಕತೆ ಸೃಷ್ಟಿಸಲು ಬಯಸಿದ್ದಾರೆಯೇ? ಗಲಭೆ ಸೃಷ್ಟಿಯಾಗುವುದು ಅವರಿಗೆ ಬೇಕಿದೆಯೇ? ಹಿಂದಿನಂತೆ ಮತಯಂತ್ರ ತಿರುಚಿ ಗೆಲ್ಲಲು ಅವರು ಬಯಸಿದ್ದಾರೆಯೇ' ಎಂದು ಶಾ ಪ್ರಶ್ನಿಸಿದ್ದಾರೆ.

ಕೇಂದ್ರೀಯ ಪಡೆಗಳು ಚುನಾವಣೆಯ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿ ಇರುವುದಿಲ್ಲ. ಅವು ಚುನಾವಣಾ ಆಯೋಗದ ನಿರ್ದೇಶನದಂತೆ ಕೆಲಸ ಮಾಡುತ್ತವೆ ಎಂಬುದು ಮಮತಾಗೆ ತಿಳಿದಿಲ್ಲವೇ ಎಂದು ಶಾ ಕೇಳಿದ್ದಾರೆ.

'ರಾಜಕೀಯ ಹಿತಾಸಕ್ತಿಗಳು ಜನರ ಆದ್ಯತೆಯನ್ನು ಹೇಗೆ ಬದಲಾಯಿಸುತ್ತವೆ ಎಂಬುದು ಆಶ್ಚರ್ಯಕರ. ಕೇಂದ್ರದ ಪಡೆಗಳನ್ನು ಹೆಚ್ಚು ಹೆಚ್ಚು ನಿಯೋಜಿಸಬೇಕು ಎಂದು ಹಿಂದೆಲ್ಲ ಅವರು ಕೇಳುತ್ತಿದ್ದರು. ಈಗ ಅವರು ಕೇಂದ್ರದ ಪಡೆಗಳೇ ಬೇಡ ಎನ್ನುತ್ತಿದ್ದಾರೆ. ಏಕೆಂದರೆ, ಬಿಗಿ ಭದ್ರತೆ ಇದ್ದರೆ ಅವರ ಪಕ್ಷಕ್ಕೆ ಅಕ್ರಮ ಎಸಗಲು ಆಗುವುದಿಲ್ಲ' ಎಂದು ಆರೋಪಿಸಿದ್ದಾರೆ.

ಹಿಂದಿನ ಚುನಾವಣೆಗೆ ಹೋಲಿಸಿದರೆ ಈ ಬಾರಿ ಹೆಚ್ಚು ಶಾಂತಿಯುತವಾಗಿ ಚುನಾವಣೆ ನಡೆಸುತ್ತಿರುವ ಆಯೋಗವನ್ನು ಶಾ ಅವರು ಶ್ಲಾಘಿಸಿದ್ದಾರೆ.

ನಾಲ್ಕನೇ ಹಂತದ ಮತದಾನ ಇಂದು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಗೆ ನಾಲ್ಕನೇ ಹಂತದ ಮತದಾನ ಶನಿವಾರ ನಡೆಯಲಿದೆ. ಕೇಂದ್ರ ಸಚಿವ ಬಾಬುಲ್ ಸುಪ್ರಿಯೊ, ಪಶ್ಚಿಮ ಬಂಗಾಳದ ಸಚಿವರಾದ ಪಾರ್ಥ ಚಟರ್ಜಿ ಹಾಗೂ ಅರುಣ್ ಬಿಶ್ವಾಸ್ ಭವಿಷ್ಯ ಶನಿವಾರ ನಿರ್ಧಾರವಾಗಲಿದೆ.

ರಾಜ್ಯದ ಉತ್ತರ ಭಾಗದ ಕೂಚ್‌ಬಿಹಾರ್, ಅಲಿಪುರದೌರ್ ಮತ್ತು ದಕ್ಷಿಣದ 24 ಪರಗಣ, ಹೌರಾ ಹಾಗೂ ಹೂಗ್ಲಿ ವ್ಯಾಪ್ತಿಯ 44 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಬಿಜೆಪಿಯ ಸಂಸದರಾದ ಲಾಕೆಟ್ ಚಟರ್ಜಿ ಹಾಗೂ ನಿಶಿತಾ ಪ್ರಾಮಾಣಿಕ್ ಅವರು ಕ್ರಮವಾಗಿ ಚುಚುರಾ ಹಾಗೂ ದಿನ್ಹತಾ ಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದಾರೆ.

ಮತದಾನಕ್ಕೆ ಒಳಗಾಗಲಿರುವ ಪ್ರದೇಶಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ. 15,940 ಮತಗಟ್ಟೆಗಳಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ 789 ತುಕಡಿಗಳನ್ನು ನಿಯೋಜಿಸಲಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಮೇಲೆ ಹಲ್ಲೆಯೂ ಸೇರಿದಂತೆ, ಚುನಾವಣೆಗೂ ಮುನ್ನವೇ ಹಲವು ಘರ್ಷಣೆಗಳಿಗೆ ಸಾಕ್ಷಿಯಾಗಿರುವ ಕೂಚ್ ಬಿಹಾರ್‌ನಲ್ಲಿ ಗರಿಷ್ಠ ಭದ್ರತೆ ಒದಗಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

'ಹಲ್ಲೆ': ತನಿಖೆಗೆ ನಕಾರ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗಾಯಗೊಂಡ ಮಾರ್ಚ್ 10ರ ಘಟನೆಯ ಬಗ್ಗೆ ಸಿಬಿಐನಂತಹ ಸ್ವತಂತ್ರ ಸಂಸ್ಥೆಯಿಂದ ತನಿಖೆಗೆ ನಿರ್ದೇಶನ ಕೊಡಬೇಕು ಎಂಬ ಕೋರಿಕೆಯನ್ನು ಮನ್ನಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

'ನೀವು ಕಲ್ಕತ್ತಾ ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿ' ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ ನೇತೃತ್ವದ ಪೀಠವು ಅರ್ಜಿದಾರರಿಗೆ ಹೇಳಿದೆ.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕನ್ನಡ ಚಿತ್ರರಂಗದ ನೈಜ ಸಮಸ್ಯೆಗಳೇನು?
ಸಂವಾದದಲ್ಲಿ ಪಾಲ್ಗೊಳ್ಳುವವರು

ಟಿ.ಎಸ್.ನಾಗಾಭರಣ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
ನೀವೂ ಪಾಲ್ಗೊಳ್ಳಿ
ಸೋಮವಾರ
12-04-2021
ಮಧ್ಯಾಹ್ನ 12 ರಿಂದ 1

ಬಿ.ಸುರೇಶ್
ನಟ, ನಿರ್ಮಾಪಕ ಮತ್ತು ನಿರ್ದೇಶಕ
fb.com/prajavani.net

'ಪಕ್ಷದಿಂದ ಯತ್ನಾಳ್ ಹೊರಹಾಕಲೇಬೇಕಾಗುತ್ತದೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ಹೇಳಿಕೆ ನೀಡುವುದನ್ನು ಮುಂದುವರಿಸಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಹೊರ ಹಾಕಲೇಬೇಕಾಗುತ್ತದೆ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ತಿಳಿಸಿದರು.

ಇಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಆ ವ್ಯಕ್ತಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ. ಅವರ ಬಗ್ಗೆ ಮಾತನಾಡಿದರೆ ಅವರಿಗೇ ಹೆಚ್ಚು ಪ್ರಸಿದ್ಧಿ ಸಿಗುತ್ತದೆ. ಹೆಚ್ಚು ಚರ್ಚಿಸಲು ನಾನು ಇಚ್ಛಿಸುವುದಿಲ್ಲ. ಅವರ ಬಗ್ಗೆ ನಮಗೆ ಶೇ 00.1ರಷ್ಟೂ ವಿಶ್ವಾಸವಿಲ್ಲ. ಮಾಧ್ಯಮದವರಿಗಷ್ಟೆ ಅವರ ಬಗ್ಗೆ ನಂಬಿಕೆ. ಪಕ್ಷದ ಶಿಸ್ತು ಸಮಿತಿಯು ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಆಂತರಿಕ ವಿಚಾರಗಳನ್ನು ಹೆಚ್ಚು ತಿಳಿಸುವುದಕ್ಕೆ ಆಗುವುದಿಲ್ಲ' ಎಂದರು.

'ಏ.30ರ ಒಳಗೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಗುತ್ತದೆ' ಎಂಬ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಯಾವುದೇ ಬದಲಾವಣೆ ಇಲ್ಲ. ಆ ವ್ಯಕ್ತಿಗೆ ಕನಸು ಬಿದ್ದಿರಬೇಕಷ್ಟೆ' ಎಂದು ತಿರುಗೇಟು ನೀಡಿದರು.

ಇದಕ್ಕೂ ಮುನ್ನ ವಿಮಾನನಿಲ್ದಾಣದಲ್ಲಿ ಮಾತನಾಡಿದ್ದ ಅವರು, 'ಯತ್ನಾಳ್ ಹೇಳಿಕೆಯಲ್ಲಿ ದಮ್ ಇಲ್ಲ. ಅವರ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಇನ್ನಷ್ಟು ಕ್ರಮ ಕೈಗೊಳ್ಳುವುದು' ಎಂದು ಕೇಳಿದ್ದರು.

'ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ (ಸತೀಶ ಜಾರಕಿಹೊಳಿ) ಭಾರತೀಯ ಸಂಸ್ಕೃತಿಗೆ ಅವಮಾನ ಮಾಡುವಂತಹ ಹಿಂದೂ ವಿರೋಧಿಯಾಗಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ ಇರುವವರು ಅಂತಹ ವ್ಯಕ್ತಿಯನ್ನು ಬೆಂಬಲಿಸುವುದಿಲ್ಲ. ಅವರು ಠೇವಣಿ ಕಳೆದುಕೊಳ್ಳುತ್ತಾರೆ' ಎಂದು ಹೇಳಿದರು.

ಬ್ರಿಟನ್: ಪ್ರಿನ್ಸ್ ಫಿಲಿಪ್ ನಿಧನ



ಲಂಡನ್: ಬ್ರಿಟನ್‌ನ ರಾಣಿ ಎಲಿಜಬೆತ್ 2 ಅವರ ಪತಿ ಪ್ರಿನ್ಸ್ ಫಿಲಿಪ್ (99) ಶುಕ್ರವಾರ ನಿಧನ ಹೊಂದಿದ್ದಾರೆ ಎಂದು ಬಂಕಿಂಗ್ ಹ್ಯಾಮ್ ಅರಮನೆಯ ಮೂಲಗಳು ತಿಳಿಸಿವೆ.

'ಇತ್ತೀಚಿನ ವರ್ಷಗಳಲ್ಲಿ ವಿವಿಧ ಕಾಯಿಲೆಗಳ ಕಾರಣಕ್ಕಾಗಿ ಫಿಲಿಪ್ ಹಲವು ಬಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಜನವರಿಯಲ್ಲಷ್ಟೇ ಫಿಲಿಪ್ ಅವರು ಪತ್ನಿ ಜತೆಗೂಡಿ ಕೋವಿಡ್ ನಿರೋಧಕ ಲಸಿಕೆಯ ಮೊದಲ ಡೋಸ್ ಪಡೆದಿದ್ದರು. ಫಿಲಿಪ್ ಈಚೆಗಷ್ಟೇ ಯಶಸ್ವಿ ಹೃದಯಶಸ್ತ್ರಚಿಕಿತ್ಸೆಗೊಳಗಾಗಿದ್ದರು' ಎಂದೂ ಮೂಲಗಳು ಹೇಳಿವೆ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಜರ್ಜರಿತವಾಗಿದ್ದ ಬ್ರಿಟನ್ ಚೇತರಿಸಿಕೊಳ್ಳುತ್ತಿದ್ದ ಸಮಯದಲ್ಲಿ ಪ್ರಿನ್ಸ್ ಫಿಲಿಪ್, ರಾಜಕುಮಾರಿ ಎಲಿಜಬೆತ್ ಅವರನ್ನು ವಿವಾಹವಾದರು. (1947, ನ. 20). ಆಗ ಫಿಲಿಪ್‌ಗೆ 26 ವರ್ಷ. ಎಲಿಜಬೆತ್‌ಗೆ 21 ವರ್ಷ. ಬಂಕಿಂಗ್ ಹ್ಯಾಮ್ ಅರಮನೆಯ ನಿಯಮದಂತೆ ಬಹು ವೈಭವವಾಗಿ ವಿವಾಹ ನೆರವೇರಿತ್ತು. ವಿವಾಹದಷ್ಟೇ ದೀರ್ಘಕಾಲ ರಾಜಪ್ರಭುತ್ವವೂ ಉಳಿಯಲಿದೆ ಎಂಬ ಭರವಸೆಯನ್ನು ಪ್ರಿನ್ಸ್ ಫಿಲಿಪ್ ಮತ್ತು ರಾಣಿ ಎಲಿಜಬೆತ್ ಅಂದು ನೀಡಿದ್ದರು. ರಾಣಿಯ ಪತಿಯಾಗಿ ಫಿಲಿಪ್ ವಿಶ್ವದ ವೇದಿಕೆಯಲ್ಲಿ ವಿಶೇಷ ಸ್ಥಾನವನ್ನೂ ಪಡೆದರು. ಬ್ರಿಟನ್‌ನ ರಾಜಮನೆತನದ ಹಲವು ವಿಷಯಗಳಲ್ಲಿ ಫಿಲಿಪ್ ಅವರು ರಾಣಿಯ ಪರವಾಗಿ ಸದಾ ಬೆಂಬಲಕ್ಕಿರುತ್ತಿದ್ದರು.

2017ರ ಮೇ ತನಕ ರಾಜಮನೆತನವನ್ನು ನಿಭಾಯಿಸಿದ ಫಿಲಿಪ್ ತಮ್ಮ 95ನೇ ವಯಸ್ಸಿನಲ್ಲಿ ನಿವೃತ್ತಿಯನ್ನು ಘೋಷಿಸಿದರು. ನಿವೃತ್ತಿಯಾದರೂ ಫಿಲಿಪ್ ಅವರ ಸಾರ್ವಜನಿಕ ವ್ಯಕ್ತಿತ್ವ ಮಂಕಾಗಿರಲಿಲ್ಲ. 2018ರಲ್ಲಿ ತಮ್ಮ ಮೊಮ್ಮಗ ಪ್ರಿನ್ಸ್ ಹ್ಯಾರಿ ಅವರ ಮದುವೆಯ ಸಮಯದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದ ಫಿಲಿಪ್, ರಾಣಿ ಎಲಿಬಜೆತ್ ಅವರೊಂದಿಗೆ ಕುದುರೆಯ ಸಾರೋಟಿನಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

'ರೈಲುಗಳ ಸೇವೆ ಸ್ಥಗಿತವಿಲ್ಲ'

ನವದೆಹಲಿ (ಪಿಟಿಐ): ರೈಲ್ವೆ ಸೇವೆಗಳನ್ನು ಕಡಿತಗೊಳಿಸುವ ಅಥವಾ ನಿಲ್ಲಿಸುವ ಯಾವುದೇ ಯೋಜನೆ ಇಲ್ಲ. ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಮರಳುತ್ತಿರುವಾಗ ಪ್ರಯಾಣ ದಟ್ಟಣೆ ತಗ್ಗಿಸಲು ಪ್ರಯಾಣಿಕರಿಂದ ಬೇಡಿಕೆ ಬಂದರೆ ಮತ್ತಷ್ಟು ರೈಲುಗಳ ಸೇವೆಯನ್ನು ಒದಗಿಸಲಾಗುವುದು ಎಂದು ರೈಲ್ವೆ ಮಂಡಳಿ ಶುಕ್ರವಾರ ಸ್ಪಷ್ಟಪಡಿಸಿದೆ.

ವಲಸೆ ಕಾರ್ಮಿಕರು ಸ್ವಂತ ಊರುಗಳಿಗೆ ಮರಳಲು ಸಾಕಷ್ಟು ಸಂಖ್ಯೆಯಲ್ಲಿ ರೈಲುಗಳ ಸೇವೆ ದೊರೆಯುತ್ತಿಲ್ಲ ಎನ್ನುವ ಮಾಧ್ಯಮ ವರದಿಗಳನ್ನು ರೈಲ್ವೆ ಮಂಡಳಿಯ ಅಧ್ಯಕ್ಷ ಸುನೀತ್ ಶರ್ಮಾ, ದಕ್ಷಿಣ ರೈಲ್ವೆಯ ಜನರಲ್ ಮ್ಯಾನೇಜರ್ ಜಾನ್ ಥಾಮಸ್, ಉತ್ತರ ಮತ್ತು ಕೇಂದ್ರ ರೈಲ್ವೆ ವಿಭಾಗದ ಮುಖ್ಯ ಜನಸಂಪರ್ಕ ಅಧಿಕಾರಿಗಳು (ಸಿಪಿಆರ್‌ಗಳು) ಸೇರಿ ಹಲವು ಅಧಿಕಾರಿಗಳು ಅಲ್ಲಗಳೆದಿದ್ದಾರೆ.

ರೈಲುಗಳಿಗೆ ಯಾವುದೇ ಕೊರತೆಯಿಲ್ಲ. ಪ್ರಯಾಣಕರ ಅಗತ್ಯಕ್ಕೆ ತಕ್ಕಷ್ಟು ರೈಲುಗಳ ಸೇವೆಯನ್ನು ಒದಗಿಸಲು ರೈಲ್ವೆ ಸಿದ್ಧವಾಗಿದೆ. ಈ ಬಗ್ಗೆ ತುರ್ತು ಸುತ್ತೋಲೆಯನ್ನು ಹೊರಡಿಸಲಿದ್ದೇವೆ. ಬೇಸಿಗೆಯಲ್ಲಿ ಸಾಮಾನ್ಯವಾಗಿ ಪ್ರಯಾಣಿಕರ ದಟ್ಟಣೆ ಇರುತ್ತದೆ. ಇದನ್ನು ಪರಿಹರಿಸಲು ಈಗಾಗಲೇ ಅಗತ್ಯ ಕ್ರಮ ಕೈಗೊಂಡಿದ್ದೇವೆ ಎಂದು ಶರ್ಮಾ ತಿಳಿಸಿದ್ದಾರೆ.

ರೈಲುಗಳಲ್ಲಿ ಪ್ರಯಾಣಿಸಲು ಪ್ರಯಾಣಿಕರು ಕೋವಿಡ್ 19 ನೆಗೆಟಿವ್ ವರದಿ ಹೊಂದಿರಬೇಕೆಂಬ ನಿಯಮ ಕಡ್ಡಾಯಗೊಳಿಸಿರುವುದನ್ನು ಶರ್ಮಾ ಇದೇ ಸಂದರ್ಭದಲ್ಲಿ ಅಲ್ಲಗಳೆದರು.

ಕೋವಿಡ್ 19 ಪ್ರಕರಣಗಳ ಏರಿಕೆ ಗಮನದಲ್ಲಿಟ್ಟುಕೊಂಡು ರೈಲುಗಳ ಸಂಚಾರ ನಿಲ್ಲಿಸಲು ಅಥವಾ ಮೊಟಕುಗೊಳಿಸಲು ರೈಲ್ವೆಗೆ ಮಹಾರಾಷ್ಟ್ರದಿಂದ ಇನ್ನೂ ಯಾವುದೇ ಸೂಚನೆ, ಕೋರಿಕೆ ಬಂದಿಲ್ಲ ಎಂದು ಹೇಳಿದರು.

ಭಾರತೀಯ ದಂಪತಿ ಶವ ಪತ್ತೆ

ಮುಂಬೈ: ಮಹಾರಾಷ್ಟ್ರದ ಬೀಡ್ ಜಿಲ್ಲೆ ಮೂಲದ ದಂಪತಿ ಅಮೆರಿಕದ ನ್ಯೂಜೆರ್ಸಿ ಮನೆಯಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ಶುಕ್ರವಾರ ನಡೆದಿದೆ.

ದಂಪತಿಯ ನಾಲ್ಕು ವರ್ಷದ ಮಗು ಬಾಲ್ಕನಿಯಲ್ಲಿ ನಿಂತು ಅಳುತ್ತಿರುವುದನ್ನು ನೆರೆಹೊರೆಯವರು ಗಮನಿಸಿದಾಗ ವಿಷಯ ಬೆಳಕಿಗೆ ಬಂದಿದೆ.

ದಂಪತಿಯನ್ನು ಬಾಲಾಜಿ ರುದ್ರವರ್ (32), ಹಾಗೂ ಅವರ ಪತ್ನಿ ಆರತಿ ರುದ್ರವರ್ (30) ಎಂದು ಗುರುತಿಸಲಾಗಿದೆ. ಆರತಿ ಏಳು ತಿಂಗಳ ಗರ್ಭಿಣಿಯಾಗಿದ್ದರು.

ಮನೆಯಲ್ಲಿ ದೊಡ್ಡ ಚಾಕು ಪತ್ತೆಯಾಗಿದ್ದು, ಅಮೆರಿಕ ಮಾಧ್ಯಮಗಳು ಇದೊಂದು ಕೊಲೆ–ಆತ್ಮಹತ್ಯೆ ಎಂದು ವರದಿ ಮಾಡಿವೆ. ಸದ್ಯ ನಾಲ್ಕು ವರ್ಷದ ಮಗು ದಂಪತಿಯ ಸ್ನೇಹಿತರ ಜೊತೆ ಇದ್ದಾಳೆ. ಸಾವಿಗೆ ಕಾರಣವೇನು ಎಂದು ನಿಖರವಾಗಿಲ್ಲ.

ಸಂಸದೆ ಸುಪ್ರಿಯಾ ಸುಳೆ ಅವರು ಈ ಪ್ರಕರಣದಲ್ಲಿ ನೆರವು ನೀಡುವಂತೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಮನವಿ ಮಾಡಿದ್ದಾರೆ.

ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿ

ಭಾರತಕ್ಕೆ ಅರ್ಜೆಂಟೀನಾ ಸವಾಲು

ಬ್ಯೂನಸ್ ಐರಿಸ್, ಅರ್ಜೆಂಟೀನಾ (ಪಿಟಿಐ): ಭಾರತ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಶನಿವಾರ ಒಲಿಂಪಿಕ್ಸ್ ಚಾಂಪಿಯನ್ ಅರ್ಜೆಂಟೀನಾ ತಂಡದ ಸವಾಲಿಗೆ ಸಜ್ಜಾಗಿದೆ. ಮನ್‌ಪ್ರೀತ್ ನಾಯಕತ್ವದ ಭಾರತ, ಸುಮಾರು ಒಂದು ವರ್ಷದ ಬಳಿಕ ಅಂತರರಾಷ್ಟ್ರೀಯ ಮಟ್ಟದ ಪ್ರಮುಖ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿದೆ.

ಭಾರತ ಹಾಕಿ ತಂಡದ ಆಟಗಾರರು– ಟ್ವಿಟರ್ ಚಿತ್ರ

ಭಾರತ ತಂಡದ ಆಟಗಾರರು, ಕೊರೊನಾ ವೈರಸ್ ಹಾವಳಿಯ ಹಿನ್ನೆಲೆಯಲ್ಲಿ ಕಳೆದ ವರ್ಷವನ್ನು ಬಹುತೇಕ ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ಕಳೆದಿದ್ದರು.

ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಕೊನೆಯ ಬಾರಿ ಭಾರತ, ಆಸ್ಟ್ರೇಲಿಯಾ ತಂಡದ ಎದುರು ಭುವನೇಶ್ವರದಲ್ಲಿ ಆಡಿತ್ತು. ಫೆಬ್ರುವರಿಯಲ್ಲಿ ಈ ಹಣಾಹಣಿ ನಡೆದಿತ್ತು.

ಎಫ್‌ಐಎಚ್ ಲೀಗ್‌ನ ಪಾಯಿಂಟ್ಸ್ ಪಟ್ಟಿಯಲ್ಲಿ ಭಾರತ ತಂಡವು ಸದ್ಯ 10 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನದಲ್ಲಿದೆ. ಇದುವರೆಗೆ ಆರು ಪಂದ್ಯಗಳನ್ನು ಆಡಿರುವ ತಂಡ, ತಲಾ ಎರಡರಲ್ಲಿ ಜಯ, ಸೋಲು ಹಾಗೂ ಡ್ರಾ ಸಾಧಿಸಿದೆ.

ವಿಶ್ವ ಚಾಂಪಿಯನ್ ಬೆಲ್ಜಿಯಂ ತಂಡವು 13 ಪಂದ್ಯಗಳಿಂದ 32 ಪಾಯಿಂಟ್ಸ್ ಕಲೆಹಾಕಿದ್ದು, ಅಗ್ರಸ್ಥಾನದಲ್ಲಿದೆ. ಜರ್ಮನಿ (19 ಪಾಯಿಂಟ್ಸ್), ನೆದರ್ಲೆಂಡ್ಸ್ (18) ಹಾಗೂ ಆಸ್ಟ್ರೇಲಿಯಾ (14) ಕ್ರಮವಾಗಿ ಎರಡರಿಂದ ನಾಲ್ಕನೇ ಸ್ಥಾನದಲ್ಲಿವೆ. ಆರನೇ ಸ್ಥಾನದಲ್ಲಿ ಅರ್ಜೆಂಟೀನಾ ಇದೆ.

ಟೋಕಿಯೊ ಒಲಿಂಪಿಕ್ಸ್ ಸಿದ್ಧತೆಯಲ್ಲಿರುವ ಭಾರತ ತಂಡವು, ಈ ವರ್ಷದ ಫೆಬ್ರುವರಿಯಲ್ಲಿ ಯುರೋಪ್ ಪ್ರವಾಸ ಕೈಗೊಂಡಿತ್ತು. ಈ ಅವಧಿಯಲ್ಲಿ ಜರ್ಮನಿ ಹಾಗೂ ಗ್ರೇಟ್ ಬ್ರಿಟನ್ ಎದುರು ನಡೆದ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಜಯ ಸಾಧಿಸಿತ್ತು.

ಅರ್ಜೆಂಟೀನಾ ಎದುರು ನಡೆದ ಎರಡು ಅಭ್ಯಾಸ ಪಂದ್ಯಗಳಲ್ಲಿ ಮನ್‌ಪ್ರೀತ್ ಪಡೆ ಕ್ರಮವಾಗಿ 4–3ರಿಂದ ಗೆಲುವು ಹಾಗೂ 4–4ರಿಂದ ಡ್ರಾ ಸಾಧಿಸಿತ್ತು. ಅದೇ ಆತ್ಮವಿಶ್ವಾಸದಲ್ಲಿ ಕಣಕ್ಕಿಳಿಯುತ್ತಿದೆ.

ಈ ಪಂದ್ಯಗಳಲ್ಲಿ ಮಿಂಚಿದ್ದ ಮನದೀಪ್ ಸಿಂಗ್, ನೀಲಕಂಠ ಶರ್ಮಾ ಹಾಗೂ ದಿಲ್‌ಪ್ರೀತ್ ಸಿಂಗ್ ಇಲ್ಲಿಯೂ ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಿದೆ. ಭಾನುವಾರ ಎರಡನೇ ಪಂದ್ಯ ನಡೆಯಲಿದೆ.

ಫ್ರೆಂಡ್ಸ್ ಯುನೈಟೆಡ್‌ಗೆ ಭರ್ಜರಿ ಜಯ

ಬಿಡಿಎಫ್‌ಎ ‘ಬಿ’ ಡಿವಿಷನ್ ಫುಟ್‌ಬಾಲ್ ಲೀಗ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಎ ಗುಂಪಿನ ಹಣಾಹಣಿಯಲ್ಲಿ 11–0ರಿಂದ ವೆಹಿಕಲ್ಸ್ ಎಫ್‌ಸಿ ಎದುರು ಗೆದ್ದಿತು.

ವಿಜೇತ ಫ್ರೆಂಡ್ಸ್ ಯುನೈಟೆಡ್ ಪರ ಶಿವಕರ್ (6 ಹಾಗೂ 44ನೇ ನಿಮಿಷ), ಅಜಿತ್ ಕುಮಾರ್ (22ನೇ ನಿಮಿಷ), ಧನಿಶ್ ಕುಮಾರ್ (28, 31ನೇ ನಿ.), ಕಿರಣ್ ಕುಮಾರ್ (35 + 3ನೇ ನಿ.), ಆ್ಯಂಟನಿ ಡಿಸೋಜಾ (46, 58ನೇ ನಿ.), ಕಾರ್ತಿಕ್ ಕೆ. (66ನೇ ನಿ.), ಡಾನ್ ಬಾಸ್ಕೊ (69ನೇ ನಿ.) ಹಾಗೂ ಡೆಂಜಿಲ್ (70 + 2ನೇ ನಿ.) ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಸೌತ್ ಇಂಡಿಯಾ ಎಫ್‌ಸಿ 3–0ಯಿಂದ ಮಹಮ್ಮಡನ್ ಸ್ಪೋರ್ಟಿಂಗ್ ಎದುರು ಜಯ ಸಾಧಿಸಿತು. ಸೌತ್ ಇಂಡಿಯಾ ತಂಡದ ದೇವೇಂದ್ರನ್ ರಾಜ (7ನೇ ನಿ.), ಮುತ್ತು ಕುಮಾರ್ (20ನೇ ನಿ.) ಹಾಗೂ ಯುವವೇಂದ್ರ (37ನೇ ನಿ.) ಕಾಲ್ಚಳಕ ತೋರಿದರು.

ಇನ್ನೊಂದು ಪಂದ್ಯದಲ್ಲಿ ರೆಬೆಲ್ಸ್ ಎಫ್‌ಸಿ 6–0ಯಿಂದ ಆರ್‌.ಎಸ್. ಸ್ಪೋರ್ಟ್ಸ್ ಎಫ್‌ಸಿಯನ್ನು ಮಣಿಸಿತು. ಗೆದ್ದ ತಂಡದ ಪರ ಸಂದೇಶ್ ಕಾಸರ್ (14 ಹಾಗೂ 61ನೇ ನಿ.), ಪುಲಕ್ ಬರುವಾ (35 ಹಾಗೂ 70ನೇ ನಿ.), ಇಜಾಕಿಲ್ ಅಡೆಜೊ ಡೇನಿಯಲ್ (19ನೇ ನಿ.) ಹಾಗೂ ಮೆಬಾಂತಿಕುಪರ್ ಮೈಲಿಮನ್‌ಗಪ್ (46ನೇ ನಿ.) ಗೋಲು ಹೊಡೆದರು.

ಒಲಿಂಪಿಕ್ಸ್: ಕೋವಿಡ್ ತಡೆ ನಿಯಮಗಳಿಗೆ ಆದ್ಯತೆ

ಟೋಕಿಯೊ (ಎಪಿ): ಒಲಿಂಪಿಕ್ಸ್ ಕೂಟವನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ಜಪಾನ್ ಸರ್ಕಾರವು ಕೋವಿಡ್–19ಕ್ಕೆ ಸಂಬಂಧಿಸಿದ ನಿಯಮಗಳನ್ನು ಇನಷ್ಟು ಕಟ್ಟುನಿಟ್ಟಾಗಿ ಜಾರಿ ಮಾಡುವ ಚಿಂತನೆಯಲ್ಲಿದೆ.

ಒಲಿಂಪಿಕ್ಸ್ ಕ್ರೀಡಾಕೂಟವು ಜುಲೈ 23ರಿಂದ ಆಗಸ್ಟ್ 8ರವರೆಗೆ ನಿಗದಿಯಾಗಿದೆ. ಜಪಾನ್‌ನಲ್ಲಿ ಲಸಿಕೆ ನೀಡುವ ಅಭಿಯಾನ ನಿಧಾನಗತಿಯಲ್ಲಿ ಸಾಗುತ್ತಿದೆ. ಇನ್ನೂ ಹಲವು ನಾಗರಿಕರು ಲಸಿಕೆ ಪಡೆದುಕೊಂಡಿಲ್ಲ.

ಬಾರ್‌ಗಳು ಹಾಗೂ ರೆಸ್ಟೋರೆಂಟ್‌ಗಳ ಕಾರ್ಯನಿರ್ವಹಣಾ ಅವಧಿಯನ್ನು ಕಡಿತಗೊಳಿಸುವುದು, ಕೋವಿಡ್ ನಿಯಮಗಳನ್ನು ಉಲ್ಲಂಘಿಸುವ ನಾಗರಿಕರಿಗೆ ಶಿಕ್ಷೆ ಮುಂತಾದ ಕ್ರಮಗಳನ್ನು ಕಡ್ಡಾಯಗೊಳಿಸಲು ಟೋಕಿಯೊ ರಾಜ್ಯಪಾಲರಿಗೆ ಪ್ರಧಾನ ಮಂತ್ರಿ ಯೋಶಿಹಿದೆ ಸುಗಾ ಸೂಚಿಸಿದ್ದಾರೆ. ಸೋಮವಾರದಿಂದ ಮೇ 11ರವರೆಗೆ ಈ ಕ್ರಮಗಳು ಜಾರಿಯಲ್ಲಿರಲಿವೆ.

ನಗರದಲ್ಲಿ ಮಧ್ಯರಾತ್ರಿಯ ಜೀವನಶೈಲಿ ಕಾರಣದಿಂದ ಹೆಚ್ಚು ಸೋಂಕು ಪ್ರಕರಣಗಳು ಪತ್ತೆಯಾಗಿವೆ. ಆದರೂ ವೃದ್ಧಾಶ್ರಮಗಳು, ಶಾಲೆಗಳಲ್ಲಿಯೂ ಪ್ರಕರಣಗಳು ವ್ಯಾಪಿಸಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎಐಟಿಎ ಕಿರಿಯರ ಟೆನಿಸ್ ಟೂರ್ನಿ

ತನುಷ್, ಅನ್ವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಶ್ರೇಯಾಂಕದ ತನುಷ್ ಘಿಲದ್ಯಾಳ ಹಾಗೂ ಅನ್ವಿ ಪುನಗಂಟಿ ಅವರು ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಹಾಗೂ ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಇಲ್ಲಿಯ ಟಾಪ್‌ಸ್ಪಿನ್ ಅಕಾಡೆಮಿಯಲ್ಲಿ ಶುಕ್ರವಾರ ನಡೆದ ಟೂರ್ನಿಯ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ತನುಷ್ 6-1, 7-5ರಿಂದ ಎರಡನೇ ಶ್ರೇಯಾಂಕದ ಆರಾಧ್ಯ ದ್ವಿವೇದಿ ಅವರನ್ನು ಸೋಲಿಸಿದರು. ಬಾಲಕಿಯರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಅನ್ವಿ 6-3, 6-4ರಿಂದ ಶ್ರೀ ತನ್ವಿ ಎದುರು ಗೆದ್ದರು.

ಪ್ರಶಸ್ತಿಯೊಂದಿಗೆ ಅನ್ವಿ ಪುನಗಂಟಿ ಹಾಗೂ ತನುಷ್ ಘಿಲದ್ಯಾಳ

ಹಾಕಿ: ಅ.1ರಿಂದ ಏಷ್ಯನ್ ಚಾಂಪಿಯನ್ಸ್ ಟೂರ್ನಿ

ಕ್ವಾಲಾಲಂಪುರ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯು ಈ ವರ್ಷದ ಅಕ್ಟೋಬರ್ 1ರಿಂದ 9ರವರೆಗೆ ಬಾಂಗ್ಲಾದೇಶದ ಢಾಕಾದಲ್ಲಿ ನಡೆಯಲಿದೆ. ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ಈ ಟೂರ್ನಿಯನ್ನು ಎರಡು ಬಾರಿ ಮುಂದೂಡಲಾಗಿತ್ತು. ಏಷ್ಯನ್ ಹಾಕಿ ಫೆಡರೇಷನ್ (ಎಎಚ್‌ಎಫ್) ಮಂಗಳವಾರ ಈ ವಿಷಯ ತಿಳಿಸಿದೆ.

‘ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಟೂರ್ನಿಯನ್ನು ಅಕ್ಟೋಬರ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದೆ’ ಎಂದು ಎಎಚ್‌ಎಫ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಯ್ಯಬ್ ಇಕ್ರಂ ಹೇಳಿದ್ದಾರೆ.

ಒಲಿಂಪಿಕ್ಸ್ ಅರ್ಹತಾ ಟೂರ್ನಿ: ಸೆಮಿಯಲ್ಲಿ ಸೋತ ಸುನಿಲ್

ಭಾರತದ ಕುಸ್ತಿಪಟುಗಳ ಕೈತಪ್ಪಿದ ಟೋಕಿಯೊ ಟಿಕೆಟ್

ಆಲ್ಮಾಟಿ, ಕಜಕಸ್ತಾನ (ಪಿಟಿಐ): ಗ್ರೀಕೊ ರೋಮನ್ ವಿಭಾಗದಲ್ಲಿ ಭಾರತದ ಪ್ರಮುಖ ಕುಸ್ತಿಪಟುವಾಗಿರುವ ಸುನಿಲ್ ಕುಮಾರ್ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾಗಿದ್ದಾರೆ. ಇಲ್ಲಿ ನಡೆಯುತ್ತಿರುವ ಏಷ್ಯನ್ ಅರ್ಹತಾ ಬೌಟ್‌ನ ಸೆಮಿಫೈನಲ್‌ನಲ್ಲಿ ಸುನಿಲ್ ಸೇರಿದಂತೆ ನಾಲ್ವರು ಸೋಲು ಅನುಭವಿಸಿದರು.

ಈ ಟೂರ್ನಿಯಲ್ಲಿ ಫೈನಲ್ ತಲುಪಿದವರಿಗೆ ಮಾತ್ರ ಟೋಕಿಯೊ ಟಿಕೆಟ್ ಗಳಿಸುವ ಅವಕಾಶವಿತ್ತು. 87 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ, ಏಷ್ಯನ್ ಚಾಂಪಿಯನ್ ಸುನಿಲ್, ಮೊದಲ ಬೌಟ್‌ನಲ್ಲಿ 7–0ಯಿಂದ ಕಿರ್ಗಿಸ್ತಾನದ ಸುಖ್ರೊಬ್ ಅಬ್ದುಲ್‌ಖಯೆವ್ ಅವರನ್ನು ಮಣಿಸಿದ್ದರು. ಆದರೆ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಕಠಿಣ ಸವಾಲು ಎದುರಿಸಿದ ಅವರು 5–9ರಿಂದ ಆತಿಥೇಯ ದೇಶದ ನೂರ್‌ಸುಲ್ತಾನ್ ತುರ್ಸಿನೊವ್ ಎದುರು ಮುಗ್ಗರಿಸಿದರು.



ಸುನಿಲ್ ಕುಮಾರ್– ಪಿಟಿಐ ಸಂಗ್ರಹ ಚಿತ್ರ

ಗ್ಯಾನೇಂದರ್ (60 ಕೆಜಿ), ಆಶು (67 ಕೆಜಿ), ಗುರುಪ್ರೀತ್ (77 ಕೆಜಿ) ಹಾಗೂ ನವೀನ್ (130 ಕೆಜಿ) ಕೂಡ ನಾಲ್ಕರ ಘಟ್ಟದ ಹಣಾಹಣಿಗಳಲ್ಲಿ ಪರಾಭವಗೊಂಡರು. ಆದರೆ ಕಂಚಿನ ಪದಕಕ್ಕಾಗಿ ಸೆಣಸಾಟ ನಡೆಸಲಿದ್ದಾರೆ.

97 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ರವಿ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸೋತರು. ಆದರೂ ಕಂಚಿನ ಪದಕಕ್ಕಾಗಿ ನಡೆಯುವ ಪ್ಲೇಆಫ್‌ನಲ್ಲಿ ಕೊರಿಯಾದ ಸೆಯೋಲ್ ಲೀ ಎದುರು ಸ್ಪರ್ಧಿಸಲು ಅವರಿಗೆ ಅವಕಾಶ ಸಿಕ್ಕಿದೆ.

ಮಹಿಳೆಯರ ಸ್ಪರ್ಧೆಗಳು ಶನಿವಾರದಿಂದ ನಡೆಯಲಿದ್ದು, ಭಾನುವಾರ ಪುರುಷರ ಫ್ರೀಸ್ಟೈಲ್ ಬೌಟ್‌ಗಳು ಆರಂಭವಾಗಲಿವೆ.

ಗ್ರೀಕೊ ರೋಮನ್ ವಿಭಾಗದಲ್ಲಿ ಭಾರತದ ಯಾವುದೇ ಕುಸ್ತಿಪಟುಗಳು ಈ ಬಾರಿಯ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿಲ್ಲ. ಆದರೆ ಫ್ರೀಸ್ಟೈಲ್ ವಿಭಾಗದಲ್ಲಿ ಬಜರಂಗ್ ಪೂನಿಯಾ (65 ಕೆಜಿ), ರವಿ ದಹಿಯಾ (57 ಕೆಜಿ) ಹಾಗೂ ದೀಪಕ್ ಪೂನಿಯಾ (86 ಕೆಜಿ) ವಿಶ್ವ ಚಾಂಪಿಯನ್‌ಷಿಪ್ ಮೂಲಕ ಟೋಕಿಯೊ ಕೂಟಕ್ಕೆ ಟಿಕೆಟ್ ಗಿಟ್ಟಿಸಿದ್ದಾರೆ.

ವಿನೇಶಾ ಪೋಗಟ್ (53 ಕೆಜಿ) ಟೋಕಿಯೋ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ, ಭಾರತದ ಏಕೈಕ ಮಹಿಳಾ ಕುಸ್ತಿಪಟು ಆಗಿದ್ದಾರೆ.


ಅಂದ
ಹೆಚ್ಚಿಸುವ
ಹರಳಿನ
ಒಡವೆ
II

ಈ ಕೊಡುಗೆ 10 ರಿಂದ 13 ಎಪ್ರಿಲ್ 21 ರವರೆಗೆ ಮಾತ್ರ
more QUALITY 1st
MEGASTORE
ಯುಗಾದಿ
more ನೊಂದಿಗೆ
ಯುಗಾದಿ
ವಿಶೇಷ ಕೊಡುಗೆಗಳು
₹24/kg ಬಾಳೆಹಣ್ಣು ರೊಬಸ್ಟ
ಬಾಳೆ ಎಲೆ/ ಮಾವಿನಸೊಪ್ಪು/ ಬೇವಿನ ಎಲೆ ಪ್ರತಿ ಕಟ್ಟಿಗೆ ₹12
ತೊಗರಿಬೇಳೆ 1 ಕೆ.ಜಿ ₹102
ಬಿಳಿ ಉದ್ದಿನ ಕಾಳು 1 ಕೆ.ಜಿ ₹112
ಮಾಜಾ 1.5 ಲೀ/ ಮಿನಿಟ್ ಮೈಂಡ್ ಪಲ್ಪಿ ಆರೆಂಜ್ 1 ಲೀ SAVE ₹20 MRP ₹80 / ₹75
₹26/piece ತೆಂಗಿನ ಕಾಯಿ ಕನಿಷ್ಠ 3 ಮತ್ತು ಅದಕ್ಕಿಂತ ಮೇಲ್ಪಟ್ಟ ಖರೀದಿಗೆ
ಪರ್ತ್ ಬೆಲ್ಲ 950 ಗ್ರಾಂ ₹64 MRP ₹80
ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಎಣ್ಣೆ 1 ಲೀ ₹159 MRP ₹170
ಬಾದಾಮಿ 500 ಗ್ರಾಂ + ಗೋಡಂಬಿ 500 ಗ್ರಾಂ + ಒಣದ್ರಾಕ್ಷಿ 500 ಗ್ರಾಂ ₹849 MRP ₹1310
ಪೂಜೆಯ ಹೂವು 1 ಕೆ.ಜಿ ₹99 onwards
ಶಿಎಸ್ ಸೋನ ಮಸೂರಿ ರಾ ರೈಸ್ 25 ಕೆ.ಜಿ ₹1089 MRP ₹1700
ಜೆರ್ಸಿ ಹಸುವಿನ ತುಪ್ಪ 500 ಗ್ರಾಂ ₹225 MRP ₹440
ರಿಯಲ್ ಜ್ಯೂಸ್ 1 ಲೀ BUY 2 GET 1 FREE# MRP ₹105 onwards
ಸ್ಪ್ರೈಟ್ / ಕೋಕ ಕೋಲ/ ಥಮ್ಸ್‌ಅಪ್/ಫಾಂಟಾ 1.75 ಲೀ SAVE ₹21 MRP ₹85
ಮಗ್ ₹19 MRP ₹49
ಸ್ಟೀಲ್ ಬಾಟಲ್ ₹119 MRP ₹189
ರಾಕ್ಸ್ ವಾಟರ್ ಗ್ಲಾಸಸ್ ಸೆಟ್ ಆಫ್ 6 ₹99 MRP ₹199
ವಾಟರ್ ಬಾಟಲ್ ಸೆಟ್ ಆಫ್ 6 ₹99 MRP ₹270
ಮಿನಿ ಹ್ಯಾಂಡಿ ಚಾಪರ್ ₹199 MRP ₹545
ಪೇಪರ್ ಟಿಶ್ಯೂಸ್ 30 X 30 100 ಸರ್ವಲೆಟ್ಸ್ 50% OFF MRP ₹54
ಬಾತ್ ಟವೆಲ್ ₹149 MRP ₹299
ಡಬ್ಬಲ್ ಬೆಡ್‌ಶೀಟ್ ಪಿಲ್ಲೋ ಕವರ್ ಜೊತೆಗೆ ₹449 MRP ₹899
ಡಿ ಶೇಪ್ ಡೋರ್ ಮ್ಯಾಟ್ ₹199 MRP ₹399
ಸಿಸ್ಕ ಡ್ರೈ ಐರನ್ ₹399 MRP ₹799
ಅಂಬ್ರೇನ್ ಚಾರ್ಜಿಂಗ್ ಕೇಬಲ್ ₹69 MRP ₹499
₹99 onwards ವುಮೆನ್ಸ್ ಕುರ್ತಾ
₹199 onwards ವುಮೆನ್ಸ್ ಲೆಗ್ಗಿಂಗ್ಸ್
₹199 onwards ವುಮೆನ್ಸ್ ಫ್ಯಾಷನ್ ಕುರ್ತಾ
₹249 onwards ವುಮೆನ್ಸ್ ಫ್ಯಾಷನ್ ಸ್ಯಾಂಡಲ್ಸ್
₹229 onwards ಮೆನ್ಸ್ ಕ್ಯಾಶುವಲ್ ಶರ್ಟ್
₹499 onwards ಮೆನ್ಸ್ ಫ್ಯಾಷನ್ ಡೆನಿಮ್
₹99 onwards ಬಾಯ್ಸ್ ಟಿ ಶರ್ಟ್
₹199 onwards ಬಾಯ್ಸ್ ಡೆನಿಮ್
₹99 ಗರ್ಲ್ಸ್ ಟೀ
₹199 onwards ಗರ್ಲ್ಸ್ ಡೆನಿಮ್
*Conditions Apply. MRP is inclusive of all taxes. Offer valid till stocks last; More Megastore reserves the right to withdraw any of these offers or change prices at any given point in time; Pictures are indicative and may not be of the exact product. More Megastore reserves the right to limit quantities sold on selected items. Fruit & vegetables, Fish & meat and eggs, loose staples & oil prices valid till 11th Apr'21 only
ಹೋಂ ಡೆಲಿವರಿ ಆರ್ಡರ್‌ಗಾಗಿ ಕರೆ ಮಾಡಿ / ವಾಟ್ಸಾಪ್ ಮಾಡಿ
•ಬುಲ್ ಟೆಂಪಲ್ ರಸ್ತೆ-9743049269 • ಸಹಕಾರ ನಗರ-8147131631 • ಹೊಸೂರು ರಸ್ತೆ-8970554821 • ಕೆಂಪ್‌ಫೋರ್ಟ್ ಮಾಲ್-8495003256 •ನಾಗವಾರಪಾಳ್ಯ-9739511207
•ವೈಷ್ಣವಿ ಸಫೈರ್ ಮಾಲ್-9620181048 • ಮಹದೇವಪುರ -9071733330 • ಮಾರತ್ತಹಳ್ಳಿ-70905 52365 • ಸರ್ಜಾಪುರ-9886206690 • ಜೆ.ಪಿ.ನಗರ -8197610565

ಕೋವಿಡ್

ಉತ್ತಮ ದಿರಿಸು ತೊಡಿ, ಮನೆಯಲ್ಲೇ ಸಂತೋಷವಾಗಿರಿ...

> “ವಿದೇಶಗಳಲ್ಲಿ ಕೆಲವರು ಲಸಿಕೆ ಪಡೆಯುವ ಸಂದರ್ಭವನ್ನು ಸದಾ ನೆನಪಿನಲ್ಲಿರಿಸಿಕೊಳ್ಳಲು ವಿಭಿನ್ನ ಉಡುಪಿನೊಂದಿಗೆ ತೆರಳಿ ಲಸಿಕೆ ಪಡೆದುಕೊಂಡಿದ್ದಾರೆ. ಲಸಿಕೆ ಪಡೆಯುವುದು ಎಂದರೆ ಈ ಸಂದರ್ಭದಲ್ಲಿ ಸಂಭ್ರಮಿಸಬೇಕಾದ ವಿಷಯವೇ ಸರಿ. ಆದರೆ, ಅದಕ್ಕಾಗಿ ದೊಡ್ಡ ಪಾರ್ಟಿಗಳನ್ನು ಆಯೋಜಿಸುವಂತಿಲ್ಲ. ಆದ್ದರಿಂದ ಕೆಲವರು ವಿಭಿನ್ನವಾಗಿ ಉಡುಗೆ ತೊಟ್ಟು, ಲಸಿಕೆ ಪಡೆದು ಸಂಭ್ರಮಿಸಿದ್ದಾರೆ”

ಡಾ. ಶರಣ್ಯ ರವಿ
ಮನೋವೈದ್ಯೆ

ಸುಕೃತ ಎಸ್.

ಕೋವಿಡ್‌ನ ಸಕ್ರಿಯ ಪ್ರಕರಣಗಳ ಸಂಖ್ಯೆ ದಿನೇ ದಿನೇ ಜಾಸ್ತಿ ಆಗುತ್ತಿದೆ. ಸರ್ಕಾರ ಈಗ ಮತ್ತೆ ಹಲವು ನಿರ್ಬಂಧಗಳನ್ನು ಪ್ರಕಟಿಸಿದೆ. ಕಳೆದ ವರ್ಷ ಈ ದಿನಗಳ ನೆನಪು ಇನ್ನೂ ಮರೆತಿಲ್ಲ; ಆಗಲೇ ಮತ್ತೆ ನಿರ್ಬಂಧಗಳು ನಮ್ಮನ್ನು ಬಂಧಿಸಲು ಶುರುಇಟ್ಟಿವೆ. ಮನೆಯಲ್ಲಿಯೇ ಸುರಕ್ಷಿತವಾಗಿ ಇರುವುದೇ ಲೇಸು ಎನ್ನುವ ಹಂತವನ್ನು ಮತ್ತೆ ತಲುಪಿದ್ದೇವೆ. ಹಾಗಾದರೆ, ಮತ್ತದೇ ಬೇಸರ, ಸ್ನೇಹಿತರ ಸಂಗ ಇಲ್ಲ, ಹೊರಗೆ ಹೋಗುವುದಿಲ್ಲ, ಮನರಂಜನೆ ಇಲ್ಲ- ಈ ಎಲ್ಲ ಇಲ್ಲದಿರುವ ಮಧ್ಯೆ ಉತ್ಸಾಹದ ದಿನಗಳನ್ನು ಕಳೆಯುವುದಾದರೂ ಹೇಗೆ? ಒಂದು ಉಪಾಯ ಇದೆ, ಅದು ಚೆನ್ನಾಗಿ ಡ್ರೆಸ್ ಮಾಡಿಕೊಳ್ಳುವುದು!

ಹೌದು, ಚೆನ್ನಾಗಿ ದಿರಿಸು ತೊಟ್ಟು, ಮೇಕಪ್ ಮಾಡಿಕೊಂಡು ರೆಡಿ ಆಗಿ, ಫೋಟೊ ತೆಗೆಸಿಕೊಂಡು ನಮ್ಮವರೊಂದಿಗೆ ಹಂಚಿಕೊಳ್ಳುವುದು ಅಥವಾ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವ ಮುಖಾಂತರ ಮನೆಯಲ್ಲಿಯೇ ಉಳಿದುಕೊಳ್ಳುವ ಒತ್ತಡವನ್ನು ಕಮ್ಮಿ ಮಾಡಿಕೊಂಡು ಆರಾಮಾಗಿರಬಹುದು ಎಂದು ಕೆಲವು ಮನಶಾಸ್ತ್ರಜ್ಞರು ಹೇಳುತ್ತಾರೆ.

> ಕೋವಿಡ್‌ನ ಎರಡನೆಯ ಅಲೆಯಿಂದಾಗಿ ಹೊರಗಡೆ ಸುತ್ತಾಡುವುದು ಅಸಾಧ್ಯ. ಹಾಗಂತ ಮನೆಯಲ್ಲಿಯೇ ಖಿನ್ನರಾಗಿ ಕೂರುವುದೂ ಸರಿಯಲ್ಲ. ಒಳ್ಳೆಯ ಉಡುಪು ತೊಟ್ಟು, ಫೋಟೊವನ್ನು ಸ್ನೇಹಿತರ ಜೊತೆ ಹಂಚಿಕೊಂಡರೆ ಮನದಲ್ಲಿರುವ ದುಗುಡ ಕಡಿಮೆಯಾಗುತ್ತದೆ.

ಸಿನಿಮಾದಲ್ಲಿ ತಯಾರಾದ ಹಾಗೆ ತಯಾರಾಗಬೇಕು ಎಂದಲ್ಲ, ಫ್ಯಾನ್ಸಿ ಆಗಿ ಕೂಡ ತಯಾರಾಗಬಹುದು. ಒಟ್ಟು ನಿಮ್ಮ ಮನಸ್ಸಿಗೆ ಮುದ ನೀಡುವ ಯಾವುದೇ ದಿರಿಸು ಆದರೂ ಸರಿ. ಹೀಗೆ ಮಾಡುವುದರಿಂದ ನಮ್ಮೊಳಗೆ ಸಕಾರಾತ್ಮಕ ಭಾವನೆ ಹುಟ್ಟಿಕೊಳ್ಳುತ್ತದೆ; ತಜ್ಞರು. ಹೀಗೆ ಮಾಡುವುದರಿಂದ ನೂರಕ್ಕೆ ನೂರು ಪ್ರತಿಶತ ನಮ್ಮ ಮೆದುಳಿಗೆ ಒಳ್ಳೆಯದೇ ಆಗುತ್ತದೆ ಎನ್ನುತ್ತಾರೆ ತಜ್ಞರು.

ನಿಮಗೆಲ್ಲಾ ನೆನಪಿರಬಹುದು. ಸಣ್ಣವರಿದ್ದಾಗ ತಂದೆ ಅಥವಾ ಅಣ್ಣನಿಗೆ ಜುಟ್ಟು ಹಾಕಿ, ಲಿಪ್‌ಸ್ಟಿಕ್ ಹಾಕಿ ನಾವು ಸ್ಕೂಲಿಗೆ ಹೋಗುವಾಗ ಹೇಗೆ ತಯಾರಾಗುತ್ತಿದ್ದೆವೊ ಹಾಗೆ ತಯಾರು ಮಾಡುತ್ತಿದ್ದೆವು. ಇದು ನಮಗೆ ಒಂದು ಬಗೆಯ ಆಟ. ಆದರೆ, ಅದು ನೀಡುತ್ತಿದ್ದ ಮುದ ಅದಕ್ಕೇ ಸಾಟಿ. ಇಲ್ಲವಾದರೆ ಯಾವುದಾರೂ ಸಿನಿಮಾದಲ್ಲಿ ನಟಿಯೋ ನಟನೋ ಡ್ರೆಸ್ ಮಾಡಿಕೊಂಡ ಹಾಗೆ ನಾವೂ ಮಾಡಿಕೊಂಡು ಖುಷಿ ಪಟ್ಟಿದ್ದಿದೆ. ಇವೆಲ್ಲವೂ ನಮ್ಮ ಸಂತಸದ ಕ್ಷಣಗಳೇ ಆಗಿದ್ದವು.

ನಮ್ಮ ಉಡುಗೆಗೆ ತಕ್ಕ ನಡಿಗೆ, ಅದಕ್ಕೆ ತಕ್ಕ ಭಾವ ಹೀಗೆ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತದೆ. ಕೋವಿಡ್ ಕಾರಣದಿಂದಾಗಿ ಜೀವನದ ಇಂಥ ಕ್ಷಣಗಳನ್ನು ಮರುಸೃಷ್ಟಿ ಮಾಡಿಕೊಳ್ಳುವ ಅವಕಾಶ ಸಿಕ್ಕಿದೆ. ಜೀವನದ ಇಂಥ ಕ್ಷಣಗಳು ನಮ್ಮನ್ನು ಹೆಚ್ಚು ಉತ್ಸಾಹಭರಿತರನ್ನಾಗಿ ಮಾಡುತ್ತವೆ ಎನ್ನುತ್ತಾರೆ ತಜ್ಞರು. ಮನೆಯಲ್ಲೇ ಇರುವುದರಿಂದ ಕಾಡುವ ಒಂಟಿತನ, ಕೆಲವೊಮ್ಮೆ ಖಿನ್ನತೆಗಳಿಂದ ದೂರ ಉಳಿಯುವಂತೆ ಬದುಕಿನ ಇಂಥ ಕ್ಷಣಗಳು ಸಹಾಯ ಮಾಡುತ್ತವೆ.

ರೋಗದಿಂದ ಭಯ, ಮನೆಯಲ್ಲೇ ಇರಬೇಕಾದ ಒತ್ತಡ, ಅದರಿಂದ ಬರುವ ಒಂಟಿತನ, ನಂತರ ಬರುವ ಖಿನ್ನತೆ ಇವೆಲ್ಲವನ್ನು ನಾವು ಖುದ್ದು ಸರಿಪಡಿಸಿಕೊಳ್ಳಬಹುದು. ಸ್ನೇಹಿತರ ಸಂಗ, ಹೊರಗೆ ಸುತ್ತಾಡುವುದರಿಂದ ಮಾತ್ರವೇ ಇದರಿಂದ ಹೊರಬರುತ್ತೇವೆ ಎನ್ನುವುದು ಸುಳ್ಳು ಮತ್ತು ಇಂಥ ಸಂದರ್ಭದಲ್ಲಿ ಅದು ಅಸಾಧ್ಯ ಕೂಡ. ಹಾಗಾಗಿ, ಮನೆಯಲ್ಲಿಯೇ ಇದ್ದುಕೊಂಡು, ನಮ್ಮ ಜೀವನಶೈಲಿಯನ್ನು ಸ್ವಲ್ಪ ಬದಲಾಯಿಸಿಕೊಂಡರೆ ಉತ್ಸಾಹದಿಂದ, ಸಂತೋಷದಿಂದ ಇರಬಹುದಾಗಿದೆ. ಮನೆಯಿಂದ ಹೊರಗೆ ನಾವು ಸಂತೋಷವನ್ನು ಹುಡುಕಬೇಕಾಗಿಲ್ಲ.

ಫ್ಯಾಷನ್

ಶುಭ ಸಮಾರಂಭಕ್ಕೆ ಒಪ್ಪುವ ಬನಾರಸಿ ಸೀರೆ

ಎಸ್ಸೆಚ್

ಅದು ಗಿಳಿ ಹಸಿರು ಬಣ್ಣದ, ಕಡುಗೆಂಪು ಅಂಚಿನ ಜರಿ ಸೀರೆ. ಒಡಲ ತುಂಬ ಜರಿಯ ಬುಟ್ಟಾ; ಸೆರಗು ಮತ್ತು ಅಂಗೈ ಅಗಲದ ಅಂಚಿನಲ್ಲಿ ಜರಿಯಿಂದ ಹೆಣೆದ ಮೀನಾಕರಿ ವಿನ್ಯಾಸ. ನ್ಯಾಫ್ತಾ ಗುಳಿಗೆಗಳ ಪರಿಮಳ ಸೂಸುವ ಮಡಿಚಿಟ್ಟ ಸೀರೆ ಎತ್ತಿ ನೋಡಿದರೆ ಕೊಂಚ ಭಾರವೇ. ಎಂಥವರಿಗಾದರೂ ಒಮ್ಮೆ ಉಟ್ಟುಕೊಂಡು ಕನ್ನಡಿಯಲ್ಲಿ ನೋಡಿಕೊಳ್ಳುವಾಸೆ ಸಹಜ ಕೂಡ.

ಈ ಸೀರೆಯ ವಯಸ್ಸು ಎಷ್ಟು ಗೊತ್ತೇ? ಬರೋಬ್ಬರಿ 70 ವರ್ಷ! 14ನೆಯ ವಯಸ್ಸಿನಲ್ಲಿ ಅಮ್ಮನ ಮದುವೆಯಾದಾಗ ಸೊಸೆಗೆಂದು ಅಜ್ಜ ಕೊಟ್ಟ ನಿಸ್ತಾಂಬರ (ಈಗಿನವರ ರಿಸೆಪ್ಶನ್ ಸೀರೆ) ಸೀರೆ. ಇಷ್ಟೊಂದು ವಯಸ್ಸಾದರೂ ಮಿಂಚುವ ಈ ಸೀರೆ ಅಪ್ಪಟ ಬನಾರಸಿ ರೇಷ್ಮೆ ಸೀರೆ.

‘ಕೈಮಗ್ಗ ಸೀರೆಗಳ ರಾಣಿ’ ಎಂದೇ ಕರೆಯಲಾಗುವ ಬನಾರಸಿ ಸೀರೆ ಎಂದಿನಿಂದಲೂ ಮದುವೆ ಹೆಣ್ಣಿನ ನೆಚ್ಚಿನ ಸೀರೆ. ಹಿಂದೆಲ್ಲ ಮಲೆನಾಡಿನ ಕೆಲವು ಭಾಗದಲ್ಲಿ ತಮಿಳುನಾಡಿನ ಕಾಂಚೀಪುರಂ ಊರಿಗೆ ಹೋದರೆ ಮಾತ್ರ ಕಾಂಜೀವರಂ ಸೀರೆ ತಂದುಕೊಳ್ಳುವ ರೂಢಿಯಿತ್ತು. ಅದು ಬಿಟ್ಟರೆ ಬಹಳ ವರ್ಷಗಳ ಕಾಲ ಬಾಳಿಕೆ ಬರುತ್ತದೆಂದು ಮದುವೆಯಲ್ಲಿ ವಧುವಿಗೆ ಕೊಡುವುದು ಬನಾರಸಿ ಸೀರೆಯೇ ಆಗಿತ್ತು.

ಗುಣಮಟ್ಟದ ರೇಷ್ಮೆ, ಮನಮೋಹಕ ವಿನ್ಯಾಸ, ಅಪ್ಪಟ ಚಿನ್ನ, ಬೆಳ್ಳಿ ಅಂಶವಿರುವ ಜರಿಯಿಂದ ಮಾಡಿದ ಮೀನಾಕರಿ ಕುಸುರಿ ಕೆಲಸದಿಂದ ಮಿಂಚುವ ಈ ಸೀರೆ ರಾಯಲ್ ಲುಕ್ ನೀಡುತ್ತದೆ. ಬಹಳ ಹಿಂದಿನಿಂದಲೂ ಅಂದರೆ ಮೊಗಲರ ಕಾಲದಿಂದಲೂ ಉತ್ತರ ಪ್ರದೇಶದ ವಾರಾಣಸಿ (ಬನಾರಸ್) ಯಲ್ಲಿ ಕೈಮಗ್ಗದಲ್ಲಿ ತಯಾರಾಗುತ್ತಿದ್ದ ಸೀರೆಗಳಿಗೆ ಆಧುನಿಕ ಸ್ಪರ್ಶ ನೀಡಲಾಗಿದ್ದರೂ ಅದೇ ಹೊಳಪು, ವಿನ್ಯಾಸ, ಮೃದುತ್ವ ಉಳಿಸಿಕೊಳ್ಳಲಾಗಿದೆ. ಅಪ್ಪಟ ರೇಷ್ಮೆ (ಕತಾನ್), ಆರ್ಗಂಜಾ (ಕೋರಾ), ಜಾರ್ಜೆಟ್, ಶತ್ತಿರ್ ಮೊದಲಾದ ನೂಲಿನಲ್ಲಿ ಹೆಣೆದು ವೈವಿಧ್ಯತೆ ಮೆರೆಯಲಾಗುತ್ತಿದೆ. ಹಾಗೆಯೇ ನೇಯ್ಗೆ ಮತ್ತು ವಿನ್ಯಾಸದ ಮೇಲೆ ಜಾಂಗ್ಲಾ, ತಾಂಚೋಯ್, ಕಟ್‌ವರ್ಕ್, ಬುಟ್ಟಾ ಎಂದು ವಿಂಗಡಿಸಲಾಗಿದೆ.

ಮಾರುಕಟ್ಟೆಯಲ್ಲಿ ವೈವಿಧ್ಯಮಯ ಬನಾರಸಿ ಸೀರೆಗಳ ಸಂಗ್ರಹವೇ ಲಭ್ಯ. ಆದರೆ ಆಯ್ಕೆ ಮಾಡುವಾಗ ಹುಷಾರಾಗಿರಬೇಕು. ಶುದ್ಧ ಬನಾರಸಿ ಸೀರೆ 5600 ನೂಲುಗಳನ್ನು ಹೊಂದಿದ್ದು, ಒಂದೊಂದು ನೂಲೂ ಅಗಲವಾಗಿರುತ್ತದೆ. ಒತ್ತೊತ್ತಾಗಿ ಜರಿಯ ನೇಯ್ಗೆ ಇದ್ದಷ್ಟೂ ಅದರ ಬೆಲೆಯೂ ಹೆಚ್ಚು. ಬನಾರಸಿ ಸೀರೆಯ ಜರಿ ಕೆಲವೊಮ್ಮೆ ಕಪ್ಪಾದರೂ ಪಾಲಿಶ್ ಮಾಡಿಸಿದರೆ ಹೊಳಪನ್ನು ಉಳಿಸಿಕೊಳ್ಳಬಹುದು.

ಎಲ್ಲಾ ರೀತಿಯ ದೇಹ ಹೊಂದಿದ ಹೆಣ್ಣುಮಕ್ಕಳಿಗೂ ಬನಾರಸಿ ಸೀರೆ ಚೆನ್ನಾಗಿಯೇ ಕಾಣುತ್ತದೆ. ಆದರೂ ಫ್ಯಾಷನ್ ಬಗ್ಗೆ ಜಾಸ್ತಿ ಒಲವು ಇರುವವರು ಆಯ್ಕೆ ಮಾಡುವಾಗ ಕೆಲವೊಂದು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬಹುದು. ಸಪೂರ ಹಾಗೂ ಎತ್ತರವಿರುವವರು ಗಾಢ ರಂಗಿನ, ಅಗಲವಾದ ವಿನ್ಯಾಸವಿರುವ, ಅಗಲ ಅಂಚಿನ ಸೀರೆ ಉಡಬಹುದು. ದಪ್ಪ ಹಾಗೂ ಎತ್ತರ ಕಮ್ಮಿ ಇರುವವರು ತಿಳಿ ವರ್ಣದ, ಸಣ್ಣ ಅಂಚಿನ, ಸಣ್ಣ ವಿನ್ಯಾಸದ ಸೀರೆ ಉಟ್ಟರೆ ಲಾವಣ್ಯಮಯವಾಗಿ ಕಾಣುತ್ತಾರೆ.

ಮಾಸಲು ಬಣ್ಣದವರು ಗುಲಾಬಿ, ಚಿನ್ನದ ಬಣ್ಣ, ಹಳದಿ, ನೀಲಿ ಅಥವಾ ಪೀಚ್ ರಂಗಿನ ಬನಾರಸಿ ಸೀರೆ ಖರೀದಿಸಿ. ಗೋಧಿ ಬಣ್ಣದ ತ್ವಚೆಗೆ ಕೆಂಪು, ಮೆಂತ್ಯ, ಬಾಟಲ್ ಹಸಿರು, ರಾಯಲ್‌ನೀಲಿ, ಕಪ್ಪು ರಂಗಿನ ಸೀರೆ ಹೊಂದಿಕೆಯಾಗುತ್ತದೆ. ಕಂದು ಚರ್ಮಕ್ಕೆ ಇಟ್ಟಿಗೆ ಕೆಂಪು, ಚಿನ್ನ, ಬೆಳ್ಳಿ ಅಥವಾ ಕಂಚಿನ ರಂಗಿನ ಸೀರೆ ಓಕೆ.

ಸೌಂದರ್ಯ

ಅಂದ ಹೆಚ್ಚಿಸುವ ಹರಳಿನ ಒಡವೆ

ಚಿತ್ರಕೃಪೆ: ಗಜರಾಜ್ ಜ್ಯುವೆಲರ್ಸ್, ಬೆಂಗಳೂರು

ಆಭರಣಗಳೆಂದರೆ ಯಾರಿಗೆ ಇಷ್ಟವಿಲ್ಲ ಹೇಳಿ! ಅಮೂಲ್ಯ ಲೋಹಗಳಾದ ಚಿನ್ನ, ಪ್ಲಾಟಿನಂ ಅಥವಾ ಬೆಳ್ಳಿ ಒಡವೆಗಳೇ ಆಗಬೇಕಾಗಿಲ್ಲ, 1 ಗ್ರಾಂ ಚಿನ್ನದ ಆಭರಣ, ಕೃತಕ ಆಭರಣ, ಸ್ಟೇಟ್‌ಮೆಂಟ್ ಆಭರಣ ಅಥವಾ ಜಂಕ್ ಒಡವೆಗಳಾದರೂ ಸರಿ, ಧರಿಸಿದ ಉಡುಪಿಗೆ ಹೊಂದಿಕೊಂಡರೆ ನೋಡುಗರ ನೋಟವೇ ಬೇರೆ. ಅದು ಸಾಂಪ್ರದಾಯಿಕ ಅಥವಾ ಫಾರ್ಮಲ್ ಉಡುಪಾದರೂ ಇರಲಿ, ಒಂದಿಷ್ಟು ಸ್ಟೈಲ್ ಸೇರಿಸುತ್ತದೆ.

ಈ ಆಭರಣಗಳಲ್ಲಿ ಹರಳುಗಳನ್ನು ಸೇರಿಸುವುದು ಇತ್ತೀಚಿನ ಟ್ರೆಂಡ್. ಒಂದೇ ಒಂದು ಒಡವೆ ಧರಿಸಿದರೂ ಸಾಕು, ಅದರಲ್ಲಿರುವ ಹರಳುಗಳು ಹೊಳಪನ್ನು ನೀಡುವುದಲ್ಲದೇ ಆಭರಣದ ಗುಣಮಟ್ಟವನ್ನೇ ಬದಲಾಯಿಸಿಬಿಡುತ್ತವೆ. ವಜ್ರ, ಪಚ್ಚೆ, ನೀಲ, ಮಾಣಿಕ್ಯದಂತಹ ಅಮೂಲ್ಯ ಹರಳುಗಳಿರಲಿ ಅಥವಾ ಅಮೆಥಿಸ್ಟ್, ಗೋಮೇಧಿಕ, ಪುಷ್ಯರಾಗ, ಅಕ್ವಾಮರೈನ್‌ನಂತಹ ಅರೆ ಅಮೂಲ್ಯ ಹರಳುಗಳೇ ಆಗಲಿ ಒಡವೆಯ ಶೋಭೆಯನ್ನು ಹೆಚ್ಚಿಸುತ್ತವೆ.

ಆರಂಭದಲ್ಲಿ ಅಮೂಲ್ಯವಾದ ಹರಳುಗಳ ಒಡವೆಯನ್ನೇ ಧರಿಸಬೇಕೆಂದಿಲ್ಲ, ಕೃತಕ ಹರಳುಗಳನ್ನು ಕೂಡ ಜೋಡಿಸಿಕೊಳ್ಳಬಹುದು. ಇವುಗಳು ಸಿಂಥೆಟಿಕ್ ಹರಳುಗಳೆಂದೂ ಜನಪ್ರಿಯವಾಗಿವೆ. ಹೆಚ್ಚಾಗಿ ಕೃತಕ ಆಭರಣಗಳಲ್ಲಿ ಬಳಸುವ ಹರಳುಗಳೆಂದರೆ ಕ್ಯೂಬಿಕ್ ಝಿರ್ಕೋನ್. ಭಾರತದಲ್ಲಿ ಅಮೆರಿಕನ್ ಡೈಮಂಡ್ ಎಂದೇ ಜನಪ್ರಿಯ. ಸರಿಯಾಗಿ ಕಟ್ ಮಾಡಿದರೆ ವಜ್ರದ ಹರಳುಗಳಂತೆ ಗೋಚರಿಸುತ್ತವೆ. ಈ ಸಿಂಥೆಟಿಕ್ ಹರಳುಗಳು ಮೂಲದಲ್ಲಿ ಯಾವುದೇ ಬಣ್ಣವಿಲ್ಲದಿದ್ದರೂ ವೈವಿಧ್ಯಮಯ ರಂಗನ್ನು ಸೇರಿಸಿ ಮಾರುಕಟ್ಟೆಗೆ ಬಿಡಲಾಗುತ್ತಿದೆ.

ಅರೆ ಅಮೂಲ್ಯ ಹರಳುಗಳು

ಗ್ರಾಹಕರು ಅತ್ಯಂತ ಇಷ್ಟಪಡುವ ಅರೆ ಅಮೂಲ್ಯ ಹರಳುಗಳು ಚಿನ್ನದ ಹಾಗೂ ಬೆಳ್ಳಿಯ ಒಡವೆಗಳು ಕಣ್ಣು ಕೋರೈಸುವಂತೆ ಮಾಡುತ್ತವೆ. ನೈಸರ್ಗಿಕವಾಗಿ ದೊರೆಯುವ ಈ ಹರಳುಗಳು ದುಬಾರಿ ಕೂಡ. ಆದರೆ ಮಾರುಕಟ್ಟೆಯಲ್ಲಿ ನೈಜವಾಗಿ ಕಾಣುವಂತಹ ಕೃತಕ ಹರಳುಗಳೂ ಲಭ್ಯ.

ಅಕ್ವಾಮರೈನ್: ಸಮುದ್ರ ನೀಲಿ ರಂಗಿನಲ್ಲಿರುವ ಈ ಹರಳುಗಳು ಪಚ್ಚೆ ಹರಳಿ (ಎಮರಾಲ್ಡ್)ನ ವರ್ಗಕ್ಕೆ ಸೇರಿವೆ. ಅಕ್ವಾಮರೈನ್ ಎಂದರೆ ಲ್ಯಾಟಿನ್‌ನಲ್ಲಿ ಸಮುದ್ರದ ನೀರು ಎಂದರ್ಥ. ಈ ಹರಳನ್ನು ಸೇರಿಸಿದ ಒಡವೆ ಧರಿಸಿದವರಿಗೆ ಯಾವಾಗಲೂ ತಾಜಾತನದ ನೋಟ ಒದಗಿಸುತ್ತದೆ. ಓಲೆಯಲ್ಲಿ ದೊಡ್ಡದಾದ ಒಂದೇ ಹರಳು ಬಳಸಿ ಅದಕ್ಕೆ ಹೊಂದುವ ದೊಡ್ಡ ಪದಕವನ್ನು ಧರಿಸಬಹುದು. ಉಂಗುರದಲ್ಲೂ ಇದನ್ನು ಕೂರಿಸಿದರೆ ಅಂದವಾಗಿ ಕಾಣುತ್ತದೆ. ಕೆಲವರು ‘ಬರ್ಥ್‌ಸ್ಟೋನ್’ ಆಗಿ ಧರಿಸುವ ರೂಢಿಯೂ ಇದೆ.

ಓಪಲ್: ಸಿಲಿಕೇಟ್ ಖನಿಜಾಂಶ ಹೊಂದಿರುವ ಈ ಅರೆ ಅಮೂಲ್ಯ ಹರಳು ಕಾಮನಬಿಲ್ಲಿನ ಹಲವು ಬಣ್ಣಗಳನ್ನು ಹೊರಹೊಮ್ಮಿಸುತ್ತದೆ. ಬೆಳ್ಳಿ ಆಭರಣದಲ್ಲಿ ಹೆಚ್ಚಾಗಿ ಬಳಸುತ್ತಾರೆ.

ಟ್ಯಾಂಜನೈಟ್: ಗಾಢ ನೇರಳೆ ರಂಗಿನ ಟ್ಯಾಂಜನೈಟ್ ಹರಳು ತಾಂಜಾನಿಯದಲ್ಲಿ ಹೇರಳವಾಗಿ ಲಭ್ಯ. ಚಿಕ್ಕ ಚಿಕ್ಕ ಹರಳುಗಳನ್ನು ಚಿನ್ನದ ನೆಕ್ಲೇಸ್‌ನಲ್ಲಿ ಕೂರಿಸಿದರೆ ಅಗಾಧ ಹೊಳಪಿನಿಂದ ಮುಖಕ್ಕೆ ಶೋಭೆ ನೀಡುವುದಲ್ಲದೇ ವಿವಿಧ ಉಡುಪುಗಳಿಗೆ ಮ್ಯಾಚಿಂಗ್ ಮಾಡಬಹುದು.

ಗಾರ್ನೆಟ್: ಭಾರತದಲ್ಲಿ ಕಳೆದ ಕೆಲವು ವರ್ಷಗಳಿಂದ ಜನಪ್ರಿಯವಾಗಿರುವ ಹರಳೆಂದರೆ ಗಾರ್ನೆಟ್. ಗಾಢ ಕೆಂಪು ವರ್ಣದ ಈ ಹರಳನ್ನು ದಾಳಿಂಬೆ ಬೀಜಕ್ಕೆ ಹೋಲಿಸುವುದೂ ಇದೆ. ಈ ಹರಳನ್ನು ಕೂರಿಸಿದ ಕಿವಿಯೋಲೆ ಸೀರೆಯಂತಹ ಸಾಂಪ್ರದಾಯಿಕ ಉಡುಪಿಗೆ ಅಂದವಾಗಿ ಕಾಣುತ್ತದೆ.

ಜೇಡ್: ತಿಳಿ ಹಸಿರು ರಂಗಿನ ಜೇಡ್ ಹರಳು ಚಿನ್ನದ ಒಡವೆಗೆ ಹೇಳಿ ಮಾಡಿಸಿದಂತಹ ಹರಳು. ಓಲೆ, ನೆಕ್ಲೇಸ್ ಅಥವಾ ಉದ್ದನೆಯ ಹಾರ ಹಾಗೂ ಬಳೆಗಳ ಸೆಟ್ ಅನ್ನು ಮಾಡಿಸಿಕೊಳ್ಳಬಹುದು.

ಲ್ಯಾಬ್ರಡೈಟ್: ನೀಲಿ, ಹಸಿರು, ನೇರಳೆ ಮತ್ತು ಬೂದು ರಂಗಿನಲ್ಲಿ ಲಭ್ಯವಿರುವ ಈ ಹರಳುಗಳು ಹೊಳಪಿನಿಂದ ಕೂಡಿದ್ದು ಎಲ್ಲಾ ರೀತಿಯ ಆಭರಣಗಳಲ್ಲಿ ಬಳಸಬಹುದು.

ಚಿತ್ರಕೃಪೆ: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ಬೆಂಗಳೂರು

ಮನೆಮದ್ದು

ಮುಖದ ಕೂದಲು ನಿವಾರಣೆಗಿದೆ ಮನೆಮದ್ದು

ಡಾ. ಬ್ರಹ್ಮಾನಂದ ನಾಯಕ

ನಯವಾದ, ಸುಂದರ ಮುಖ ತಮ್ಮದಾಗಬೇಕು ಎಂಬುದು ಎಲ್ಲಾ ಹೆಣ್ಣುಮಕ್ಕಳ ಬಯಕೆ. ಆದರೆ ಇತ್ತೀಚೆಗೆ ಜೀವನಶೈಲಿಯ ಬದಲಾವಣೆ ಹಾಗೂ ಹಾರ್ಮೋನ್‌ನಲ್ಲಿನ ವ್ಯತ್ಯಾಸದ ಕಾರಣದಿಂದ ಮುಖದಲ್ಲಿ ಕೂದಲು ಬೆಳೆಯುವುದು ಸಾಮಾನ್ಯ. ಗದ್ದ, ಕೆನ್ನೆ, ಮೂಗಿನ ಕೆಳಗೆ ಕೂದಲು ಬೆಳೆಯುವುದರಿಂದ ಮುಖದ ಅಂದಗೆಡುತ್ತದೆ. ಆದರೆ ಮುಖದಲ್ಲಿ ಕೂದಲು ಬೆಳೆದಿದೆ ಎಂಬ ಕಾರಣಕ್ಕೆ ಥ್ರೆಡ್ಡಿಂಗ್, ಟ್ರಿಮ್ಮಿಂಗ್ ಅಥವಾ ಶೇವಿಂಗ್ ಮಾಡಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಮುಖದ ಚರ್ಮ ತುಂಬಾ ಸೂಕ್ಷ್ಮವಾಗಿರುತ್ತದೆ. ಅಲ್ಲದೇ ಹೀಗೆ ಮಾಡುವುದರಿಂದ ಇನ್ನಷ್ಟು ದಪ್ಪವಾಗಿ ಕೂದಲು ಬೆಳೆಯುತ್ತದೆ. ಆದರೆ ಕೆಲವೊಂದು ಮನೆಮದ್ದುಗಳ ಮೂಲಕ ಮುಖದ ಮೇಲಿನ ಬೇಡದ ಕೂದಲನ್ನು ನಿವಾರಿಸಬಹುದು.

ಪಪ್ಪಾಯ ಪ್ಯಾಕ್

ಮುಖದ ಮೇಲೆ ಬೆಳೆಯುವ ಬೇಡದ ಕೂದಲಿಗೆ ಪಪ್ಪಾಯ ಪ್ಯಾಕ್ ಉತ್ತಮ ಮನೆಮದ್ದು. ಇದರಲ್ಲಿ ಪಾಪೈನ್ ಎಂಬ ಅಂಶವಿದ್ದು ಇದು ಕೂದಲ ಫಾಲಿಕಲ್‌ಗಳು ಉದುರಲು ಸಹಾಯ ಮಾಡುತ್ತದೆ. ಅಲ್ಲದೇ ಪುನಃ ಪುನಃ ಅದೇ ಜಾಗದಲ್ಲಿ ಕೂದಲು ಬೆಳೆಯುವುದನ್ನು ತಡೆಯುತ್ತದೆ. ಹಸಿ ಪಪ್ಪಾಯದ ತಿರುಳಿಗೆ ಅರಿಸಿನ ಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಆ ಮಿಶ್ರಣವನ್ನು ಮುಖಕ್ಕೆ ಹಚ್ಚಿ 15 ನಿಮಿಷಗಳ ಕಾಲ ಮಸಾಜ್ ಮಾಡಿ. ಹದಿನೈದು ನಿಮಿಷದ ನಂತರ ಪುನಃ 5 ನಿಮಿಷ ಮಸಾಜ್ ಮಾಡಿ. ನಂತರ ತಣ್ಣೀರಿನಿಂದ ಮುಖ ತೊಳೆಯಿರಿ. ಇದನ್ನು ವಾರಕ್ಕೆರಡು ಬಾರಿ ಮಾಡಿದರೆ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು.

ಜೇನುತುಪ್ಪ

ಜೇನುತುಪ್ಪ ಮುಖದ ಮೇಲಿನ ಕೂದಲಿನ ಬಣ್ಣವನ್ನು ತಿಳಿಯಾಗಿಸುತ್ತದೆ. ಮೊಟ್ಟೆಯ ಬಿಳಿಭಾಗದೊಂದಿಗೆ ಕೆಲವು ಹನಿ ಜೇನುತುಪ್ಪ ಹಾಗೂ ನಿಂಬೆರಸ ಸೇರಿಸಿ ಮಿಶ್ರಣ ಮಾಡಿ ಮುಖಕ್ಕೆ ಹಚ್ಚಿ ಒಣಗಲು ಬಿಡಿ. ಇದು ಒಣಗಿದ ಮೇಲೆ ಬಿಸಿನೀರಿನಲ್ಲಿ ಹತ್ತಿಯನ್ನು ಅದ್ದಿ ಅದರಿಂದ ಮುಖ ಒರೆಸಿಕೊಳ್ಳಿ. ಪ್ರತಿದಿನ ಜೇನುತುಪ್ಪವನ್ನು ಮುಖಕ್ಕೆ ಹಚ್ಚಿಕೊಳ್ಳುವುದರಿಂದಲೂ ಮುಖದ ಕಾಂತಿ ಹೆಚ್ಚುತ್ತದೆ.

ನಿಂಬೆಹಣ್ಣಿನ ಪ್ಯಾಕ್

ನಿಂಬೆಹಣ್ಣಿನಲ್ಲಿ ನೈಸರ್ಗಿಕ ಬ್ಲೀಚ್ ಅಂಶವಿದೆ. ಒಂದು ಬೌಲ್‌ನಲ್ಲಿ ಸಕ್ಕರೆ, ನಿಂಬೆರಸ ಹಾಗೂ ನೀರನ್ನು ಸೇರಿಸಿ ಮಿಶ್ರಣ ಮಾಡಿ. ಆ ಪೇಸ್ಟ್ ಅನ್ನು ಮುಖದಲ್ಲಿ ಕೂದಲು ಬೆಳೆಯುವ ಜಾಗದಲ್ಲಿ ಹಚ್ಚಿ. 15 ರಿಂದ 20 ನಿಮಿಷ ಹಾಗೇ ಬಿಡಿ. ನಂತರ ನಿಧಾನಕ್ಕೆ ಉಜ್ಜಿ ತೆಗೆದು ನೀರಿನಿಂದ ತೊಳೆಯಿರಿ. ಇದನ್ನು ವಾರದಲ್ಲಿ ಎರಡು ಅಥವಾ ಮೂರು ಬಾರಿ ಮಾಡಬೇಕು. ಕೆಲವು ವಾರಗಳಲ್ಲೇ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು.

ಮುಲ್ತಾನಿಮಿಟ್ಟಿ ಪ್ಯಾಕ್

ಚರ್ಮದ ಸೌಂದರ್ಯ ಕಾಪಾಡಲು ಮುಲ್ತಾನಿಮಿಟ್ಟಿ ಉತ್ತಮ ಮನೆಮದ್ದು. ಇದು ಮುಖದ ಚರ್ಮದ ಕೊಳಕನ್ನು ನಿವಾರಿಸುತ್ತದೆ. ಅಲ್ಲದೇ ಸನ್‌ಟ್ಯಾನ್ ಅನ್ನು ಕಡಿಮೆ ಮಾಡುತ್ತದೆ. ಮುಲ್ತಾನಿಮಿಟ್ಟಿಯಲ್ಲಿ ಮ್ಯಾಗ್ನಿಷಿಯಂ, ಕಬ್ಬಿಣ ಹಾಗೂ ಕ್ಯಾಲ್ಸಿಯಂ ಅಂಶಗಳು ಹೇರಳವಾಗಿವೆ. ಈ ಪೋಷಕಾಂಶಗಳು ಚರ್ಮದ ಆರೋಗ್ಯಕ್ಕೆ ತುಂಬಾನೇ ಸಹಾಯ ಮಾಡುತ್ತವೆ. ಮುಲ್ತಾನಿಮಿಟ್ಟಿ ಪ್ಯಾಕ್ ಅನ್ನು ಪ್ರತಿದಿನ ಬಳಸಬಹುದು.



ಅರಿಸಿನದ ಪ್ಯಾಕ್

ಕಸ್ತೂರಿ ಅರಿಸಿನಕ್ಕೆ ಹಾಲು ಸೇರಿಸಿ ಮಿಶ್ರಣ ಮಾಡಿ ಪೇಸ್ಟ್ ತಯಾರಿಸಿ. ಅದನ್ನು ಮುಖಕ್ಕೆ ಹಚ್ಚಿ ಒಣಗಲು ಬಿಡಿ. ಚೆನ್ನಾಗಿ ಒಣಗಿದ ಮೇಲೆ ಸ್ವಲ್ಪ ನೀರು ಸೇರಿಸಿ ನಿಧಾನಕ್ಕೆ ಉಜ್ಜಿ ಮುಖವನ್ನು ಸ್ವಚ್ಛ ಮಾಡಿಕೊಳ್ಳಿ. ಅಲ್ಲದೇ ಅರಿಸಿನ, ಕಡಲೆಹಿಟ್ಟು ಹಾಗೂ ಬೆಣ್ಣೆಯಿಂದ ಪ್ಯಾಕ್ ತಯಾರಿಸಿ ಮುಖಕ್ಕೆ ಹಚ್ಚಿ ಮಸಾಜ್ ಮಾಡಬಹುದು. ಇದರಿಂದ ಮುಖದ ಕಾಂತಿ ಹೆಚ್ಚುವುದಲ್ಲದೇ ಬೇಡದ ಕೂದಲ ನಿವಾರಣೆಗೂ ಸಹಕಾರಿ. ಅರಿಸಿನ ಕೊಂಬಿನಿಂದ ಅರಿಸಿನ ತೇದು ಮುಖಕ್ಕೆ ಹಚ್ಚಿ 1ರಿಂದ 2 ಗಂಟೆ ಬಿಟ್ಟು ತೊಳೆಯುವುದರಿಂದಲೂ ಕೂದಲು ನಿವಾರಣೆಯಾಗುತ್ತದೆ.

ಸಕ್ಕರೆ ಹಾಗೂ ಮೊಟ್ಟೆಯ ಬಿಳಿಭಾಗ

ಮೊಟ್ಟೆಯ ಬಿಳಿಭಾಗಕ್ಕೆ ಸಕ್ಕರೆ ಹಾಗೂ ಕಾರ್ನ್‌ಫ್ಲೋರ್ ಸೇರಿಸಿ ಮಿಶ್ರಣ ಮಾಡಿ ನುಣ್ಣನೆಯ ಪೇಸ್ಟ್ ತಯಾರಿಸಿ. ಅದನ್ನು ಮುಖಕ್ಕೆ ಹಚ್ಚಿ ಒಣಗಲು ಬಿಡಿ. ಒಣಗಿದ ಮೇಲೆ ಕೂದಲ ಸಮೇತ ಮಾಸ್ಕ್ ಅನ್ನು ಎಳೆದು ತೆಗೆಯಿರಿ. ಇದು ತ್ವಚೆಯ ಕಾಂತಿ ಹೆಚ್ಚಲು ಸಹಾಯ ಮಾಡುತ್ತದೆ.

ಲೋಳೆಸರ ಪ್ಯಾಕ್

ಹಸಿ ಪಪ್ಪಾಯದ ತಿರುಳು 2 ಚಮಚ, ಲೋಳೆಸರದ ತಿರುಳು 1 ಚಮಚ, ಕಡಲೆಹಿಟ್ಟು 1 ಚಮಚ, ಅರಿಸಿನ ಅರ್ಧ ಚಮಚ ಹಾಗೂ ಸಾಸಿವೆ ಎಣ್ಣೆ 2 ಚಮಚ ಈ ಎಲ್ಲವನ್ನೂ ಮಿಶ್ರಣ ಮಾಡಿ ಪೇಸ್ಟ್ ತಯಾರಿಸಿ. ಅದನ್ನು ಮುಖಕ್ಕೆ ಹಚ್ಚಿ ಒಣಗಲು ಬಿಡಿ. ಒಣಗಿದ ಮೇಲೆ ಒದ್ದೆ ಬೆರಳಿನಿಂದ ಸುರುಳಿಯಾಕಾರದಲ್ಲಿ ಕೈಬೆರಳಾಡಿಸಿ. ನಂತರ ತಣ್ಣೀರಿನಿಂದ ಮುಖ ತೊಳೆಯಿರಿ. ಇದನ್ನು ವಾರದಲ್ಲಿ ಎರಡು ಬಾರಿ ಮಾಡಿ.

(ಲೇಖಕ: ಆಯುರ್ವೇದ ವೈದ್ಯರು, ಆಯುರ್ವೇದಿಸಂ, ಬೆಂಗಳೂರು)

ಮಧ್ಯರಾತ್ರಿಯಲ್ಲೇಕೆ ತಿನ್ನುವ ದುರಭ್ಯಾಸ?

ಎಸ್.ಜಿ. ಹುತ್ತಗಾರ

ಹೊಟ್ಟೆಯಲ್ಲಿ ಗುಡುಗುಡು ಶಬ್ದವಾಗಿ ರಾತ್ರಿ ನಿದ್ರೆಯಿಂದ ಎಚ್ಚರವಾಗುತ್ತಿದೆಯೆ? ಹಾಗಾದರೆ ಇದಕ್ಕೆ ಕಾರಣ ಮಧ್ಯ ರಾತ್ರಿಯ ನಂತರ ಕಾಣಿಸಿಕೊಳ್ಳುವ ಹಸಿವಿನ ತೊಂದರೆ. ಸಾಮಾನ್ಯವಾಗಿ 1–3 ಗಂಟೆಯ ಸಮಯದಲ್ಲಿ ಭಯಂಕರ ಹಸಿವು ಕಾಣಿಸಿಕೊಂಡು ಎಚ್ಚರವಾಗುವುದು ಕೆಲವರಲ್ಲಿ ಮಾಮೂಲು.

ತಜ್ಞರ ಪ್ರಕಾರ ಹಸಿವಿನ ಮಟ್ಟ ದಿನವಿಡೀ ಹೆಚ್ಚು ಕಡಿಮೆಯಾಗುತ್ತಲೇ ಇರುತ್ತದೆ. ಹಗಲು ಈ ಪ್ರಮಾಣ ಹೆಚ್ಚುತ್ತಲೇ ಹೋಗುತ್ತದೆ. ಸಂಜೆ ಅತ್ಯಂತ ಹೆಚ್ಚಿನ ಮಟ್ಟದಲ್ಲಿದ್ದು, ರಾತ್ರಿ ಮತ್ತು ಬೆಳಗಿನ ಜಾವ ಕಡಿಮೆಯಿರುತ್ತದೆ. ಹೀಗಾಗಿ ಮಧ್ಯರಾತ್ರಿ ಹಸಿವಿನಿಂದ ಎಚ್ಚರವಾಗುತ್ತದೆ ಎಂದರೆ ಇದು ಕಡೆಗಣಿಸುವ ವಿಷಯವಲ್ಲ.

‘ನಿದ್ರೆಯ ಆಳ ಎಷ್ಟು ಜಾಸ್ತಿ ಇರುತ್ತದೆಂದರೆ ಬೇರೇನೂ ಸಮಸ್ಯೆಯಿಲ್ಲದಿದ್ದರೆ ಎಚ್ಚರವಾಗುವುದು ಕಡಿಮೆ. ಆದರೆ ಹಸಿವಿನಿಂದ ನಿದ್ರೆಯ ಮಧ್ಯೆ ಎಚ್ಚರವಾಗುತ್ತದೆ ಎಂದರೆ ಏನೋ ಸಮಸ್ಯೆಯಿದೆ ಎಂದರ್ಥ’ ಎನ್ನುತ್ತಾರೆ ಲೈಫ್‌ಸ್ಟೈಲ್ ಕಾಯಿಲೆ ತಜ್ಞ ಡಾ. ಟಿ.ಎಸ್.ತೇಜಸ್. ಏಕೆಂದರೆ ನಮ್ಮೊಳಗಿರುವ ಜೈವಿಕ ಗಡಿಯಾರ ಇಂತಹ ರಾತ್ರಿ ಸಮಯದಲ್ಲಿ ತಿನ್ನುವಂತೆ ಪ್ರೇರೇಪಿಸುವುದು ಕಡಿಮೆ.

ಅಪರೂಪಕ್ಕೊಮ್ಮೆ ಮಧ್ಯರಾತ್ರಿ ಹಸಿವಿನಿಂದ ಎಚ್ಚರವಾಗಿ ತಿಂದರೆ ಅದೇನೂ ಆತಂಕಪಡುವಂತಹ ವಿಷಯವಲ್ಲ. ಆದರೆ ಇದು ನಿಯಮಿತವಾಗಿ ಕಂಡು ಬಂದರೆ ಹಾಗೂ ತೊಂದರೆ ಕೊಡುತ್ತಿದ್ದರೆ ನಿರ್ಲಕ್ಷ್ಯ ವಹಿಸುವುದು ಸರಿಯಲ್ಲ.

ಕಾರಣಗಳು

ಇದಕ್ಕೆ ಕಾರಣಗಳು ಹಲವಾರು. ಹಗಲಿನ ವೇಳೆ ಅಗತ್ಯವಿರುವಷ್ಟು ತಿನ್ನದಿದ್ದರೆ ಈ ಸಮಸ್ಯೆ ಕಾಣಿಸಿಕೊಳ್ಳಬಹುದು. ಅಂದರೆ ನಿಮ್ಮ ದೇಹಕ್ಕೆ ಬೇಕಾಗುವಷ್ಟು ಕ್ಯಾಲರಿ ಸಿಕ್ಕಿರುವುದಿಲ್ಲ. ಹೀಗಾಗಿ ಹೊಟ್ಟೆಯೊಳಗೆ ಕೋಲಾಹಲ ಎದ್ದು ನಿಮ್ಮನ್ನು ಎಬ್ಬಿಸಿಬಿಡುತ್ತದೆ. ತೀರಾ ಡಯೆಟ್ ಮಾಡಿದರೆ, ಊಟವನ್ನು ಬಿಟ್ಟರೆ ಅಥವಾ ಮಿತಿಮೀರಿ ವ್ಯಾಯಾಮ ಮಾಡಿದರೆ ಕ್ಯಾಲರಿಯ ಕೊರತೆ ಉಂಟಾಗಬಹುದು.

ನಿಮ್ಮ ದೈಹಿಕ ಚಟುವಟಿಕೆಯ ಮೇಲೂ ಗಮನ ಇಡಬೇಕು. ಹೊಸ ರೀತಿಯ ವ್ಯಾಯಾಮ ಶುರು ಮಾಡಿದರೆ ಅಥವಾ ವ್ಯಾಯಾಮದ ಸಮಯವನ್ನು ಹೆಚ್ಚಿಸಿದರೆ ರಾತ್ರಿ ಹಸಿವಾಗಿ ಎಚ್ಚರವಾಗಬಹುದು. ಹೀಗಾಗಿ ದೈಹಿಕ ಚಟುವಟಿಕೆಗಳಿಗೆ ತಕ್ಕಂತೆ ತಿನ್ನುವ ಪ್ರಮಾಣವನ್ನೂ ಹೆಚ್ಚಿಸಬೇಕು.

ನಿದ್ರೆಯ ಕೊರತೆಯೂ ಇದಕ್ಕೆ ಕಾರಣ. ನಿದ್ರೆಯ ಕೊರತೆಯಾದರೆ ಹಸಿವನ್ನು ನಿಯಂತ್ರಿಸುವ ಹಾರ್ಮೋನ್ ಪ್ರಮಾಣದಲ್ಲಿ ಏರುಪೇರಾಗುತ್ತದೆ ಎನ್ನುತ್ತಾರೆ ತಜ್ಞರು. ಇದರಿಂದ ಹೆಚ್ಚು ಹಸಿವಾಗಿ ಮಧ್ಯರಾತ್ರಿಯಲ್ಲಿ ಕೂಡ ಕಾರ್ಬೋಹೈಡ್ರೇಟ್ ಹೆಚ್ಚಿರುವ ಆಹಾರ ತಿನ್ನಬೇಕೆಂಬ ಬಯಕೆಯಾಗುತ್ತದೆ. ರಾತ್ರಿ ನಿದ್ರೆಯಿಲ್ಲದಿದ್ದರೆ ಹಗಲಿನಲ್ಲಿ ಕೂಡ ಹೆಚ್ಚು ಹಸಿವಾಗುವುದನ್ನು ನೀವು ಗಮನಿಸಿರಬಹುದು.

ಕೆಲವೊಮ್ಮೆ ಹೊಟ್ಟೆಯಲ್ಲಿ ಹಸಿವಿನ ಅನುಭವದಿಂದ ಎಚ್ಚರಾಗದಿದ್ದರೂ ಒತ್ತಡದಿಂದ ಎಚ್ಚರಾಗಬಹುದು. ಆಗ ತಿನ್ನುವುದರ ಮೂಲಕ ಒತ್ತಡವನ್ನು ಶಮನ ಮಾಡಿಕೊಳ್ಳಲು ಯತ್ನಿಸುವುದು ಸಹಜ. ಇದಕ್ಕೆ ‘ಎಮೋಷನಲ್ ಆಹಾರ ಸೇವನೆ’ ಎನ್ನುತ್ತಾರೆ ಡಾ. ತೇಜಸ್. ಆಲೋಚನೆಗಳಿಗೆ ಕಡಿವಾಣ ಹಾಕಲು ತಿನಿಸಿನ ಮೇಲೆ ಗಮನಹರಿಸುವುದು ನೈಸರ್ಗಿಕ ಪ್ರತಿಕ್ರಿಯೆ.

ಒತ್ತಡ, ಆತಂಕವಾದಾಗ ತಿನ್ನುವುದರಲ್ಲಿ ತಪ್ಪೇನಿಲ್ಲ. ಆದರೆ ಕಾರಣ ಕಂಡುಕೊಂಡು ಆರೋಗ್ಯ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಸೂಕ್ತ.

ಪದೇ ಪದೇ ಮಧ್ಯರಾತ್ರಿ ಎಚ್ಚರವಾಗಿ ತಿನ್ನುವ ಅಭ್ಯಾಸ ಬೆಳೆಸಿಕೊಂಡರೆ ಇದು ಗೀಳೆಂದು ಕರೆಸಿಕೊಳ್ಳುತ್ತದೆ. ರಾತ್ರಿ ತಿಂದರೆ ಮಾತ್ರ ನಿದ್ರೆ ಬರುತ್ತದೆ ಎಂಬ ನಂಬಿಕೆಗೆ ಅಂಟಿಕೊಂಡು ಸಂಜೆ ತಿನ್ನದೇ ಮಧ್ಯರಾತ್ರಿ ಆಹಾರ ಸೇವಿಸುವುದು ಇದರ ಲಕ್ಷಣ.

ಪರಿಹಾರ

ಮೊದಲು ಹಗಲು ಸಮಯಕ್ಕೆ ಸರಿಯಾಗಿ, ಅಗತ್ಯವಿರುವಷ್ಟು ಪ್ರಮಾಣದ ಆಹಾರ ಸೇವಿಸುವುದನ್ನು ರೂಢಿಸಿಕೊಳ್ಳಿ. ಇದರಿಂದ ಮಧ್ಯರಾತ್ರಿ ಎಚ್ಚರವಾಗುವುದು ತಪ್ಪುತ್ತದೆ. ರಾತ್ರಿ ಮಲಗುವ ಮುನ್ನ ಹಾಲು ಅಥವಾ ಮೊಸರು ಅಥವಾ ಒಂದೆರಡು ಕ್ರ್ಯಾಕರ್ ಸೇವಿಸಿ.

ಹಗಲು ಎಷ್ಟು ಹೊತ್ತಿಗೆ, ಏನು ತಿಂದಿರಿ ಎಂಬುದರ ವಿವರವನ್ನು ಬರೆದಿಟ್ಟುಕೊಳ್ಳಿ. ರಾತ್ರಿ ಎಚ್ಚರವಾದರೆ ಹಗಲಿನ ಆಹಾರ ಸೇವನೆಯಲ್ಲಾದ ವ್ಯತ್ಯಾಸ ಗಮನಿಸಿ. ಅಪರೂಪಕ್ಕೊಮ್ಮೆ ಹಸಿವಿನಿಂದ ಎಚ್ಚರವಾದರೆ ಸುಲಭವಾಗಿ ಜೀರ್ಣವಾಗುವಂತಹ ಬಾಳೆಹಣ್ಣನ್ನು ತಿನ್ನಬಹುದು. ಸಮಸ್ಯೆ ಜಾಸ್ತಿಯಾದರೆ ವೈದ್ಯರನ್ನು ಸಂಪರ್ಕಿಸಿ.

❖

ಬಿಸಿಲ ಧಗೆ ಸಾಕುಪ್ರಾಣಿಗಳ ಆರೈಕೆ ಹೇಗಿರಬೇಕು?

ಮನಸ್ವಿ

ಬೇಸಿಗೆ ಕಾಲಿಟ್ಟು ಕೆಲ ದಿನಗಳು ಕಳೆದಿವೆ. ಬೇಸಿಗೆ ಬಂದಾಕ್ಷಣ ಸುಡು ಬಿಸಿಲಿಗೆ ಮನುಷ್ಯರು ಮಾತ್ರವಲ್ಲ, ಪ್ರಾಣಿಗಳೂ ತತ್ತರಿಸುವುದು ಸಾಮಾನ್ಯ. ಕಳೆದ ಕೆಲ ವರ್ಷಗಳಿಂದ ಬೇಸಿಗೆಯ ತಾಪ ಇನ್ನಷ್ಟು ಹೆಚ್ಚಾಗಿದೆ. ಇಂತಹ ಸಮಯದಲ್ಲಿ ನಮ್ಮ ಮನೆಯ ಮುದ್ದಿನ ಸಾಕುಪ್ರಾಣಿಗಳನ್ನು ಕಾಳಜಿ ಮಾಡುವುದು ಅಗತ್ಯ. ಈ ಸಮಯದಲ್ಲಿ ಸಾಕುಪ್ರಾಣಿಗಳಲ್ಲಿ ಸೋಂಕು, ಚರ್ಮಕ್ಕೆ ಸಂಬಂಧಿಸಿದ ಕಾಯಿಲೆಗಳು, ಹೀಟ್ ಸ್ಟ್ರೋಕ್‌ನಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು, ಹಾಗಾಗಿ ಮುಂಜಾಗ್ರತೆ ವಹಿಸುವುದು ಅಗತ್ಯ.

ಸಾಕುಪ್ರಾಣಿಯನ್ನು ಕಾರಿನ ಒಳಗೆ ಇರಿಸಬೇಡಿ

ಸಾಕುಪ್ರಾಣಿಯನ್ನು ಜೊತೆಗೆ ಹೊರಗಡೆ ಕರೆದುಕೊಂಡು ಹೋದಾಗ ಕೆಲವೇ ನಿಮಿಷಗಳು ಎಂದು ಭಾವಿಸಿ ಕಾರ್ ಒಳಗೆ ಇರಿಸಿ ಹೋಗಬೇಡಿ. ಹೊರಗಡೆ ಬಿಸಿಲು ಕಡಿಮೆ ಇದೆ ಅನ್ನಿಸಿದರೂ ಒಳಗಿನಿಂದ ಬಾಗಿಲು ಮುಚ್ಚಿದಾಗ ಬಿಸಿಲಿನ ತಾಪ ಹೆಚ್ಚಿರುತ್ತದೆ. ಹೊರಗಡೆ 85 ಡಿಗ್ರಿ ಸೆಲ್ಸಿಯಸ್ ತಾಪವಿದ್ದರೆ ಕೇವಲ ಹತ್ತೇ ನಿಮಿಷಗಳಲ್ಲಿ ಕಾರಿನೊಳಗಿನ ತಾಪ 120 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗಬಹುದು. ಆ ಕಾರಣಕ್ಕೆ ಎಲ್ಲಾದರೂ ಹೋಗುವಾಗ ಸಾಕುಪ್ರಾಣಿಯನ್ನು ಮನೆಯಲ್ಲೇ ಬಿಡುವುದು ಉತ್ತಮ.

ವಾಕಿಂಗ್ ಹೋದಾಗ ಇರಲಿ ಎಚ್ಚರ

ನಾಯಿಗಳನ್ನು ಪಾರ್ಕ್ ಅಥವಾ ಹುಲ್ಲು ಇರುವ ಪ್ರದೇಶದಲ್ಲಿ ವಾಕಿಂಗ್ ಮಾಡಿಸುವುದು ಉತ್ತಮ. ಪಾದಚಾರಿ ಮಾರ್ಗದಲ್ಲಿ ಬಿಸಿಲಿನ ತಾಪದಿಂದ ಅವುಗಳ ಪಾದಕ್ಕೆ ತೊಂದರೆಯಾಗಬಹುದು. ವಾಕ್ ಮಾಡುವ ಮೊದಲು ಪಾದಚಾರಿ ಮಾರ್ಗವನ್ನು ಮುಟ್ಟಿ ನೋಡಿ. ಅದು ನಿಮ್ಮ ಕೈಗೆ ಬಿಸಿ ಎನ್ನಿಸಿದರೆ ಅಲ್ಲಿ ನಾಯಿಗೆ ವಾಕ್ ಮಾಡಿಸಬೇಡಿ.

ಪ್ರಾಣಿ ಪ್ರೀತಿ

ಚಿಗಟಗಳಾಗಿವೆಯೇ ಎಂದು ಪರಿಶೀಲಿಸಿ

ಬೇಸಿಗೆಯಲ್ಲಿ ಸಾಕುಪ್ರಾಣಿಗಳ ಕೂದಲಿನಲ್ಲಿ ಚಿಗಟಗಳಾಗುವುದು ಸಾಮಾನ್ಯ. ಆ ಕಾರಣಕ್ಕೆ ಬೇಸಿಗೆಯಲ್ಲಿ 15 ದಿನಗಳಿಗೊಮ್ಮೆ ಚಿಗಟ ನಿವಾರಕ ಔಷಧಿಗಳನ್ನು ಹಚ್ಚುವುದು ಅಗತ್ಯ. ಚಿಗಟ ಹಾಗೂ ಉಣ್ಣೆಗಳು ರಕ್ತಹೀನತೆಗೂ ಕಾರಣವಾಗುತ್ತವೆ. ಇವುಗಳ ನಿವಾರಣೆಗೆ ಹಲವಾರು ಆಯ್ಕೆಗಳಿವೆ. ಆದರೆ ಅವುಗಳನ್ನು ಬಳಸುವ ಮೊದಲು ಪಶು ವೈದ್ಯರನ್ನು ಸಂಪರ್ಕಿಸುವುದು ಉತ್ತಮ.

ತಾಪದ ಒತ್ತಡವನ್ನು ಅರಿಯಿರಿ

ಬೇಸಿಗೆಯಲ್ಲಿ ಅತೀ ತಾಪಮಾನದ ಕಾರಣ ಪ್ರಾಣಿಗಳಲ್ಲಿ ಬದಲಾವಣೆ ಉಂಟಾಗುವುದು ಅರಿವಿಗೆ ಬರುತ್ತದೆ. ಅತಿಯಾದ ಬಳಲಿಕೆ, ಕಣ್ಣಿನಲ್ಲಿ ನೀರು ಸೋರುವುದು, ಹೃದಯ ಬಡಿತದಲ್ಲಿ ಹೆಚ್ಚಳ, ಚಡಪಡಿಕೆ, ಅತಿಯಾದ ಬಾಯಾರಿಕೆ, ಅಲಸ್ಯ, ಜ್ವರ, ತಲೆ ತಿರುಗುವಿಕೆ, ವಾಂತಿಯಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಈ ರೀತಿ ಸಮಸ್ಯೆ ನಿಮ್ಮ ಪ್ರಾಣಿಯಲ್ಲಿ ಕಾಣಿಸಿಕೊಂಡಾಗ ಅದಕ್ಕೆ ತಾಪದ ಒತ್ತಡ ಉಂಟಾಗಿದೆ ಎಂದು ಅರ್ಥ.

ಆರೈಕೆ ಹೇಗೆ?

ಬೇಸಿಗೆಯಲ್ಲಿ ಎರಡೆರಡು ಬಾರಿ ಸ್ನಾನ ಮಾಡಿದರೂ ಮನಸ್ಸಿಗೆ ಖುಷಿ ಸಿಗುತ್ತದೆ. ಹಾಗೆಯೇ ಪ್ರಾಣಿಗಳಿಗೂ ಬೇಸಿಗೆಯಲ್ಲಿ ಆಗಾಗ ಸ್ನಾನ ಮಾಡಿಸುವುದು ಉತ್ತಮ. ಕೂದಲನ್ನು ತೊಳೆಯುವುದು, ಬ್ರಷ್ ಮಾಡಿಸುವುದು ಹಾಗೂ ಉಗುರು ಕತ್ತರಿಸುವುದು ಮಾಡುತ್ತಿರಬೇಕು. ಆಗಾಗ ಕೂದಲನ್ನು ಟ್ರಿಮ್ಮಿಂಗ್ ಮಾಡುವುದು ಒಳ್ಳೆಯದು. ಇದರಿಂದ ಬೇಸಿಗೆಯಲ್ಲಿ ಅವುಗಳಿಗೆ ಆರಾಮ ಎನ್ನಿಸುತ್ತದೆ.

ಆಗಾಗ ಪಶುವೈದ್ಯರ ಬಳಿ ಕರೆದುಕೊಂಡು ಹೋಗಿ

ಬೇಸಿಗೆಯಲ್ಲಿ ನಿರ್ಜಲೀಕರಣದಿಂದ ಸಾಕುಪ್ರಾಣಿಗಳಿಗೆ ಹಲವು ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಅಲ್ಲದೇ ಅವುಗಳ ದೇಹದೊಳಗೆ ಕಾಣಿಸುವ ಸಮಸ್ಯೆಗಳ ಅರಿವು ನಮಗಾಗುವುದಿಲ್ಲ. ಆ ಕಾರಣಕ್ಕೆ ಆಗಾಗ ಸಾಕುಪ್ರಾಣಿಗಳನ್ನು ಪಶುವೈದ್ಯರ ಬಳಿ ತೋರಿಸುವುದು ಅಗತ್ಯ. ❖

ಹೆಚ್ಚು ಹೆಚ್ಚು ನೀರು ಕುಡಿಸಿ

ಬೇಸಿಗೆಯಲ್ಲಿ ಮನುಷ್ಯರಂತೆ ಸಾಕುಪ್ರಾಣಿಗಳಿಗೂ ಬಾಯಾರಿಕೆ ಹೆಚ್ಚುವುದು ಸಾಮಾನ್ಯ. ಸಾಮಾನ್ಯವಾಗಿ ಸಾಕುಪ್ರಾಣಿಗಳಿಗೆ ಬಾಯಾರಿಕೆಯಾದಾಗ ವಸಡುಗಳು ಒಣಗುತ್ತವೆ. ಜೊತೆಗೆ ಇಳಿಮುಖ ಹಾಕಿಕೊಂಡಿರುತ್ತವೆ. ಸಾಕುಪ್ರಾಣಿಗಳಿಗೆ ಬೇಸಿಗೆಯಲ್ಲಿ ಕಲುಷಿತವಲ್ಲದ ಶುದ್ಧನೀರು ಕುಡಿಸುವುದು ತುಂಬಾ ಮುಖ್ಯ. ಹೊರಗಡೆ ಕರೆದುಕೊಂಡು ಹೋದಾಗಲೂ ಅವುಗಳಿಗೆ ಕುಡಿಯಲು ನೀರನ್ನು ಜೊತೆಗೆ ತೆಗೆದುಕೊಂಡು ಹೋಗುವುದು ಉತ್ತಮ.

ಬೇಸಿಗೆಗೆ ಬದಲಾಗಲಿ ಮಲಗುವ ಕೋಣೆ ಅಲಂಕಾರ

ರೇಷ್ಮಾ



ಮಲಗುವ ಕೋಣೆ ಎಂದರೆ ಎಲ್ಲರಿಗೂ ಒಂದು ರೀತಿಯ ಆಪ್ತಭಾವ. ದಣಿದು ಬಂದ ದೇಹಕ್ಕೆ ವಿಶ್ರಾಂತಿ ಸಿಗುವ ಈ ಜಾಗ ಸುಂದರವಾಗಿದ್ದಷ್ಟೂ ಮನಸ್ಸಿಗೆ ಖುಷಿ ಸಿಗುತ್ತದೆ. ಉತ್ತಮ ನಿದ್ದೆಗೆ ಕೋಣೆಯನ್ನು ನಾವು ಹೇಗೆ ಇರಿಸಿಕೊಂಡಿದ್ದೇವೆ ಎಂಬುದು ಮುಖ್ಯವಾಗುತ್ತದೆ. ಈಗಂತೂ ಬೇಸಿಗೆಕಾಲ. ಬೇಸಿಗೆಯಲ್ಲಿ ಕೋಣೆ ಒಳಗೆ ಗಾಳಿ, ಬೆಳಕು ಸರಾಗವಾಗಿ ಹರಡುವಂತೆ ನೋಡಿಕೊಳ್ಳಬೇಕು ಹಾಗೂ ಇರುವ ವಸ್ತುಗಳನ್ನೇ ಕೊಂಚ ಮರುಜೋಡಿಸಿ ಇನ್ನಷ್ಟು ಸುಂದರವಾಗಿ ಇರಿಸಿಕೊಳ್ಳುವಂತೆ ನೋಡಿಕೊಳ್ಳಬಹುದು.

ತಿಳಿಬಣ್ಣಗಳು

ಮಲಗುವ ಕೋಣೆಯ ಪ್ರಮುಖ ಆಕರ್ಷಣೆ ಎಂದರೆ ಹಾಸಿಗೆ. ಹಾಸಿಗೆಯ ಹಾಸು, ಹೊದಿಕೆ ಎಲ್ಲವೂ ಕೋಣೆಯ ಅಂದವನ್ನು ಹೆಚ್ಚಿಸುತ್ತವೆ. ಆ ಕಾರಣಕ್ಕೆ ಬೇಸಿಗೆಯಲ್ಲಿ ಬಣ್ಣಗಳ ಆಯ್ಕೆಯೂ ಮುಖ್ಯವಾಗುತ್ತದೆ. ಗರಿಗರಿಯಾದ ಬಿಳಿ ಬಣ್ಣ, ತಿಳಿನೀಲಿ ಹಾಗೂ ತಿಳಿ ಗುಲಾಬಿ ಬಣ್ಣದ ಹೊದಿಕೆಗಳು ಹೆಚ್ಚು ಸೂಕ್ತ ಎನ್ನಿಸುತ್ತವೆ. ಇದರೊಂದಿಗೆ ಈ ಬಣ್ಣಕ್ಕೆ ಹೊಂದುವಂತಹ ದಿಂಬಿನ ಕವರ್‌ಗಳನ್ನು ಜೋಡಿಸಬಹುದು. ಅದರಲ್ಲೂ ದೊಡ್ಡ ದೊಡ್ಡ ಹೂವಿನ ಚಿತ್ತಾರದ ಹಾಸಿಗೆಯ ಹಾಸು ನೋಡಲು ಅಂದವಾಗಿರುತ್ತದೆ, ಅಲ್ಲದೇ ಮನಸ್ಸಿಗೂ ಮುದ ನೀಡುತ್ತದೆ.

ಹಗಲಿನಲ್ಲಿ ಸೂರ್ಯನ ಕಿರಣ ನೇರವಾಗಿ ಬೀಳದಂತೆ ನೋಡಿಕೊಳ್ಳಿ

ಮಲಗುವ ಕೋಣೆಗೆ ಸೂರ್ಯನ ಕಿರಣ ನೇರವಾಗಿ ಬೀಳುವ ಸ್ಥಳದಲ್ಲಿ ಕಟ್ಟಿಸುವುದು ಸರಿಯಲ್ಲ. ಒಂದು ವೇಳೆ ನೇರವಾಗಿ ಬಿದ್ದರೂ ಹಾಸಿಗೆ ಅಥವಾ ಕೊಠಡಿಯ ಕನ್ನಡಿಯ ಮೇಲೆ ಬೀಳದಂತೆ ನೋಡಿಕೊಳ್ಳಿ. ಕನ್ನಡಿಯ ಮೇಲೆ ಬಿದ್ದ ಸೂರ್ಯನ ಕಿರಣದ ಪ್ರತಿಫಲನವೂ ಮನಸ್ಸಿಗೆ ಕಿರಿಕಿರಿ ಮಾಡಬಹುದು. ಅಲ್ಲದೇ ಉರಿಬಿಸಿಲಿನ ತಾಪ ನೇರವಾಗಿ ತಾಕಿದರೆ ಅದರ ಬಿಸಿ ಸಂಜೆಯ ಮೇಲೂ ಹಾಗೇ ಇರುತ್ತದೆ. ಆ ಕಾರಣಕ್ಕೆ ಬೇಸಿಗೆಯಲ್ಲಿ ಹತ್ತಿಯ ಪರದೆಗಳನ್ನು ಅಳವಡಿಸಿ.

ಗೃಹಾಲಂಕಾರ

ಈಗಂತೂ ಹಲವರಿಗೆ ಮನೆಯಿಂದಲೇ ಕೆಲಸ. ಮಲಗುವ ಕೋಣೆಯಲ್ಲೂ ಕುಳಿತು ಕೆಲಸ ಮಾಡುವ ಕಾರಣ ಹಗಲಿನಲ್ಲಿ ಹೆಚ್ಚು ಹೊತ್ತು ಅಲ್ಲೇ ಕಳೆಯುತ್ತೇವೆ. ಹಾಗಾಗಿ ಸೂರ್ಯನ ಕಿರಣದ ತಾಪ ನೇರವಾಗಿ ತಾಕದಂತೆ ನೋಡಿಕೊಳ್ಳುವುದು ಅವಶ್ಯ.

ಬೆಳಕಿನ ಹೊಂದಾಣಿಕೆ

ಯಾವುದೇ ಕೋಣೆಯಾಗಲಿ ಬೆಳಕನ್ನು ಹೇಗೆ ಹೊಂದಿಸುತ್ತೇವೆ ಎನ್ನುವುದರ ಮೇಲೆ ಕೋಣೆಯ ಅಂದವು ಅವಲಂಬಿಸಿರುತ್ತದೆ. ಆದರೆ ಮಲಗುವ ಕೋಣೆ ಬೇರೆಲ್ಲಾ ಕೋಣೆಗಳಿಗಿಂತ ಭಿನ್ನವಾಗಿರುತ್ತದೆ. ಆ ಕಾರಣಕ್ಕೆ ಹೆಚ್ಚು ತೀಕ್ಷ್ಮವಲ್ಲದ ದೀಪಗಳನ್ನು ಇರಿಸಬೇಕು. ನಿಮ್ಮ ಕೋಣೆ ಚಿಕ್ಕದಾದರೆ ಗೋಡೆಗೆ ದೀಪಗಳನ್ನು ಅಳವಡಿಸುವುದು ಸೂಕ್ತ. ಇದರಿಂದ ಮೇಜು ಹಾಗೂ ಹೂದಾನಿ ಬಳಿ ಸಾಕಷ್ಟು ಜಾಗವಿರುತ್ತದೆ. ಜೊತೆಗೆ ಬಿಸಿಲು ಬೀಳುವ ದಿಕ್ಕಿಗೆ ವಿರುದ್ಧವಾಗಿ ದೀಪಗಳನ್ನು ಅಳವಡಿಸುವುದು ಉತ್ತಮ.

ಬೇಸಿಗೆಗೆ ಸೂಕ್ತ ಹಾಗೂ ಅಂದ ಹೆಚ್ಚಿಸುವ ವಸ್ತುಗಳನ್ನು ಖರೀದಿಸಿ

ಮಲಗುವ ಕೋಣೆಯ ವಾರ್ಡ್‌ರೋಬ್ ಅಥವಾ ಮಂಚದ ಪಕ್ಕದ ಟೇಬಲ್ ಅನ್ನು ಕಾಲ ಕಾಲಕ್ಕೆ ಬದಲಾಯಿಸಿ. ಹೂದಾನಿಯಲ್ಲಿರುವ ಬಣ್ಣದ ಹೂಗಳನ್ನು ಬದಲಿಸಿ. ಬೇಸಿಗೆಗೆ ಸೂಕ್ತ ಎನ್ನಿಸುವ ವಸ್ತುಗಳನ್ನು ಇರಿಸಿಕೊಳ್ಳಿ.

ಹಳೇ ರೇಡಿಯೊ

ಹಳೆಯ ಕಾಲದ ರೇಡಿಯೊ ಅಥವಾ ಗ್ರಾಮಾಫೋನ್ ಅನ್ನು ಮಲಗುವ ಕೋಣೆಯಲ್ಲಿ ಇರಿಸಿಕೊಳ್ಳಬಹುದು. ಬೇಸರವಾದಾಗ ಹಳೆಯ ಹಾಡುಗಳನ್ನು ಕೇಳುವ ಮೂಲಕ ಆನಂದಿಸಬಹುದು. ಸುಖನಿದ್ದೆಗೂ ಸಂಗೀತ ಸಹಾಯ ಮಾಡುತ್ತದೆ. ಕೋಣೆಯ ಅಂದ ಹೆಚ್ಚಲು ಇದು ಸಹಕಾರಿ. ❖

ನಿಮ್ಮನ್ನು ನೀವು ಅತಿಥಿ ಎಂದುಕೊಳ್ಳಿ

ಬೇರೆ ಕಾಲಕ್ಕೆ ಹೋಲಿಸಿದರೆ ಬೇಸಿಗೆಕಾಲದಲ್ಲಿ ಮನೆಗೆ ಅತಿಥಿಗಳು ಬರುವುದು ಹೆಚ್ಚು. ಅತಿಥಿಗಳು ಬಂದಾಗ ಮಾತ್ರ ಮಲಗುವ ಕೋಣೆಯನ್ನು ಸ್ವಚ್ಛ ಮಾಡುವ ಬದಲು ಪ್ರತಿದಿನ ಸುಂದರವಾಗಿ ಇರಿಸಿಕೊಳ್ಳಿ. ಮಂಚದ ಬಳಿ ಚಿಕ್ಕ ಮೇಜು ಇರಿಸಿ ಅದರ ಮೇಲೆ ಸುಂದರ ವಿನ್ಯಾಸದ ಮಗ್‌ನಲ್ಲಿ ನೀರು ಇರಿಸಿ. ಅಷ್ಟೇ ಸುಂದರವಾದ ಲೋಟವನ್ನು ಇರಿಸಿಕೊಳ್ಳಿ. ನೆಲಕ್ಕೆ ಒಳ್ಳೆಯ ಕಾರ್ಪೆಟ್ ಹಾಸಿ. ಇದು ಬೇಸಿಗೆಯಲ್ಲಿ ತಂಪೂ ಹೌದು, ಕೋಣೆಯ ಅಂದವನ್ನೂ ಹೆಚ್ಚಿಸುತ್ತದೆ.

ಗೋಡೆಗೆ ಚಿತ್ರ

ಬೇಸಿಗೆಯಲ್ಲಿ ಬಿಸಿಲಿನ ತಾಪಕ್ಕೆ ಮನಸ್ಸಿಗೆ ಕಿರಿಕಿರಿ ಎನ್ನಿಸುವುದು ಸಹಜ. ಆ ಕಾರಣಕ್ಕೆ ಮನಸ್ಸಿಗೆ ಮುದ ನೀಡುವಂತಹ ಚಿತ್ರಗಳನ್ನು ಗೋಡೆಗೆ ನೇತು ಹಾಕಿಕೊಳ್ಳಿ. ಅಲ್ಲದೇ ನಿಮಗೆ ಪೇಟಿಂಗ್ ಹವ್ಯಾಸವಿದ್ದರೆ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಂಡು ನೀವೇ ಮಾಡಿದ ಪೇಂಟಿಂಗ್‌ನಿಂದ ಮಲಗುವ ಕೋಣೆಯನ್ನು ಅಲಂಕರಿಸಬಹುದು. ಅದರಲ್ಲೂ ಮರದ ಚೌಕಟ್ಟು ಇರುವ ಕನ್ನಡಿ ಖರೀದಿಸಿ ನಿಮಗೆ ಸೂಕ್ತ ಎನ್ನಿಸುವ ರೀತಿ ಪೇಂಟ್ ಮಾಡಿ ಇರಿಸಿಕೊಳ್ಳಬಹುದು. ಇದು ನಿಮ್ಮ ಹವ್ಯಾಸಕ್ಕೆ ಇಂಬು ನೀಡುವುದಲ್ಲದೇ ಅಂದ ಹೆಚ್ಚಿಸಲು ಸಹಕಾರಿ.

ಅರಿವು

ಪರಿಸರ ಸ್ನೇಹಿ ಬಟ್ಟೆ ಡೈಪರ್

ಆಲಾಪ

ಮನೆಯಲ್ಲಿ ಮೊಮ್ಮಗಳು ಬಸುರಿ ಎಂದು ತಿಳಿಯುತ್ತಿದ್ದಂತೆಯೇ ಅಜ್ಜಿ, ತನ್ನ ಮೊಮ್ಮಗಳ ಬಾಣಂತನದಲ್ಲಿ ಉಪಯೋಗಿಸಿದ ಹಳೆಯ ಕಾಟನ್ ಬಟ್ಟೆಗಳನ್ನು ಹೊರತೆಗೆದು ತೊಳೆದು ಶುಭ್ರ ಮಾಡಿಡಲು ಪ್ರಾರಂಭಿಸುತ್ತಾಳೆ. ಮಗುವನ್ನು ಸುತ್ತಲು (ಅಂಗಿ ರೂಪದಲ್ಲಿ), ಡೈಪರ್ ರೀತಿಯಲ್ಲೂ ಆ ಬಟ್ಟೆಗಳನ್ನು ಉಪಯೋಗಿಸಲಾಗುತ್ತದೆ. ಆದರೆ, ಅದನ್ನು ಪದೇ ಪದೇ ತೊಳೆಯಬೇಕು ಎನ್ನುವ ದೃಷ್ಟಿಯಿಂದ ಮೊಮ್ಮಗಳು ಬಳಸಿ ಬಿಸಾಡುವ ಡೈಪರ್‌ಗಳ ಮೊರೆ ಹೋಗಿದ್ದಾಳೆ. ಬಾಣಂತನಕ್ಕೆ ಸಂಬಂಧಿಸಿದಂತೆ ಅಜ್ಜಿ-ಮೊಮ್ಮಗಳ ನಡುವಣ ಅಂತರ ಡೈಪರ್‌ನಿಂದಲೇ ಆರಂಭವಾಗಿದೆ.

ಮಗುವಿಗೆ ಬಟ್ಟೆ ಕಟ್ಟುವುದರಿಂದ ಹೆಚ್ಚು ಅನುಕೂಲ, ಅನಾರೋಗ್ಯದ ಸಮಸ್ಯೆ ತಲೆದೋರದು ಎಂಬುದು ಅಜ್ಜಿಯ ವಾದ. ಡೈಪರ್ ಸುರಕ್ಷಿತ ಮತ್ತು ನಿರ್ವಹಣೆ ಸುಲಭ ಎಂಬುದು ಮೊಮ್ಮಗಳ ವಾದ. ಈ ವಾದಗಳ ಮಧ್ಯೆ 'ಬಟ್ಟೆ ಡೈಪರ್' (ಕ್ಲಾತ್ ಡೈಪರ್) ಎನ್ನುವ ಪರಿಕಲ್ಪನೆ ಮುನ್ನೆಲೆಗೆ ಬರುತ್ತಿದೆ. ಈ ಎರಡೂ ಪರಿಕಲ್ಪನೆಯನ್ನು ಮಿಶ್ರ ಮಾಡಿದಂತಹ ಹೈಬ್ರಿಡ್ ಪರಿಕಲ್ಪನೆ ಇದು.

ಏನಿದು ಬಟ್ಟೆ ಡೈಪರ್?

ಡೈಪರ್ ಬದಲಿಗೆ ಉಪಯೋಗಿಸುವ ಬಟ್ಟೆಯ ಆರೋಗ್ಯ ಮತ್ತು ಡೈಪರ್‌ನ ಅನುಕೂಲತೆಗಳನ್ನು ಹೊಂದಿರುವುದೇ ಬಟ್ಟೆ ಡೈಪರ್. ಇವುಗಳನ್ನು ಮರುಬಳಕೆ ಮಾಡಬಹುದಾಗಿದೆ. ಹತ್ತಿ ಬಟ್ಟೆಗಳು ಮತ್ತು ನೈಸರ್ಗಿಕ ವಸ್ತುಗಳಿಂದ ಈ ರೀತಿಯ ಡೈಪರ್‌ಗಳನ್ನು ತಯಾರು ಮಾಡಲಾಗುತ್ತದೆ. ಮಾರುಕಟ್ಟೆಯಲ್ಲಿ ಹಲವು ಬಣ್ಣಗಳಲ್ಲಿ, ಹಲವು ಗಾತ್ರಗಳಲ್ಲಿ, ಹಲವು ವಿಧಗಳಲ್ಲಿ ಸಿಗುತ್ತವೆ; ತುಂಬಾ ಆಕರ್ಷಕವಾಗಿ ಅವನ್ನು ವಿನ್ಯಾಸ ಮಾಡಲಾಗಿದೆ ಕೂಡ.

ಯಾವುದೇ ವಿಧದ ಬಟ್ಟೆ ಡೈಪರ್‌ಗಳಿರಲಿ, ಅವುಗಳಲ್ಲಿ ಎರಡು ಪದರಗಳಿರುತ್ತವೆ– ಒಂದು ಪದರ ಹೀರಿಕೊಂಡರೆ ಇನ್ನೊಂದು ವಾಟರ್‌ಪ್ರೂಫ್ ಪದರ.

ಅನುಕೂಲತೆ

ಪರಿಸರ ಸ್ನೇಹಿ: ಬಟ್ಟೆ ಡೈಪರ್‌ಗಳು ಮಣ್ಣಲ್ಲಿ ಸುಲಭವಾಗಿ ಕರಗುತ್ತವೆ. ಆದರೆ, ರಾಸಾಯನಿಕದಿಂದ ತಯಾರು ಮಾಡುವ ಡೈಪರ್‌ಗಳು ಮಣ್ಣಿನಲ್ಲಿ ಅಷ್ಟು ಸುಲಭವಾಗಿ ಕರಗುವುದಿಲ್ಲ.

'ಮಲ–ಮೂತ್ರಗಳನ್ನು ದಿನವೂ ಒಂದೇ ಸಮಯಕ್ಕೆ ಮಾಡಲು ಕಲಿಸಲು ಬಟ್ಟೆ ಡೈಪರ್ ಪರಿಣಾಮಕಾರಿ. ಮಗುವಿಗೆ ಒದ್ದೆಯ ಅನುಭವ ಆಗುವುದರಿಂದ ಮಕ್ಕಳು ಬಹಳ ಬೇಗ ಕಮೋಡ್‌ಗಳನ್ನು ಬಳಸಲು ಪ್ರಾರಂಭಿಸುತ್ತಾರೆ' ಎಂದು ಅಭಿಪ್ರಾಯಪಡುತ್ತಾರೆ ಇಬ್ಬರು ಪುಟ್ಟ ಮಕ್ಕಳ ತಾಯಿ, ಖಾಸಗಿ ಕಂಪನಿ ಉದ್ಯೋಗಿ ರಾಜಶ್ರೀ ಕೃಷ್ಣನ್. ರಾಸಾಯನಿಕ ಪದಾರ್ಥದ ಬಳಕೆ ಇಲ್ಲ: ಬಟ್ಟೆ ಡೈಪರ್‌ಗಳು ಮಗುವಿನ ಚರ್ಮಕ್ಕೆ ಉತ್ತಮವಾದವು ಆಗಿದೆ. ರ‍್ಯಾಷಸ್ ಆಗುವುದಿಲ್ಲ.

ಅನಾನುಕೂಲತೆ

1. ಮಾಮೂಲಿ ಡೈಪರ್‌ಗಳಿಗಿಂತ ಬಟ್ಟೆ ಡೈಪರ್‌ಗಳ ಉಪಯೋಗ ಕಷ್ಟಕರ. ಒಂದು ಮಗುವಿಗೆ ದಿನಕ್ಕೆ 10ರಿಂದ 12 ಡೈಪರ್‌ಗಳು ಬೇಕಾಗಬಹುದು. ಈ ಎಲ್ಲವನ್ನು ತೊಳೆದು ಶುದ್ಧ ಮಾಡಿ, ಒಣಗಿಸಿ ಇಟ್ಟುಕೊಳ್ಳಬೇಕು. ಇದೇ ಒಂದೊಪ್ಪತ್ತಿನ ಕೆಲಸವಾಗುತ್ತದೆ.
2. ಬಟ್ಟೆ ಡೈಪರ್‌ಗಳನ್ನು ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಎಸೆಯಲು ಸಾಧ್ಯವಿಲ್ಲ. ನೀವು ಎಲ್ಲಾದರು ಹೊರಗೆ ಹೋಗಿದ್ದು ಮಗುವಿಗೆ ಬಟ್ಟೆ ಡೈಪರ್ ಹಾಕಿದ್ದರೆ, ಬದಲಿ ಮಾಡಬೇಕಾದರೆ ಅದನ್ನು ಕೊಳಕು ಇರುವಾಗಲೇ, ತೊಳೆಯದೇ ಹಾಗೆಯೇ ತೆಗೆದುಕೊಂಡು ಹೋಗಬೇಕಾಗುತ್ತದೆ. ❖

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ
ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ!
ವಾರಾಂತ್ಯದ ಪುರುಸೊತ್ತಿನಲ್ಲಿ ನಿಮಗಾಗಿ ಭರ್ಜರಿ ಕೊಡುಗೆಗಳು ಕಾದಿವೆ. ನೀರೂರಿಸುವ ಭೋಜನ, ತಿಂಗಳ ದಿನಸಿಯಿಂದ ಹಿಡಿದು ಪ್ರಯಾಣ ಮತ್ತು ಮನರಂಜನೆಯವರೆಗೂ, ಭರ್ಜರಿ ಕೊಡುಗೆಗಳ ಸುರಿಮಳೆಯೇ ಸುರಿಯಲಿದೆ.
ಇನ್ನಷ್ಟು ಆಕರ್ಷಕ ಕೊಡುಗೆಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ
ಕೂಪನ್ ಪಾರ್ಟನರ್: GrabOn SAVE ON EVERYTHING
50ಕ್ಕೂ ಹೆಚ್ಚು ಕೊಡುಗೆಗಳು
1mg asianpaints rapido
Faasos cleartrip COOLWINKS
BOMBAY SHAVING COMPANY firstcry fernsnpetals
H&M Lenovo makemytrip
mamaearth boAt SHOPCLUES
TATA CLiQ wakefit zivame

ಸಂಜು –ರಿಷಭ್ ನಾಯಕತ್ವದ ಆಟಕ್ಕೆ ಐಪಿಎಲ್ ವೇದಿಕೆ

ದೆಹಲಿ ಹುಡುಗ ರಿಷಭ್ ಪಂತ್ ಮತ್ತು ಕೇರಳದ ಕಣ್ಮಣಿ ಸಂಜು ಸ್ಯಾಮ್ಸನ್ ಅವರ ಮೇಲೆ ಈಗ ಇಡೀ ಕ್ರಿಕೆಟ್ ಜಗತ್ತಿನ ಕುತೂಹಲದ ಕಣ್ಣುಗಳು ನೆಟ್ಟಿವೆ

ಗಿರೀಶ ದೊಡ್ಡಮನಿ

ಕ್ರೀಡೆ

ಸಂಜು ಸ್ಯಾಮ್ಸನ್

ರಿಷಭ್ ಪಂತ್

ದೆಹಲಿ ಹುಡುಗ ರಿಷಭ್ ಪಂತ್ ಮತ್ತು ಕೇರಳದ ಕಣ್ಮಣಿ ಸಂಜು ಸ್ಯಾಮ್ಸನ್ ಅವರ ಮೇಲೆ ಈಗ ಇಡೀ ಕ್ರಿಕೆಟ್ ಜಗತ್ತಿನ ಕುತೂಹಲದ ಕಣ್ಣುಗಳು ನೆಟ್ಟಿವೆ.

ಏಕೆಂದರೆ, ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಈ ಇಬ್ಬರೂ ಯುವ ವಿಕೆಟ್‌ಕೀಪರ್‌ಗಳು ನಾಯಕರಾಗಿ 'ಪದಾರ್ಪಣೆ' ಮಾಡುತ್ತಿದ್ದಾರೆ. ರಿಷಭ್ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಸಂಜು ರಾಜಸ್ಥಾನ ರಾಯಲ್ಸ್ ತಂಡಗಳ ನಾಯಕತ್ವ ವಹಿಸಲಿದ್ದಾರೆ.

ಮಹೇಂದ್ರಸಿಂಗ್ ಧೋನಿಯ ನಂತರ ಭಾರತ ತಂಡದ ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸಲು ಸಾಲುಗಟ್ಟಿದ್ದವರಲ್ಲಿ ಇವರಿಬ್ಬರೂ ಪ್ರಮುಖರು.

ಆದರೆ 23 ವರ್ಷದ ರಿಷಭ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈಗ ತಮ್ಮ ಬ್ಯಾಟಿಂಗ್ ಮೂಲಕ ಮಿಂಚಿದ್ದಾರೆ. ಅಲ್ಲದೇ ಮ್ಯಾಚ್ ವಿನ್ನರ್ ಆಗುವ ಮೂಲಕ ಉಳಿದವರೆಲ್ಲರನ್ನೂ ಹಿಂದಿಕ್ಕಿದ್ದಾರೆ. ಭಾರತ ತಂಡದ ವಿಕೆಟ್‌ಕೀಪರ್ ಸ್ಥಾನಕ್ಕೆ ಮೊದಲ ಆಯ್ಕೆಯಾಗಿ ಗುರುತಿಸಿಕೊಂಡಿದ್ದಾರೆ.

ಈಗ ತಮ್ಮ ನಾಯಕತ್ವ ಗುಣಗಳನ್ನು ಪರೀಕ್ಷೆಗೊಡ್ಡುವ ಕಾಲ ರಿಷಭ್‌ಗೆ ಬಂದಿದೆ.

ಶ್ರೇಯಸ್ ಅಯ್ಯರ್ ಗಾಯಗೊಂಡ ಕಾರಣ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕತ್ವದ ಹೊಣೆ ರಿಷಭ್ ಹೆಗಲಿಗೇರಿದೆ. ತಂಡದಲ್ಲಿರುವ ಅನುಭವಿ ಅಟಗಾರರಾದ ಶಿಖರ್ ಧವನ್, ಅಜಿಂಕ್ಯ ರಹಾನೆ, ಆರ್. ಅಶ್ವಿನ್ ಮತ್ತು ಅಮಿತ್ ಮಿಶ್ರಾ ಅವರನ್ನು ಬಿಟ್ಟು ಫ್ರ್ಯಾಂಚೈಸಿಯು ಯುವ ರಿಷಭ್ ಮೇಲೆ ಭರವಸೆ ಇಟ್ಟಿದೆ.

ಮುಖ್ಯ ಕೋಚ್ ರಿಕಿ ಪಾಂಟಿಂಗ್ ಅವರಿಗಂತೂ ರಿಷಭ್ ಬ್ಯಾಟಿಂಗ್, ವಿಕೆಟ್‌ಕೀಪಿಂಗ್ ಮೇಲೆ ಮೊದಲಿನಿಂದಲೂ ಅಪಾರ ಪ್ರೀತಿ. ಈಗ ನಾಯಕನಾಗಿಯೂ ಪಂತ್ ಯಶಸ್ವಿಯಾಗುತ್ತಾರೆಂಬ ವಿಶ್ವಾಸ ಅವರದ್ದು. ರಣಜಿ ಟೂರ್ನಿಯಲ್ಲಿ ದೆಹಲಿ ತಂಡವನ್ನು 21ರ ಹರೆಯದಲ್ಲಿಯೇ ಮುನ್ನಡೆಸಿದ ಅನುಭವ ಪಂತ್‌ಗೆ ಇದೆ. ಹೋದ ವರ್ಷ ಡೆಲ್ಲಿ ತಂಡವು ಫೈನಲ್‌ನಲ್ಲಿ ಎಡವಿತ್ತು. ತಂಡವು ಸಮತೋಲನವಾಗಿದೆ. ಪರಿಣಾಮಕಾರಿ ಬೌಲರ್ ಕಗಿಸೊ ರಬಾಡ, ಎನ್ರಿಚ್ ನಾಕಿಯಾ ಮತ್ತು ಅನುಭವಿ ಬ್ಯಾಟ್ಸ್‌ಮನ್‌ಗಳಿದ್ದಾರೆ. ಈ ಸಲ ಆಸ್ಟ್ರೇಲಿಯಾದ ರನ್ ಯಂತ್ರ ಸ್ಟೀವನ್ ಸ್ಮಿತ್ ಕೂಡ ಸೇರಿಕೊಂಡಿದ್ದಾರೆ.

ಆದರೆ ಇವರೆಲ್ಲರ ವಿಶ್ವಾಸ ಗೆದ್ದು, ಸಂಘಟಿತ ಹೋರಾಟದೊಂದಿಗೆ ತಂಡವನ್ನು ಪ್ರಶಸ್ತಿ ವಿಜಯದತ್ತ ಕೊಂಡೊಯ್ಯುವ ಹೊಣೆ ಪಂತ್ ಮೇಲೆ ಇದೆ. ಕೊರೊನಾ ಕಾಲಘಟ್ಟದಲ್ಲಿ ಬಯೋ ಬಬಲ್ ಒತ್ತಡವನ್ನು ನಿಭಾಯಿಸಿಕೊಂಡು ತಂಡವನ್ನು ಮುನ್ನಡೆಸುವುದು ಕಷ್ಟ ಎಂದು ಈಚೆಗೆ ವಿರಾಟ್ ಕೊಹ್ಲಿಯೇ ಹೇಳಿದ್ದರು.

ಐಪಿಎಲ್‌ನಲ್ಲಿ 68 ಪಂದ್ಯಗಳನ್ನು ಅಡಿರುವ ಪಂತ್ ಮತ್ತು 107 ಪಂದ್ಯಗಳನ್ನು ಆಡಿರುವ ಸಂಜು ಸ್ಯಾಮ್ಸನ್ ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತಾರೆನ್ನುವುದೂ ಈಗ ಕುತೂಹಲ ಮೂಡಿಸಿದೆ.

26 ವರ್ಷದ ಸಂಜು ಸ್ಯಾಮ್ಸನ್ ಖಾತೆಯಲ್ಲಿ ಎರಡೂವರೆ ಸಾವಿರಕ್ಕೂ ರನ್‌ಗಳು ಇವೆ. ಅದರಲ್ಲಿ ಅಬ್ಬರದ ಎರಡೂ ಶತಕಗಳೂ ಸೇರಿವೆ. ಪ್ರಥಮ ದರ್ಜೆ ಪಂದ್ಯಗಳಲ್ಲಿಯೂ ತಿರುವನಂತಪುರದ ಸಂಜು ದಾಖಲೆಗಳು ಹತ್ತಾರು ಇವೆ.

ಆದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ರಿಷಭ್ ಮತ್ತು ವೃದ್ಧಿಮಾನ್ ಸಹಾ ಅವರಿಗೆ ಸಿಕ್ಕಷ್ಟು ಅವಕಾಶಗಳು ಸಿಗಲಿಲ್ಲವೆನ್ನುವುದು ಸುಳ್ಳೇನಲ್ಲ. 55 ಪ್ರಥಮದರ್ಜೆ, 95 ಲಿಸ್ಟ್ 'ಎ' ಮತ್ತು ಎಲ್ಲ ಹಂತದ 171 ಟ್ವೆಂಟಿ–20 ಪಂದ್ಯಗಳನ್ನು ಆಡಿದ್ದಾರೆ.

ಈಗ ಕಳೆದುಹೋದದ್ದನ್ನು ಬದಿಗಿಟ್ಟು ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ವಿಶ್ವಾಸದಲ್ಲಿ ಸಂಜು ಇದ್ದಾರೆ.

'ನನಗೆ ನಾಯಕತ್ವದ ಹೊಣೆ ಲಭಿಸಿರುವುದು ಸಂತಸವಾಗಿದೆ. ಮಹೇಂದ್ರಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿಯವರು ನನಗೆ ಅಭಿನಂದಿಸಿ ಶುಭ ಕೋರಿದ್ದಾರೆ. ಅವರಿಬ್ಬರ ಒಡನಾಟದಲ್ಲಿ ಕಲಿತದ್ದು ಅಪಾರ. ಅದು ಈಗ ನನ್ನ ಭವಿಷ್ಯವನ್ನು ರೂಪಿಸಲಿದೆ' ಎಂದು ಶಾಂತಚಿತ್ತದ ಸಂಜು ಹೇಳುತ್ತಾರೆ.

2008ರಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ನಂತರ ಹಲವು ವೈಫಲ್ಯಗಳನ್ನು ಕಂಡಿದೆ. 2013ರ ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಎರಡು ವರ್ಷಗಳ ನಿಷೇಧವನ್ನೂ ಅನುಭವಿಸಿತ್ತು. ನಂತರ ಮತ್ತೆ ಕಣಕ್ಕಿಳಿದ ತಂಡಕ್ಕೆ ಸಮರ್ಥ ನಾಯಕತ್ವ ಲಭಿಸಿಲ್ಲ. ಅಜಿಂಕ್ಯ ರಹಾನೆ, ಸ್ಟೀವ್ ಸ್ಮಿತ್ ಅವರು ಒಂದಿಷ್ಟು ಭರವಸೆ ಮೂಡಿಸಿದ್ದರು. ಈಗ ಅವರಿಬ್ಬರೂ ಈ ತಂಡದಲ್ಲಿ ಇಲ್ಲ.

ಇಂಗ್ಲೆಂಡ್‌ನ ಜೋಫ್ರಾ ಆರ್ಚರ್, ಬೆನ್ ಸ್ಟೋಕ್ಸ್, ಜೋಸ್ ಬಟ್ಲರ್, ಆಲ್‌ರೌಂಡರ್ ಕ್ರಿಸ್ ಮೊರಿಸ್ ಮತ್ತು ಕನ್ನಡಿಗ ಶ್ರೇಯಸ್ ಗೋಪಾಲ್ ಅವರ ಬಲ ತಂಡಕ್ಕಿದೆ. ಈ ಪ್ರತಿಭೆಗಳನ್ನು ಸಂಜು ಹೇಗೆ ದುಡಿಸಿಕೊಳ್ಳುತ್ತಾರೆ ಎಂಬುದರ ಮೇಲೆ ತಂಡದ ಯಶಸ್ಸು ತೀರ್ಮಾನವಾಗಲಿದೆ.

ಈ ಇಬ್ಬರೂ ಯುವನಾಯಕರು ರಾಹುಲ್ ದ್ರಾವಿಡ್ ಅವರ 'ಕ್ರಿಕೆಟ್ ಶಾಲೆ'ಯ ವಿದ್ಯಾರ್ಥಿಗಳೇ. ಬ್ಯಾಟಿಂಗ್, ವಿಕೆಟ್‌ಕೀಪಿಂಗ್ ಮತ್ತು ನಡವಳಿಕೆಯಲ್ಲಿ ದ್ರಾವಿಡ್ ಪಾಠವನ್ನು ಇಲ್ಲಿಯವರೆಗೆ ಅಚ್ಚುಕಟ್ಟಾಗಿ ತೋರಿಸುತ್ತ ಬೆಳೆದಿರುವ ಇವರು ನಾಯಕತ್ವದಲ್ಲಿಯೂ ಛಾಪು ಮೂಡಿಸಲು ಸಿದ್ಧರಾಗಿದ್ದಾರೆ. ❖